ಕನ್ನಡ ಭಾಷಾ ಪಠ್ಯ

# ಗಣಕ ಸೌರಭ – ೨

ಬಿ.ಸಿ.ಎ.

(ದ್ವಿತೀಯ ಸೆಮಿಸ್ಟರ್)


ಪ್ರಧಾನ ಸಂಪಾದಕರು

ಡಾ. ಪ್ರಶಾಂತ ಜಿ. ನಾಯಕ

ಪರಿಶೀಲಕರು

ಡಾ. ಬೆಳಕೆರೆ ಲಿಂಗರಾಜಯ್ಯ

ಸಂಪಾದಕರು

ಡಾ. ಜೆ. ರಾಜಾ ಗುಂಡಾಪುರ

ಡಾ. ಸುರೇಶ ಕೆ.ಸಿ.

ಡಾ. ಪ್ರಕಾಶ್ ಜಿ.ಎ.



ಬೆಂಗಳೂರು ನಗರ ವಿಶ್ವವಿದ್ಯಾಲಯ

BENGALURU CITY UNIVERSITY

ಆಗು ನೀ ಅನಿಕೇತನ

BE BOUNDLESS

KANNADA BHASHA PATHYA – GANAKA  SOURABHA:

A Prescribed Text Book for B.C.A Degree Course (First and Second Semester); **Chief Editor:** Prof. Prashanth G. Nayak (Professor of Kannada & Director, Kannada Bharathi, Kuvempu University, Shankaraghatta, B.R. Project. Shimoga Dist.)

**Edited By:** Dr. J. Raja Gundapura, Dr.Suresha K.C., Dr. Prakash G.A.

**Publishd by:** Bengaluru City University, BENGALURU

Pp: 000+ ix

© Bengaluru City University,

First Print: 2021

ಪ್ರಧಾನ ಸಂಪಾದಕರು

**ಡಾ. ಪ್ರಶಾಂತ ಜಿ. ನಾಯಕ**

ಸಲಹಾ ಸಮಿತಿ:

**ಡಾ. ಕೆ.ವೈ. ನಾರಾಯಣಸ್ವಾಮಿ**

**ಡಾ. ಎಂ.ಎಸ್. ಆಶಾದೇವಿ**

ಸಂಯೋಜಕರು:

**ಡಾ. ಬೆಳಕೆರೆ ಲಿಂಗರಾಜಯ್ಯ**

ಬೆಲೆ: ರೂ. 00/–

ಪ್ರಕಾಶಕರು:

**ಬೆಂಗಳೂರು ನಗರ ವಿಶ್ವವಿದ್ಯಾಲಯ**

# ಪರಿವಿಡಿ

## ಬಿ.ಸಿ.ಎ

## ಎರಡನೇ ಸೆಮಿಸ್ಟರ್

**ಭಾಗ – ೧ ವಾಣಿಜ್ಯ ಕನ್ನಡ**

| | | |
|---|---|---|
| **ಆಶಯ : ಧರಣಿ ಮೇಲೊಂದು ಹಿರಿಯ...** | – | **ಬಸವಣ್ಣ** |
| ೧. ಕಲ್ಲು ಸಕ್ಕರೆ ಕೊಳ್ಳಿರೋ (ಕೀರ್ತನೆ) | – | ಪುರಂದರ ದಾಸ |
| ೨. ಮೌನಿ (ಕಥೆ) | – | ಯು.ಆರ್ ಅನಂತಮೂರ್ತಿ |
| ೩. ಬೆಂಗಳೂರು ಹೊಸ ಉದ್ಯಮಗಳ ಅಲೆ | – | ಎಂ.ಸತ್ಯನಾರಾಯಣ ಭಟ್ |
| ೪. ಸಂತೆ (ಓದು ಪಠ್ಯ) | – | ಸಿದ್ಧಲಿಂಗಯ್ಯ |

**ಭಾಗ – ೨ ತಂತ್ರಜ್ಞಾನ**

| | | |
|---|---|---|
| **ಆಶಯ : ತಂತ್ರಜ್ಞಾನ ಪ್ರಾಚೀನತೆ** | – | **ಜಿ.ರಾಮಕೃಷ್ಣ** |
| ೧. ಗಿರಣಿ ವಿಸ್ತಾರ ನೋಡಮ್ಮ (ಅನುಭಾವ ಗೀತೆ) | – | ಶಿಶುನಾಳ ಶರೀಫ |
| ೨. ಹೆಡ್ ಹಂಟರ್ (ಕಥೆ) | – | ವಸುಧೇಂದ್ರ |
| ೩. ರಾಗಿ ಬ್ರಹ್ಮ ಲಕ್ಷ್ಮಣಯ್ಯ (ಲೇಖನ) | – | ಶರಣಬಸವೇಶ್ವರ ಅಂಗಡಿ |
| ೪. ತಂತ್ರಜ್ಞಾನ ಕನ್ನಡ (ಓದು ಪಠ್ಯ) | – | ಸುಧೀಂದ್ರ ಹಾಲ್ದೊಡ್ಡೇರಿ |

**ಭಾಗ – ೩ ದಾಂಪತ್ಯ**

| | | |
|---|---|---|
| **ಆಶಯ : ಒಂದಿರುಳು ಕನಸಿನಲಿ** | – | **ಕೆ.ಎಸ್.ನರಸಿಂಹಸ್ವಾಮಿ** |
| ೧. ನನ್ನಾಕೆಯ ಸ್ವಗತ (ಪದ್ಯ) | – | ಬೇಲೂರು ರಘುನಂದನ್ |
| ೨. ಮರಳಿ ಬದುಕಿಗೆ ಈ ಪಯಣ... (ಕಥೆ) | – | ನೇಮಿಚಂದ್ರ |
| ೩. ಮಂತ್ರ ಮಾಂಗಲ್ಯ (ಲೇಖನ) | – | ಕುವೆಂಪು |
| ೪. ಕವಿಯು ನಿಂತು ಹೇಳಿ ಮಾಡಿಸಿದ ಕವಿಜೋಡಿ... (ಓದು ಪಠ್ಯ) | – | ನಟರಾಜ್ ಹುಳಿಯಾರ್ |

**ಭಾಗ – ೪ ಸಂಕೀರ್ಣ**

| | | |
|---|---|---|
| **ಆಶಯ :** ನನ ಕೈ ಹಿಡಿದಾಕೆ | – | ದ. ರಾ. ಬೇಂದ್ರೆ |
| ೧. ಮತ್ತೆ ಭ್ರೂಣವಾಗಬೇಕು (ಪದ್ಯ) | – | ಸುಕನ್ಯಾ ಮಾರುತಿ |
| ೨. ಸಾವು (ಕಥೆ) | – | ಬಾನು ಮುಷ್ತಾಕ್ |
| ೩. ಜಾಗತೀಕರಣದ ಜಾರುಬಂಡೆ (ಲೇಖನ) | – | ಬರಗೂರು ರಾಮಚಂದ್ರಪ್ಪ |
| ೪. ಜಾನಪದ ಜ್ಞಾನ ವಿಜ್ಞಾನ – ಲೇಖನ (ಓದು ಪಠ್ಯ) | – | ಎಚ್.ಟಿ ಪೋತೆ |

# ಭಾಗ–೧ ವಾಣಿಜ್ಯ ಕನ್ನಡ

**ಆಶಯ : ವಚನ**

ಬಸವಣ್ಣನ ಈ ವಚನವನ್ನು ಗಮನಿಸಿ, ಅಂಗಡಿ–ಮಾರಾಟಗಾರ–ಮಾರಾಟ ಇವುಗಳ ಪರಿಕಲ್ಪನೆಗಳನ್ನು ಇಲ್ಲಿ ಹೇಗೆ ವಿಭಿನ್ನವಾಗಿ ಬಳಸಿಕೊಳ್ಳಲಾಗಿದೆ ಎಂಬುದನ್ನು ಪರಿಶೀಲಿಸಿ

ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ
ಹರದ ಕುಳ್ಳಿರ್ದ ನಮ್ಮ ಮಹದೇವ ಸೆಟ್ಟಿ
ಒಮ್ಮನವಾದರೆ ಒಡನೆ ನುಡಿವನು;
ಇಮ್ಮನವಾದರೆ ನುಡಿಯನು
ಕಾಣಿಯ ಸೋಲ; ಅರ್ಧ ಕಾಣಿಯ ಗೆಲ್ಲ
ಜಾಣ ನೋಡವ್ವ ನಮ್ಮ ಕೂಡಲ ಸಂಗಮದೇವ.

– **ಬಸವಣ್ಣ**

## ೧.೧ ಕಲ್ಲು ಸಕ್ಕರೆ ಕೊಳ್ಳಿರೊ

**– ಪುರಂದರದಾಸ**

ಕಲ್ಲುಸಕ್ಕರೆ ಕೊಳ್ಳಿರೊ– ನೀವೆಲ್ಲರು
ಕಲ್ಲುಸಕ್ಕರೆ ಕೊಳ್ಳಿರೊ ॥ಪಲ್ಲವಿ॥

ಕಲ್ಲುಸಕ್ಕರೆ ಸವಿ ಬಲ್ಲವರೆ ಬಲ್ಲರು
ಫುಲ್ಲನಾಭ ಕೃಷ್ಣನ ದಿವ್ಯನಾಮವೆಂಬ ॥ಅನುಪಲ್ಲವಿ॥

ಎತ್ತ ಹೇರುವುದಲ್ಲ ಹೊತ್ತು ಮಾರುವುದಲ್ಲ
ಒತ್ತೊತ್ತಿ ಗೋಣಿಯ ತುಂಬುವುದಲ್ಲ
ಎತ್ತ ಹೋದರು ಮತ್ತೆ ಸುಂಕವು ಇದಕಿಲ್ಲ
ಹತ್ತೆಂಟು ಸಾವಿರಕೆ ಬೆಲೆಯಿಲ್ಲದಂತಹ ೧

ನಷ್ಟಬೀಳುವುದಲ್ಲ ನಾಶವಾಗುವುದಲ್ಲ
ಕಟ್ಟಿ ಇಟ್ಟರೆ ಮತ್ತೆ ಕೆಡುವುದಲ್ಲ
ಎಷ್ಟು ದಿನವಿಟ್ಟರೂ ಕೆಟ್ಟು ಹೋಗುವುದಲ್ಲ
ಪಟ್ಟಣದೊಳಗೊಂದು ಲಾಭವೆನಿಸುವಂಥ ೨

ಸಂತೆಪೇಟೆಗೆ ಹೋಗಿ ಶ್ರಮಪಡಿಸುವುದಲ್ಲ
ಎಂತು ಮಾರಿದರದಕಂತವಿಲ್ಲ
ಸಂತತ ಪುರಂದರವಿಠಲನ ನಾಮವ
ಎಂತು ನೆನೆಯಲು ಪಾಪ ಪರಿಹಾರವಲ್ಲದೆ ೩

**ಆಕರ : ಪುರಂದರದಾಸರ ಜನಪ್ರಿಯ ಕೀರ್ತನೆಗಳು – ಸಂ. ಶ್ರೀನಿವಾಸ ಹಾವನೂರು**

# ೧.೨ ಮೌನಿ

**– ಯು. ಆರ್. ಅನಂತಮೂರ್ತಿ**

ಭಾಗ : ಒಂದು

ಭಾವಿಕೆರೆ ಕುಪ್ಪಣ್ಣಭಟ್ಟರಿಗೂ ಸೀಬಿನಕೆರೆ ಅಪ್ಪಣ್ಣಭಟ್ಟರಿಗೂ ಹಾವು ಮುಂಗುಸಿ, ಈ ವೈರ ಆಜನ್ಮ: ಇದರ ಮೂಲ ಅಗಮ್ಯ. ಅರ್ಧ ಮೈಲಿ ದೂರದಲ್ಲಿರುವ ಎರಡು ಗುಡ್ಡಗಳ ಬೆನ್ನಿಗೆ ಇವರ ಮನೆ. ನಡುವೆ ಒಂದು ಕಣಿವೆಯಲ್ಲಿ ಬೇಲಿಯ ಆಚೆ ಕುಪ್ಪಣ್ಣಭಟ್ಟನ ತೋಟವಾದರೆ ಈಚೆಅಪ್ಪಣ್ಣಭಟ್ಟರ ತೋಟ. ಇಬ್ಬರೂ ಶ್ರೀಮಠದ ನರಸಿಂಹದೇವರ ಒಕ್ಕಲು. ಇಬ್ಬರೂ ಕೈಯಲ್ಲಿ ಬರಿಯ ತೀರ್ಥದ ಬಟ್ಟಲು ಹಿಡಿದು ಘಟ್ಟದ ಕೆಳಗಿನಿಂದ ದುಗ್ಗಾಣಿಯಿಲ್ಲದೆ ಅಡಿಕೆ ತೋಟ ಮಾಡಲು ಬಂದವರು. ಆರು ಮೈಲಾಚೆಯಿರುವ ಗೋಪಾಲ ಕುಮ್ತಿಯ ಅಂಗಡಿಯಲ್ಲಿ ಇಬ್ಬರದೂ ಲೆಕ್ಕವುಂಟು.

ಕುಪ್ಪಣ್ಣಭಟ್ಟರು ವಯಸ್ಸಿನಲ್ಲಿ ಹಿರಿಯರು. ಅವರು ಕಳೆದ ಐವತ್ತು ಸಂವತ್ಸರ ಒಣಗಿದ ಹುಳಿ ಮಾವಿನ ಹಣ್ಣಿನಂತಹ ಅವರ ಮುಖದಲ್ಲಿ ಎದ್ದು ಕಾಣುತ್ತದೆ. ಒಂದು ಕಾಲದಲ್ಲಿ–ಅಂದರೆ ಹೆಚ್ಚೇನಲ್ಲ. ಬರಿಯ ಎರಡು ವರ್ಷದ– ಕೆಳಗೆ ಪೆಟ್ಟೋಂದಕ್ಕೆ ತುಂಡೆರಡು ಎನ್ನುವಂತಹ ಮಾತನ್ನಾಡಲು ಮಾತ್ರ ಬಾಯಿ ತೆರೆಯುತ್ತಿದ್ದ ಮನುಷ್ಯ. ಕಪ್ಪಗೆ ಕುಳ್ಳಗೆ ಕೃಶವಾದ ಅವರ ಶರೀರ ಈಚೆಗೆ ಮಾತ್ರ ದಿನಗಳೆದಂತೆ ಸೊರಗುತ್ತಿದೆ. ಉಳಿದ ಮರ್ಜಿಯಲ್ಲೇನೂ ಬದಲಿಲ್ಲ. ಅದೇ ಹೊಳೆಯುವ ಬೋಳು ತಲೆ. ಒಂದು ಕಾಲದಲ್ಲಿ ಸದಾ ಸಿಡುಕಿನ, ಈಗ ಮಂಕಾಗಿ ಉರಿಯುವ ಸಣ್ಣ ಕಣ್ಣುಗಳು. ಗುಜ್ಜ ಮೂಗು. ದಿಂಡು ಮಾವಿನ ಮೂತಿಯ ಗದ್ದ, ಉಟ್ಟ ಪಂಚೆ ಹೊದ್ದ ಧೋತ್ರಗಳ ಮೇಲೆ ಅವರ ಸಾಲದಂತೆಯೇ ವರ್ಷಾಂತರದಿಂದ ಉಳಿದು ಬಂದ ಬಾಳೆ ಕರೆ, ಅಡಿಕೆ ಕರೆ, ಬಾಯಿಯ ಒಂದು ಪಾರ್ಶ್ವದಲ್ಲಿ ಸದಾ ಒಂದು ಹೊಗೆಸೊಪ್ಪಿನ ಉಂಡೆಯಿದ್ದೇ ಇರಬೇಕು. ಒಂದು ಕಾಲದಲ್ಲಿ ಏನಾದರೂ ಸಿಟ್ಟಿನ ಮಾತನ್ನಾಡುವ ಪ್ರಮೇಯ ಒದಗಿದಲ್ಲಿ ಎದುರು ಪಕ್ಷದವನ ಮಾತನ್ನೆಲ್ಲ ಬಿಗಿದ ತುಟಿಯಲ್ಲಿ ಅಳಿಸಿ, ಅಂಗಳದೊಂದು ಮೂಲೆಗೆ ಧಿಡಧಿಡನೆ ನಡೆದು, ಹೊಗೆಸೊಪ್ಪನ್ನು ಉಗಿದು, ಎದುರಾಳಿ ಎದುರುತ್ತರ ಕೊಡಬಾರದು ಹಾಗೆ, ಫಟೀರೆನ್ನುವ ಒಂದು ಮಾತನ್ನಾಡಿ, ಮತ್ತೆ ಹೊಗೆಸೊಪ್ಪಿನ ಚೂರೊಂದನ್ನು ಸುಣ್ಣದಲ್ಲಿ ಸಿಕ್ಕಿ ಬಾಯಲ್ಲಿಟ್ಟು ಮೌನವಾಗಿ ಬಿಡುತ್ತಿದ್ದ ಮನುಷ್ಯ ಅವರು. ಈಗ ಮಾತ್ರ ಕಾಲು ಕೆರೆದುಕೊಂಡು ಜನ ಜಗಳಕ್ಕೆ ಬಂದರೂ ನನಗೂ ನಿನಗೂ ವೈವಾಟಿಲ್ಲವೆಂಬಂತೆ ತಿರಸ್ಕಾರದಿಂದ ಬೀಗ ಮುದ್ರೆಯ ಮುಖವನ್ನೆತ್ತಿ ನಿಶ್ಚಲರಾಗಿ ಬಿಡುತ್ತಾರೆ.

ಸೀಬಿನಕೆರೆ ಅಪ್ಪಣ್ಣಭಟ್ಟರು ಲೋಕಪ್ರಿಯರು. ಬೆಣ್ಣೆಯಲ್ಲಿ ಕೂದಲು ತೆಗೆದಂತೆ ನಯವಾದ ನಾಜೋಕಾದ ರಾಗದ ಮಾತು ಅವರದು. ಎರಡು ಮೈಲಾಚೆ ಇರುವ ಬುಕ್ಲಾಪುರದ ಅಗ್ರಹಾರದ ಬ್ರಾಹ್ಮಣರೆಲ್ಲ ಬಡವ ಬಲ್ಲಿದನೆನ್ನದೆ ಅವರಿಗೆ ಬೇಕಾದವರು. ಮೊದಲೇ ಕುಪ್ಪಣ್ಣಭಟ್ಟರು ಜಗಳಗಂಟಿಯಾದ್ದರಿಂದ ಒಂದಲ್ಲ ಒಂದು ಕಾರಣದಿಂದ ಬುಕ್ಲಾಪುರದವರನ್ನೆಲ್ಲ ಮೈಮೇಲೆ ಹಾಕಿಕೊಂಡಿದ್ದರು. ಆದ್ದರಿಂದ ಎಲ್ಲರಿಗೂ ಅಪ್ಪಣ್ಣಭಟ್ಟರೆಂದರೆ ಆಗಬೇಕು. ಅಲ್ಲದೆ ಅಪ್ಪಣ್ಣಭಟ್ಟರು ಕುಪ್ಪಣ್ಣಭಟ್ಟರಂತೆಯೇ ದುಗ್ಗಾಣಿಯಿಲ್ಲದೆ ಬಂದವರಾದರೂ ತೋಟ, ಮನೆ, ಗದ್ದೆಯನ್ನು ಲಾಯಕ್ಕಾಗಿ ಇಟ್ಟುಕೊಂಡಿದ್ದರು. ಅಪ್ಪಣ್ಣಭಟ್ಟರ ಸೂರಿನ ಕೆಳಗೆ ಸೇವಂತಿಗೆ; ಅಂಗಳದಲ್ಲಿ ಚಪ್ಪರ. ಬಂದವರಿಗೆ ಬಣ್ಣದ ಚಾಪೆ ಹಾಸಿ ಕಾಫಿ ಕೊಟ್ಟು ಉಪಚರಿಸದೆ ಕಳುಹಿಸುವುದಿಲ್ಲ. ಆದರೆ ಶೂದ್ರರ ಅಂಗಳ ಬೇಕು–ಕುಪ್ಪಣ್ಣ ಭಟ್ಟರ ಅಂಗಳ ಮಾತ್ರಬೇಡ. ಅಲ್ಲೆ ಸಗಣಿ, ಅಲ್ಲೆ ಮಕ್ಕಳ ಪಾಯಖಾನೆ, ಮೊಣಕಾಲೆತ್ತರ ಹುಲ್ಲು, ಇಲ್ಲವೆ ಕೆಸರು, ಕಾಲು ಬೆರಳಿನ ಸಂದಿ ಕಡಿಯುವ ಜಿಗಣೆ, ಗೊಬ್ಬರದ ಗುಂಡಿಯ ನೊಣ. ಅಪಣ್ಣಭಟ್ಟರು ಅನ್ನುತ್ತಾರೆ, “ನಮ್ಮ ಕೊರಗನ ಗುಡಿಸಲು ಅವರದಕ್ಕಿಂತ ವಾಸಿ. ಹೋಗಿ ನೋಡಿ ಬೇಕಾದರೆ”.

ಗೋಪಾಲ ಕಮ್ತಿಯ ಅಂಗಡಿಯಲ್ಲಿ ಕುಪ್ಪಣ್ಣಭಟ್ಟರ ಸಾಲ ವರ್ಷಾಂತರದ ಬಡ್ಡಿ ಚಕ್ರಬಡ್ಡಿಗಳ ಶೇಕಡಾ ಲೆಕ್ಕಗಳಲ್ಲಿ ಖಾತೆಯಿಂದ ಖಾತೆಗೆ ಸಾವಿರಕ್ಕೂ ಮಿಕ್ಕು ಬೆಳೆದಿದೆ. ಒಂದು ವರ್ಷದಿಂದಂತೂ ಕುಮ್ತಿಯ ಕಡೆಯಿಂದ ವಸೂಲಿ ಸಾಬ ವಾರಕ್ಕೊಮ್ಮೆ ಬಂದು ಕುಪ್ಪಣ್ಣಭಟ್ಟರ ಜಗುಲಿಯ ಮೇಲೆ ಕೂತು ಕಾಡುವ ವಿಷಯ ಎಲ್ಲರಿಗೂ ತಿಳಿದಿದೆ. ಅಪ್ಪಣ್ಣಭಟ್ಟರು ಕೊಟ್ಟಿದ್ದಲ್ಲದೆ, ವಸೂಲಿಗೆ ಬಂದ ಶಾನುಭೋಗರಿಗೆ ಒಂದು ಕೊಳಗ, ಏಜೆಂಟರಿಗೆ ಎರಟು ಕೊಳಗದಂತೆ ಮರ್ಯಾದೆಅಡಿಕೆ ಕೊಟ್ಟು ಪಾಯಸದ ಅಡಿಗೆ ಮಾಡಿ ಊಟ ಹಾಕಿಸಿ ಕಳಿಸುತ್ತಾರೆ. ಕುಪ್ಪಣ್ಣಭಟ್ಟರ ಗೇಣಿ ಮಾತ್ರ ವರ್ಷಾಂತರ ಹತ್ತು ಹನ್ನೆರಡು ಮಣಗಳಂತೆ ಉಳಿದು, ಉಳಿದು–ಈಗ ಐದು ಸಾವಿರ ರೂಪಾಯಿಯ ಮೇಲೆ ಸಾಲವಾಗಿದೆ. ಮಠದವರು

"ಒಂದೊ ತೋಟ ಬಿಡಿ ಇಲ್ಲ ಸಾಲ ತೀರಿಸಿ" ಎಂದು ಪೀಡಿಸಹತ್ತಿದ್ದಾರಲ್ಲದೆ ತೋಟಕ್ಕೆ ಸರಿಯಾಗಿ ಬೇಸಾಯವಾಗದೆ, ಸಸಿ ನೆಡದೆ, ಮರಗಳೆಲ್ಲ ಕೃಶವಾಗಿವೆಯೆಂದು ಏಜೆಂಟರಿಗೆ ಸಿಟ್ಟು. ಅಪ್ಪಣ್ಣಭಟ್ಟರಿಗಾದರೂ ಗೇಣಿಗೆ ಕೊಟ್ಟರೆ ತೋಟವನ್ನಾದರೂ ಊರ್ಜಿತಕ್ಕೆ ತರುತ್ತಾನೆಂದು ಏಜೆಂಟರು ಬಾಯಿಬಿಟ್ಟು ಹೇಳುತ್ತಾರೆ. "ಏನೋ ನಿಮ್ಮ ಕೃಪೆ" ಯೆಂದು ಕಷ್ಟವಾನಿಯಾದ ಅಪ್ಪಣ್ಣಭಟ್ಟರು ಶ್ರೀ ಗುರುಗಳು ಕಾಣಿಗೆ ಹೋಗುವ ಮುಂಚೆ ಅವರನ್ನು ಕರಿಸಿ ಭಿಕ್ಷೆ ಮಾಡಿಸಿದರು. ಬೆಳ್ಳಿಯ ತಟ್ಟೆಯಲ್ಲಿ ಐವತ್ತು ಬೆಳ್ಳಿಯ ರೂಪಾಯಿಯಿಟ್ಟು ಸ್ವಾಮಿಗಳ ಪಾದಕ್ಕೆ ಬಿದ್ದರು.

ಜನರೆನ್ನುವ ಮಾತಿಗೂ ಕುಪ್ಪಣ್ಣಭಟ್ಟರ ನಡತೆಗೂ ಸರಿಸಮವನ್ನಬೇಕೆಂದು ಸ್ವತಃ ಮೈದುನನೇ ಅಂದಮೇಲೆ, ಅಪ್ಪಣ್ಣಭಟ್ಟರು ರಾಗವಾಗಿ ಬುಕ್ಲಾಪುರದವರ ಎದುರಿಗೆಲ್ಲ ಅಂದದ್ದು ಹೆಚ್ಚಲ್ಲ: "ನಾನಂತೂ ಆಗುವುದಿಲ್ಲ ಮಹರಾಯರಿಗೆ ಹೋಗಲಿ. ನೀವೇನು ಮಾಡಿದ್ದೀರಿ ಅವರಿಗೆ? ಹಿರಿಯ ಮಾಣಿಗೆ ಮನೆಯಲ್ಲಿ ಉಪನಯನ ಮಾಡಿ ನಿಮ್ಮನ್ನೆಲ್ಲ ಊಟಕ್ಕೆ ಕರೆದಿದ್ದರೆ ಗಂಟು ಕರಗಿಬಿಡುತ್ತಿತ್ತೆ? ಬಸ್ಸು ಹಿಡಿದು ಬರ್ರೆಂದು ಆಗುಂಬೆಗೆ ಹೋಗಿ ದೇವಸ್ಥಾನದಲ್ಲಿ ಒಂದಕ್ಕೆರಡು ಖರ್ಚು ಮಾಡುವಷ್ಟೇನು ಬಂದಿತ್ತು ಬ್ರಾಹ್ಮಣನಿಗೆ? ಹಾಸಿಗೆಯಿದ್ದಷ್ಟು ಕಾಲು ಚಾಚಬೇಕೆಂದು ಅದಕ್ಕೇ ಹಿರಿಯರು ಅನ್ನುವುದು. ಆದರೆ ಅವರ ಹಾಸಿಗೆ ಎಷ್ಟುದ್ದ ಗೊತ್ತೊ?– ಹೋಯ್ ನನ್ನ ಮಾತನ್ನು ನೀವು ಬೇಕಾದರೆ ನಂಬಿ, ಅಥವಾ ಬಿಡಿ. ಆ ಮನೆಯಲ್ಲವರಿಗೆ ಗಂಟು ಸಿಕ್ಕಿದೆಯಯ್ಯ. ನನಗಿದು ಖಾತ್ರಿ ಇಲ್ಲದ ಈ ಆಟಾಟೋಪವೆಲ್ಲ ಎಲ್ಲಿಂದ ನಡೆಯಬೇಕು" ಎಂದು ಕೊನೆಯ ಮಾತುಗಳನ್ನು ಕಣ್ಣು ಮಿಟುಕಿಸಿ ಮೆತ್ತಗೆ ಹೇಳುತ್ತಾರೆ.

ಭಾಗ : ಎರಡು

ಯಾಕೆ ಹೀಗೆ ತೆಪ್ಪಗಾಗಿ ಮಂಕು ಬಡಿದು ಕೂತಿರುತ್ತಾರೆಂದು ನಡುಮನೆಯ ಮೂಲೆಯಲ್ಲಿ ಉಬ್ಬಸವಿಡುತ್ತ ಕೂತ ಕುಪ್ಪಣ್ಣಭಟ್ಟರ ಹೆಂಡತಿ ಗೌರಮ್ಮನಿಗೆ ಆಶ್ಚರ್ಯ. ಸಂಜೆ ಜೋಯಿಸಹಕ್ಕಿ ಚಿರೋ ಎಂದು ಕೂಗುತ್ತಿದ್ದರೂ, ಕೊಟ್ಟಿಗೆಗೆ ಆಕಳು ಬಂದು ಹಾಲು ಕರೆದಾದ ಮೇಲೂ, ಮಗಳು ಭಾಗೀರತಿ ದೇವರಿಗೆ ದೀಪ ಹತ್ತಿಸಿದ ನಂತರವೂ ಸಂಧ್ಯಾವಂದನೆಗೆ ಏಳಿ ಏಳಿ ಎಂದು ಮೂರು ಬಾರಿ ಕರೆಯಬೇಕು. ಹಿಂದೆ ಗಾಜು ಒಡೆದುಬಿಡುತ್ತಾನೆಂದು ಹತ್ತಿರ ಲಾಟೀನು ಹಚ್ಚಲು ಕೊಡುತ್ತಿರಲಿಲ್ಲ; ಈಗ ಹಿರಿಯ ಮಾಣಿಯೆ ಲಾಟೀನಿನ ಗಾಜು ಒರೆಸಿ, ದೀಪ ಹತ್ತಿಸಿ, ಜಗುಲಿಗೆ ಒಯ್ದು, ಅಪ್ಪಯ್ಯ ಏಳಿ ಎನ್ನಬೇಕು.

ಗೌರಮ್ಮನಿಗೂ ನೆನಪಿದೆ. ಎರಡು ವರ್ಷಗಳ ಕೆಳಗೆ ನಾಲೂರಿನಿಂದ ಅವಳ ತಮ್ಮ ಸುಬ್ರಹ್ಮಣ್ಯ ಬಂದ. ಈಚೆಗೆ ತವರಿನಿಂದ ಬರುವುದೇ ಕಡಿಮೆ, ಇರಲಿ, ಒಡಹುಟ್ಟಿದ್ದೊಬ್ಬ ತಮ್ಮನಾದರೂ ಲಕ್ಷಣವಾಗಿ ತೋಟ ಗದ್ದೆ ಮಾಡಿಕೊಂಡು ವೈನಾಗಿ ಜೀವನ ಮಾಡುತ್ತಿದ್ದಾನಲ್ಲ. ಅದೇ ಸಂತೋಷ ಇವರೊಬ್ಬರೇ ಯಾಕೆ ಹೀಗೆಂದು ತಿಳಿಯುವುದಿಲ್ಲ, ಇದರ ಹಾಗೇ ತಾಲಿ ಹಿಡಿದು ಘಟ್ಟದ ಕೆಳಗಿನಿಂದ ಬಂದ ಅಪ್ಪಣ್ಣಭಟ್ಟ ಗುರುಗಳನ್ನು ಮನೆಗೆ ಕರೆದು ಐವತ್ತು ರೂಪಾಯಿಯ ಭಿಕ್ಷೆಮಾಡಿಸುವಷ್ಟು ದೊಡ್ಡವನಾದ. ಊಟವೆಲ್ಲ ಆದ ಮೇಲೆ ಗುರುಗಳು ಗಿಂಡಿ ಮಾಣಿಯ ಹತ್ತಿ ಹೇಳಿಕಳುಹಿಸಿದರು. ಇವರನ್ನು ಕರೆದುಕೊಂಡು ಬಾ ಅಂತ. ಇವರಾದರೂ ಎಷ್ಟೊಂದು ತಗ್ಗಿ ನಡೆದಾರು? ಮುವ್ವತ್ತು ವರ್ಷದಿಂದ ಕಾಲಿಡದ ಅಪ್ಪಣ್ಣಭಟ್ಟನ ಮನೆಯಲ್ಲಿ ಅವನ ಮುಖದ ಎದುರೇ ಗುರುಗಳ ಹತ್ತಿರ ಛೀಮಾರಿ ಹಾಕಿಸಿಕೊಳ್ಳುವುದು ಸಾಧ್ಯವೆ? ಅಡಿಗೆ ಮನೆಯಲ್ಲಿ ಮುಚ್ಚಿ ಕೂತರು, ಹಾಗೆಲ್ಲ ಮುಚ್ಚಿಕೂತ ಜನ್ಮವೇ ಅಲ್ಲ ಇವರದ್ದು. ಮುಚ್ಚಿ ಕೂತು ಭಾಗೀರತಿಗೆ ಅಂದರು: "ನಾನು ಮನೇಲಿಲ್ಲವೆಂದು ಹೇಳಿಬಿಡು". ಆದರೆ ಗುರುಗಳಿಗೆ ಅಪ್ಪಣ್ಣ ಭಟ್ಟ ಹಚ್ಚಿಕೊಡದಿರುತ್ತಾನೆಯೆ? ಒಬ್ಬೊಬ್ಬರ ಗ್ರಹಚಾರ. ಇಲ್ಲದಿದ್ದರೆ ಇವರಿಗೆ ತಿಂಗಳಿಗೆ ಇಪ್ಪತ್ತು ದಿನ ಉಬ್ಬಸ ಹಿಡಿದ ತನ್ನಂತವಳೇ ಗಂಟು ಬೀಳಬೇಕೆ? ಬೇಲಿಯಾಚೆ ಅಪ್ಪಣ್ಣಭಟ್ಟನ ತೋಟದಲ್ಲಿ ಅಷ್ಟೊಂದು ಅಡಿಕೆ! ಈಚೆಯೋ ಇವರ ತೋಟದಲ್ಲಿ ಕೊಳೆರೋಗ ಹಿಡಿದು ಎಲ್ಲ ನೆಲದ ಪಾಲು. ಎಲ್ಲ ಕೆಲಸದ ಆಳೂ ಅವನ ಮನೆಗೆ! ಇವರ ಹತ್ತಿರವೂ ಒಬ್ಬನೂ ಉಳಿಯುವುದಿಲ್ಲ. ಇನ್ನು ನಿಷ್ಠುರದ ಮಾತೊ? ಊರಲ್ಲೆಲ್ಲ ನಿಷ್ಠುರ ಇವರಿಗೆ. ಆಯಿತೆ? ಎರಡು ಕಾಲಿನ ಮೇಲೆ ಓಡಾಡುವ ನರಪ್ರಾಣಿ ಬಿಡದೆ ಜಗಳವಾಡಿದ್ದಾರೆ ಇವರು. ಒಂದು ಮೋಸ ಗೊತ್ತಿಲ್ಲ; ಒಂದು ದಗ ಗೊತ್ತಿಲ್ಲ; ಒಂದು ಸುಳ್ಳಾಡಿ ಗೊತ್ತಿಲ್ಲ. ಸಿಟ್ಟೆಂದರೆ ಸಿಟ್ಟು ಒಬ್ಬೊಬ್ಬರ ನಕ್ಷತ್ರಾನೆ ಹಾಗೆ. ನನ್ನ ಹಾಗೆ ಕೆಲವರು ಗೋಳಿಡುತ್ತ ಸಾಯಬೇಕೆಂದು ನಿಯಮ. ಒಟ್ಟು ಹಣೆಬರಹ.

ಏನು ನೆನಸಿಕೊಂಡೆ?– ಎಂದು ಗೌರಮ್ಮ ಉಬ್ಬಸದಿಂದ ಸುಧಾರಿಸಿಕೊಳ್ಳುತ್ತ ಚಿಂತಿಸುವರು. ಅದೇ ಸುಬ್ರಹ್ಮಣ್ಯ ಬಂದ. ಭಾವಯ್ಯ ಕಷ್ಟದಲ್ಲಿದ್ದಾರೆಂದು ಉಡಾಫೆಯ ಮಾತನ್ನಾಡಲಿಲ್ಲ. ಗೌರವದಿಂದಲೇ ಹೇಳಿದ:

"ಭಾವಯ್ಯ, ಈ ಪ್ರಾಂತ್ಯದಲ್ಲಿ ಯಾರಿಗೂ ನಿಮ್ಮನ್ನು ಕಂಡರೆ ಆಗದು, ಅಪ್ಪಣ್ಣ ಭಟ್ಟರಂತೂ ನೀವು ಎಂದರೆ ಕತ್ತಿ ಮಸೆಯುತ್ತಾರೆ. ಮಠದವರಂತೂ ತೋಟ ಬಿಡಿರೆಂದು ನಿಮಗೆ ಬೆನ್ನು ಹತ್ತಿದ್ದಾರಂತೆ, ಭಾಗೀರತಿಗೆ ವಯಸ್ಸಾಗಿದೆ : ಗಂಡು ಹುಡುಕಬೇಕು. ನೀವು ತೀರ್ಥಹಳ್ಳಿಯಲ್ಲೊಂದು ವರ ನೋಡಿ ಬಂದರೆ ಅಪ್ಪಣ್ಣ ಭಟ್ಟ ಚಾಡಿ ಛಿದ್ರ ಹಚ್ಚಿತಪ್ಪಿಸಿದನಂತೆ. ಮೈನೆರೆದು ಬಾಳೆ ಮರದಂತೆ ನಿಂತ ಹುಡುಗಿಯನ್ನ ಎಷ್ಟು ದಿನವೆಂದು ಮನೆಯಲ್ಲಿಟ್ಟುಕೊಳ್ಳುವುದು? ಹಿರಿಯರಾದ ನಿಮಗೆ ಅನ್ನುವ ತ್ರಾಣವಿಲ್ಲ: ಆದರೂ ಹೇಳುವೆ. ನಿಮ್ಮ ಗ್ರಹಗತಿಗೆ ಈ ತೋಟ ಸೇರುವುದಿಲ್ಲ. ಎಲ್ಲ ಬಿಟ್ಟು ಹಾಯಾಗಿ ಬಂದುಬಿಡಿ. ಹಲಸಿನೂರಲ್ಲಿ ನನ್ನದೊಂದು ಐನೂರು ಮರ ತೋಟ ಉಂಟಲ್ಲ; ನಿಮ್ಮ ಕೈಯಲ್ಲಾದಷ್ಟು ಮಾಡಿ. ಉಳಿದದ್ದು ನಾನು ನೋಡುವೆ," ಎಂದು ಎಷ್ಟು ಮೃದುವಾಗಿ ಸುಬ್ರಹ್ಮಣ್ಯ ಹೇಳಿದ್ದ! ಎರಡು ವರ್ಷದ ಕೆಳಗೆ. ಇವರೋ ಪರಶುರಾಮನಂತೆ ಕುಣಿದುಬಿಟ್ಟರು.

"ನಾನು ಸತ್ತ ಮೇಲೆ ನನ್ನ ಹೆಂಡತಿ ಮಕ್ಕಳನ್ನು ನೋಡಿಕೊಳ್ಳುವಿಯಂತೆ. ಈಗ ನಿನ್ನ ಕೆಲಸ ನೀನು ಮಾಡಿಕೋ" ಎಂದು ಖಂಡತುಂಡು ಆಡಿಬಿಟ್ಟು ತನ್ನ ತಮ್ಮನಿಗೆ ನೋವಾಗುವಂತೆ ಮಾಡಿಬಿಟ್ಟರು.

ಈಗ ಆ ಸಿಟ್ಟೇ ಇಲ್ಲ. ಆ ವಸೂಲಿ ಸಾಬ, ಆ ಮಠದ ಒರಟು ಉಗ್ರಾಣಿ ವಾರಕ್ಕೊಮ್ಮೆ ಬಂದು ಪೀಡಿಸತೊಡಗಿದ ಮೇಲೆ ಅರ್ಧಕ್ಕರ್ಧವಾಗಿಬಿಟ್ಟಿದ್ದಾರೆ. ಎಂದೆಂದೂ ಕೇಳದವರು ಒಂದು ದಿನ ಬಂದು ಹೆಂಡತಿಯ ಎದುರು ನಿಂತು ಕೇಳಿದರು: "ನಿನ್ನ ನಗ ಕೊಡುವಿಯಾ ? ಆರು ತಿಂಗಳಲ್ಲಿ ಹಿಂದಕ್ಕೆ ತಂದು ಕೊಡುವ ಮಹಾರಾಯಿತಿ"– ಎಂದರು. ಆ ಕೊರಳಿನಲ್ಲಿ ಆ ದೈನ್ಯದ ಸ್ವರ ಪ್ರಥಮ ಬಾರಿಗೆ ಕೇಳಿ ಗೌರಮ್ಮನಿಗೆ ಎದೆಯಲ್ಲಿ ಚೂರಿ ಇರಿದಂತಾಯಿತು. ಒಟ್ಟು ನನ್ನ ತಾಳಿ ಗಟ್ಟಿಯಾಗಿದ್ದರೆ ಸಾಕೆಂದು, ಪೆಟ್ಟಿಗೆಯಿಂದ ಮಗಳು ಭಾಗೀರತಿಗೆಂದು ಇಟ್ಟುಕೊಂಡಿದ್ದ ತೌರವರು ಹಾಕಿದ ಬುಗುಡಿ, ಬಂಗಾರದ ಪಟ್ಟಿ ಚೈನು, ನಾಲ್ಕೆಳೆ ಸರ, ತಿರುಪಿನ ಹೂವು, ಸಮಸ್ತ ಆಭರಣವನ್ನೂ ಕಣ್ಣಿನಲ್ಲಿ ನೀರು ತುಂಬಿದ್ದನ್ನು ತೋರಗೊಡದೆ ಎತ್ತಿಕೊಟ್ಟರು. ಆಮೇಲಿಂದ ಅವರ ಪ್ರಾರ್ಥನೆಯಿಷ್ಟೇ "ನನ್ನ ತಾಳಿ ಗಟ್ಟಿಯಾಗಿಡಪ್ಪ. ಭಾಗೀರತಿಗೊಂದು ಗಂಡನ ಮನೆ ಕಾಣಿಸಪ್ಪ". ಆದರೆ ಮೈಮೇಲೆ ನಗವಿಲ್ಲದೆ ಬೆತ್ತಲೆ ಹುಡುಗಿಯನ್ನು ಯಾರಾದರೂ ಲಗ್ನವಾಗುವರೆ? ಇವರೇನು ಮಾಡಿಬಿಟ್ಟಾರೂ ಬಂಗಾರವನ್ನ ಎಂದು ಆ ಕಾರಣಕ್ಕಾಗಿ ಗೌರಮ್ಮನಿಗೆ ಕರ ಕರೆಯಾಗುತ್ತದೆ. ಈ ಉಬ್ಬಸದ ನಿತ್ಯ ರೋಗದ ಶರೀರಕ್ಕೆ ಮತ್ತೇನದರಲ್ಲೂ ಆಸೆಯಿಲ್ಲ, "ನಾನೇನು ಬಂಗಾರ ಹೇರಿಕೊಳ್ಳಬೇಕೊ? ಅವರ ಮರ್ಯಾದೆ ಉಳಿಯಲಿ ಸದ್ಯ" ಎಂದು ಪದೇಪದೇ ಅಂದುಕೊಳ್ಳವಳು, ಸುಬ್ರಮಣ್ಯ ತವರಿನಿಂದ ಎಂದು ಬರುತ್ತಾನೊ ಎಂದು ದಾರಿ ಕಾಯುವಳು. ಅವನ ಹತ್ತಿವಾದರೂ ಎಲ್ಲ ಸುದ್ದಿ ಹೇಳಿಕೊಂಡು ಬಂಗಾರದ ವಿಷಯವನ್ನು ತಿಳಿಸಿ ಎದೆ ಹಗುರ ಮಾಡಿಕೊಳ್ಳಬಹುದಿತ್ತು.

ಭಾಗೀರತಿ ಅಡಿಗೆ ಮನೆಯಲ್ಲಿ ಹಸಿ ಸೌದೆಗೆ ಅಗ್ನಿ ಆವೇಶಿತವಾಗುವಂತೆ ಮಾಡಲು ಊದುಗೊಳವೆಯಲ್ಲಿ ಊದಿ ಊದಿ ಕೆಮ್ಮಿದಳು. ನೀರು ಹರಿದು ಹರಿದು ಒಣಗಿದ ಕಣ್ಣುಗಳನ್ನು ಸೆರಗಿನಿಂದ ಒರೆಸಿಕೊಂಡಳು. ಕೆದರಿದ ತಲೆಗೂದಲನ್ನು ನೇವರಿಸಿಕೊಂಡೆದ್ದಳು, ಬತ್ತಿದ ಕನ್ನೆಗಳ ಪೆಚ್ಚು ಮೋರೆಯನ್ನೆತ್ತಿ ನಡುಮನೆಗೆ ಬಂದು, "ಅಮ್ಮ ಹುಳಿ ಮಾಡಲು ತೊಗರಿಬೇಳೆಯಿಲ್ಲ"ವೆಂದಳು. "ಸೌತೇ ಬೀಜದ ಸಾರು ಮಾಡು" ಎಂದರು ಗೌರಮ್ಮ.

ಹಲಸಿನೂರಿಗೆ ಹೋಗಲು ಯಾಕೆ ಇವರು ಒಪ್ಪಬಾರದೊ ? ಇಲ್ಲಿದ್ದು ಪಥ ಸಾಗುವಂತಿಲ್ಲ. ಅಪ್ಪಣ್ಣಭಟ್ಟನಂತೂ ಯಮದೂತನಂತೆ ಬೆನ್ನು ಹತ್ತಿದ್ದಾನೆ. ಈ ತೋಟದ ಮೇಲೆಅವನ ಕಣ್ಣು ಗದ್ದೆಗೆ ನೀರು ಬರದಂತೆ ಕಟ್ಟೆ ಕಟ್ಟುತ್ತಾನೆ, ತನ್ನ ಗದ್ದೆಗೆ ದನ ನುಗ್ಗದಂತೆ ಬೇಲಿ ಭದ್ರ ಕಟ್ಟಿಕೊಳ್ಳಬಾರದ" ಒಂದು ವೇಳೆ ನುಗ್ಗಿತು, ಬರಿ ಬೆದರಿಸಬಾರದ ? ನಾಲ್ಕು ಪೆಟ್ಟು ಕೊಟ್ಟು ಅಟ್ಟಬರದ ?ಜಿದ್ದಿನ ಮೇಲೆ ಅಪ್ಪಣ್ಣಭಟ್ಟ ನಾಲ್ಕು ಮೈಲಿಯಾಚೆಯ ದೊಡ್ಡಿಗೆ ಆಳಿನ ಹತ್ತಿರ ದನವನ್ನು ಹೊಡೆಸಿ ಕಟ್ಟಿಸಿದ. ಸಂಜೆಯಾದರೂ ಕೊಟ್ಟಿಗೆಗೆ ಸೇರದ ದನವನ್ನು ಇವರೇ ಖುದ್ದಾಗಿ ಹುಡುಕಿಕೊಂಡು ಹೋಗಿ ರೂಪಾಯಿ ತೆತ್ತು ಬಿಡಿಸಿಕೊಂಡು ಬರಬೇಕಾಯಿತು.

ಜ್ವರಗಡ್ಡೆಯಿಂದ ಹೊಟ್ಟೆ ಡೊಳ್ಳಾದ ಐದು ವರ್ಷದ ಗಣಪ ಅಮ್ಮ ಎಂದು ಅತ್ತುಕೊಂಡು ಬಂದ. "ಈ ಮಗುವಿಗಷ್ಟು ಅಕ್ಕಿ ತೊಳೆದ ಕಲಗಚ್ಚಿನ ಪಾನಕ ಕೊಡೇ" ಎಂದು ಕೂಗಿದರು ಗೌರಮ್ಮ. ಇದ್ದಿಯೊ ಸತ್ತಿಯೊ ಎಂದು ಕೇಳುವವರು ಆಸುಪಾಸಿನಲ್ಲಿಲ್ಲ. ಇಕೊ ಮುಡಿದುಕೊ ಎಂದು ಭಾಗೀರತಿಗೆ ಒಂದು ರಂಜದ ಸರ ಕರೆದು ಕೊಟ್ಟವರಿಲ್ಲ. ಇದ್ದಕ್ಕಿದ್ದಂತೆ ಬಂಗಾರದ ನೆನಪಾಗಿ ಕಣ್ಣಿನಲ್ಲಿ ನೀರು ಹರಿಯತೊಡಗಿತು. ಕೆಮ್ಮು ಬಂದು ಉಬ್ಬಸ ಹತ್ತಿತು. ಪ್ರಾಣವನ್ನೆ ಆಹ್ವಾನಿಸಿ ವಿಸರ್ಜಿಸುವಂತೆ ಗೌರಮ್ಮ ಉಬ್ಬಸವಿಡುತ್ತ ನಡುಮನೆಯ ಕತ್ತಲೆಯ ಮೂಲೆಯಲ್ಲಿ ಕೂತರು.

ಭಾಗ: ಮೂರು

ಹೆಂಡತಿ ಒಂದು ರಾಗವತ್ತಿದರೆ ಸಾಕು. ನಿನ್ನ ನಗ ಬೇಡವೆಂದು ಬಿಡುವೆನೆಂದು ಕುಪ್ಪಣ್ಣಭಟ್ಟರು ಮನಸ್ಸು ಗಟ್ಟಿಮಾಡಿಕೊಂಡೆ ಕೇಳಿದ್ದರು. ಆದರೆ ಅವಳು ಮರು ಮಾತಾಡದೆ ಪೆಟ್ಟಿಗೆಯ ಬಾಗಿಲು ತೆರೆದು ರೇಷ್ಮೆಯ ವಸ್ತ್ರದಲ್ಲಿ ಕಟ್ಟಿಟ್ಟಿದ್ದ ಚಿನ್ನವನ್ನೆಲ್ಲ ಎತ್ತಿಕೊಟ್ಟಿದ್ದರಿಂದ ಭಟ್ಟರು ಇನಷ್ಟು ಬಾಗಿಬಿಟ್ಟರು. ಇದೇ ಋಣಮುಕ್ತನಾಗಲು ನನ್ನ ಕೊನೆಯ ಯತ್ನ ಎಂದು ಬ್ಯಾಂಕಿಗದನ್ನು ಗುಟ್ಟಾಗಿ ಒಯ್ದು ಅಡವಿಟ್ಟು, ಎರಡುಸಾವಿರದ ಐನೂರು ರೂಪಾಯಿ ತಂದರು. ಆರು ತಿಂಗಳೊಳಗೆ ಇದನ್ನು ಬಿಡಿಸಿ ಹೆಂಡತಿಗೆ ಒಪ್ಪಿಸಿ ಬಿಡುವೆನೆಂದು ಶಪಥ ಹಾಕಿಕೊಂಡರು.

ಸುತ್ತಮುತ್ತಲಿನ ಹಳ್ಳಿಗಳಲ್ಲಿ ನೂರಿನ್ನೂರು ಮರದಂತೆ ತೋಟ ಮಾಡಿಕೊಂಡಿದ್ದ ಸಣ್ಣ ಪುಟ್ಟ ಬೇಸಾಯಗಾರರಿಗೆ ಮಣ ಒಂದಕ್ಕೆ ಇಪ್ಪತ್ತೈದರಂತೆ ಮುಂಗಡ ಕೊಟ್ಟರು. ಉಳಿದ ಇಪ್ಪತ್ತೈದನ್ನು ಅಡಿಕೆ ಮಾರಿದ ಮೇಲೆ ಕೊಡುತ್ತೇನೆಂದು ವಚನ ಕೊಟ್ಟರು.

ಅಪ್ಪಣ್ಣಭಟ್ಟರಾದರೂ ಮಣ ಒಂದಕ್ಕೆ ನಲವತ್ತೇಳು, ತಪ್ಪಿದರೆ ನಲವತ್ತೆಂಟರ ಮೇಲೆ ಬೆಲೆ ಕೊಟ್ಟಿದ್ದಿಲ್ಲ. ಅಲ್ಲದೆ ಅವರು ಮಣ ಒಂದಕ್ಕೆ ತಲಾ ಹದಿನೈದು ರೂಪಾಯಿಗಿಂತ ಹೆಚ್ಚಿಗೆ ಮುಂಗಡ ಕೊಟ್ಟವರಲ್ಲ. ಆದ್ದರಿಂದ ಕುಪ್ಪಣ್ಣಭಟ್ಟರು ಇಪ್ಪತ್ತೈದು ರೂಪಾಯಿಯಂತೆ ಕೈ ಮೇಲೆ ಹಣವಿಟ್ಟು ಕೇಳಿದ್ದರಿಂದ ಚಿಲ್ಲರೆ ಬೇಸಾಯಗಾರರೆಲ್ಲ ಒಪ್ಪಿದರು. ಕುಪ್ಪಣ್ಣಭಟ್ಟರು ಇದೊಂದು ಕೈ ನೋಡಿ ಬಿಡೋಣವೆಂದು ಒಟ್ಟು ಒಂದುನೂರು ಮಣ ಅಡಿಕೆ ಸಂಪಾದಿಸಿ ಲಾರಿಯಲ್ಲಿ ಶಿವಮೊಗ್ಗೆಗೆ ಸಾಗಿಸಿ ಮಂಡಿಯಲ್ಲಿ ತುಂಬಿದರು. "ಒಳ್ಳೆ ದರವೇರಿದ ಮೇಲೆ ನಾನೇ ಖುದ್ದಾಗಿ ಬರುವೆ. ಆಮೇಲೆ ಮಾರಾಟ ಮಾಡಿದರಾಯಿತು. ಯಾವುದಕ್ಕೂ ಆಗೀಗ ಒಂದು ಕಾಗದ ಹಾಕಿ" ಎಂದು ಮಂಡಿಯವರಿಗೆ ಹೇಳಿ ಹಿಂದಕ್ಕೆ ಬಂದರು.

ತನ್ನ ಗಿರಾಕಿಗಳು ಕೈ ತಪ್ಪಿದ್ದರಿಂದ ಅಪ್ಪಣ್ಣಭಟ್ಟ ಸಿಟ್ಟಿನಲ್ಲಿ ಕುಣಿದುಬಿಟ್ಟ ಎಲ್ಲೂ ಇವರಿಗೆ ಗಂಟು ಸಿಕ್ಕಿರಲೇ ಬೇಕು. ಆದ್ದರಿಂದ ಈ ಆಟಾಟೋಪವೆಂದು ಊರೆಲ್ಲ ಸಾರಿ ಬಂದ.

ಇತ್ತಲಾಗಿ ಕುಪ್ಪಣ್ಣಭಟ್ಟರು ನಿತ್ಯ ಚೀಲದಿಂದ ಕವಡೆ ತೆಗೆದು ಸಾಲಾಗಿ ಜೋಡಿಸಿ ನಿಮಿತ್ಯ ನೋಡಿದರು. ಮತ್ತೆ ಪಂಚಾಂಗದ ಅಂಚಿನಲ್ಲೆಲ್ಲ ಲೆಕ್ಕ ಮಾಡಿದರು. ಮಠಕ್ಕೆ ಕೊಡಬೇಕಾದ ಬಾಬ್ತು ಐದು ಸಾವಿರ; ಕಮ್ತಿಗೆ ಒಂದು ಸಾವಿರ: ಹೆಂಡತಿಯ ಉಬ್ಬಸದ ಮದ್ದಿಗೆಂದಾದ ಸಾಲ ಮೂರುನೂರು: ಈಗ ಬ್ಯಾಂಕಿನಲ್ಲಿ ಅಡವಿಟ್ಟು ಪಡೆದ ಸಾಲದ ಮೇಲೆ ಬಡ್ಡಿ: ಭಾಗೀರತಿಯ ಮದುವೆಯ ಖರ್ಚು. ಎಲ್ಲಕ್ಕಿಂತ ಮೊದಲು ಬಂಗಾರವನ್ನು ಬ್ಯಾಂಕಿನಿಂದ ತಂದುಬಿಡಬೇಕು. ಮುಂದಿನ ವರ್ಷಬೇಕಾದರೆ ಮತ್ತೆ ಅಡವಿಟ್ಟು ಹಣ ಪಡೆದಾಯಿತು.

ಮತ್ತೆ ಲೆಕ್ಕ ಮಾಡುವರು. ಅಡಿಕೆಯ ದರವೇರಿ ಮಣಕ್ಕೊಂದು ಅರರತ್ತು ರೂಪಾಯಿಯಾದರೂ ಸಿಕ್ಕರೆ ಮಣ ಒಂದರ ಹತ್ತು ರೂ. ಲಾಭ. ಒಟ್ಟು ಒಂದು ಸಾವಿರಎರಡುನೂರು ರೂಪಾಯನ್ನು ಕಮ್ತಿಗೆ ಕೊಡುವುದು : ಒಂದೈವತ್ತನ್ನು ಡಾಕ್ಟರಿಗೆ ಕೊಡುವುದು; ಮಠಕ್ಕೊಂದು ಇನ್ನೂರ ಐವತ್ತು. ಉಳಿದ ಐನೂರು ಬ್ಯಾಂಕಿನಲ್ಲಿಟ್ಟು ಎರಡು ಸಾವಿರದ ಐನೂರು ಚಿಲ್ಲರೆಯನ್ನು ಕೊಟ್ಟು ಬಂಗಾರವನ್ನು ಹಿಂದಕ್ಕೆ ತಂದು, ಮತ್ತೆ ಮುಂದಿನ ಸಾರಿ ಬಂಗಾರವನ್ನು ತಿರುಗಿ ಅಡವಿಟ್ಟು ಒಟ್ಟು ಮೂರು ಸಾವಿರದ ಅಸಲಿನಲ್ಲಿ ವ್ಯಾಪಾರ ಮಾಡುವುದು. ಹೀಗೆ ಹತ್ತು ವರ್ಷ ನಡೆದರೆ ಸಾಕು. ಸಾಲವನ್ನೆಲ್ಲ ತೀರಿಸಿ ಬಿಡಬಹುದು. ಚೀಲದಿಂದ ಇನ್ನೊಮ್ಮೆ ಕವಡೆಯನ್ನು ತೆಗೆದು ಸಾಲಾಗಿ ಇಟ್ಟು ನಿಮಿತ್ಯ ನೋಡುವರು.

ಗೊಬ್ಬರದ ಗುಂಡಿಯಿಂದೆದ್ದು ಬಂದ ನೊಣ ಮೂಗಿನ ಮೇಲೆ ಏರಿಕೂತು ಉರಿಯಿತು. ಅಟ್ಟಿದರೂ ಕಣ್ಣಿಗೆ ಕಟ್ಟುವ ನುಸಿ, ಉಶ್, ಎಂದರು. ಕಿವಿಯಲ್ಲಿ ಕರ್ಣಪಿಶಾಚಿಯಂತೆ ಕಾಡುವ ಸೊಳ್ಳೆ. ಅಂಗಳದ ಕೆಸರು ಸದ್ಯ ಬಿಸಿಲಿಗೆ ಒಣಗಿದೆ. ಅಂಗಳದ ಮೂಲೆಯಲ್ಲೊಂದು ಹಲಸಿನ ಸೇಡೆ ಒಣಗುತ್ತಿತ್ತು. ಗಾಳಿ ಬೀಸಿದರೆ ಕೊಟ್ಟಿಗೆಯ ನಾತ. ಜ್ವರಗಡ್ಡೆಯಿಂದ ಹೊಟ್ಟೆ ಡೊಳ್ಳಾದ ಐದು ವರ್ಷದ ಮಗ ಅಂಗಳದೊಂದು ಮೂಲೆಯಲ್ಲಿ ಬೆತ್ತಲೆ ಮೈಯಲ್ಲಿ ಕುಕ್ಕುರು ಕೂತಿದ್ದ. ಅಂಗಳದಲ್ಲಿದ್ದೊಂದು ಬೂದುನಾಯಿ, ಬೂದಿ ಗುಡ್ಡೆಯ ಮೇಲೊರಗಿದ್ದೊಂದು ಕರಿನಾಯಿ ಕುಳಿತ ಹುಡುಗನಲ್ಲೆ ತದೇಕ ಮಗ್ನರಾಗಿದ್ದವು.

ಬರಿಗಾಲಿನ ಮೇಲೆ ಕೂತು ರಕ್ತ ಹೀರುತ್ತಿದ್ದ ಸೊಳ್ಳೆಯನ್ನು ಉಜ್ಜಿಕೊಳ್ಳುತ್ತ ಭಟ್ಟರು ಎದ್ದುನಿಂತರು. ಹಾಳು ನುಸಿಕಾಟವೆಂದು ಕಳ್ಳಿಯ ಕಡ್ಡಿಯೊಂದನ್ನು ಮುರಿದು ತಂದು ಸೂರಿಗೆ ಕಟ್ಟಿದರು. ಭಾಗೀರತಿ ಊದುಗೊಳವೆ ಹಿಡಿದು

ಅಂಗಳಕ್ಕೆ ಬಂದು 'ಆಯಿತೇನೊ ಗಣಪ' ಎಂದಳು. ಮತ್ತೆ ಅವನಿಗೆ ತೊಳೆಯಲು ಚೆಂಬು ನೀರನ್ನು ಬಚ್ಚಲಿನಿಂದ ತಂದಳು. ಗಣಪ ಖಾಲಿ ಮಾಡಿದ ಜಾಗಕ್ಕೆ ಬೂದುನಾಯಿ, ಕರಿನಾಯಿ, ನುಗ್ಗಿದುವು. ಅವುಗಳ ಬೊಗಳುಟದಲ್ಲಿ ಮನಸ್ಸಿನ ಗುಣಾಕಾರಕ್ಕೆ ಭಗ್ನವಾದಂತಾಗಿ ಭಟ್ಟರು ಹಚ ಹಚ ಎಂದರು.

ನಡುಮನೆಯ ಮೂಲೆಯಿಂದ ಗೌರಮ್ಮನ ಉಬ್ಬಸ: ಗರಗಸದ ಶಬ್ದದಂತೆ ಭಟ್ಟರಪ್ರಾಣವನ್ನು ಕಲಸಿಬಿಟ್ಟಿತು. 'ಭಾಗೀರತಿ ಇವಳಿಗಷ್ಟು ಮದ್ದು ಕೊಡೆ' ಎಂದು ಕೂಗಿ ಶತಪಥಜಗುಲಿಯಲ್ಲಿ ತಿರುಗಿದರು'.

ಹೆಂಚು ಹೊದಸಬೇಕು. ತೇವದ ಗೋಡೆಯ ಮೇಲೆಲ್ಲ ಮಳೆಗಾಲದಲ್ಲಿ ಕಪ್ಪಗೆ ಹರಿಯುವ ಕಂಬಳಿ ಹುಳ, ಸೋರಿ ಸೋರಿ ನೆಲದ ಮೇಲೆ ನೂರು ತೂತು. ಮಕ್ಕಳನ್ನು ಮಲಗಿಸಲು ಚಿಮಣಿ ಹಿಡಿದು ಸೋರದಿರುವ ಜಾಗವನ್ನು ರಾತ್ರಿಯಲ್ಲಿ ಹುಡುಕಬೇಕು. ತೇವವಿಲ್ಲದ ಜಾಗವೆಂದು ಸದ್ಯ ಕಣ್ಣು ಮುಚ್ಚುವಷ್ಟರಲ್ಲಿ ಪಟಕ್ ಪಟಕ್ ಎಂದು ಕಣ್ಣಿನ ಮೇಲೆ ಸೂರಿನಿಂದ ಹನಿ ಉದುರುವುದು. ಆಯಿತೊ? ಒರಳೆ ಬೇರೆ. ಹಾಸಿದ ಚಾಪೆಯ ಕೆಳಗೆ ಒರಲೆ. ಅಕ್ಕಿ ತುಂಬಿದ ಪಣತದಲ್ಲಿ ಒರಲೆ. ದೇವರ ಪೆಟ್ಟಿಗೆಯ ತಳಕ್ಕೆ ಒರಳ. ಅಂಡಿಗೆ ಒರಳೆ ಹಿಡಿಯುವುದು ಮಾತ್ರ ಇನ್ನೊಂದು ಬಾಕಿ.

ಕಳ್ಳಿಯ ಅಷ್ಟಾವಕ್ರ ಕಡ್ಡಿಗಳ ಮೇಲೆ ನುಸಿ ಕೂತು ಹಸಿರಾದ ದಿಂಡು ಕಪ್ಪಾಯಿತು. ಕುಪ್ಪಣ್ಣಭಟ್ಟರಿಗೆ ಕಾಡು ರಗಳೆಯಾಗಿ ಅಂಗಳದಲ್ಲಿ ನಿರ್ವಿಣ್ಣನಿಂತರು. ಬೆನ್ನಿಗೆ ಗುಡ್ಡ, ಎದುರು ಗದ್ದೆ, ಎಡ ಬಲಕ್ಕೆ ಗಾಡಿ ದಾರಿ– ಕಾಡಿನ ಮಧ್ಯೆ, ಯಾರೋ ದೂರದಲ್ಲಿ ಸುಳಿದಂತಾಯಿತು. ಯಾರದು ಎಂದರು. ನಾನಯ್ಯ ಎಂದು ಕಟ್ಟಿಗೆ ತಲೆಯ ಮೇಲೆ ಹೊತ್ತ ಮಂಜ ಬೇಗ ಬೇಗ ಕಾಲುಹಾಕಿದ. ಸ್ವಲ್ಪ ನಿಲ್ಲೋ ಎಂದರು. ನಮ್ಮ ಮನೆಗೆ ಯಾವತ್ತು ಸೌದೆ ಒಟ್ಟುವುದು ಮಾರಾಯ ಎಂದರು. ಸೀಬಿನಕೆರೆ ಅಯ್ಯನವರದ್ದಾದ ನಂತರ ಎಂದು ಅವ ಎಗ್ಗಿಲ್ಲದೆ ನಡೆದುಬಿಟ್ಟ. ಏನು ಮಾಡುವುದಕ್ಕೂ ತೋಚದೆ ಕುಪ್ಪಣ್ಣಭಟ್ಟರು ಕತ್ತಿ ಹಿಡಿದು ಬಾಳೆಲೆ ಕೊಯ್ದು ಬರುವುದೆಂದು ತೋಟಕ್ಕೆ ನಡೆದರು. ಅವರು ಹೊರಕ್ಕೆ ಬರುವಷ್ಟರಲ್ಲಿ ನಾಲ್ಕು ಮೈಲಿ ದೂರದ ಸ್ಕೂಲಿನಿಂದ ಮೂರು ಮಾಣಿಗಳು ಹಸಿದು ಹಿಂದಕ್ಕೆ ಬಂದಿದ್ದವು. ಭಾಗೀರತಿ ದನಗಳಿಗೆ ಕಾದು ನಿಂತಿದ್ದಳು. ಗರಗಸವಿಟ್ಟು ಕೊಯ್ದಂತೆ ಉಬ್ಬಸವಿಡುತ್ತಿದ್ದ ಗೌರಮ್ಮನ ಸಂಕಟ ಭಾಗೀರತಿ ಕೊಟ್ಟ ಔಷಧಿಯಿಂದ ಏನೂ ಶಮನವಾಗಿರಲಿಲ್ಲ. ಗಣಪ ಒಂದು ಬಟ್ಟಲಲ್ಲಿ ಹಸಿ ಅವಲಕ್ಕಿ ಬೆಲ್ಲದುಂಡೆಯನ್ನಿಟ್ಟುಕೊಂಡು ಮುಕ್ಕುತ್ತ ಕೂತಿದ್ದ.

ಅಡಿಕೆಯ ದರ ಐವತ್ತೊಂದಕ್ಕೇರಿತು, ಐವತ್ತರಡಕ್ಕೆ ಏರಿತು– ಮತ್ತೆ ತಿಂಗಳಲ್ಲಿ ಐವತ್ತೈದಾಯಿತು. ಕುಪ್ಪಣ್ಣಭಟ್ಟರು ಅರವತ್ತಾಗಲಿ ಎಂದು ಮಾರಲಿಲ್ಲ.

ನಿಮ್ಮ ದುಡ್ಡು ನೀರುಪಾಲಾಯ್ತೆಂದು ತಿಳಿಯಿರಿ ಎಂದು ಕುಪ್ಪಣ್ಣಭಟ್ಟರಿಗೆ ಅಡಿಕೆ ಮಾಡಿದವರಿಗೆಲ್ಲ ಅಪ್ಪಣ್ಣಭಟ್ಟ ಚುಚ್ಚಿದ. ಕುಪ್ಪಣ್ಣಭಟ್ಟರಿಗೆ ತಗಾದೆ ಹೆಚ್ಚಾಯಿತು. ದಿನಕ್ಕೆ ಎಂಟು ಹತ್ತು ಜನರಂತೆ ಸದಾ ತನ್ನ ಜಗುಲಿಯ ಮೇಲೆ ಕೂತಿರುವವರಿಗೆ ನೆವ ಹೇಳಿ ಹೇಳಿ ಸುಸ್ತಾದರು. ಇನ್ನೊಂದು ತಿಂಗಳು ತಡೆಯಿರಿ ಎಂದು ಆಳುದ್ದ ಶರೀರವನ್ನು ಗೇಣುದ್ದ ಮಾಡಿ ಬೇಡಿದರು. ನಡೆಯಲಿಲ್ಲ. ಕೊನೆಗೊಂದು ದಿನ ಶಿವಮೊಗ್ಗೆಗೆ ಓಡಿ ದಾಸ್ತಾನು ಮಾಡಿದ ಅಡಿಕೆಯ ಮೇಲೆ ಮಂಡಿಯಿಂದ ಶೇಕಡಾ ಹದಿನೈದು ರೂ. ಬಡ್ಡಿಯ ಮೇಲೆ ಎರಡು ಸಾವಿರದ ಐನೂರು ರೂಪಾಯಿ ಸಾಲವನ್ನು ತಂದರು, ಮಣಕ್ಕೊಂದರ ಇನ್ನೊಂದು ಹತ್ತತ್ತು ರೂಪಾಯಂತೆ ಕೊಟ್ಟು 'ತಿಂಗಳು ತಡೆಯಿರಿ, ಉಳಿದ ಹದಿನೈದು ಕೊಡುವೆ'ನೆಂದು ಗಿರಾಕಿಗಳನ್ನು ಪ್ರಾರ್ಥಿಸಿದರು.

ಕುಪ್ಪಣ್ಣಭಟ್ಟರ ಹತ್ತಿರ ಹಣ ಓಡಾಡುತ್ತಿರುವುದನ್ನು ತಿಳಿದ ಅಪಣ್ಣಭಟ್ಟ ಗೋಪಾಲ ಕಮ್ತಿಗೆ ಹಚ್ಚಿಕೊಟ್ಟ; ಮಠದ ಏಜೆಂಟರ ಕಿವಿಯಲ್ಲಿ ಮಹಾರಾಯರ ಅವರ ಹತ್ತಿರ ದುಡ್ಡುಂಟು ಎಂದು ಚುಚ್ಚಿದ. ನಿಮ್ಮ ಲೆಕ್ಕ ಚುಕ್ತಾಗಬೇಕೊ? ಇದೆ ಸರಿಯಾದ ಸಮಯ ಎಂದ.

ಕಮ್ತಿ ಕಡೆಯಿಂದ ವಸೂಲಿ ಸಾಬ ಒಂದು ಮಧ್ಯಾಹ್ನ ಬಂದು ಜಗುಲಿಯ ಮೇಲೆ ಕೂತ. ಕುಪ್ಪಣ್ಣಭಟ್ಟರು ಬೇಡಿದರು; ಕಾಡಿದರು. ದಪ್ಪ ಮೀಸೆಯ ಸಾಬ ಕವಳ ಹಾಕಿ ಕೂತೇಬಿಟ್ಟ ಐದು ನೂರು ರೂಪಾಯಿ ಸಂದಾಯವಾಗದ ಹೊರ್ತು ನಾನೇಸುವುದಿಲ್ಲ ಇಲ್ಲಿಂದ ಎಂದು ಚಂಡಿ ಹಿಡಿದ ಕೂಗಲು ಪ್ರಾರಂಭಿಸಿದ.

ಅಳುವ ಮನುಷ್ಯನಾಗಿದ್ದರೆ ಭಟ್ಟರು ಅತ್ತುಬಿಡುತ್ತಿದ್ದರು. ಸಾಬ ಕೂಗಾಡಿದಂತೆ ಒಳಗೆ ಗೌರಮ್ಮನ ಉಬ್ಬಸ ಹೆಚ್ಚಾಯಿತು. ದುಃಸ್ವಪ್ನದಲ್ಲಿ ಕೈಯೆತ್ತಲಾರದವನಂತೆ ಭಟ್ಟರು ಕೂತುಬಿಟ್ಟರು. ದೂರದಲ್ಲೊಂದು ಮನುಷ್ಯ ಪ್ರಾಣಿ ಸುಳಿದಾಡಿದಂತಾದರೆ ಸಾಕು, ಸಾಬನ ಗಂಟಲು ದೊಡ್ಡದಾಗುತ್ತಿತ್ತು.

ಪೆಟ್ಟಿಗೆಯ ಬಾಗಿಲು ತೆಗೆದು ನಾಲ್ಕು ನೂರು ರೂಪಾಯನ್ನು ಸಾಬನಿಗೆ ಕೊಟ್ಟರು. ಅವನು ಗೊಣಗುತ್ತಲೆ ಸೈಕಲ್ ಹತ್ತಿ ಹೋದ. ಅಪ್ಪಣ್ಣಭಟ್ಟರು ದಾರಿಯಲ್ಲಿ ಕಾದು ಸಾಬನನ್ನು ಕರೆದು ಕಾಫಿಕೊಟ್ಟರು.

ಸಾಬ ಹೋಗುತ್ತಿದ್ದಂತೆ ಡಾಕ್ಟರರ ಕಡೆಯಿಂದ ಕಾಂಪೌಂಡರ್ ಬಂದ. ಅವನಿಗೆ ಇನ್ನೊಂದು ನೂರು ಕೊಟ್ಟಿದ್ದಾಯಿತು. ಕೈಯಲ್ಲಿ ಇನ್ನೂ ಒಂದು ಸಾವಿರ ಉಳಿಯಿತು. ಲಾಭದ ಹಣದಲ್ಲಿ ಸಾಲವನ್ನು ತೀರಿಸಿದಂತಾಯಿತು; ಪರವಾಯಿಲ್ಲವೆಂದು ಕುಪ್ಪಣ್ಣಭಟ್ಟರು ಸಮಾನಗೊಂಡರು. ಮಾರನೇ ಬೆಳಿಗ್ಗೆ ಮಠದ ಏಜೆಂಟರೇ ಹಾಜರು.

ಭಟ್ಟರು ಮಣೆ ಹಾಕಿದರು. ಉಪಚರಿಸಿದರು. ಕಾಫಿ ಮಾಡಿಸಲಿ ಎಂದರೆ ಏಜೆಂಟರು ಬೇಡವೆಂದರು. "ನೋಡಿ ನನ್ನ ಕಾಲು ಬಾತುಕೊಂಡಿದೆ. ಆದರೂ ನಾನೇ ಖುದ್ದು ಬಂದೆ. ಮಠದ ಕಡೆ ನೀವೇನೂ ಮುಖ ತೋರಿಸುವವರಲ್ಲ. ಗುರುಗಳು ಅಪ್ಪಣ್ಣ ಭಟ್ಟರ ಮನೆಗೆ ದಯಮಾಡಿಸಿದಾಗ ಹೇಳಿಕಳುಹಿಸಿದರೂ ನೀವು ಬರಲಿಲ್ಲ. ನರಸಿಂಹ ದೇವರಿಗೆ ದ್ರೋಹ ಮಾಡಿದವರಿಗೆ ಉಳಿಗಾಲವಿಲ್ಲ ಭಟ್ಟರೇ. ಎಲ್ಲಿ ಮಠದ ಬಾಕಿ ಕೊಟ್ಟುಬಿಡಿ" ಎಂದು ಗಾಳಿ ಬೀಸಿಕೊಳ್ಳುತ್ತ ಏಜೆಂಟರು ಕೂತೇಬಿಟ್ಟರು. ಗೋಪಾಲ ಕಮ್ತಿಗೆ ನಾಲ್ಕು ನೂರುಕೊಟ್ಟ ವಿಷಯ ತಿಳಿದಿದ್ದರಿಂದ ಏಜೆಂಟರು ಭಟ್ಟರ ಪ್ರಾರ್ಥನೆ ಬೆಳೆದಷ್ಟೂ ರೇಗಿದರು.

"ನಾಳೆಯೇ ಜಪ್ತಿಗೆ ವಾರೆಂಟು ತರುವೆ" ಎಂದು ಎದ್ದುನಿಂತರು.

ಕುಪ್ಪಣ್ಣಭಟ್ಟರು ಎಂಟುನೂರು ತೆತ್ತು ನಿಟ್ಟುಸಿರಿಟ್ಟರು. ಏಜೆಂಟರು "ಮುಂದಿನ ಗಡಿ ವಸೂಲಿಗೆ ಬಂದಾಗ ಉಳಿದದ್ದೆಲ್ಲ ಸಂದಾಯವಾಗಬೇಕು; ಇಲ್ಲವೇ ತೋಟ ಬಿಡಬೇಕು" ಎಂದು ಎಚ್ಚರಿಸಿ ಅಪ್ಪಣ್ಣಭಟ್ಟರ ಮನೆಗೆ ಊಟಕ್ಕೆ ಹೋದರು.

ಮಾರನೆ ದಿನ ಅಡಿಕೆ ಮಾರಿದವರು ಒಟ್ಟಾಗಿ ಮುತ್ತಿದರು :

"ಇನ್ನೂ ಐದೈದಾದರೂ ಕೊಡಿ, ಭಟ್ಟರೇ. ಮನೆಯಲ್ಲಿ ಕಷ್ಟ ಮಳೆಗಾಲದಸಾಮಾನುಕೊಳ್ಳಬೇಕು." ಭಟ್ಟರ ಕೈಯಲ್ಲಿ ದುಡ್ಡಾಡುವುದು ಲೋಕಕ್ಕೆಲ್ಲ ತಿಳಿದು ಬಿಟ್ಟಿತ್ತು.

ಅಡಿಕೆ ಬೆಲೆ ಐವತ್ತೈದರಿಂದ ಮೇಲೇರಲಿಲ್ಲ. ಐವತ್ತಕ್ಕಿಳಿದುಬಿಟ್ಟಿತು. ಕಂಗಾಲಾದ ಭಟ್ಟರು ಶಿವಮೊಗ್ಗೆಗೆ ಬಸ್ಸು ಹಿಡಿದು ಹೋದರು. ಅಡಿಕೆಯನ್ನು ಮಾರಿದರು. ಮಂಡಿಯ ಸಾಲ, ಬಡ್ಡಿ ತೀರಿಸಿದರು. ಅಡಿಕೆಯನ್ನು ತನಗೆ ಮಾರಿದವರಿಗೆ ಕಾಸು ಉಳಿಸಿಕೊಳ್ಳದಂತೆ ಉಳಿದ ಹಣ ಕೊಟ್ಟರು. ಬ್ಯಾಂಕಿನಲ್ಲಿ ಅಡವಿಟ್ಟು ಪಡೆದ ಹಣದ ಬಡ್ಡಿಯನ್ನು ತೀರಿಸಿದರು. ನಗ ಮಾತ್ರ ಬ್ಯಾಂಕಿನಲ್ಲಿ ಉಳಿಯಿತು.

ಮಳೆ ಹಿಡಿಯುವ ಮುಂಚೆ ಮೈದುನ ಗಾಡಿ ಕಟ್ಟಿಸಿಕೊಂಡು ಬಂದು, ಗಿಣಿಗೆ ಹೇಳುವಂತ ಭಾವಯ್ಯನಿಗೆ ಹೇಳಿದ: "ಬಂದುಬಿಡಿ, ಭಾಗೀರತಿಗೆ ನಾನು ವರ ಹುಡುಕಿದೆ. ಅಕ್ಕ ನಿತ್ರಾಣವಾಗಿದ್ದಾಳೆ. ಗಣಪ ಕಡ್ಡಿಯಾಗಿದ್ದಾನೆ". ಮತ್ತೆ ಅಕ್ಕನಿಗೆ ಹೇಳಿದ, "ನನ್ನ ಇವಳು ಗರ್ಭಿಣಿ. ನೀನು, ಭಾಗೀರತಿ ಮನೆಗೆ ಬಂದೊಂದು ಆರು ತಿಂಗಳಿದ್ದರೆ ಉಪಕಾರವಾಗುತ್ತದೆ, ಬಾಣಂತನ ಮಾಡುವವರು ಇಲ್ಲ. ಭಾಗೀರತಿಯಿಂದ ತುಂಬ ಸಹಾಯವಾಗುತ್ತದೆ. ಅವಳಿಗೂ ವರ ಹುಡುಕುವ ನಾನು. ನಿನ್ನ ಯಜಮಾನರ ಮಾತು ಕೇಳಬೇಡ. ಬಂಗಾರ ಯಾಕೆ ಅವರ ಕೈಯಲ್ಲಿ ಕೊಟ್ಟೆ? ನನ್ನ ಮಾತು ಕೇಳಿ ಹಲಸೂರಿಗೆ ಬಂದುಬಿಡಬಾರದ? ಒರಟು ಜನ್ಮ ಅವರದ್ದು.ತಾನು, ತನ್ನ ಹಠ ಹೆಂಡತಿ ಮಕ್ಕಳು ಎಂದು ಯಾರ ಲೆಕ್ಕವೂ ಇಲ್ಲ. ಉಳಿದವರಂತೆ ಉದ್ಧಾರವಾಗದ ಹಾಗೆ ಏನಾಗಿದೆ ಹೇಳು ಇವರಿಗೆ. ನನಗಂತೂ ಹೊಳೆಯುವುದಿಲ್ಲ."

"ಇವರಿಂಗಿತ್ತೀಚೆಗೆ ಯಾಕೊ ಸರಿಯಿಲ್ಲ ಕಣೊ, ನಾನು ಬಿಟ್ಟು ಹೇಗೆ ಬರಲೊ?" ಎಂದರು. ಗೌರಮ್ಮ.

“ಒಂದಾರು ತಿಂಗಳ ಮಟ್ಟಿಗಾದರೂ ಬಾ ಅಕ್ಕ. ಇವಳಿಗೆ ಬಾಣಂತನ ಮಾಡುವವರಿಲ್ಲ ಭಾಗೀರತಿಗೂ ವರ ನೋಡುವೆ” ಎಂದು ಸುಬ್ರಹ್ಮಣ್ಯ ದುಂಬಾಲು ಬಿದ್ದ.

ಕುಪ್ಪಣ್ಣಭಟ್ಟರು ಹೂ ಎನ್ನಲಿಲ್ಲ. ಉಹೂ ಎನ್ನಲಿಲ್ಲ. ಅವಳ ಇಷ್ಟ ಎಂದು ಬಿಟ್ಟರು. ನೀವೂ ಅಷ್ಟು ದಿನ ಬನ್ನಿ ಎಂದರೆ ತೋಟ ನೋಡಿಕೊಳ್ಳುವವರು ಯಾರು ಎಂದು ಬಿಟ್ಟರು. ಗೌರಮ್ಮನಿಗೆತವರಿಗೆ ಹೋಗುವ ಆಸೆ'; ಬಂಗಾರ ಕೈ ತಪ್ಪಿದ ದುಃಖ ; ಭಾಗೀರತಿಯ ಮದುವೆಯ ಆತಂಕ –ಗಂಡನ ಬಗ್ಗೆ ಕಳವಳ– ಆದರೂ ಕೊನೆಯಲ್ಲಿ ತಮ್ಮನ ಜೊತೆ ಗಾಡಿಯಲ್ಲಿ ಹೊರಟುಬಿಟ್ಟರು.

ಕುಪ್ಪಣ್ಣಭಟ್ಟರು ಒಬ್ಬರೇ ಮನೆಯಲ್ಲಿದ್ದು ಗಂಜಿ ಬೇಯಿಸಿಕೊಂಡು ದುಡಿದು ಮಳೆಗಾಲವೆಲ್ಲ ಕಳೆದರು. ಉಬ್ಬಸದ ಹೆಂಡತಿ ಮೂಲೆಯಲ್ಲಿಲ್ಲದೆ ಮನೆಯಲ್ಲಿಷ್ಟು ಶಾಂತಿ. ಭಣಗುಟ್ಟುವ ಮೌನ. ಮಳೆ ಜಡಿಯುತ್ತ ಇದ್ದಂತೆ ರಾತ್ರೆ ಕಣ್ಣು ಬಿಟ್ಟು ಮಲಗಿದ ಭಟ್ಟರ ಮನಸ್ಸಿನಲ್ಲಿ ಒಂದು ನಿಶ್ಚಯ ಗಟ್ಟಿಯಾಯಿತು. ಆ ಬಂಗಾರವನ್ನು ಬ್ಯಾಂಕಿನಿಂದ ಬಿಡಿಸಿ ಹೆಂಡತಿಗೆ ಕೊಟ್ಟುಬಿಡಬೇಕು ; ಯಾರ ಋಣವೂ ಬೇಡ.

ನೂರು ಮಣ ಅಡಿಕೆಯಾಗಬೇಕಾದಲ್ಲಿ ಬರೆ ಐವತ್ತು ಮಣ ಕೈಗೆ ಹತ್ತಿತು. ಕುಪ್ಪಣ್ಣ ಭಟ್ಟರು ಕಾಶಿಯಲ್ಲಿದ್ದ ಶ್ರೀ ಗುರುಗಳ ಪಾದಾರವಿಂದದಲ್ಲಿ ಬೇಡಿ ಕಾಗದ ಬರೆದರು: “ಈ ಬಾರಿಯೊಂದು ಅನುಗ್ರಹ ತೋರಿಸಿ, ಮುಂದಿನ ಸಾರಿ ಎಲ್ಲ ಗೇಣಿಯನ್ನು ಕೊಟ್ಟುಬಿಡುವೆ. ಬಡವನ ತಪ್ಪನ್ನು ಹೊಟ್ಟೆಯಲ್ಲಿ ಹಾಕಿಕೊಳ್ಳಿ !”.

ಆದರೆ ಉತ್ತರವೇ ಇಲ್ಲ ಹದಿನೈದು ದಿನ ಕಾದರು. ಇನ್ನು ಕಾದರೆ ಕಮ್ತಿಯ ವಸೂಲಿ ಸಾಬ, ಮಠದ ಏಜೆಂಟರು ಬಂದು ಮುತ್ತುತ್ತಾರೆ. ಐವತ್ತು ಮಣದಲ್ಲಿ ಒಂದಡಿಕೆ ನನಗುಳಿಯದಂತೆ ಎತ್ತಿಕೊಂಡು ಹೋಗುತ್ತಾರೆ. ಬಂಗಾರ ಬ್ಯಾಂಕಿನಲ್ಲಿ ಉಳಿದು ಬಿಡುತ್ತದೆ.

ಅಡಿಕೆಯನ್ನು ಸಾಗಿಸಿಬಿಡುವುದೆಂದು ನಿಶ್ಚಯ ಮಾಡಿದರು. ಗೇಣಿ ವಸೂಲಿಗೆ ಏಜೆಂಟರು ಬರುವ ಮುಂಚೆ ಅಡಿಕೆಯನ್ನು ಮಂಡಿಗೆ ಸಾಗಿಸಿಬಿಡಬೇಕು. ಆದದ್ದಾಗಲಿ, ಮುಂದಿನ ವರ್ಷದಿಂದ ಸಾಲ ತೀರಿಸುತ್ತಾ ಬರುತ್ತೇನೆಂದು ಬೇಕಾದರೆ ಜನಿವಾರ ಮುಟ್ಟಿ ಆಣೆ ಹಾಕಿಕೊಳ್ಳುವೆ. ಈ ವರ್ಷ ಬಂಗಾರವನ್ನು ಬಿಡಿಸಿಕೊಳ್ಳದಿದ್ದರೆ ಅದರ ಮೇಲೆ ಮತ್ತೆ ಬಡ್ಡಿ ಬೆಳೆಯುತ್ತದೆ ; ಕೈಗತವಾಗದೆ ಈ ಜನ್ಮಕ್ಕೇ ತಪ್ಪಿಬಿಡುತ್ತದೆ.

ಹೀಗೆ ನಿರ್ಧಾರ ಮಾಡಿ ಶಿವಮೊಗ್ಗೆಯ ಕಡೆಗೆ ಹೋಗುವ ಲಾರಿಯಿದೆಯೋ ವಿಚಾರಿಸಲು ಪೇಟೆಗೆ ಹೋದರು. ಗೋಪಾಲ ಕಮ್ತಿಯ ಶಡ್ಡಗನ ಲಾರಿಯೊಂದು ಮಾತ್ರ ಇದೆಯೆಂದು ತಿಳಿಯಿತು. ಆದದ್ದು ಆಗಲಿ ಎಂದು ಮಾತಾಡಿದರು. ಅವನು ಬುಧವಾರ ಲಾರಿ ಹೋಗುವುದು ಎಂದ. ಎಷ್ಟು ಮಣ ತುಂಬುವುದಕ್ಕಿದೆ ಎಂದ.

ಕುಪ್ಪಣ್ಣಭಟ್ಟರು ಮೆಟ್ಟಿಲಿಳಿಯುತ್ತಿದ್ದಂತೆಯೇ ಸೀದ ಹೋಗಿ ಗೋಪಾಲ ಕಮ್ತಿಗೆ ತಿಳಿಸಿದ.

ಮಾರನೇ ದಿನ ಬೆಳಿಗ್ಗೆಯೇ ಜಗುಲಿಯ ಮೇಲೆ ವಸೂಲಿ ಸಾಬ ಹಾಜರು.ಭಟ್ಟರ ಎದೆ ಧಸಕ್ಕೆಂದಿತ್ತು.ಹಿಂದಿನ ಬಾಕಿ ಆರುನೂರು, ಬಡ್ಡಿಯೊಂದೈವತ್ತು. ಒಟ್ಟು ಆರುನೂರ ಐವತ್ತು ತರದೆ ಬರಬೇಡ ಎಂದಿದ್ದಾರೆ ಕಮ್ತಿಗಳು ಎಂದು ಕೂತಲ್ಲಿಂದ ಅವ ಅಲುಗಲಿಲ್ಲ.

ಕುಪ್ಪಣ್ಣಭಟ್ಟರು ಸ್ವಲ್ಪ ತಡೆಯಪ್ಪ. ಹಿಂದೆ ನಾಲ್ಕು ನೂರು ಕೊಟ್ಟು ತೀರಿಸಲಿಲ್ಲವೆ ಎಂದರು. ಜಲ ಕೇಳಲಿಲ್ಲ. ಗಟ್ಟಿಯಾಗಿ ಕೂಗಿ ಮಾತಾಡಿದ. ಸೊಪ್ಪು ಹೊತ್ತು ತರುತ್ತಿದ್ದ ಅಪ್ಪಣ್ಣಭಟ್ಟರ ಆಳು ಇದನ್ನು ಕೇಳಿಸಿಕೊಂಡು ಒಡೆಯರಿಗೆ ತಿಳಿಸಿದ. ಅಪ್ಪಣ್ಣಭಟ್ಟರು ಕೂಡಲೆ ಗಾಡಿ ಕಟ್ಟಿಸಿಕೊಂಡು, ಮಠಕ್ಕೆ ಹೋದರು.

ಮಧ್ಯಾಹ್ನವಾದ ಮೇಲೆ ಸಾಬ ಸೈಕಲ್ ಹತ್ತಿ ಪೇಟೆಗೆ ಹೋಗಿ ಕಮ್ತಿಯ ಹತ್ತಿರ ಮಾತಾಡಿ ತಕ್ಕಡಿ ಚೀಲ ತಂದ.: 'ಆರುನೂರ ಐವತ್ತು ರೂಪಾಯಿ ಸಾಲಕ್ಕೆ ಸಲ್ಲುವಷ್ಟು ಅಡಿಕೆಯನ್ನು ತೂಕಮಾಡಿಕೊಡಿ' ಎಂದ. 'ಮಣಕ್ಕೆ ಒಂದರ ನಲವತ್ತೈದು ರೂಪಾಯಿಯಂತೆ ಹದಿನೈದು ಮಣ ನೀವು ನನಗೆ ಕೊಟ್ಟರೆ, ನಾನೇ ನಿಮಗೆ ಇಪ್ಪತ್ತೈದು ರೂಪಾಯಿ ಕೊಡಬೇಕಾಗುತ್ತದೆ. ಇಗೊ ಹಣ'. ಎಂದು ಜೇಬಿನಿಂದ ದುಡ್ಡು ತೆಗೆದು ತೋರಿಸಿದ.

ಶಿವಮೊಗ್ಗೆಯಲ್ಲಿ ಅಡಿಕೆ ದರ ಕಮ್ಮಿಯೆಂದರೆ ಮಣಕ್ಕೆ ಐವತ್ತು ರೂಪಾಯಿ : ಅಲ್ಲದೆ ಕಮ್ತಿಯ ಮಾರುವ ತೂಕ ಬೇರೆ, ಕೊಳ್ಳುವ ತೂಕ ಬೇರೆ. ಆಗದು ಎಂದರು ಭಟ್ಟರು ಒರಟಾಗಿ.

ಸಾಬ ಧೈರ್ಯ ಮಾಡಿ ತಕ್ಕಡಿ ಹಿಡಿದು ಒಳಗೆ ಕಾಲಿಟ್ಟ ಭಟ್ಟರಿಗೆ ಸಿಟ್ಟು ರುಮ್ಮೆಂದು ತಲೆಗೆ ಏರಿಬಿಟ್ಟಿತು. ಥಟ್ಟನೆ ಚಿಮ್ಮಿ ಚೀಲದಲ್ಲಿ ಅಡಿಕೆ ಕೂಡಿಟ್ಟಿದ್ದ ರೂಮಿನ ಹೊಸಲಿನ ಮೇಲೆ ಕೂತರು. "ಈ ಅಡಿಕೆಯನ್ನು ನೀನು ಮುಟ್ಟುವ ಮುಂಚೆ ನನ್ನ ಹೆಣ ಬೀಳಬೇಕು" ಎಂದರು. ವಸೂಲಿ ಸಾಬನಿಗೆ ತಬ್ಬಿಬ್ಬಾಯಿತು. ಎರಡು ಹೆಜ್ಜೆ ಹಿಂದಕ್ಕೆ ಸರಿದು ತಕ್ಕಡಿಯನ್ನು ಕೆಳಗಿಟ್ಟು ಕೂತ. ವಸ್ತ್ರದ ಮುಂಡಾಸು ಬಿಚ್ಚಿ ಮುಖವರಸಿಕೊಂಡ. "ದೊಡ್ಡವರೇ ಹೀಗೆ ಬಂಡತನಕ್ಕಿಳಿದರೆ" ಎಂದು ಗೊಣಗಿದ.

ವಸೂಲಿ ಸಾಬ ಮುಂದೇನು ಮಾಡುವುದೆಂದು ಅರಿಯದೆ ಭಟ್ಟರನ್ನು ದುರುಗುಟ್ಟಿನೋಡುತ್ತಾ ಕೂತೇ ಬಿಟ್ಟ ಭಟ್ಟರೂ ಪರವಶರಾದವರಂತೆ ಹೊಸಲಿನ ಮೇಲೆ ದಾಗಿಲಿಗೆ ಅಡ್ಡಕೈಮಾಡಿ ಕೂತರು. ಅವರ ಕೃಶ ಶರೀರ ಭಾವದೊತ್ತಡಕ್ಕೆ ನಡುಗತೊಡಗಿತು. ತುಟಿ ಅದುರಿತು.

ಹೀಗೆ ಹತ್ತು ಹನ್ನೆರಡು ನಿಮಿಷ ಕಳೆಯುವುದರಲ್ಲೆ ಎತ್ತಿನ ಕೊರಲಿನ ಗಂಟೆಯ ಶಬ್ದ ಕೇಳಿಸಿತು ; ಶಬ್ದದ ಮೇಲೆ ಮಠದ ಗಾಡಿಯೆಂದು ಭಟ್ಟರಿಗೆ ಹೊಳೆಯಿತು. ಕ್ಷಣ ಮೈ ಬತ್ತಿದಂತಾಗಿ ಕಣ್ಣು ಮುಚ್ಚಿದರು. ಮತ್ತೆ ಮನಸ್ಸನ್ನು ಕಲ್ಲು ಮಾಡಿ ಕೂತರು. ಏಜೆಂಟರು, ಶಾನುಭೋಗರು, ಮಠದ ಉಗ್ರಾಣಿ, ತಕ್ಕಡಿ ಹಿಡಿದ ಇನ್ನೊಬ್ಬ ಆಳು ನೇರ ಒಳಬಂದರು. ಜರಿ ಶಲ್ಯದಿಂದ ಗಾಳಿ ಬೀಸಿಕೊಳ್ಳುತ್ತ ಏಜೆಂಟರು :

"ಏನು ನಡೆದಿದೆ ಇಲ್ಲಿ?" ಎಂದು ಗದರಿಸಿ ಕೇಳಿದರು.

ವಸೂಲಿ ಸಾಬ ಕಮ್ತಿಯವರಿಗೆ ಸಲ್ಲಬೇಕಾದ ಸಾಲದ ವಿಷಯ ತಿಳಿಸಿದ.ಅದಕ್ಕೆ ಏಜೆಂಟರು:

"ಇವರು ನಮ್ಮ ಒಕ್ಕಲು, ಶ್ರೀ ನರಸಿಂಹದೇವರ ಗೇಣಿ ಮತ್ತು ಹಳೆಯ ಟಾಕಿ ಚುಕ್ತವಾಗಬೇಕು. ಏನಿದ್ದರೂ ಕಮ್ತಿಯದು ಆಮೇಲೆ.ಹಾಗೆಂದು ನಿನ್ನ ಒಡೆಯರಿಗೆ ಹೇಳು" ಎಂದರು.

ವಸೂಲಿ ಸಾಬ ಅಷ್ಟಿಷ್ಟಕ್ಕೆ ಬಿಡಲಿಲ್ಲ. "ಕಮ್ತಿಯವರ ಸಾಲ ತೀರಿಸುತ್ತೇನೆ ಎಲ್ಲಕ್ಕಿಂತ ಮೊದಲಾಗಿ, ಎಂದು ಭಟ್ಟರು ವಚನಕೊಟ್ಟಿದ್ದಾರೆಂದು ಒಂದು ಸುಳ್ಳು ಹೊಡೆದ. ಗುಟ್ಟಾಗಿ ಅಡಿಕೆ ಸಾಗಿಸಬೇಕೆಂದಿದ್ದರು" ಎಂದು ಹೇಳಿದ.

"ಇಷ್ಟಕ್ಕಿಳಿದು ಬಿಟ್ಟಿರಾ ಭಟ್ರೆ ? ನರಸಿಂಹ ದೇವರ ಆಸ್ತಿಯನ್ನು ನುಂಗಿ ದಕ್ಕಿಸಿಕೊಳ್ಳತ್ತೇನೆಂದು ತಿಳಿದಿರಾ?" ಎಂದರು ಏಜೆಂಟರು, ತಿರಸ್ಕಾರದಿಂದ ಭಟ್ಟರ ಕಡೆ ನೋಡಿ, ಭಟ್ಟರು ದೈನ್ಯದಿಂದ ತಾನು ಗುರುಗಳಿಗೆ ಬರೆದ ವಿಷಯ ಹೇಳಿದರು. ಜನಿವಾರವನ್ನು ಕೈಯಲ್ಲಿ ಹಿಡಿದು "ಈ ಬಾರಿಯೊಮ್ಮೆ ಮನ್ನಿಸಿದರೆ ಮುಂದಿನ ಸಲದಿಂದ ಚುಕ್ತ ಮಾಡುತ್ತ ಬರುತ್ತೇನೆ" ಎಂದರು.

"ಚುಕ್ತಾ ಮಾಡುತ್ತಾರಂತ ಚುಕ್ತ! ಯಾವ ಬಾಯಲ್ಲಿ ಅಂತೀರಿ ಹೇಳಿ? ಅಡಿಕೆ ವ್ಯಾಪಾರ ಮಾಡಕ್ಕೆ ಕೈಯಲ್ಲಿ ದುಡ್ಡಿದೆ :ದೇವರ ಸಾಲ ತೀರಿಸಲಿಕ್ಕೆ ಇಲ್ಲ ಅಲ್ಲವ? ಗುರುಗಳು ಖುದ್ದು ಹೇಳಿ ಕಳಿಸಿದರೆ ಬಂದು ನೋಡಲಿಕ್ಕಾಗದ ಧಿಮಾಕು ನಿಮಗೆ ಬಂತಲ್ಲ? ಮಠದ ಅನ್ನವನ್ನೇ ತಿಂದು ಕೊಂಡಿದ್ದು, ದೇವರ ಅನ್ನ ತಿನ್ನುತ್ತಿದ್ದೀನಿ, ತೋಟವನ್ನಷ್ಟು ಊರ್ಜಿತವಾಗಿಟ್ಟು ಕೊಂಡಿರಬೇಕೆಂಬ ಲೆಕ್ಕವಿಲ್ಲ ನಿಮಗೆ ಥತ್, ನಾಚಿಗೆಗೆಟ್ಟ ಬ್ರಾಹ್ಮಣ. ಈ ಮನೆಯನ್ನಿಟ್ಟು ಕೊಂಡಿರುವ ಪಾಡು ನೋಡಿ, ನೀವೇನು ಶೂದ್ರರೊ, ಕುಲೀನ ಬ್ರಾಹ್ಮಣರೊ? ಇಗೊ ಗುರುಗಳ ಆಜ್ಞೆಯೇ ಆಗಿದೆ" ಎಂದು ಏಜೆಂಟರು ಜೇಬಿನಿಂದ ಕಾಗದ ತೆಗೆದು ಓದಿದರು. ಗುರುಗಳು ಅದರಲ್ಲಿ ಕುಪ್ಪಣ್ಣ ಭಟ್ಟರನ್ನು ಎಬ್ಬಿಸಿ ಅಪ್ಪಣ್ಣಭಟ್ಟರಿಗೆ ತೋಟ ಗೇಣಿಗೆ ಕೊಡಬೇಕೆಂದು ವಿಧಿಸಿ ಬರೆದಿದ್ದರು.

ಶಾನುಭೋಗರು ಕನ್ನಡಕ ಹಾಕಿ ಕುಪ್ಪಣ್ಣಭಟ್ಟರ ಸಾಲ, ಬಡ್ಡಿಗಳ ಮೊತ್ತ ಮಾಡಿ "ಮೂರು ಸಾವಿರ" ಎಂದರು. ಏಜೆಂಟರು ಮಠದ ಉಗ್ರಾಣಿಗೆ "ಕೋಣೆಯಲ್ಲಿರುವ ಅಡಿಕೆಯನ್ನು ಅಳಿ" ಎಂದರು.

ಎಮ್ಮೆ ವ್ಯಾಪಾರ ಮಾಡುತ್ತಿದ್ದು ದುಡ್ಡೆಲ್ಲ ನಷ್ಟವಾದ ಮೇಲೆ ಹೋದ ವರ್ಷ ಮಠ ಸೇರಿದ್ದ ಉಗ್ರಾಣಿ ಏಜೆಂಟರನ್ನು ಮೆಚ್ಚಿಸಲೆಂದು ಸಡಗರದಿಂದ ಎದ್ದುನಿಂತ. ಆಳೆತ್ತರದ ಕಪ್ಪು ಭೀಮಾಕೃತಿ ಅವನದ್ದು. ಹೊಸಲಿನ ಮೇಲೆ ಕೂತಿದ್ದ ಕುಪ್ಪಣ್ಣಭಟ್ಟರ ಎದುರು ನಿಂತು.

"ಜಾಗ, ಜಾಗ" ಎಂದು ಒರಟಾಗಿ ಅಂದ.

"ಹಾಯ್, ಕಮ್ತಿಯವರಿಗೆ ಅದರಲ್ಲಿ ಹದಿನೈದು ಮಣ ಸಲ್ಲಬೇಕು" ಎಂದ ವಸೂಲಿ ಸಾಬ.

"ನೀನಿಲ್ಲಿಂದ ಜಾಗೆ ಬಿಡುತ್ತೀಯೊ? ಅಥವಾ ಮರ್ಯಾದೆಯಾಗಬೇಕೊ?" ಏಜೆಂಟರು ಗದರಿಸಿ ವಸೂಲಿ ಸಾಬನನ್ನು ತಿಂದುಬಿಡುವಂತೆ ನೋಡಿದರು. ವಸೂಲಿ ಸಾಬ ನಡೆದದ್ದೆಲ್ಲವನ್ನೂ ಕಮ್ತಿಗೆ ತಿಳಿಸಿಬಿಡಬೇಕೆಂದು ಅವಸರದಿಂದ ಸೈಕಲ್ ಹತ್ತಿ ಹೊರಟ "ನೀನೇ ಏಕೆ ಮೊದಲಾಗಿ ಅಡಿಕೆ ಅಳೆದು ತರಲಿಲ್ಲವೆಂದು" ಕಮ್ತಿ ಛೀಮಾರಿ ಹಾಕುವನೆಂದು ಸಾಬನಿಗೆ ನಡುಕ ಹತ್ತಿ ಬಿಟ್ಟಿತು. ಏನು ಸುಳ್ಳು ಹೇಳಿ ಪಾರಾಗುವುದು ಎಂದು ಚಿಂತಿಸುತ್ತ ಸೈಕಲ್ ತುಳಿದ.

ಹೊಸಲಿನ ಮೇಲೆ ಕೈಯಡ್ಡ ಮಾಡಿ ಕೂತಿದ್ದ ಹಿಡಿ ಶರೀರದ ಭಟ್ಟರಿಗೆ ಇನ್ನೊಮ್ಮೆ ಉಗ್ರಾಣಿ;

"ಹಾಯ್, ಜಾಗ–ಜಾಗ" ಎಂದ.

"ನೀವು ಇಲ್ಲಿರುವ ಕಾಳಡಿಕೆ ಮುಟ್ಟುವ ಮುಂಚೆ ನನ್ನ ಹೆಣ ಬೀಳಬೇಕು" ಕುಪ್ಪಣ್ಣಭಟ್ಟರು ಗಡಸಾಗಿ, ಗಟ್ಟಿಯಾಗಿ ಹೇಳಿದರು.

ಒಂದು ಕ್ಷಣ ಏಜೆಂಟರಿಗೆ, ಶಾನುಭೋಗರಿಗೆ ಮಠದ ಉಗ್ರಾಣಿಗೆ ತಬ್ಬಿಬ್ಬಾಯಿತು.ಏಜೆಂಟರು ಕಕ್ಕಾಬಿಕ್ಕಿಯಾಗಿ ಕೇಳಿದರು.

"ಏನೆಂದಿರಿ"?

"ಮೊದಲು ನನ್ನ ಹೆಣ ಬೀಳಬೇಕು ಎಂದೆ" ಅವರ ಇಡಿಯ ಪ್ರಾಣ ಬೆಂಕಿಯ ನಾಲಗೆಯಂತೆ ನಿಶ್ಚಯದಿಂದ ಉರಿಯುತ್ತಿತ್ತು.

"ಬ್ರಾಹ್ಮಣನಾಗಿ ಹುಟ್ಟಿ ಯಾಕೆ ಹೀಗೆ ಭಂಡಗೆಟ್ಟುಬಿಟ್ಟಿರಿ ಭಟ್ಟರೆ?" ಎಂದು ಏಜೆಂಟರು ಕೂಗಿದರು. ಶಾನುಭೋಗರು ಪುಸಲಾಯಿಸಿದರು. ಏನೂ ನಡೆಯಲಿಲ್ಲ.

"ಆಗಲಿ ನಿಮ್ಮ ಸೊಕ್ಕು ಇಳಿಸುವೆ" ಎಂದು ಏಜೆಂಟರು ಎದ್ದುನಿಂತು ಹೊರಟರು – ಪರಿವಾರ ಸಮೇತ. ಅಪ್ಪಣ್ಣಭಟ್ಟರ ಮನೆಗೆ ಹೋಗಿ "ಗಾಡಿಯಲ್ಲೆಲ್ಲಾದರೂ ಭಟ್ಟರು ಅಡಿಕೆ ಸಾಗಿಸದಂತೆ ಒಂದು ಕಣ್ಣಿಟ್ಟಿರಿ. ನಾಳೆಯೇ ಬಂದು ತಕ್ಕ ಶಾಸ್ತಿ ಮಾಡುವ" ಎಂದು ಏಜೆಂಟರು ದೃಢನಿರ್ಧಾರದಲ್ಲಿ ಗಾಡಿಯನ್ನು ಹತ್ತಿ ಹೊರಟುಬಿಟ್ಟರು; ಒಂದು ಲೋಟ ಕಾಫಿಗೂ ಅಪಣ್ಣಭಟ್ಟರಮನೆಯಲ್ಲಿ ನಿಲ್ಲಲಿಲ್ಲ.

ಹೊಸಲಿನ ಮೇಲೆ ಕೂತ ಕುಪ್ಪಣಭಟ್ಟರ ಕಾಲು ಮರಗಟ್ಟಿತು. ಎದ್ದುನಿಂತು ಸುಧಾರಿಸಿಕೊಂಡು ಬಾಗಿಲಿಗೆ ಅಗಳಿ ಹಾಕಿ, ಸ್ನಾನ ಮಾಡಿ ಗಂಜಿಯನ್ನು ಬೇಯಿಸಿಕೊಂಡು ತಿಂದರು. ಸಾಯಂಕಾಲ ಕೊಟ್ಟಿಗೆಗೆ ಬಂದ ಹಸುಗಳನ್ನು ಕಟ್ಟಿ ಕಲಗಚ್ಚು ಕೊಟ್ಟು ಹಾಲು ಕರೆದರು. ಲಾಟೀನು ಹಚ್ಚಿ ನಡುಮನೆಯಲ್ಲಿ ಕೂತರು. ಮತ್ತೆ ಅಡಿಗೆ ಮಾಡಲು ಇಷ್ಟವಿಲ್ಲದೆ ಒಂದಿಷ್ಟು ಕಾಯಿಸಿದ ಹಾಲು ಕುಡಿದು ಅಲ್ಲೆ ಒರಗಿದರು. ನಿದ್ದೆ ಹತ್ತಲೇ ಇಲ್ಲ. ಎಷ್ಟು ಹೊತ್ತಿರಬಹುದೆಂದು ಅಂಗಳಕ್ಕೆ ಬಂದು ಆಕಾಶ ನೋಡಿದರು. ವೃಕ್ಷಗಳ ಗಂಭೀರ ಮೌನದಲ್ಲಿ ನಸುಕಿನ ಮುನ್ನದ ಬೆಳ್ಳಿ, ಆಕಾಶದಲ್ಲಿ ಹೊಳೆಯುತ್ತಿತ್ತು. ಒಳಗೆ ಬಂದು ಅಗಳಿ ಹಾಕಿ ಕಣ್ಣು ಮುಚ್ಚಿದರು. ಹಾಗೇ ರೆಪ್ಪೆ ಬಾಡಿ ನಿದ್ದೆ ಹತ್ತಿದ್ದಂತಾಯ್ತು.

ದನ ಕಾಯುವ ಹುಡುಗ ಬಂದು ಕೂಗಿದಾಗಲೇ ಎಚ್ಚರ, ಮುಖ ತೊಳೆದು, ಬಾವಿಯಿಂದ ಸೇದಿದ ನೀರನ್ನು ಮೈಮೇಲೆ ದಡದಡನೆ ಸುರಿದುಕೊಂಡು ಒಲೆ ಹತ್ತಿಸಿ ಎಸರಿಟ್ಟರು.

ಹೊರಗೆ ಬಾಗಿಲು ಕುಟ್ಟಿದಂತಾಯ್ತು.

"ನಾನು ಅಮೀನ, ಭಟ್ಟರೇ ಬಾಗಿಲು ತೆರೆಯಿರಿ".

ಭಟ್ಟರು ಮಾತಾಡಲಿಲ್ಲ. ಅಡಿಕೆ ತುಂಬಿದ್ದ ಕೋಣೆಯ ಹೊಸಿಲಿನ ಮೇಲೆ ಹೋಗಿ ಕೂತುಬಿಟ್ಟರು. ಮತ್ತೆ ಸೈಕಲ್ಲಿನ ಬೆಲ್ಲು ಬಾರಿಸಿದ ಶಬ್ದ ಕಮ್ತಿಯ ಸ್ವರ.

"ಭಟ್ಟರೇ ಬಾಗಿಲು ತೆರೆಯಿರಿ, ಮಣಕ್ಕೆ ನಲವತ್ತೇಳರಂತೆ ಕೊಡುವೆ. ನನ್ನ ಲೆಕ್ಕ ಚುಕ್ತ ಮಾಡಿಬಿಡಿ."

ಭಟ್ಟರು ಹಂದಲಿಲ್ಲ. ಮತ್ತೆ ವಸೂಲಿ ಸಾಬ ಕೂಗಿದ:

"ಬಾಗಿಲು ತೆರೆಯುತ್ತೀರೊ, ಇಲ್ಲವೊ ?"

ಅಮೀನ ತಿರುಗಿ ಬಂದ. ಕಮ್ತಿಗೂ ಅವನಿಗೂ ವಾಗ್ವಾದ ಹತ್ತಿತ್ತು ಏಜೆಂಟರನ್ನೇ ಕರೆದುತರುವೆನೆಂದು ಅಮೀನ ಹೋದ, ಕಮ್ತಿ ಮತ್ತೆ ಕರೆದ:

"ಭಟ್ಟರೇ ಬಾಗಿಲು ತೆರೆಯಿರಿ, ಮಣಕ್ಕೆ ಐಪತ್ತರಂತೆ ಕೊಡುವೆ. ನನ್ನ ಲೆಕ್ಕ ಚುಕ್ತ ಮಾಡಿಬಿಡಿ". ಉತ್ತರವಿಲ್ಲದ್ದರಿಂದ ಬಾಯಾರ ಬೈಯತೊಡಗಿದ:

"ನೀವಿಂಥ ಭಂಡರೆಂದು ತಿಳಿದಿದ್ದರೆ ಅಂಗಡಿಯ ಮೆಟ್ಟಿಲಿನ ಮೇಲೆ ನಿಮ್ಮನ್ನು ಹತ್ತಲು ಬಿಡುತ್ತಿರಲಿಲ್ಲ – ತಿಳಿಯಿತೆ?"

ಕಮ್ತಿ ಕೊನೆಗೆ ವಸೂಲಿ ಸಾಬನಿಗೆ ಗಟ್ಟಿಯಾಗಿ ಹೇಳಿದ:

"ಬುಡನ್, ಕೂಡಲೆ ನೀನು ಸೈಕಲ್ ಹತ್ತಿ ಇವರ ಮೈದುನರ ಊರಿಗೆ ಹೋಗು. ಪೈ ಬಿಡದಂತೆ ಸಾಲ ತೀರಿಸುವ ತನಕ ಅವರ ಮನೆಯ ಕಟ್ಟೆ ಬಿಟ್ಟು ಏಳಬೇಡ. ಇವರಿಗೆ ಮಾರ್ಯಾದೆಯಿಲ್ಲದಿದ್ದರೆ ಅವರಿಗೂ ಇಲ್ಲವ ನೋಡುವ."

ಅಷ್ಟರಲ್ಲಿ ಏಜೆಂಟರು ಬಂದರು. ಕಮ್ತಿಗೂ ಅವರಿಗೂ ಜಟಾಪಟಿಯಾಯಿತು. ಪಿಂಡಕ್ಕೆ ಮುತ್ತಿದ ಕಾಗೆಗಳ ಹಾಗೆ ಕೂಗಾಡಿದರು. ಏಜೆಂಟರು ಕೊನೆಗೆ :

"ಹೊಡಿಯೋ ಡಂಗುರ ಬುಕ್ಲಾಪುರದಲ್ಲಿ" ಎಂದು ಡಂಗುರದವನಿಗೆ ಹರಾಜು ಸಾರಲುಹೇಳಿದರು. ಡಂಗುರದವನು ಅಲ್ಲಿಂದಲೇ ಪ್ರಾರಂಭಿಸಿದ.ಡಂಗುರ ಬಡಿದು ಕೂಗಿದೆ;

"ಕುಪ್ಪಣ್ಣಭಟ್ಟರ ಚರಾಸ್ತಿಯೆಲ್ಲ ಹರಾಜಿಗಿದೆ. ಬೇಕಾದವರು ಬಂದು ಹಿಡಿಯಬಹುದು."

ಡಂಗುರದ ಶಬ್ದದಲ್ಲಿ ಕಮ್ತಿಯ ಕೂಗಾಟ ಮುಳುಗಿತು. ತಮ್ಮಟೆಯ ಶಬ್ದ ಕಾಡಿನಲ್ಲಿ ದೂರ ದೂರವಾಗುತ್ತಿದ್ದಂತೆ–

"ನಾನು ಕೋರ್ಟಿಗೆ ಹೋಗುವೆ" ಎಂದ ಕಮ್ತಿ.

"ದಯಮಾಡಿಸು" ಎಂದರು ಏಜೆಂಟರು.

ತಮ್ಮಟೆಯ ಶಬ್ದ ಇನ್ನಷ್ಟು ದೂರವಾಯಿತು. ಮೌನ ಕವಿಯಿತು, ಹೊರಗೆ ಬಿಸಿಲು ಏರಿತು.

"ಅಮೀನರೇ ಮುಂದಿನ ಕೆಲಸ ನಿಮ್ಮದು. ಉಗ್ರಾಣಿಗಳೇ ಇವರಿಗೆ ಸಹಾಯ ಮಾಡಿ. ಭಟ್ಟರಿನ್ನೇನಾದರೂ ತಂಟೆ ಮಾಡಿದರೆ ನಾನು ಅಪ್ಪಣ್ಣಭಟ್ಟನಲ್ಲಿರುವೆ, ಬಂದು ಕರೆಯಿರಿ" ಎಂದು ಏಜೆಂಟರು ಹೊರಟು ಹೋದರು.

"ಭಟ್ಟರೇ ಬಾಗಿಲು ತೆರೆಯುತ್ತಿರೊ ? ಆಗುಳಿ ಮುರಿದು ಬರಬೇಕೊ", ಉಗ್ರಾಣಿ ಕೂಗಿದ. ಉತ್ತರವಿಲ್ಲದ್ದು ನೋಡಿ ಪಿಕಾಶಿಯೆತ್ತಿ ಬಾಗಿಲಿಗೆ ಎಕ್ಕಿದ ; ಅಗಳಿ ಲಟಲಟ ಎಂದಿತು.

“ಈಗಲಾದರೂ ಬಾಗಿಲು ತೆರೆಯಿರಿ” ಎಂದು ಉಗ್ರಾಣಿ ಮತ್ತೆ ಕೂಗಿದ. ಉತ್ತರವಿಲ್ಲದ್ದು ನೋಡಿ ಇನ್ನೊಂದೇಟು ಹಾಕಿದ. ಅಗುಳಿ ಮುರಿದು ಬಾಗಿಲು ಧಡಾರನೆ ತೆಗೆದುಕೊಂಡಿತು. ಉಗ್ರಾಣಿ ಯಮದೂತನಂತೆ ಎದುರು ಬಂದು ನಿಂತ. ಜಪ್ಪೆನ್ನದೆಕೂತಿದ್ದ ಭಟ್ಟರಿಗೆ ಏಳುವಂತೆ ಸನ್ನೆ ಮಾಡಿದ.

ಭಟ್ಟರು ಕಣ್ಣು ಮುಚ್ಚಿ ಕೂತೇಬಿಟ್ಟರು. ಮುದುರಿ ಕೂತ ಅವರ ಹಿಡಿ ಶರೀರವನ್ನು ಉಗ್ರಾಣಿ ನಿರಾಯಾಸ ಎತ್ತಿ ಅಂಗಳದ ಬಿಸಿಲಿನಲ್ಲಿಟ್ಟು ಬಂದ. ಅಡಿಕೆ ಚೀಲಗಳನ್ನೆಲ್ಲ ಬೆನ್ನು ಕೊಟ್ಟು ಎತ್ತಿ ತಂದು ಅಂಗಳದ ಇನ್ನೊಂದು ಮೂಲೆಯಲ್ಲಿಟ್ಟ.

ಉಗ್ರಾಣಿಗೆ ಹುರುಪೇರಿಬಿಟ್ಟಿತ್ತು. ಅಮೀನಿನ ಕಡೆ ತಿರುಗಿ ;

“ಪಾತ್ರೆ ಪರಟೆಯ ಸಹಿತ ಹರಾಜೊ ?” ಎಂದು ಕೇಳಿದ.

ಅಮಿನ ಬೇಬಿನಿಂದ ಚೀಟಿ ತೆಗೆದು ಓದಿ;

“ಹಾ, ಚರಾಸ್ತಿ ಸ್ಥಿರಾಸ್ತಿ ಸಹಿತ ಎಲ್ಲ ಹರಾಜು ಆಗಬೇಕೆಂದು ಅಪ್ಪಣೆ ಚೀಟಿಯಿದೆ” ಎಂದ.

ಉಗ್ರಾಣಿ ಮನೆಯೊಳಕ್ಕೆ ನುಗ್ಗಿದ. ಹಾಲಿನ ಪಾತ್ರೆಯನ್ನು ಎತ್ತಿ ತಂದು ಅಂಗಳದ ಮೂಲೆಯಲ್ಲಿ ಹಾಲು ಚೆಲ್ಲಿದ. ನಂತರ ಒಂದೊಂದಾಗಿ ಹಂಡೆ, ಬಾಣಲೆ, ಅನ್ನದ ತಪ್ಪಲೆ, ಹರಿವಾಣ, ಬೆಳ್ಳಿಯ ಚೊಂಬು, ಬಟ್ಟಲು, ತೀರ್ಥದ ಬಟ್ಟಲು (ಭಟ್ಟರು ಘಟ್ಟದ ಕೆಳಗಿನಿಂದ ಬರುವಾಗ ತಂದದ್ದು), ಜಾಗಟೆ, ಶಂಖ, ಹಬ್ಬಹರಿದಿನದ ಕಡಾಯಿಗಳು, ತೊಟ್ಟಿಲು, ಸವುಟು, ಹಾಸಿಗೆ, ಹರಕು ಚಾಪೆ, ಕಂಬಳಿ, ಚಾವಡಿಯಲ್ಲಿದ್ದ ಒಂದು ಮರದ ಬೆಂಚು, ಹನ್ನೆರಡು ಕೂರುವ ಮಣೆ, ಶ್ರೀಕೃಷ್ಣನ ಬೆಳ್ಳಿಯ ಒಂದು ಪಟ, ಪಟ್ಟೆಮಡಿ– ಹೀಗೆ, ಸಾಲಿಗ್ರಾಮವಿದ್ದ ದೇವರ ಪೆಟ್ಟಿಗೆಯೊಂದನ್ನು ಬಿಟ್ಟು ಕಸಪರಿಕೆ ಸಮೇತ ಭಟ್ಟರ ಎಲ್ಲ ಚರಾಸ್ತಿಗಳನ್ನು ತಂದು ಅಂಗಳದಲ್ಲಿ ಹರಡಿದ. ಭಟ್ಟರು ಕಣ್ಣೆತ್ತದೆ ತನ್ನ ಚರಾಸ್ತಿಗಳ ನಡುವೆ ತಲೆಯ ಮೇಲೆ ಕೈಹೊತ್ತು ಬಿಸಿಲಿನಲ್ಲಿ ಕುಕ್ಕರು ಕೂತರು.

“ದನಗಳೂ ಸೇರುತ್ತವಲ್ಲ ಚರಾಸ್ತಿಯಲ್ಲಿ” ಎಂದ ಉಗ್ರಾಣಿ.

“ಓಹೊ” ಎಂದ ಅಮೀನ.

ಹರಾಜನ್ನು ಸಾರಿ ತಮ್ಮಟೆಯನ್ನು ಬಾರಿಸುತ್ತ ಹಿಂದಕ್ಕೆ ಬಂದ ಆಳಿಗೆ “ಗುಡ್ಡದ ಮೇಲೆ ಇವರ ದನಗಳವ ಹೊಡೆದುಕೊಂಡು ಬಾ” ಎಂದ ಉಗ್ರಾಣಿ. ಸಣ್ಣ ಪುಟ್ಟ ಲೋಟ, ತಟ್ಟೆಗಳನ್ನು ತುಂಬಲೆಂದು ಉಗ್ರಾಣಿ ಒಳಗೆ ಹೋಗಿ ಖಾಲಿ ಗೋಣಿಚೀಲವೊಂದನ್ನು ತಂದು ಅಂಗಳದಲ್ಲಿಕೊಡವಿದ. ನಾಲ್ಕಾರು ಹಸಿ ಮೈಯ ಇಲಿಮರಿಗಳು ಅದರಿಂದ ಪತಪತನೆ ಉದುರಿದವು. ಬಿಸಿಲಿನಲ್ಲಿ ವಿಲವಿಲ ಒದ್ದಾಡಿದವು. ಅಮೀನ ‘ಇಸ್ಸಿ’ ಎಂದ. ಉಗ್ರಾಣಿ ನಕ್ಕು “ಥತ್” ಎಂದ. ಅಂಜುತ್ತಂಜುತ್ತ ಒಂದು ಕಾಗೆ ಕುಪ್ಪಳಿಸಿ ಕುಪ್ಪಳಿಸಿ ಹತ್ತಿರ ಬಂದು ಎಗರಿ ಕುಕ್ಕಿ ಕಣ್ಣುಬಿಡದ ನುಣ್ಣನೆಯ ಮೈಯ ಮರಿಯನ್ನೆತ್ತಿ ಹಾರಿತು.

ದೂರದಲ್ಲಿ ಅಲ್ಲೊಂದು ಇಲ್ಲೊಂದು ಮರದ ಸಂದಿಯಿಂದ ಕೆಲಸದ ನೆವದಿಂದ ಬಂದವರೆಂಬಂತೆ ಕೈಯಲ್ಲಿ ಕತ್ತಿಯನ್ನೊ ಹಗ್ಗವನ್ನೊ ಹಿಡಿದು ನಿಂತು ನೋಡುತ್ತಿದ್ದ ಬಕ್ಳಾಪುರದವರು ಅಂಗಳಕ್ಕೆ ಬರುವ ಧೈರ್ಯ ಮಾಡಲಿಲ್ಲ. ಭಟ್ಟರ ಚರಾಸ್ತಿಯನ್ನು ಹರಾಜಿನಲ್ಲಿ ಹಿಡಿಯಲಿಲ್ಲ. ಪರರ ವಸ್ತುವಿಗೆ ಆಸೆ ಮಾಡಿ ತಾವ್ಯಾಕೆ ಪಾಪ ಕಟ್ಟಿಕೊಳ್ಳಬೇಕೆಂದು, “ಛೇ ಪಾಪ, ಪಾಪ” ಎಂದು ಮರುಗಿ ಒಬ್ಬೊಬ್ಬರಾಗಿ ಹಿಂದಕ್ಕೆ ನಡೆದರು. ಅಲ್ಲೊಬ್ಬ ಇಲ್ಲೊಬ್ಬನಂತೆ ಪರಮ ಕುತೂಹಲಿಗಳು ಮಾತ್ರ ನಿಂತರು.

ಏಜೆಂಟರು ಬಂದು ಅಡಿಕೆ ಚೀಲಗಳನ್ನು ತೂಗಿಸಿ ಗಾಡಿಗೆ ತುಂಬಿಸಿದರು. ಆಮೀನ ಒಂದು ಚೀಟಿಯಲ್ಲೆಲ್ಲ ಬರೆದುಕೊಂಡ. ಕಸಪರಕೆ, ಚಿಲ್ಲರೆ ಪಾತ್ರೆ, ದೇವರ ಬೆಳ್ಳಿಪಟ, ಶಂಖ, ಜಾಗಟೆ ಬಿಟ್ಟು ಉಳಿದೆಲ್ಲ ಬೆಲೆಯುಳ್ಳ ಪಾತ್ರೆಗಳನ್ನು ಗಾಡಿಗೆ ತುಂಬಿಸಿದರು.

ಭಟ್ಟರ ಮುಖ ನೋಡದ ಏಜೆಂಟರು ಗಟ್ಟಿಯಾಗಿ ಅಂದರು :

“ನರಸಿಂಹದೇವರ ಆಸ್ತಿಗೆ ಮುಟ್ಟುಗೋಲು ಹಾಕಿ ಊರ್ಜಿತರಾದವರು ಇಲ್ಲ ಭಟ್ಟರೇ ತಿಳಿಯಿತೆ ? ಇನ್ನು ಮುಂದೆ ಈ ತೋಟವಾಗಲಿ, ಈ ಮನೆಯಾಗಲಿ ನಿಮ್ಮ ಭೋಗ್ಯದಲ್ಲಿಲ್ಲ. ಇನ್ನು ಮುಂದೆ ಅಪ್ಪಣ್ಣಭಟ್ಟರು ದೇವರ ಒಕ್ಕಲು” ಎಂದು ಹೇಳಿ ಗಾಡಿಯಲ್ಲಿ ಕೂತರು ; ಕೊನೆಯ ಗುಂಡು ಹಾರಿಸಿದರು :

“ನಿಮಗೇನು ಕಮ್ಮಿ ಹೇಳಿ ?ದುಡ್ಡಿನ ಗಂಟನ್ನು ಮೊದಲೇ ನಿಮ್ಮ ಹೆಂಡತಿಯ ಜೊತೆ

ತವರಿಗೆ ಸಾಗಿಸಿಬಿಟ್ಟಿದ್ದೀರಲ್ಲ”–

ಭಾಗ: ನಾಲ್ಕು

ಬುಕ್ಲಾಪುರದಲ್ಲಿ ಒಂದು ಬಾಲ ವಿಧವೆಯಾದ ಸೀತಕ್ಕ ಎಂಬ ಅಜ್ಜಿ ಇತ್ತು. ಯಾವ ದಿಕ್ಕ ದಿವಾಣಿಯೂ ಇಲ್ಲದೆ, ಸತ್ತ ಮೇಲೆ ಪಿಂಡ ಹಾಕಲೊಂದು ಸಂಬಂಧಿಯಿಲ್ಲದೆ, ಒಬ್ಬಂಟಿಯಾಗಿ ಮುರುಕು ಗುಡಿಸಲೊಂದರಲ್ಲಿ ಅದರ ವಾಸ. ದಿನಕ್ಕೆರಡು ಹಿಡಿ ಅಕ್ಕಿಯನ್ನು ಅವರಿವರಿಂದ ಪಡೆದು ದಿನಕ್ಕೊಂದು ಹೊತ್ತು ಅದರ ಗಂಜಿಯೂಟ. ಆದರೂ ಅಜ್ಜಿಯ ನಾಲಗೆಗೆ ಅಗ್ರಹಾರದ ಜನ ತತ್ತರ ನಡುಗುವರು. ಹತ್ತಿರ ಸುಳಿವ ಶೂದ್ರರೆಂದರೆ, ಮಡಿಯುಟ್ಟ ಮೇಲೆ ಬಂದು ಮುಟ್ಟುವ ಹುಡುಗರೆಂದರೆ, ತಾನೆಲ್ಲಾದರೂ ಎದುರಾದರೆ ಹಿಂದಕ್ಕೆ ತಿರುಗಿ ಮೂರು ಹೆಜ್ಜೆ ನಡೆಯುವ ಶಕುನಭೀತರೆಂದರೆ ಸೀತಕ್ಕನ ಶಾಪದ ಸುರಿಮಳೆ ಪ್ರಾರಂಭವಾಗುವುದು. ಚೊಂಬು ಹಿಡಿದು ಮನೆಮನೆಯ ಎದುರು ನಿಂತು ದಿನಕ್ಕೊಮ್ಮೆ ಕೂಗಾಡದಿದ್ದರೆ ಅಜ್ಜಿಯ ಜೀವಕ್ಕೆ ನೆಮ್ಮದಿಯಿಲ್ಲ. ಸೀತಕ್ಕನ ನಾಲಗೆಗೆ ಹೆದರಿ, ಕೇಳುವ ಮುನ್ನವೆ ಅಗ್ರಹಾರದ ಜನ ಪಾವಕ್ಕಿ ಎತ್ತಿ ಕೊಟ್ಟುಬಿಡುವರು.ಮಧ್ಯಾಹ್ನ ಊಟವಾದ ಮೇಲೆ ಹೊಳೆಯ ಕಲ್ಲಿನ ಮೇಲೆ ಕೂತು ಆದರೆ ಹೊತ್ತು ಹೋಗುವುದು; ಅಥವಾ ದೇವಸ್ಥಾನದ ಕಟ್ಟೆಯ ಮೇಲೆ ಕೂತು ಹೊಬತ್ತಿ ಹೊಸೆಯುವುದು. ಕಾಲು ಕೆರೆದಾದರೂ– ಅಂತೂ ಒಟ್ಟಿನಲ್ಲಿ ಜನ ತನ್ನನ್ನು ಸಸಾರವಾಗಿ ಕಾಣುವಂತೆ ಮಾಡಿ. ಪಿತೃಗಳನ್ನೆಲ್ಲ ಸಾಕ್ಷಿಗೆ ಕರೆದು, ಕೆಟ್ಟು ಹೋದ ಕಾಲದ ಬಗ್ಗೆ ಗೊಣಗಾಡದೆ ಸೀತಕ್ಕನಿಗೆ ನಿದ್ದೆ ಬರದು, ಅದರ ವಯಸ್ಸೆಷ್ಟೊ ಯಾರಿಗೂ ತಿಳಿಯದು. ಕಂಡಂತೆ ಆಚಂದ್ರಾರ್ಕದಿಂದ ಇರುವ ಅಜ್ಜಿ ಅದು ಬಹುವಚನದಿಂದ ಮಾತಾಡಿಸುವ ನರಜೀವ ಆಸುಪಾಸಿನಲ್ಲಿಲ್ಲ.

ಸೀತಕ್ಕನಿಗೆ ಡಂಗುರ ಕೇಳಿ ಕಿವಿ ನೆಟ್ಟಗಾಯಿತು. ಬೇಗ ಮೂರು ಮುಳುಗು ಹಾಕಿ ಗುಡಿಸಲಿಗೆ ಹೋಗಿ ಗಂಜಿ ಬೇಯಿಸಿಕೊಂಡು ತಿಂದು ಚೊಂಬು ಹಿಡಿದು ಹೊರಟಿತು. ಏನು ಸುದ್ದಿಯೆಂದು ಮನೆ ಮನೆ ಅಲೆಯಿತು. ಗಂಡಸು ಪಿಳ್ಳೆ ಆಗ್ರಹಾರದಲ್ಲಿರಲಿಲ್ಲ. ಹೆಂಗಸರು ಮಾತಾಡರು. ಕೊನೆಗೊಬ್ಬ ಶೂದ್ರ ಹೇಳಿದ, ಹೀಗೆ ಅಂತ. ಸೀತಕ್ಕನ ಸವಾರಿ ಸೀದ ಕುಪ್ಪಣ್ಣಭಟ್ಟರ ಈ ಅಂಗಳಕ್ಕೆ ನಡೆಯಿತು.

ಬಂದು ನೋಡಿದರೆ ಅಂಗಳದಲ್ಲಿ ಒಂದಿಷ್ಟೂ ಕಲಾಯಿ ಇಲ್ಲದ ಅಂಕುಡೊಂಕು ಪಾತ್ರೆ ; ಪೊರಕೆ ; ಬಿಸಿಲಿಗೆ ಬೋಳು ನೆತ್ತಿಯೆತ್ತಿ ಕುಕ್ಕುರು ಕೂತ ಕುಪ್ಪಣ್ಣಭಟ್ಟ.

ಸೀತಕ್ಕನ ಕಿರುಚಾಟ ಮಧ್ಯಾಹ್ನದ ಹಪ ಹಪ ಮೌನವನ್ನು ಕಳವಳಿಸಿಬಿಟ್ಟಿತು:

“ಯಾವ ರಂಡೇಮಗ ನಿನ್ನ ಮನೆ ಹಾಳು ಮಾಡಿದನೊ ? ಅವನ ಮನೆ ಮಂಟಾನವಾಗ, ಅವನ ದನ ಹುಲಿ ಹಿಡಿಯ. ನಿನಗೇನು ಧಾಡಿ ಬಡಿದಿದೆ ಹೀಗೆ ಕೂರಲು ? ಏಳು, ಎದ್ದೇಳು, ನಿನಗೂ ಸರಿಯಾಯಿತು. ಬಡವನ ಸಿಟ್ಟು ದವಡೆಗೆ ಮೂಲ ಅಂತ ಸುಮ್ಮನೆ ಅಂತಾರೆ ಅಂತ ತಿಳಿದಿಯೆ ? ನಿನ್ನ ಗರ್ವವೇನು ? ನಿನ್ನ ಸೊಕ್ಕೇನು ? ಅದಕ್ಕೊಂದು ಇತಿಮಿತಿಯಿತ್ತ ? ಈ ಅಜ್ಜಿಯನ್ನು ಕರೆದು ಇದ್ದಿಯ ಸತ್ತಿಯ ಎಂದು ನೀನು ವಿಚಾರಿಸಿದ್ದಿದಿಯ ?”

ಕುಪ್ಪಣ್ಣಭಟ್ಟ ತಪ್ಪಗೆ ಕೂತೇಬಿಟ್ಟಿದ್ದು ನೋಡಿ ಸೀತಕ್ಕನಿಗೆ ಕಸಿವಿಸಿಯಾಯಿತು. ಮತ್ತೆ ಕೂಗಲು ಪ್ರಾರಂಭಿಸಿದಳು.

“ನಿನ್ನಮನೆಹಾಳು ಮಾಡಿದವನ ಮನೆ ಉರಿದುಹೋಗ, ಯಾರೋ ಅಲ್ಲಿ ದೆವ್ವದಂತೆ ನಿಂತದ್ದು?”

ಮರದ ಬುಡದಲ್ಲೊಬ್ಬ ನಿಂತದ್ದು ಸೀತಕ್ಕನಿಗೆ ಹೊಳೆದು, ಅಂಗಳದಾಟಿ, “ಯಾವ ಪುಣ್ಯಾತ್ಮನೋ ನೀನು– ಬಾ ಇಲ್ಲಿ” ಎಂದು ಬುಕ್ಲಾಪುರದ ನರಸಿಂಹಭಟ್ಟನೆನ್ನುವ ಯುವಕನನ್ನು ಕರೆದಳು. ಅವನು ಅಂಜುತ್ತಂಜುತ್ತ ಬಂದ.

"ಅಲ್ಲ ? ಬಿಸಿಲಲ್ಲಿ ಬ್ರಾಹ್ಮಣ ಬಿದ್ದಿರೋದು ನೋಡುತ್ತ ನಿಂತಿದಿಯಲ್ಲ ? ನಿನ್ನ ಕಣ್ಣು ಹೊಟ್ಟಿಹೋಗ"– ಎಂದು ಅವನನ್ನೆಳೆದು ತಂದಳು. ಕುಪ್ಪಣ್ಣಭಟ್ಟರನ್ನು ಇಬ್ಬರೂ ಸೇರಿ ಕೈಹಿಡಿದೆತ್ತಿ ಜಗುಲಿಯ ನೆರಳಿನ ಮೇಲೆ ಕೂರಿಸಿದರು. ನರಸಿಂಹಭಟ್ಟ ಮೆಲ್ಲಗೆ ಕಾಲು ಕಿತ್ತ.

ಅಪ್ಪಣ್ಣಭಟ್ಟ ಏಜೆಂಟ್, ಕುಪ್ಪಣ್ಣಭಟ್ಟ ಬುಕ್ಲಾಪುರದ ಭಟ್ಟರು, ಎಲ್ಲರನ್ನೂ ಒಟ್ಟಾಗಿ ಶಪಿಸುತ್ತ ಸೀತಕ್ಕ ಅಂಗಳದಲ್ಲಿ ಬಿದ್ದಿದ್ದ ಚಿಲ್ಲರೆ ಪಾತ್ರಗಳನ್ನೆಲ್ಲ ಜಗುಲಿಯ ಮೇಲೆ ಕೂಡಿಸಿತು. ಹಾಕಿದ್ದ ಬೀಗ ನೋಡಿ, ಬೀಗ ಹಾಕಿದವನ ಕೈಯನ್ನು ಸರ್ಪ ಕಡಿಯಲಿ ಎಂದು ಶಪಿಸಿ, ಚೊಂಬು ಹಿಡಿದು ಅಪ್ಪಣ್ಣಭಟ್ಟನ ಮನೆಗೆ ಹೋಗಿ, ಅಲ್ಲಿ ನಿಂತು ಇನ್ನೊಂದಷ್ಟು ಕೂಗಿ ತನ್ನ ಗುಡಿಸಿಲಿಗೆ ಅಜ್ಜಿ ಬಂದಿತು. ಎರಡು ಹಿಡಿ ಅವಲಕ್ಕಿಗೆ ಹಸಿಮೆಣಸಿನಕಾಯಿ ನುರಿದು, ಉಪ್ಪು ಹಾಕಿ, ಬೇಡಿ ತಂದಿದ್ದ ಮೊಸರನ್ನೆಲ್ಲ ಸುರಿದು ಮತ್ತೆ ಕುಪ್ಪಣ್ಣಭಟ್ಟನ ಮನೆಗೆ ಸೀತಕ್ಕ ನಡೆದು ಬಂದಿತು. "ಇಕೊ ತಿನ್ನು, ಹೊಟ್ಟೆ ಕಾಯಿಸಿಕೊಂಡು ಬೆಪ್ಪರಾಷ್ಟನಂತೆ ಕೂತಿರಬೇಡ" ಎಂದು ಬಾಳೆಯ ಎಲೆಯ ಮೇಲೆ ಮೊಸರವಲಕ್ಕಿ ಹಾಕಿ, ತಿರುಗಿ ತನ್ನ ಗುಡಿಸಲಿಗೆ ಬಂದು ಸ್ನಾನ ಮಾಡಿ ನೆಲದ ಮೇಲೆ ಮಲಗಿತು.

ಭಾಗ: ಐದು

ಕತ್ತಲಾದ ಮೇಲೆ ಅಪ್ಪಣ್ಣಭಟ್ಟರು ಕೊಟ್ಟಿಗೆ ಕೆಲಸದ ಆಳನ್ನು ಕರೆದು, "ಭಟ್ಟರು ಅಲ್ಲೆ ಇದ್ದಾರೊ ? ಹೆಂಡತಿಯ ತವರಿಗೆ ಗಾಡಿ ಬಿಟ್ಟರೊ ನೋಡಿಬಾ. ಮೆತ್ತಗೆ ಸದ್ದಾಗದಂತೆ ಹೋಗು" ಎಂದು ಕಳುಹಿಸಿದರು. ಆಳು ಕತ್ತಲಿನಲ್ಲಿ ಮತ್ತೆಗೆ ಬಂದು ಚಂದ್ರನ ಬೆಳಕಿನಲ್ಲಿ ಜಗುಲಿಯ ಮೇಲೆ ನಿಶ್ಚಲ ಕೂತ ರೂಪ ನೋಡಿ ಹೆದರಿ ಓಡಿ ಸುದ್ದಿ ತಿಳಿಸಿದ. ಅಪ್ಪಣ್ಣಭಟ್ಟರು ಹೆಂಡತಿಯ ಎದುರು ನಿಂತು, "ನೋಡಿದಿಯಾ ಧಿಮಾಕು ? ಏಜೆಂಟರ ಎದುರೇ ಏನು ಧಿಮಾಕು ಮಾಡಿದ ಗೊತ್ತೆ? ಇದೊಂದು ಹೊಸ ತಂತ್ರವಷ್ಟೆ ನಸುಕಲ್ಲೆದ್ದು ಹೆಂಡತಿಯ ತವರಿಗವನು ಹೋಗದಿದ್ದರೆ ನನ್ನ ಹೆಸರು ಅಪ್ಪಣ್ಣಭಟ್ಟನಲ್ಲ' ಎಂದರು.

ಬೆಳಗಾಯಿತು. ಕಟ್ಟಿಗೆಯನ್ನು ತಂದು ಹಾಕಿದ ಆಳು. "ಭಟ್ಟರು ಜಗುಲಿಯ ಮೇಲೆ ಕೂತುಬಿಟ್ಟಿದ್ದಾರೆ" ಎಂದು ಹೇಳಿದ. ಅಪ್ಪಣ್ಣಭಟ್ಟರು "ಏನು ವಿಷಯ ನೋಡುವ" ಎಂದು ಏಜೆಂಟರು ಕೊಟ್ಟ ಬೀಗದ ಕೈಯನ್ನು ಸೊಂಟಕ್ಕೆ ಸಿಕ್ಕಿಸಿ ಖುದ್ದು ಹೊರಟರು. ಕುಪ್ಪಣ್ಣಭಟ್ಟರ ಅಂಗಳ ಹತ್ತಿರವಾಗುತ್ತಿದ್ದಂತೆ ಎದೆ ಹೊಡೆದುಕೊಳ್ಳತೊಡಗಿತು. ಮರವೊಂದರ ಹಿಂದೆ ನಿಂತು, ಕತ್ತಿಯಿಂದೇನೊ ಸವರುವಂತೆ ನಟಿಸುತ್ತ ನೋಡಿದರು.

ಜಗುಲಿಯ ಮೇಲೆ ನಿಶ್ಚಲವಾಗಿ ಹರಕು ಮುರುಕು ಪಾತ್ರೆಯ ಜೊತೆ ಕುಪ್ಪಣ್ಣಭಟ್ಟರ ಕಪ್ಪುಶರೀರ ಗೋಡೆಗೊರಗಿ ಕೂತಿದೆ. ತಲೆಯ ಮೇಲೊಂದು ಅಂಗವಸ್ತ್ರವಿದೆ. ಎದೆ ಜಗ್ಗಂದಿತು. ಇನ್ನೂ ಹತ್ತಿರ ಬಂದರು. ಕುಪ್ಪಣ್ಣಭಟ್ಟರು ಏನಾದರೂ ಜಗಳವಾಡಬಂದರೆ ಅಂದದಕ್ಕೆ ಪ್ರತಿ ಅಂದುಬಿಡುವುದು; ನಿಮ್ಮ ಗಂಟನ್ನೆಲ್ಲ ತವರಿಗೆ ಸಾಗಿಸಿಬಿಟ್ಟರಾ ಎಂದು ಕೇಳೇಬಿಡುವುದು ಎಂದು ಧೈರ್ಯ ಹೇಳಿಕೊಂಡರು. ಅಂಗಳಕ್ಕಿಳಿದರು : ಬೂದುನಾಯಿ ಕುಪ್ಪಣ್ಣಭಟ್ಟರನ್ನೇ ತದೇಕ ಮಗ್ನವಾಗಿ ನೋಡುತ್ತ ಕೂತಿದೆ. ಒಂದು ಬಾಳೆಯೆಲೆಯ ಮೇಲೆ ಮೊಸರವಲಕ್ಕಿ ಒಣಗಿ ಹಾಗೇ ಬಿದ್ದಿದೆ. ಸದ್ದಿಲ್ಲ. ತಿಳಿಯುವುದರೊಳಗೆ, 'ಭಟ್ಟರೇ' ಎಂದು ಕರೆದುಬಿಟ್ಟರು. ಮಾತಿಲ್ಲ. ಕಣ್ಣುಮುಚ್ಚಿ ಕೂತ ಶರೀರವನ್ನು ನಡುಗುವ ಕೈಗಳಿಂದ ತಿವಿದರು.

ಕುಪ್ಪಣ್ಣಭಟ್ಟರ ಮುದಿ ಮುಖದ ರಕ್ತವೆಲ್ಲ ಬತ್ತಿ ಬೆಂಡಾಗಿತ್ತು ; ಮೈಯನ್ನಿನ್ನೊಮ್ಮೆಅಲುಗಿಸಿದ ಮೇಲೆ ಕಣ್ಣು ತೆರೆಯಿತು. ಅಪ್ಪಣ್ಣಭಟ್ಟರಿಗೆ ಜೀವ ಬಂದಂತಾಯಿತು :

"ಅಲ್ಲ– ನೀವು ಹಾಗೆ ಏಜೆಂಟರ ಎದುರು ಒರಟು ಮಾಡಬಾರದಿತ್ತು" ಎಂದರು.

ಕುಪ್ಪಣ್ಣಭಟ್ಟರು ತೆರೆದ ಕಣ್ಣುಗಳನ್ನು ಹಾಗೇ ತೆರೆದಿದ್ದು ಸುಮ್ಮನೇ ಕೂತರು. ಅಪ್ಪಣ್ಣಭಟ್ಟರಿಗೆ ಧೈರ್ಯ ಬಂದಿತು :

"ನಿಮಗೇನು ಕಮ್ಮಿಯಾಗಿದೆ ಭಟ್ಟರೇ. ಅಂತೂ ಕೊನೆಯ ತನಕ ನಮ್ಮ ಮೇಲೆ ದ್ವೇಷ ಸಾಧಿಸಿದಿರಿ. ಹಾಗಂತ ನಿಮ್ಮ ಮೇಲೆ ನನಗೆ ವಿಷವಿಲ್ಲ. ಎಷ್ಟೆಂದರೂ ನೀವು ನನಗೆ ಹಿರಿಯರು, ಚಿಕ್ಕವನೆಂದು ನೀವು ನನಗೆ ಹರಸಬೇಕೇ ವಿನಹ ಕೆಟ್ಟದ್ದು ಬಗೆಯಬಾರದು, ನನಗದು ಒಳ್ಳೆಯದಲ್ಲ. ಹೊರಟುಹೋಗುವಾಗ ನಿಮ್ಮ ಜೊತೆ ನಿಷ್ಠುರ ಬೇಡವೆಂದೇ

ಮಾತಾಡಿಸುವ ಅಂತ ಬಂದೆ. ಬೇಕಾದರೆ ಗಾಡಿ ಕಟ್ಟಿಸುವೆ– ನಿಮ್ಮ ಮೈದುನರ ಮನೆಗೆ. ಎದ್ದು ಬಂದು ಊಟ ಮಾಡಿಹೋಗಿ ಮುವ್ವತ್ತು ವರ್ಷದ ವೈರ ಮರೆತುಬಿಡುವ".

ಅಪ್ಪಣ್ಣಭಟ್ಟರ ಬಾಯಿಂದ ಅವರಿಗೆ ತಿಳಿಯದಂತೆಯೇ ಒಂದು ಮಾತಿನ ಬಾಲದಲ್ಲಿ ಇನ್ನೊಂದು ಮಾತು ಬಂತು. ಅಲ್ಲದೆ ಕುಪ್ಪಣ್ಣಭಟ್ಟರ ಮೌನದಿಂದಾಗಿ ಒಂದಕ್ಕಿಂತ ಇನ್ನೊಂದು ಮಾತಿನ ಸ್ವರ ಏರುತ್ತೇರುತ್ತ ಹೋಯಿತು. ಆದರೆ ಆಡಿದ್ದೆಲ್ಲ ತನ್ನ ಕಿವಿಗಳನ್ನೆ ಗವ್ವೆಂದು ಮುತ್ತಿದಂತಾಗಿ ಕೊನೆಗೆ ಅಪ್ಪಣ್ಣಭಟ್ಟರು ಕುಪ್ಪಣ್ಣಭಟ್ಟರ ಮೂಕ ಮುಖಮುದ್ರೆಯನ್ನು ಅವಾಕ್ಕಾಗಿ ನೋಡುತ್ತ ನಿಂತರು. ಚಲಿಸುತ್ತಿದ್ದ ಬಾಯಿ ಮುಚ್ಚಿತು. ಮೌನದ ಕ್ಷಣ ತುಂಬ ನೋವಾಗಿ ಬಾಯಿ ಮತ್ತೆ ಚಲಿಸಿತು. ಅಪ್ಪಣ್ಣಭಟ್ಟರು ಅಂಗಳ ಸುತ್ತುತ್ತ ಅಂದರು :

"ನಾನು ನಿಮ್ಮ ಮನೆ ಹಾಳು ಮಾಡಬೇಕೆಂದು ಮಾಡಲಿಲ್ಲ ಮಾರಾಯರೆ. ಮುವ್ವತ್ತು ವರ್ಷ ನಿಮ್ಮ ಹತ್ತಿರ ಹಚಹುಚ ಎನ್ನಿಸಿಕೊಂಡು ಕಾಲ ಹಾಕಿದೆ. ಆಯಿತ ? ನಿಮ್ಮ ತಂಟೆಗೆ ನಾನು ಬರಲಿಲ್ಲ. ಏನೋ ನರಸಿಂಹದೇವರ ಪಾಲಿನ ಅಡಿಕೆ ಆ ಬಡ್ಡಿಮಗ ಕಮ್ತಿಯ ಪಾಲಾಗುತ್ತದಲ್ಲ ಎಂದು ಏಜೆಂಟರಿಗೊಂದು ಮಾತು ನಾನು ತಿಳಿಸಿದ್ದುಂಟು. ಹಾಗೆಲ್ಲ ಸುಳ್ಳು ಹೇಳಿದರೆ ನನ್ನ ನಾಲಗೆ ಸೀಳಿ ಹೋಗಲಿ. ಬೇಕಾದರೆ ಬುಕ್ಲಾಪುರದ ಹತ್ತು ಸಮಸ್ತರನ್ನು ಕರೆಸಿ ಪಂಚಾಯಿತಿ ಮಾಡಿಸಿ. ನನ್ನ ತಪ್ಪೆಂದು ತೀರ್ಮಾನವಾದರೆ ನಿಮ್ಮ ಕಾಲು ಹಿಡಿದುಬಿಡುತ್ತೇನೆ. ಹೋದ ವರ್ಷ ನನ್ನ ಅಡಿಕೆ ಗಿರಾಕಿಗಳನ್ನೆಲ್ಲ ನೀವು ತಪ್ಪಿಸಿದಿರಿ. ಅಡಿಕೆ ವ್ಯಾಪಾರಕ್ಕೆ ದುಡ್ಡಿರುವಾಗ ಗೇಣಿ ಬಾಕಿ ಮಾಡಿಕೊಂಡರೆ ಎಂಥವರಿಗಾದರೂ ಸಿಟ್ಟು ಬರುತ್ತ ಇಲ್ಲವ ನೀವೇ ಹೇಳಿ ? ಎಲ್ಲದಕ್ಕೂ ಒಂದು ನ್ಯಾಯ, ಒಂದು ಕಟ್ಟು ಬೇಡವ ? ನಾನೂ ಮಕ್ಕಳೊಂದಿಗೆ ಭಟ್ಟರೆ : ನಿಮ್ಮ ಮಗಳಿಗೆ ಹೇಗೊ ಹಾಗೇ ನನ್ನ ಮಗಳಿಗೂ ಮದುವೆಯಾಗಬೇಕು. ನನಗೂ ಕಷ್ಟ ಒಂದು ವರ್ಷದಿಂದ ನನ್ನ ಹೊಟ್ಟೆಯಲ್ಲಿ ಅದೆಂಥ ರೋಗವೊ ಸದಾ ನೋವು. ಹೋದ ತಿಂಗಳು ಒಂದು ಪಕ್ಕಾಸೇರು ಹಾಲು ಕರೆಯುತ್ತಿದ್ದ ಎಮ್ಮೆ ಲಕ್ ಎಂದು ಸತ್ತು ಬಿಟ್ಟಿತು. ಎಲ್ಲ ಗ್ರಹಚಾರ ಭಟ್ಟರೇ, ಏಳಿ, ಎದ್ದೇಳಿ, ಮನೆಗೆ ಬಂದು ಊಟಮಾಡಿ, ಗಾಡಿ ಕಟ್ಟಿಸುವೆ– ನಿಮ್ಮ ಮೈದುನರ ಮನೆಗೆ. ತಂಪಾದ ಮೇಲೆ ಹೊರಡುವಿರಂತೆ".

ಬೂದುನಾಯಿ ಕುಪ್ಪಣ್ಣಭಟ್ಟರ ಕಡೆ, ಮತ್ತೆ ಒಣಗಿದ ಮೊಸರವಲಕ್ಕಿ ಕಡೆ, ಮತ್ತೆ ಅಪ್ಪಣ್ಣಭಟ್ಟರ ಕಡೆ ನೋಡಿತು. ಕುಪ್ಪಣ್ಣಭಟ್ಟರು ಶೂನ್ಯದೃಷ್ಟಿಯಾಗಿ ಕಾಡಿನ ಕಡೆ ನೋಡಿದರು ಮೌನದಲ್ಲಿ ಮತ್ತೆ ಅಪ್ಪಣ್ಣಭಟ್ಟರ ಗಂಟಲು ಒಣಗಿಬಿಟ್ಟಿತು. ಪಿಂಡ ಹಾಕುವಾಗ ಪಿತೃಗಳನ್ನು ಹೆಸರು ಹಿಡಿದು ಕರೆಯುವೋಪಾದಿಯಲ್ಲಿ, ಮಂತ್ರವನ್ನು ಉಚ್ಚರಿಸುವಂತೆಯೇ 'ಭಟ್ಟರೇ ಭಟ್ಟರೇ' ಎಂದರು. ಬೂದುನಾಯಿ ಎದ್ದು ನಿಂತು ಮೈಯನ್ನು ನೀಡಿ ಆಕಳಿಸಿ ಕಣ್ಣು ಮುಚ್ಚಿ ಕೂತಿತು. ನುಸಿಗಳು ಕಣ್ಣಿಗೆ ಕಿಕ್ಕರಿಸಿದುವು. ಬಿಸಿಲು ಉರಿಯಿತು. ತಲೆಯ ಮೇಲೆ ಪಾಣಿ ಪಂಚೆ ಹೊದ್ದು, ಕುಕ್ಕರು ಕಾಲಿನಲ್ಲಿ ತಲೆ ಮೇಲೆ ಕೈಹೊತ್ತು ಕೂತ ಪ್ರಾಣವನ್ನು ಅಪಣ್ಣಭಟ್ಟರ ಕಣ್ಣು ಪ್ರಥಮ ಬಾರಿಗೆನ್ನುವಂತೆ ನೋಡಿ, ಹೊಟ್ಟೆ ತೊಳಸಿದಂತೆ ಆಯಿತು. ಮೊಸರಿನಲ್ಲಿ ಬಿರಿದು ಒಣಗಿದ ಅವಲಕ್ಕಿ ; ಅದರ ಮೇಲೆ ನೊಣ ; ಕುಪ್ಪಣ್ಣ ಭಟ್ಟರ ಮೂಗಿನ ಮೇಲೆ ನೊಣ: ಮುಚ್ಚುವ ಬಿಡುವ ಕಣ್ಣು.

"ಮಹಾರಾಯರೇ, ನಿಮ್ಮ ಗಂಟು ನನಗೆ ಬೇಡ. ಮಹಾರಾಯರೇ, ಈ ಮನೆಯಲ್ಲಿ ನೀವೇ ಇದ್ದು ಬಿಡಿ. ನೀವು ಕಣ್ಣು ಮುಚ್ಚುವ ತನಕ ನಿಮ್ಮ ಕೃಷಿಗೆ ನಾನೇ ಈ ತೋಟವನ್ನು ಬಿಟ್ಟುಕೊಟ್ಟಿರುತ್ತೇನೆ. ನರಸಿಂಹದೇವರ ಗೇಣಿಯನ್ನು ನೀವು ಬಾಕಿ ಮಾಡಿಕೊಳ್ಳದಂತೆ ತನಗೆ ವರ್ಷ ವರ್ಷ ಗೇಣಿ ಕೊಡುತ್ತ ಬಂದರೆ ಸಾಕು. ನಾನು ಕಟುಕನಲ್ಲ ಭಟ್ಟರೇ. ನಿಮ್ಮ ಹಾಗೆ ನಾನೂ ಘಟ್ಟದ ಕೆಳಗಿನಿಂದ ಬರಿಯ ತಾಲಿ ಹಿಡಿದು ಬಂದವ. ಸಂಭಾವನೆಗೆ ಹೋಗಿದ್ದಾಗ ದಾರಿಯ ಬಿಸಿಲಿನಲ್ಲಿ ನನ್ನ ಅಪ್ಪಯ್ಯ ಬಿದ್ದು ಸತ್ತಂತೆ ನನಗೊಂದು ಸಾವು ಬರದಿದ್ದರೆ ಸಾಕು. ಸಾಯುವಾಗ ಒಂದು ಗುಟುಕು ನೀರಿಲ್ಲದೆ, ದಾರಿಯ ಬಿಸಿಲಿನಲ್ಲಿ ಕಾಗೆಗಳು ನನ್ನ ಅಪ್ಪಯ್ಯನನ್ನು ಕುಟುಕಿದಂಥ ಪಾಡು ನನಗೆ ಬರದಿದ್ದರೆ ಸಾಕು. ಇಕೊಳ್ಳಿ ಬೀಗದ ಕೈ ಮಾರಾಯರೆ, ಇಕೊಳ್ಳಿ" ಎಂದು ಅಪ್ಪಣ್ಣಭಟ್ಟರು ಮೂಗಿನಿಂದ ಸಿಂಬಳತೆಗೆದು ಅತ್ತರು.

ಪ್ರಾಣದ ವಿಸರ್ಜನೆಗೆ ಧ್ಯಾನಿಸುತ್ತಿರುವಂತೆ ಕುಕ್ಕರು ಕೂತ ಕುಪ್ಪಣ್ಣಭಟ್ಟರು ಇದಕ್ಕೂ ಮಾತಾಡಲಿಲ್ಲ. ಮೌನಿಯ ವಸ್ತ್ರಾವೃತ ಆಕೃತಿ ಕಣ್ಣಿನಲ್ಲಿ ಊರಿದಂತಾಗಿ ಅಪ್ಪಣ್ಣಭಟ್ಟರ ಸಲೀಸು ಬಾಯಿ ಸ್ತಬ್ಧವಾಯಿತು. ಕಣ್ಣು ಒಣಗಿತು. ತಲೆಯ ಮೇಲೆ ತಾವೂ ಒಂದು ವಸ್ತ್ರ ಹೊದ್ದು ಜಗುಲಿಯ ಮೇಲೆ ಕುಕ್ಕರು ಕಾಲಿನಲ್ಲಿ ಕೂತರು.

**ಆಕರ : ಮೌನಿ – ಯು.ಆರ್.ಅನಂತಮೂರ್ತಿ**

## ೧.೩ ಬೆಂಗಳೂರು– ಹೊಸ ಉದ್ಯಮಗಳ ಅಲೆ

–ಎಂ.ಸತ್ಯನಾರಾಯಣ ಭಟ್ಟ

ಪ್ರಪಂಚದಾದ್ಯಂತ ಪ್ರಚಲಿತವಿರುವ 'ತ್ರಿ'ಕರಣಗಳ ಅಂದರೆ ಜಾಗತೀಕರಣ, ಖಾಸಗೀಕರಣ ಮತ್ತು ಸರಳೀಕರಣಗಳ 'ಅನುಭವ ನಮ್ಮ ದೇಶದಲ್ಲಿ ೧೯೯೧ ರಿಂದ ಪ್ರಾರಂಭವಾದರೂ, ಅದರ ವೇಗ ಹೆಚ್ಚಿರುವುದು ಕಳೆದ ಸುಮಾರು ೧೦ ವರ್ಷಗಳಿಂದ. ಈ ಹೊಸ ಯುಗದ ಹರಿಕಾರರೆಂದೇ ಪ್ರಸಿದ್ಧವಾಗಿರುವ ನಮ್ಮ ಈಗಿನ ಪ್ರಧಾನ ಮಂತ್ರಿ ಡಾ. ಮನಮೋಹನ್ ಸಿಂಗ್‌ರವರು. ಜಾಗತೀಕರಣ, ಮುಕ್ತ ಆರ್ಥಿಕನೀತಿ, ವಿದೇಶಿ ಬಂಡವಾಳ ಹೂಡಿಕೆಯ ಸರಳೀಕರಣ ಮೊದಲಾದ ಹೊಸವಿಚಾರಗಳನ್ನು ಆಗ ಪ್ರಸ್ತಾಪಿಸಿದಾಗ, ಈ ಕ್ರಾಂತಿಕಾರಿ ವಿಷಯಗಳ ಬಗ್ಗೆ ವಿರೋಧಿಸಿದವರೇ ಹೆಚ್ಚು. ವಿರೋಧ ಈಗಲೂ ಇದೆ. ಪರ ವಿರೋಧ ಅಭಿಪ್ರಾಯಗಳು ಪ್ರಜಾಪ್ರಭುತ್ವದಲ್ಲಿ ಸಹಜವಾದದ್ದೇ. ಅದು ಆರೋಗ್ಯಕರ ಕೂಡಾ.ಭಾರತದೇಶದ, ಸ್ಥಿತಿ–ಗತಿ, ಸಾಮಾಜಿಕ ಪರಿಸ್ಥಿತಿ, ಜನಸಂಖ್ಯೆ, ಭೌಗೋಳಿಕ ರಚನೆ ಮೊದಲಾದ ವಿಷಯಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಆ ಹಿನ್ನೆಲೆಯಲ್ಲಿ ವಾಸ್ತವ್ಯವನ್ನು ಅವಲೋಕಿಸಿದಾಗ, ಈ ತ್ರಿಕರಣಗಳಿಗೆ ನಾವು ಬಾಗಿಲು ತೆರೆದಿರುವುದು ಸರಿಯೇ? ಇದರಿಂದಾಗಿ ರಾಷ್ಟ್ರ ಅಭಿವೃದ್ಧಿ ಆದರೂ, ಜನರು ಬಡವರಾಗುತ್ತಿಲ್ಲವೆ ? ಎಂಬ ಗಹನವಾದ ವಿಚಾರಗಳ ಬಗ್ಗೆ ಚರ್ಚೆ – ವಿಮರ್ಶೆಗಳು ನಡೆಯುತ್ತಲೇ ಇವೆ. ಆದರೆ, ಇಂತಹ ಸೂಕ್ಷ್ಮ ವಿಚಾರಗಳು ಬಂದಾಗ, ಅದಕ್ಕೆ ರಾಜಕೀಯ ಬಣ್ಣ ಹಾಕಿ ವಿಷಯಗಳನ್ನು ತಿಳಿಗೊಳಿಸಲಾಗುತ್ತದೆ. ಅಥವ ಕೆಲವು ವೈಭವೀಕರಿಸಲಾಗುತ್ತದೆ, ಅದರ ಬದಲಾಗಿ ಮುಕ್ತ ಮನಸ್ಸಿನಿಂದ ಹಿತಕರವಾದ ವಿಮರ್ಶೆ, ವಿಚಾರಮಂಥನವಾದರೆ, ಬಹುಶಃ ನಾವು ಒಂದು ವೇಳೆ ದಾರಿತಪ್ಪಿದ್ದರೆ ಸರಿಪಡಿಸಿಕೊಳ್ಳುವ ಅವಕಾಶ ಕಂಡುಕೊಳ್ಳಬಹುದು Change is the only constant ಅಂದರೆ ಬದಲಾವಣೆ ಮಾತ್ರ ಸ್ಥಿರ ಎಂದು ಅರ್ಥಶಾಸ್ತ್ರಜ್ಞರೇ ಹೇಳುತ್ತಿರುವಾಗ ನಾವು ಬದಲಾವಣೆಯನ್ನು ಸ್ವೀಕರಿಸಲೇಬೇಕು, ನಿನ್ನೆ ಸರಿಯಾಗಿರುವುದು ಇವತ್ತು ಸರಿಯಿರಲೇ ಬೇಕೆಂದಿಲ್ಲ. ನಾಳೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡುವ ಯೋಜನೆ ಹೆಚ್ಚು ಅರ್ಥಪೂರ್ಣ.

ಜಾಗತೀಕರಣದ ಪ್ರಭಾವ ದೇಶವ್ಯಾಪಿಯಾಗಿ ಬೀರಿದರೂ ಕೆಲವು ಪ್ರದೇಶಗಳಿಗೆ ಅಥವಾ ರಾಜ್ಯಗಳಿಗೆ ಇದು ಹೆಚ್ಚು ಮತ್ತು ವೇಗವಾಗಿ ಪರಿಣಾಮತಂದಿದೆ. ಇದಕ್ಕೆ ವಿವಿಧ ರಾಜ್ಯಗಳ ಸಾಮಾಜಿಕ – ಆರ್ಥಿಕ ಸ್ಥಿತಿಗತಿ, ಶಿಕ್ಷಣದ ಮಟ್ಟ ಮತ್ತು ರಾಜಕೀಯ ಇಚ್ಛಾಶಕ್ತಿ ಕಾರಣವಿರಬಹುದು. ಪಶ್ಚಿಮ ಬಂಗಾಲದಂತಹ ರಾಜ್ಯಗಳು ಇಂತಹ ಹೊಸ ವಿಚಾರಗಳ ಪ್ರತಿರೋಧ ತೋರಿದರೆ, ತಮಿಳುನಾಡು, ಗುಜರಾತ್ ಮೊದಲಾದ ರಾಜ್ಯಗಳು ಹೆಚ್ಚು ಕಾಲಹರಣ ಮಾಡದೆ ಹೊಸ ವಾತಾವರಣಕ್ಕೆ ಸ್ಪಂದಿಸಲು ಆರಂಭಿಸಿರುವುದರಿಂದ ಫಲಿತಾಂಶಗಳನ್ನು ಶೀಘ್ರವಾಗಿ ಕಾಣಲು ಸಾಧ್ಯವಾಯಿತು.

ಭಾರತ ಅಂದರೆ ಬೆಂಗಳೂರು ಎನ್ನುವಷ್ಟುಮಟ್ಟಿಗೆ, ಇಂದು ಬೆಂಗಳೂರು ಜನಪ್ರಿಯವಾಗಿದೆ. ಕರ್ನಾಟಕದ ರಾಜಧಾನಿ ಎಂದು ಗುರುತಿಸುವ ಬದಲು ದೇಶದ ಮಾತ್ರವಲ್ಲ ಏಷಿಯಾ ಖಂಡದ ತಂತ್ರಜ್ಞಾನದ ರಾಜ್ಯಧಾನಿ ಎಂಬ ಹೆಗ್ಗಳಿಕೆಗೆ ಬೆಂಗಳೂರು ಇಂದು ಪಾತ್ರವಾಗಿದೆ. ಬೆಂಗಳೂರಿನ ಈ ಅದ್ಭುತ ಬೆಳವಣಿಗೆಗೆ ಮತ್ತು ಪ್ರಗತಿಗೆ ಕಾರಣಗಳು ಕೆಲವಾರು ಇರಬಹುದಾದರೂ, ಮೊತ್ತಮೊದಲ ಕಾರಣ ಇಲ್ಲಿಯ ಹಿತಕರವಾದ ಹವಾಮಾನ, ವರ್ಷದ ಎಲ್ಲಾ ದಿನಗಳೂ ಆಹ್ಲಾದಕರವಾಗಿದ್ದು, ಚಳಿ ಅಥವಾ ಸೆಕೆಯ ಪರಾಕಾಷ್ಠೆಗಳಿಲ್ಲದ ರಾಷ್ಟ್ರದ ಏಕೈಕ ನಗರ ಬೆಂಗಳೂರು ಎಂಬುದು ಸರ್ವವಿಧಿತ. ಎರಡನೇ ಕಾರಣ ನಗರದಲ್ಲಿರುವ ಶೈಕ್ಷಣಿಕ ಸಂಸ್ಥೆಗಳು, ಜನರ ಇಂಗ್ಲಿಷ್ ಜ್ಞಾನ, ತಾಂತ್ರಿಕ ಪರಿಣಿತರ ಸದಾಲಭ್ಯತೆ, ದೇಶದ ಆರ್ಥಿಕ ಮತ್ತು ಕೈಗಾರಿಕಾನೀತಿ ಮುಕ್ತವಾದಾಗ, ವಿದೇಶಿ ಹೂಡಿಕೆಗೆ ದೇಶದ ಬಾಗಿಲತೆರದಾಗ, ವಿದೇಶಿ ಸಂಸ್ಥೆಗಳು ಮೊದಲು ದೃಷ್ಟಿಬೀರಿದ್ದು ಬೆಂಗಳೂರಿಗೆ. ಬಹುಶಃ ಮೇಲೆ ಹೇಳಿದ ಎರಡು ಪ್ರಮುಖ ಕಾರಣಗಳಿಂದಾಗಿ, ಇಲ್ಲಿಗೆ ಬಂದು ನೆಲೆ ಊರಿದ ಪ್ರಮುಖ ವಿದೇಶಿಸಂಸ್ಥೆಗಳು, ಇಲ್ಲಿಂದ ಮತ್ತೆ ವಾಪಾಸಾಗಲಿಲ್ಲ. ಬದಲಾಗಿ ತಮ್ಮ ವ್ಯವಹಾರ–ಉದ್ಯಮಗಳನ್ನು ಮತ್ತಷ್ಟು ವಿಸ್ತರಿಸಲು ಮುಂದಾದವು. ಹೊಸ ವಿದೇಶಿ ಕಂಪೆನಿಗಳನ್ನು ಆಹ್ವಾನಿಸುವಲ್ಲಿ ರಾಜ್ಯದ ರಾಯಭಾರಿಯಾಗಿ ಕೆಲಸಮಾಡಿದವು.

ಇಂದು ಬೆಂಗಳೂರಿನ ಕೈಗಾರಿಕಾ ಮತ್ತು ವಾಣಿಜ್ಯ ಕ್ಷೇತ್ರದ ಚಿತ್ರಣವೇ ಬದಲಾಗಿದೆ. ಸುಮಾರು ೧೦ ವರ್ಷಗಳ ಹಿಂದೆ ಬೆಳಿಗ್ಗೆ, ಮಧ್ಯಾಹ್ನ ಮತ್ತು ರಾತ್ರಿ ಬೆಂಗಳೂರು ರಸ್ತೆಯಲ್ಲಿ ಸಾಲುಗಟ್ಟಿ ಬರುತ್ತಿರುವ ಐ.ಟಿ.ಐ., ಎನ್.ಜಿ.ಇ.ಎಫ್. ಹೆಚ್.ಎಂ.ಟಿ. ಫ್ಯಾಕ್ಟರಿ ಬಸ್ಸುಗಳನ್ನು ರಸ್ತೆಬದಿಯಲ್ಲಿ ನಿಂತು ನೋಡುತ್ತಿದ್ದ ನಮಗೆ ಆಗುತ್ತಿದ್ದ ಅನುಭವಗಳೇ ವಿಚಿತ್ರ. ಈ

ಬಸ್ಸುಗಳಲ್ಲಿ ಇರುವವರು ಏನು ಪುಣ್ಯಮಾಡಿದ್ದಾರೆ. ಅವರು ಮಹಾರಾಜರು, ಅವರ ಉದ್ಯಮಗಳು ನಮ್ಮ ಆರ್ಥಿಕ ಕ್ಷೇತ್ರದ ಭದ್ರ ಬುನಾದಿಗಳು, ನಮಗೂ ಅಲ್ಲೊಂದು ಜವಾನ ಕೆಲಸವಾದರೂ ಸಿಕ್ಕೀತೆ ಎಂದು ಯೋಚಿಸದೇ ಇರುವ ಸಾಧ್ಯತೆನೇ ಇಲ್ಲ. ಯಾಕೆಂದ್ರೆ ಕಾಲ ಹಾಗಿತ್ತು, ಐ.ಟಿ.ಐ.ಯ. ಟೆಲಿಫೋನ್ ಉಪಕರಣಕ್ಕೆ ವರ್ಷಗಟ್ಟಲೆ ಕಾಯಬೇಕಾಗಿತ್ತು. ಹೆಚ್.ಎಂ.ಟಿ. ಕೈಗಡಿಯಾರ ಶ್ರೀಮಂತಿಕೆಯ ಸಂಕೇತವಾಗಿತ್ತು. ಎನ್.ಜಿ.ಇ.ಎಫ್. ನ ಟ್ರಾನ್ಸ್‌ಫಾರ್ಮರ್ಸ್‌ಗೆ ಗಿರಾಕಿಗಳು ಪೂರ್ತಿ ಹಣಕೊಟ್ಟು ತಿಂಗಳಗಟ್ಲೆ ಕಾಯುತ್ತಿದ್ದರು. ಅಂದಿನ ಪರಿಸ್ಥಿತಿಯಲ್ಲಿ ಅದು ಅಕ್ಷರಶಃ ನಿಜವೂಆಗಿತ್ತು. ಸ್ವತಂತ್ರ ಭಾರತದ ಆರ್ಥಿಕಸ್ಥಿತಿಯನ್ನು ಸದೃಢಗೊಳಿಸಲು, ಜನರಿಗೆ ಉದ್ಯೋಗ ನೀಡಲು ಉದ್ಯಮಗಳು ಬೇಕಾಗಿತ್ತು. ಖಾಸಗಿಯವರು ಮುಂದೆ ಬರದಿದ್ದಾಗ ಸರಕಾರವೇ ಆ ಕೆಲಸಕ್ಕೆ ಮುಂದಾಗಬೇಕಾಯಿತು. ಇದರಿಂದಾಗಿ ದೇಶದ ಆರ್ಥಿಕಬುನಾದಿ ಭದ್ರವಾಯಿತು. ಬೆಂಗಳೂರಿನಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಸ್ಥಾಪಿಸಿದ ಕೆಲವಾರು ಪ್ರಮುಖ ಉದ್ಯಮಗಳು ಇಲ್ಲಿಯ ಕೈಗಾರಿಕಾತಳಹದಿಯನ್ನು ವಿಸ್ತರಿಸಿತು. ಸಾವಿರಾರು ಸಣ್ಣಕೈಗಾರಿಕೆಗಳು ಹುಟ್ಟಿಕೊಂಡವು. ವ್ಯಾಪಾರ ವ್ಯವಹಾರ ವೃದ್ಧಿಯಾಯಿತು. ಆದರೆ ಹತ್ತು ವರ್ಷಗಳ ಹಿಂದೆ ಇದ್ದ ಪರಿಸ್ಥಿತಿ ಈಗಿಲ್ಲ. ಅಂದು ಮಹಾರಾಜರ ಹಾಗೇ ಮೆರೆಯುತ್ತಿದ್ದ ಪ್ರಮುಖ ಕೈಗಾರಿಕೆಗಳು ಇಂದು ರೋಗಗ್ರಸ್ತವಾಗಿವೆ ಅಥವಾ ಮುಚ್ಚುವ ಹಂತಕ್ಕೆ ಬಂದಿವೆ.

ಕೈಗಾರಿಕಾ ವಿಚಾರದಲ್ಲಿ ಹೊಸದಾದ ಅಲೆ ಬೀಸಲಾರಂಭಿಸಿದೆ. ಅಂದು ದಿನಕ್ಕೆ ಮೂರು ಸಾರಿ ಶಿಫ್ಟ್ ಮುಗಿಸಿ ಫ್ಯಾಕ್ಟರಿ ಬಸ್‌ಗಳು ಸಾಲುಗಟ್ಟಿ ರಸ್ತೆಯಲ್ಲಿ ಹೋಗುತ್ತಿದ್ದರೆ, ಇವತ್ತು ದಿನದ ೨೪ ತಾಸುಗಳೂ ಉದ್ಯೋಗಿಗಳನ್ನು ಕರೆತರುವ ಮತ್ತು ಮನೆಗೆ ಬಿಡುವ ವಾಹನಗಳು ರಸ್ತೆಯಲ್ಲಿ ಸಂಚರಿಸುತ್ತವೆ. ಅಂದರೆ ಈಗ ನಿಗದಿತ ಶಿಫ್ಟ್ ಅಂತ ಇಲ್ಲ. ಒಂದೊಂದು ಕೈಗಾರಿಕೆಗೆ ಒಂದೊಂದು ವೇಳಾ ಪಟ್ಟಿ. ದಿನದ ೨೪ ಗಂಟೆಯೂ ಕೆಲಸ. ನಗರಕ್ಕೆ ರಾತ್ರಿಯೆಂಬುದೇ ಇಲ್ಲ. ಇದ್ದರೂ ಅದು ಸಾರ್ವತ್ರಿಕವಾಗಿಲ್ಲ.

ಬೆಂಗಳೂರಿನ ಈ ಬದಲಾದ ಸ್ಥಿತಿಗೆ ಕಾರಣವೇನು? ಪ್ರಮುಖ ಕಾರಣ– ಇಲ್ಲಿ ಮಿತಿಮೀರಿ ಬೆಳೆಯುತ್ತಿರುವ ಮಾಹಿತಿತಂತ್ರಜ್ಞಾನ ಆಧಾರಿತ ಕೈಗಾರಿಕೆಗಳು. ಈ ಚಟುವಟಿಕೆಗಳು ಫ್ಯಾಕ್ಟರಿ ಕಾಯಿದೆಯ ವ್ಯಾಪ್ತಿಯಲ್ಲಿ ಬರದೇ ಇರುವ ಕಾರಣ ಇವುಗಳನ್ನು ಸ್ಥಾಪಿಸಲು ಯಾವುದೇ ಪರವಾನಗಿ, ಅನುಮೋದನೆಯ ಅಗತ್ಯವಿಲ್ಲ. ಕರ್ನಾಟಕ ಶಾಪ್ಸ್ ಮತ್ತು ಎಸ್ಟಾಬ್ಲಿಷ್‌ಮೆಂಟ್ ಕಾಯಿದೆಯ ಅಡಿಯಲ್ಲಿ ಸರಳವಾದ ಒಂದು ಲೈಸೆನ್ಸ್ ಪಡೆದರೆ, ಯಾವ ಗಾತ್ರದ ಉದ್ಯಮವನ್ನೂ ಆರಂಭಿಸಬಹುದು. ಇಲ್ಲಿ ಯಾವುದೇ ರೀತಿಯ ಮ್ಯಾನುಫಾಕ್ಚರಿಂಗ್ ಅಥವಾ ಉತ್ಪಾದನೆ ಕಾರ್ಯವಿರದ ಕಾರಣ, ಪರಿಸರ ಮಾಲಿನ್ಯದ ತಂಟೆಯೂ ಇಲ್ಲ. ಜನರೇಟರ್ ಇಟ್ಟುಕೊಂಡರೆ ಕರ್ನಾಟಕ ರಾಜ್ಯ ಪರಿಸರಮಾಲಿನ್ಯ ನಿಯಂತ್ರಣ ಮಂಡಳಿಯವರ ಅನುಮೋದನೆಬೇಕು. ಹೊರತಾಗಿ ಈ ಉದ್ಯಮಗಳು ಸರಕಾರದ ಇಲಾಖೆಗಳಿಗೆ ಸುತ್ತಬೇಕಾಗಿಲ್ಲ. ಕೆಂಪು ಪಟ್ಟಿಯ ಬಿಸಿ ಅನುಭವಿಸಬೇಕಾಗಿಲ್ಲ. ಇದರಿಂದಾಗಿ ಈ ಕೈಗಾರಿಕೆಗಳ ವಿಚಾರದಲ್ಲಿ ಸರಕಾರಕ್ಕೆ ಹಿಡಿತವೇ ಇಲ್ಲವಾಗಿದೆ. ಬೇಡವೆಂದರೂ ಬೆಂಗಳೂರಿಗೆ ದಾಳಿ ಇಡುವ ಈ ಉದ್ಯಮಗಳನ್ನು ರಾಜ್ಯದ ಇತರ ನಗರಗಳಾದ ಮೈಸೂರು, ಮಂಗಳೂರು, ಹುಬ್ಬಳ್ಳಿಗೆ ಆಕರ್ಷಿಸುವ ಕಾರ್ಯನಡೆಯುತ್ತಿದೆ. ತುಸು ಮಟ್ಟಿನ ಯಶಸ್ಸುಲಭಿಸಿದೆ.

ಬೆಂಗಳೂರಿನಲ್ಲಿ ಇಂದು ಸುಮಾರು ೧೫೦೦ ರಷ್ಟು ಮಾಹಿತಿ ತಂತ್ರಜ್ಞಾನ ಆಧಾರಿತ ಉದ್ಯಮಗಳಿದ್ದು, ಇವುಗಳಲ್ಲಿ ಸುಮಾರು ಮೂರು ಲಕ್ಷ ಜನರು ದುಡಿಯುತ್ತಿದ್ದಾರೆ. ಸಾಫ್ಟ್‌ವೇರ್ ಡೆವೆಲಪ್‌ಮೆಂಟ್‌ನಲ್ಲಿ ಬೆಂಗಳೂರು ಪರಿಣತಿ ಸಾಧಿಸುವುದರ ಜೊತೆಗೆ ಕೆಲವಾರು ವಿಧದ ಕಂಪ್ಯೂಟರ್ ಆಧಾರಿತ ಸೇವೆಗಳನ್ನು, ವಿಶೇಷವಾಗಿ ವಿದೇಶದಲ್ಲಿರುವ ಸಂಸ್ಥೆಗೆ ನೀಡುವುದರಲ್ಲಿ ನಿರತವಾಗಿವೆ. ಬಿಸಿನೆಸ್ ಪ್ರೋಸೆಸ್ ಔಟ್ ಸೋರ್ಸಿಂಗ್ ಅಥವಾ ಬಿಪಿಒ ಎಂದು ಹೇಳಲಾಗುವ ಈ ಹೊಸವಿಧಾನದಲ್ಲೇ ಸುಮಾರು ಒಂದು ಲಕ್ಷ ಜನ ನಿರತರಾಗಿದ್ದಾರೆ. ಈ ಕೆಲಸಕ್ಕೆ ಸೇರಲು ಸಾಫ್ಟ್‌ವೇರ್ ಇಂಜಿನೀಯರ್ ಆಗಿರಬೇಕಿಲ್ಲ. ಚೆನ್ನಾಗಿ ಇಂಗ್ಲಿಷ್ ಜ್ಞಾನ ಉಳ್ಳ ಯಾವುದೇ ಯುವಜನರು ಈ ಕೆಲಸಗಳನ್ನು ಗಿಟ್ಟಿಸಿಕೊಳ್ಳಬಹುದು. ತಮ್ಮ ವಯಸ್ಸಿಗೆ ಮೀರಿದ ಸಂಬಳ ಪಡೆಯಬಹುದು. ಭಾರತ ಮತ್ತು ಅಮೇರಿಕಾ ಹಾಗೂ ಇನ್ನಿತರ ವಿದೇಶಗಳಲ್ಲಿರುವ ಕಾಲಮಾನದ ವ್ಯತ್ಯಾಸದ ಲಾಭಪಡೆದು ದಿನದ ೨೪ ಘಂಟೆಯೂ ಈ ಕಛೇರಿಗಳು ಕೆಲಸ ಮಾಡುತ್ತಿವೆ. ದೇಶೀಯ ಬಳಕೆಗಾಗಿ ಅನೇಕ ಐಟಿ ಕಂಪನಿಗಳು ಕಾರ್ಯನಿರತವಾಗಿದ್ದರೂ ಹೆಚ್ಚು ಕಂಪನಿಗಳು ಕಣ್ಣಿಟ್ಟಿರುವುದು ರಫ್ತು ವ್ಯವಹಾರದ ಮೇಲೆ ಅದಕ್ಕಾಗಿಯೇ ಸಾಫ್ಟ್‌ವೇರ್ ರಫ್ತು ಪ್ರಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ.

೨೦೦೦–೦೧ನೇ ವರ್ಷದಲ್ಲಿ ರೂ.೮೮೨೬ ಕೋಟಿಗಳಿದ್ದ ಸಾಫ್ಟ್‌ವೇರ್ ರಫ್ತು ಪ್ರಮಾಣ ೨೦೦೪ ೨೦೦೫ನೇ ವರ್ಷದಲ್ಲಿ ರೂ ೨೬,೭೨೪ ಕೋಟಿ ರೂಗಳನ್ನು ತಲುಪಿದೆ. ಈ ಮೊತ್ತದಲ್ಲಿ ಶೇ೯೭ ರಷ್ಟು ಪಾಲು ಬೆಂಗಳೂರಿಗೆ ಸೇರಿದ್ದು, ಉಳಿದ ಭಾಗ ಮೈಸೂರು ಮತ್ತು ಮಂಗಳೂರಿನ ಕೊಡುಗೆಯಾಗಿದೆ.

ಬೆಂಗಳೂರಿನ Information Technology ಅಥವಾ ಐಟಿ ಕಂಪನಿಗಳ ಸಂಖ್ಯೆ ಪ್ರತಿವರ್ಷ ಹೆಚ್ಚಾಗುತ್ತಲೇ ಇದೆ. ೨೦೦೪–೨೦೦೫ ವರ್ಷದಲ್ಲಿ ಸುಮಾರು ೨೦೦ ಹೊಸ ಐಟಿ ಕಂಪನಿಗಳು ಆರಂಭವಾಗಿದ್ದು, ಅವುಗಳಲ್ಲಿ ಶೇ ೬೫ ರಷ್ಟು ಕಂಪೆನಿಗಳು ಶೇ ೧೦೦ ರಷ್ಟು ರಫ್ತು ಆಧಾರಿತ ವ್ಯವಹಾರದಲ್ಲಿ ನಿರತವಾಗಿವೆ. ಸಾಪ್ಟವೇರ್ ಆಧಾರಿತ ಕಂಪನಿಗಳಿಗೆ ಸರಿಹೊಂದುವ ವೇಗದಲ್ಲಿ ಹಾರ್ಡ್‌ವೇರ್ ಬೆಳೆಯುತ್ತಿಲ್ಲ. ೨೦೦೪–೨೦೦೫ರಲ್ಲಿ ಸ್ಥಾಪನೆಯಾದ ೮ ಕಂಪೆನಿಗಳನ್ನು ಸೇರಿಸಿ ಈಗ ಬೆಂಗಳೂರಿನಲ್ಲಿ ಸುಮಾರು ೪೦ ಹಾರ್ಡ್‌ವೇರ ಕಂಪೆನಿಗಳಿವೆ. ಈ ಕಂಪನಿಗಳು ೨೦೦೪–೨೦೦೫ ರಲ್ಲಿ ರೂ. ೧೬೬೮ ಕೋಟಿಗಳು ರಫ್ತುವ್ಯವಹಾರ ಸಾಧಿಸಿವೆ. ಬೆಂಗಳೂರಿನ ಮಾಹಿತಿ ತಂತ್ರಜ್ಞಾನಾಧಾರಿತ ಕಂಪೆನಿಗಳು ೨೦೦೪ ರಲ್ಲಿ ಸುಮಾರು ೬.೩ ದಶಲಕ್ಷ ಚದರ ಅಡಿ ಉತ್ತಮ ಶ್ರೇಣಿಯ ವಾಣಿಜ್ಯ ನಿವೇಶನವನ್ನು ಪಡೆದುಕೊಂಡಿದ್ದು, ದೇಶದಲ್ಲಿ ಅಗ್ರಸ್ಥಾನದಲ್ಲಿದೆ.

ಈ ಕ್ಷೇತ್ರಕ್ಕೆ ನಾಂದಿಹಾಕಿದ ಇನ್‌ಫೋಸಿಸ್, ವಿಪ್ರೊ, ಡಿಜಿಟಲ್ ಮೊದಲಾದ ಕಂಪೆನಿಗಳು ಬೃಹದಾಕಾರವಾಗಿ ಬೆಳೆದು ಜಾಗತಿಕ ಸ್ಥಾನ–ಮಾನಗಳಿಸಿವೆ. ಸಾಫ್ಟ್‌ವೇರ್ ಕಂಪೆನಿಗಳು ಬಹುಪಾಲು ರಫ್ತುವ್ಯವಹಾರದಲ್ಲಿ ತೊಡಗಿದ್ದು ಅದಕ್ಕೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಆಫ್ ಇಂಡಿಯಾದ ಬೆಂಗಳೂರು ಸವಲತ್ತು ಅಡಿಯಲ್ಲಿ ಉದ್ಯಮಗಳು ಕಾರ್ಯನಿರ್ವಹಿಸುತ್ತಿವೆ. ಈ ಚಟುವಟಿಕೆಗಳಲ್ಲಿ ಜನರಿಗೆ ನೇರವಾದ ಉದ್ಯೋಗಾವಕಾಶ ನೀಡಿದರೆ ಅದರ ಕೆಲವು ಪಟ್ಟು ಜಾಸ್ತಿ ಜನರಿಗೆ ಪರೋಕ್ಷವಾಗಿ ಉದ್ಯೋಗಾವಕಾಶ ಕಲ್ಪಿಸಿದೆ. ಮಾಹಿತಿ ತಂತ್ರಜ್ಞಾನ, ಕೈಗಾರಿಕೆಗಳಿಗೆ ಬೇಕಾದ ಉದ್ಯೋಗಿಗಳಿಗೆ ಅಗತ್ಯವಿರುವ ತರಬೇತಿ ನೀಡುವ ಸಂಸ್ಥೆಗಳು, ಸಾರಿಗೆ ವ್ಯವಸ್ಥೆ, ಕ್ಯಾಂಟೀನ್‌ವ್ಯವಸ್ಥೆ ಹೀಗೆ ಪೂರಕ ಚಟುವಟಿಕೆಗಳು ಅಸಂಖ್ಯಾತ ಜನರಿಗೆ ಉದ್ಯೋಗ ನೀಡುತ್ತಿವೆ. ಪ್ರತಿಯೊಂದು ಕಂಪನಿಗಳೂ ತನ್ನದೇ ಆದ ಕಾರ್ಯತಾಣಗಳನ್ನು ಹೊಂದಲು ಬಯಸುವುದರಿಂದ ಬೆಂಗಳೂರಿನ ನಿವೇಶನಕ್ಕೂ ಎಲ್ಲಿಲ್ಲದ ಬೇಡಿಕೆ, ನಿರ್ಮಾಣ ಆಧಾರಿತ ಉತ್ಪನ್ನಗಳು, ಚಟುವಟಿಕೆಗಳು ಮತ್ತು ನೌಕರರಿಗೆ ಕೈತುಂಬ ಕೆಲಸ.

ಬೆಂಗಳೂರಿನ ಈ ಮಾಹಿತಿ ತಂತ್ರಜ್ಞಾನ ಕೇಂದ್ರಿತವಾದ ಅಭಿವೃದ್ಧಿ ಬೆಂಗಳೂರಿಗೆ ವಿಶ್ವಮನ್ನಣೆಯನ್ನು ಗಳಿಸಿಕೊಟ್ಟಿದೆ. ಜಗತ್ತಿನ ಪ್ರತಿಯೊಬ್ಬ ರಾಜಕೀಯ ಅಥವಾ ಉದ್ಯಮದ ಪ್ರತಿಷ್ಠಿತರು ಬೆಂಗಳೂರಿಗೆ ಭೇಟಿನಿಡುತ್ತಿದ್ದಾರೆ. ಹೊಸ ದೇಶದ ವಿಶ್ವವಿದ್ಯಾಲಯಗಳ ಪದವಿಯನ್ನು ಇಲ್ಲಿದ್ದುಕೊಂಡೇ ಪಡೆಯುವ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ. ಒಟ್ಟಾರೆ ಬೆಲ್ಲಕ್ಕೆ ಮುತ್ತುವ ಇರುವೆಗಳಂತೆ ಬೆಂಗಳೂರಿನ ಆರ್ಥಿಕಪ್ರಗತಿಯ ಪಾಲುದಾರರಾಗಲು ಎಲ್ಲರೂ ಪೈಪೋಟಿ ನಡೆಸುತ್ತಿದ್ದಾರೆ.

ಬೆಂಗಳೂರಿನ ಇಂದಿನ ಬೆಳವಣಿಗೆಗೆ ಕೇವಲ ಮಾಹಿತಿ ತಂತ್ರಜ್ಞಾನ ಮಾತ್ರ ಕಾರಣ ಅಂದರೆ ತಪ್ಪಾಗಬಹುದು. ಇತರ ಅನೇಕ ಕ್ಷೇತ್ರಗಳ ಅಭಿವೃದ್ಧಿ ನಗರದ ಆಕರ್ಷಣೆಯನ್ನು ಹೆಚ್ಚಿಸಲು ಪೂರಕವಾಗಿದೆ. ಇಲ್ಲಿಯ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲು ನೀಡಲಾಗುವ ಒತ್ತಾಸೆ ದೊಡ್ಡಬಳ್ಳಾಪುರದಲ್ಲಿ ಸ್ಥಾಪಿಸಲಾಗುವ ಎಪಾರಲ್ ಪಾರ್ಕ್, ಹೊಸೂರು ರಸ್ತೆಯಲ್ಲಿ ಸ್ಥಾಪಿಸಲಾಗುವ ಬಯೋಟೆಕ್ನಾಲಜಿ ಪಾರ್ಕ್ ರೂ. ೧೩೩೪೫ ಕೋಟಿಯ ಅಂತರರಾಷ್ಟ್ರೀಯ ನಿಲ್ದಾಣ ರೂ. ೬೦೦೦ ಕೋಟಿ ಬೃಹತ್ ಅಂದಾಜು ವೆಚ್ಚದ ಮೆಟ್ರೋರೈಲು ಯೋಜನೆ ಸುಮಾರು ರೂ. ೪೫೦೦ ಕೋಟಿ ವೆಚ್ಚದಲ್ಲಿ ನಿರ್ಮಿಸಲು ಪ್ರಸ್ಥಾಪಿಸಿರುವ ಇಲೆಕ್ಟ್ರಾನ್ ಸಿಟಿ ಮಡಿವಾಳದ ಎಲಿವೇಟೆಡ್ ಎಕ್ಸ್‌ಪ್ರಸ್ ವೇ.. ಹೀಗೆ ಎಲ್ಲಾ ಪ್ರಸ್ತಾವನೆಗಳೂ ಕಾರ್ಯಗತವಾದಾಗ ಬೆಂಗಳೂರು ಇನ್ನೆಷ್ಟು ಬೆಳೆಯುತ್ತದೆಯೋ ಊಹಿಸಲಸಾಧ್ಯ.

ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುವ, ಆರಂಭವಾಗುವ ಈ ಹೊಸಅಲೆಯ ಐಟಿ, ಬಿಟಿ, ಉದ್ಯಮಗಳು ಮಾತ್ರ ರಾಜ್ಯದಲ್ಲಿ ಸ್ಥಾಪನೆಯಾಗುತ್ತವೆ. ಎಂಬ ಕಲ್ಪನೆ ತಪ್ಪು. ಉಳಿದ ಕೈಗಾರಿಕೆಗಳಲ್ಲೂ ಬಂಡವಾಳ ಹೂಡಲಾಗುತ್ತಿದೆ. ೨೦೦೪–೨೦೦೫ರಲ್ಲಿ ಸರ್ಕಾರ ಅನುಮೋದನೆ ನೀಡಿದ ಸುಮಾರು ೨೦೦ ಹೊಸ ಯೋಜನೆಗಳಲ್ಲಿ ಕೇವಲ ೧೯ ಮಾತ್ರ ಐಟಿ, ಬಿಟಿ ಗೆ ಸಂಬಂಧಪಟ್ಟದ್ದು. ಉಳಿದ ಕೈಗಾರಿಕೆಗಳು ಇತರೆ ಪ್ರಮುಖ ಕ್ಷೇತ್ರಗಳಿಗೆ ಸಂಬಂಧಿಸಿವೆ. ಈ ರೀತಿಯ ಸಮಮಿಶ್ರಣ ಕಾಪಾಡಿಕೊಂಡು ಬರುವುದು ಕೈಗಾರಿಕಾ ಕ್ಷೇತ್ರದ ಆರೋಗ್ಯಕರ ಬೆಳವಣಿಗೆಗೆ ಅತ್ಯಗತ್ಯ ಕೂಡಾ.

ಈ ಹೊಸ ಅಲೆಯ ಪ್ರಗತಿಯಿಂದ ಸ್ಥಳೀಯರಿಗೆ ಎಷ್ಟು ಲಾಭವಾಗಿದೆ? ಬಹಳಷ್ಟು ಪಡೆದುಕೊಂಡಿದ್ದಾರೆ. ಸಾಮಾನ್ಯವಾಗಿ ಮಾಹಿತಿ ತಂತ್ರಜ್ಞಾನ ಉದ್ಯಮಗಳು ವಿದೇಶಿ ಮಾರುಕಟ್ಟೆಗೆ ತನ್ನ ಸೇವೆಯನ್ನು ನೀಡುವುದರಿಂದ ಇಲ್ಲಿಯ ಸೇವಾದರಗಳೂ ಜಾಸ್ತಿ, ಉದ್ಯೋಗಿಗಳಿಗೆ ಲಭಿಸುವ ಸಂಬಳವೂ ಸಹಜವಾಗಿ ಜಾಸ್ತಿಯಿರಲೇಬೇಕು. ಸಾಕಷ್ಟು ಪರಿಣತಿ ಮತ್ತು ಅನುಭವ ಪಡೆದ ಉದ್ಯೋಗಿಯನ್ನು ಬಿಟ್ಟುಕೊಡಲು ಯಾವುದೇ ಸಂಸ್ಥೆ ಸಿದ್ಧವಿರುವುದಿಲ್ಲ, ಅಂತಹ

ಉದ್ಯೋಗಿಗಳಿಗೆ ಬೇಡಿಕೆಯೂ ಜಾಸ್ತಿ, ಅದರಿಂದಾಗಿ ಕೇಳಿದಷ್ಟು ಸಂಬಳ, ಪಡೆಯುವ ಸಂಬಳಕ್ಕಿಂತಲೂ ಹೆಚ್ಚಿನ ಜವಾಬ್ದಾರಿ, ಕಾರ್ಯದ ಒತ್ತಡ ಮತ್ತು ಪ್ರಗತಿಯ ಗುರಿ, ಕೆಲಸಕ್ಕೆ ಸೇರಿದ ಮೊದಲ ವರ್ಷಗಳಲ್ಲಿ ಉದ್ಯೋಗಿಗಳು ಪೇಯಿಂಗ್‌ಗೆಸ್ಟ್ ಆಗಿ ಇರಲೇಬೇಕಾಗುತ್ತದೆ. ರೂಂ ಮಾಡಿ, ಮನೆಗೆ ಬಂದು ಅಡಿಗೆ ಮಾಡುತ್ತೇನೆ ಎನ್ನುವಷ್ಟು ಕಾಲಾವಕಾಶ ಅವರಿಗೆ ಇರುವುದೇ ಇಲ್ಲ, ಲೆಕ್ಕಕ್ಕಿಂತ ಹೆಚ್ಚು ದುಡಿದು ರೂಂಗೆ ಬಂದು ಅಡುಗೆ ಮಾಡುವ ವ್ಯವಧಾನವೂ ಇರುವುದಿಲ್ಲ. ನಮ್ಮ ಸ್ಥಳೀಯರು ತಮ್ಮ ಮನೆಗಳಲ್ಲಿ ಅಥವಾ ಅದಕ್ಕಾಗಿ ಹೊಸ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಿ, ಪೇಯಿಂಗ್ ಗೆಸ್ಟ್ ವ್ಯವಸ್ಥೆ ಮಾಡಲು ಮುಂದಾಗುತ್ತಿದ್ದಾರೆ. ಮಹಿಳೆಯರು ಮಾತ್ರವಲ್ಲ ಹುಡುಗರೂ ಈ ವ್ಯವಸ್ಥೆಗೆ ಮೊರೆಹೋಗುತ್ತಿದ್ದಾರೆ. ಈ ಸೌಕರ್ಯವನ್ನು ಕಲ್ಪಿಸಿ, ನಮ್ಮವರು ತುಸು ಹಣ ಸಂಪಾದಿಸುತ್ತಿದ್ದಾರೆ, ಹಾಗೇನೇ ಬೆಂಗಳೂರಿನಲ್ಲಿ ಮನೆ ಬಾಡಿಗೆಯ ದರ, ಲೀಸ್‌ನ ಮೊತ್ತ, ಸೈಟ್‌ನ ಬೆಲೆ, ಮನೆಯ ಮೌಲ್ಯ ಎಲ್ಲವೂ ಬೇಕಾಬಿಟ್ಟಿಯಾಗಿ ಹೆಚ್ಚುತ್ತಿರುವುದು ಕಿಸೆತುಂಬ: ದುಡ್ಡಿರುವ ಮಾಹಿತಿ ತಂತ್ರಜ್ಞಾನ ಕೈಗಾರಿಕೆಯ ಉದ್ಯೋಗಿಗಳಿಂದ ಎಂಬ ಅಪವಾದ ಇದೆ, ಇದರಲ್ಲಿ ಸತ್ಯವೂ ಇದೆ. ಕೆಲಸಕ್ಕೆ ಸೇರಿ ೩-೪ ವರ್ಷವಾದಾಗ ಅವರ ಆರ್ಥಿಕ ಪರಿಸ್ಥಿತಿ ದೃಢವಾಗಿ ಮನೆಯ ಮೇಲೆ ಬಂಡವಾಳ ಹೂಡುವುದು ತಪ್ಪಲ್ಲ. ಉಳಿದವರಿಗಿಂತ ಒಂದೆರಡು ಲಕ್ಷ ಜಾಸ್ತಿಕೊಡುವ ಸಾಮರ್ಥ್ಯವಿರುವ ಇಂತಹ ಗಿರಾಕಿಗಳಿಗೆ ಮನೆಯ ಮಾಲೀಕರು ಪ್ರಾಶಸ್ತ್ಯ ನೀಡುವುದು, ಬಿಸಿನೆಸ್ ದೃಷ್ಟಿಯಲ್ಲಿ ಸಹಜವೇ ಆಗಿದೆ, ಈ ವಿಚಾರದಿಂದಲೂ ಸ್ಥಳೀಯರು ತುಸುಪ್ರಯೋಜನ ಪಡೆಯುತ್ತಿದ್ದಾರೆ. ಈ ಹೊಸ ಪೀಳಿಗೆಯವರ ಖರ್ಚು ವೆಚ್ಚಗಳ ಸಾಮರ್ಥ್ಯವೂ ಹೆಚ್ಚಾಗಿರುವುದರಿಂದ ಬೆಂಗಳೂರಿನ ಮಾರುಕಟ್ಟೆಯಲ್ಲಿ ವ್ಯಾಪಾರ – ವಹಿವಾಟುಗಳ ಪ್ರಮಾಣ ಹೊಸಮಟ್ಟವನ್ನು ತಲುಪಿದ್ದು, ಸಂಬಂಧಿಸಿದ ಎಲ್ಲರೂ ಶಕ್ತ್ಯಾನುಸಾರವಾಗಿ ಸಮೃದ್ಧರಾಗುತ್ತಿದ್ದಾರೆ.

ಸಾಮಾಜಿಕ, ಆರ್ಥಿಕ ಪ್ರಗತಿಯ ಜೊತೆಜೊತೆಗೆ ಕೆಲವಾರು ವ್ಯತ್ಯಯಗಳು ಆಗುತ್ತಿದೆ, 'ಡಿಜಿಟಲ್ ಡಿವೈಡ್' ಅಂದರೆ ಅತಿ ಶ್ರೀಮಂತರು ಮತ್ತು ನಿರುದ್ಯೋಗಿಗಳು ಎಂಬ ಎರಡು ಗುಂಪುಗಳ ಮಧ್ಯೆ ಅಪಾಯಕಾರಿ ಕಂದಕ ನಿರ್ಮಾಣವಾಗುತ್ತಿದೆ. ಲಕ್ಷಾಂತರ ಯುವಕರು, ಸರಿಯಾದ ಕೆಲಸವಿಲ್ಲದೆ ಊಟಕ್ಕೆ ಕಷ್ಟಪಡುತ್ತಿರುವಾಗ, ಕೆಲವು ಯುವಕರ, ಅತಿಯಾದ ಐಷಾರಾಮದ ಜೀವನ ನಡೆಸುತ್ತಿರುವುದು ಮಾನಸಿಕಕ್ಲೇಶವನ್ನು ಸೃಷ್ಟಿಮಾಡುತ್ತಿದ್ದು, ಒಂದು ಬಗೆಯ ವೈರತ್ವವನ್ನು ಅಗೋಚರವಾಗಿ ಬೆಳೆಸುತ್ತಾ ಇದೆ. ಇದ್ದವರನ್ನು ದೋಚುವ ಕಾರ್ಯ, ಕಳ್ಳತನ, ರಸ್ತೆ ದರೋಡೆ, ಮುಂತಾದ ಕೆಟ್ಟ ಕೆಲಸಗಳು ಹೆಚ್ಚಾಗುತ್ತಿವೆ ಎಂದು ಜನರು ದೂಷಿಸುತ್ತಿದ್ದಾರೆ. ಮಿತಿಮೀರಿದ ಕೆಲಸದ ಒತ್ತಡ, ಅಗತ್ಯವಿರುವ ವಿರಾಮದ ಕೊರತೆಯಿಂದಾಗಿ ದುಡ್ಡು ಎಷ್ಟಿದ್ದರೂ ಮಾನಸಿಕ ಸಂತೋಷವಿಲ್ಲ ಎಂದು ಹೆಚ್ಚು ಸಂಬಳದ ಉದ್ಯೋಗಿಗಳು ಮಾತ್ರವಲ್ಲ ಅವರ ಮನೆ ಮಂದಿ ಕೊರಗುತ್ತಿದ್ದಾರೆ. ಹಣವೇ ಅಂತಿಮವಲ್ಲ ಸಂಸಾರ, ಸ್ನೇಹ, ಒಡನಾಟ, ಒಂದಿಷ್ಟು ಮನರಂಜನೆ, ಬಿಡುವಿನ ಸಮಯವೂ ಅಗತ್ಯ ಎಂಬ ಅರಿವು ಮೂಡಲಾರಂಭಿಸಿದೆ. ಅವಕಾಶವಿದ್ದರೆ ಇವುಗಳನ್ನು ಪಡೆಯುತ್ತಾರೆ. ಅಸಾಧ್ಯವಾದರೆ ಅಂತಹವರು ಅಂತರ್ಮುಖಿಗಳಾಗುತ್ತಾರೆ. ಅವರ ಪ್ರಪಂಚವೇ ಬೇರೆಯಾಗಿರುತ್ತದೆ. ಇದು ಖಂಡಿತಾ ಆರೋಗ್ಯಕರ ಬೆಳವಣಿಗೆ ಅಲ್ಲ.

ಆದರೆ ಈ ಸಂಕ್ರಮಣ ಕಾಲದಲ್ಲಿ ನಾವು ಹೊಸದನ್ನು ಸ್ವೀಕರಿಸದೆ ಹಳೆಯದಕ್ಕೇ ಅಂಟಿಕೊಂಡು ಇರುವಹಾಗಿಲ್ಲ ಸ್ಥಳೀಯವಾದ ಹಿನ್ನೆಲೆಯಲ್ಲಿ ಯೋಚನೆ ಚಿಂತನೆ ಮಾಡಬೇಕು. ಆದರೆ ಭೌಗೋಳಿಕ ನೆಲೆಯಲ್ಲಿ ಕಾರ್ಯ ಪ್ರವೃತ್ತರಾಗಬೇಕು. ಹಳೆ ಬೇರಿನಲ್ಲಿ ಹೊಸ ಚಿಗುರು ಬಂದ ಹಾಗೆ ಹೊಸದು-ಹಳೆಯದರ ಮಧ್ಯೆ ಹಿತಮಿತವಾದ ಮತ್ತು ಕ್ಷೇಮಕರವಾದ ಸಾಮರಸ್ಯವನ್ನು ಸಾಧಿಸುವಂತಾದರೆ, ಬೆಂಗಳೂರಿನ ಹೊಸಅಲೆ ಸ್ಥಳೀಯರ ಬದುಕಿಗೆ ಸುನಾಮಿಯಾಗದೆ, ಜೀವನಕ್ಕೆ ನೆಲೆನೀಡುವ ನೆರವಿನ ಸೆಳೆಯಾಗಬಹುದು.

**ಆಕರ : ಜಾಗತೀಕರಣ ಬೆಂಗಳೂರು – ಎಂ.ಸತ್ಯನಾರಾಯಣ ಭಟ್ಟ**

## ೧.೪ ಸಂತೆ (ಓದು ಪಠ್ಯ)

**–ಸಿದ್ಧಲಿಂಗಯ್ಯ**

ದೇವಮಾನವರೆಲ್ಲ ಮಾರಾಟವಾಗುವರು
ಪಡುವಣದ ಏಳೂರ ಸಂತೆಯಲ್ಲಿ
ಒಂದು ಹೊರೆ ಕಟ್ಟಿಗೆಯೆ ಅಂದು ಸಾಕಾಗಿತ್ತು
ಇಂದು ಇದು ಆತ್ಮಗಳ ಮಾರುಕಟ್ಟೆ

ಪ್ರೀತಿ ವಾತ್ಸಲ್ಯಗಳ ನೀತಿ ಮಮಕಾರಗಳ
ಮಾರಾಟಕಿಟ್ಟವರು ಹಲವು ಜನರು
ಹುಸಿನಗೆಯ ಬೀರುವರು ಕೈಸನ್ನೆ ಮಾಡುವರು
ಪಂಚಭೂತಗಳನ್ನು ಕೊಳ್ಳುವವರು

ಮೌಲ್ಯ ಆದರ್ಶಗಳ ಅಂಗಡಿಯ ಸಾಲಿನಲಿ
ನ್ಯಾಯ ಬೇಕೇ ಎಂಬ ದೊಡ್ಡ ಕೂಗು
ಜಾತಿಜಾಗಟೆಯನ್ನು ಬಾರಿಸುವ ಜಾತ್ರೆಯಲಿ
ದೇಶಭಕ್ತಿಯದೊಂದು ಸಣ್ಣ ಸೋಗು

ಹೆಸರು ಗುರುತುಗಳಿಲ್ಲ ಯಾರಿಗೂ ಮುಖವಿಲ್ಲ
ಎಲ್ಲರೂ ಒಂದೊಂದು ಹಣದ ಥೈಲಿ
ಹಣವ ಪಾವತಿ ಮಾಡಿ ಅಳಬಹುದು ನಗಬಹುದು
ಕನಸು ಬೀಳುವುದಿಲ್ಲ ಬರಿಗೈಯಲ್ಲಿ

ಹಂಗಿನರಮನೆಯಿಂದ ಪಾರಿವಾಳವು ಹಾರಿ
ತುಂಬೆ ಹೂವರಳಿ ಫಲ ಕೊಡಲಿ ನಿಂಬೆ
ಮೂಡಿ ಕಾಮನಬಿಲ್ಲು ಜನವೆದ್ದು ಕುಣಿದು
ಹಬ್ಬವಾಗಲಿ ನೀಲಿ ಮುಗಿಲಿನಲಿ

**ಆಕರ : ಮೆರವಣಿಗೆ – ಸಿದ್ಧಲಿಂಗಯ್ಯ**

## ಭಾಗ- ೨ ತಂತ್ರಜ್ಞಾನ

**ಆಶಯ : ತಂತ್ರಜ್ಞಾನದ ಪ್ರಾಚೀನತೆ – ಆಯ್ದ ಭಾಗ**

ಹಡಗುಗಳನ್ನು ಕಟ್ಟಲು ಎಂತಹ ಮರವನ್ನು ಉಪಯೋಗಿಸಬೇಕೆಂದು ವೃಕ್ಷಾಯುರ್ವೇದದಲ್ಲಿ ಒಂದು ಸೂಚನೆ ಇದೆ. ಹಡಗಿನ ತಂತ್ರಜ್ಞಾನದಲ್ಲಿ ಸಿದ್ಧಹಸ್ತನೆನಿಸಿ ಕೊಂಡಿದ್ದ ಒಬ್ಬ ಗ್ರಂಥಕರ್ತನು ಸಮುದ್ರಯಾನಕ್ಕೆ ಹೋಗುವ ಹಡಗುಗಳ ತಳದಲ್ಲಿ ಹಲಗೆಗಳನ್ನು ಸೇರಿಸುವಾಗ ಎಚ್ಚರ ವಹಿಸಬೇಕೆಂದು ತಿಳಿಸುತ್ತಾನೆ. ಎಂತಹ ಎಚ್ಚರ? ಮೊಳೆಗಳನ್ನು ಹೊಡೆಯುವುದರಲ್ಲಿ ಎಚ್ಚರ, ಎನ್ನುತ್ತವೆ ಆ ಗ್ರಂಥ ರಾಧಾ ಕುಮುದ ಮುಖರ್ಜಿ ಇದನ್ನು ತಮ್ಮ "ಭಾರತೀಯ ನೌಕಾಯಾನ ಪದ್ಧತಿ" ಎಂಬ ಪುಸ್ತಕದಲ್ಲಿ (ಪುಟಗಳು ೧೩-೧೫) ಪ್ರಸ್ತಾಪಿಸಿದ್ದಾರೆ. ಇಂತಹ ಎಚ್ಚರ ಏಕೆ ಬೇಕೆಂದರೆ ಸಮುದ್ರದಾಳದಲ್ಲಿ ಅಯಸ್ಕಾಂತ ಶಕ್ತಿಯುಳ್ಳ ಬಂಡೆಗಳಿರುವ ಸಾಧ್ಯತೆ ಇದೆ: ಆ ಬಂಡೆಗಳು ಹಡಗಿನ ತಳದಲ್ಲಿರುವ ಕಬ್ಬಿಣದ ಮೊಳೆಗಳನ್ನು ಸೆಳೆಯಲು ಶಕ್ತವಾಗಿರುತ್ತವೆ. ಹಾಗಾದಾಗ ತಕ್ಷಣವಾಗಿ ಅಲ್ಲದಿದ್ದರೂ ಕ್ರಮೇಣ ಹಡಗಿನ ಹಲಗೆಗಳು ಸಡಿಲಗೊಂಡು ಅಪಾಯ ಸಂಭವಿಸಬಹುದು (ಆ. ೧೪, ಪು. ೨). ಮೊಹೆಂಜೊದಾರೊ ಕಾಲದ ನಾಣ್ಯವೊಂದರಲ್ಲಿ, ಅಂದರೆ ಸುಮಾರು ಕ್ರಿ.ಪೂ. ೩೦೦೦ ರ ವೇಳೆಗಾಗಲೆ, ಹಡಗಿನ ಮುದ್ರೆ ಇರುವುದನ್ನು ನೋಡಿದರೆ ಸಮುದ್ರಯಾನಕ್ಕಾಗಿ ಹಡಗುಗಳನ್ನು ರಚಿಸುವ ತಂತ್ರಜ್ಞಾನವು ಅಷ್ಟು ಹಿಂದಿನಿಂದ ಬೆಳೆದುಬಂದಿರುವುದು ಸ್ಪಷ್ಟವಾಗುತ್ತದೆ.

ಹರಪ್ಪ ಮತ್ತು ಮೊಹೆಂಜೊದಾರೊ ನಾಗರಿಕತೆಗಳ ಅವಶೇಷಗಳನ್ನು ಉತ್ಖನನ ಶಾಸ್ತ್ರಜ್ಞರು ಕಂಡುಹಿಡಿದ ಮೇಲೆ ಭಾರತವು ಪ್ರಜ್ವಲವಾಗಿ ವಿಶ್ವದ ರಂಗವನ್ನು ಪ್ರವೇಶಿಸಿತೆಂದು ಗಾರ್ಡನ್ ಚೈಲ್ಡ್ ಹೇಳಿದ್ದಾರೆ (ಆ.೨. ಪು. ೫೫). ೧೯೨೧ ಮತ್ತು ೨೨ ರಲ್ಲಿ ದಯಾರಾಮ್ ಸಾಹಿ ಹಾಗೂ ಆರ್.ಡಿ ಬ್ಯಾನರ್ಜಿ ಈ ಪ್ರದೇಶದಲ್ಲಿ ಹಲವಾರು ಪ್ರಾಚೀನ ವಸ್ತುಗಳನ್ನು ಸಂಗ್ರಹಿಸಿದನಂತರ ಕುತೂಹಲವು ಕೆರಳಿ ಅನೇಕ ಉತ್ಖನನ ಯೋಜನೆಗಳನ್ನು ಹಮ್ಮಿಕೊಳ್ಳಲಾಯಿತು. ೧೯೨೪ರಲ್ಲಿ ಇವೆಲ್ಲದರ ಬಗ್ಗೆ ಮಾರ್ಷಲ್ ಮಾಹಿತಿ ನೀಡಿ ಭಾರತದ ಇತಿಹಾಸವು ಇನ್ನೂ ಮೂರುಸಾವಿರ ವರ್ಷಗಳ ಹಿಂದಕ್ಕೆ (ಅಂದರೆ ಋಗ್ವೇದದ ಕಾಲಕ್ಕೂ ಮೂರು ಸಾವಿರ ವರ್ಷ ಹಿಂದಕ್ಕೆ) ಹೋಗುತ್ತದೆಯೆಂದು ಘೋಷಿಸಿದ. ಅದರ ಸಮಕಾಲೀನವಾಗಿದ್ದ ಈಜಿಪ್ಟ್ ಮತ್ತು ಬ್ಯಾಬಿಲೋನಿಯಾಗಳ ನಾಗರಿಕತೆಗಳಿಗೆ ತಂತ್ರಜ್ಞಾನದ ದೃಷ್ಟಿಯಿಂದಲೂ ಸಮಾನವಾಗಿದ್ದುದು ಹರಪ್ಪ ನಾಗರಿಕತೆಯೆಂದು ಚೈಲ್ಡ್ ಬರೆದರು. ಸಮಸ್ತವನ್ನೂ "ಋಗ್ವೇದದಷ್ಟು ಪ್ರಾಚೀನ" ಎಂದು ಹೇಳಿಕೊಳ್ಳುವ ಪ್ರವೃತ್ತಿಯ ಜಾಗದಲ್ಲಿ "ಎಲ್ಲವೂ ಹರಪ್ಪ ನಾಗರಿಕತೆಯಷ್ಟು ಪ್ರಾಚೀನ" ಎಂದು ಹೇಳಬೇಕಾದ ಪ್ರಸಂಗ ಒದಗಿ ಬಂತು. ನಗರೀಕರಣವನ್ನು ಕುರಿತಂತೆ ೧೯೨೫ರಲ್ಲಿ ಪ್ರಕಟವಾಗಿದ್ದ ಬಿ.ಬಿ.ದತ್ತ ಪುಸ್ತಕದಲ್ಲಿ ನಗರಗಳನ್ನು ಯೋಜಿಸುವ ಪ್ರಾಚೀನ ವಿಧಾನವೊಂದು ಋಗ್ವೇದದಲ್ಲಿ ಇದೆಯೆಂದು ಹೇಳಲಾದ ಕೆಲವು ಅಂಶಗಳನ್ನು ನಮೂದಿಸಲಾಗಿತ್ತು. ನಗರೀಕರಣವು ಋಗ್ವೇದದ ಪರಿಧಿಗೆ ಸೇರದಿರುವ ವಿಷಯವನ್ನು ಅವರು ಗಮನಿಸಹೋಗಲಿಲ್ಲ. ಅಗ್ನಿಚಿತಿಗಳನ್ನು ವಿವಿಧ ಸ್ವರೂಪಗಳಲ್ಲಿ ರಚಿಸಿಕೊಳ್ಳುತ್ತಿದ್ದ ವೈದಿಕ ಆರ್ಯರು ನಗರಗಳನ್ನೂ ನಿರ್ಮಿಸಿಕೊಳ್ಳುತ್ತಿದ್ದರೆಂದು ಅವರ ದಾಖಲೆರಹಿತ ವಾದವಾಗಿತ್ತು. ಆದರೆ ಹರಪ್ಪ ನಾಗರಿಕತೆಯಲ್ಲಿ ನಗರಗಳನ್ನು ಯೋಜಿಸುತ್ತಿದ್ದ ವಿಧಾನವು ಅದ್ಭುತವಾಗಿತ್ತೆಂಬುದು ಆ ಲೇಖಕರ ಗಮನಕ್ಕಿನ್ನೂ ಬಂದಿರಲಿಲ್ಲ. ಅಗ್ನಿಚಿತಿಗಳ ಕಲ್ಪನೆಯು ಬರುವುದಕ್ಕೆ ಸಾವಿರಾರು ವರ್ಷಗಳ ಮುಂಚೆಯೇ ಇಲ್ಲಿ ನಗರಗಳನ್ನು ಬಹಳ ಮುಂದುವರಿದ ರೀತಿಯಲ್ಲಿ ಯೋಜಿಸಲಾಗಿದ್ದಿತು.

ಈ ನಾಗರಿಕತೆಯ ಬಗ್ಗೆ ವಿವರಣೆ ನೀಡಿದ ಮಾರ್ಷಲ್ ಹೀಗೆ ಬರೆದ: "ಮೊಹಂಜೊದಾರೋನಲ್ಲಿ ಮೊದಲಬಾರಿಗೆ ಓಡಾಡುವಾಗ ಯಾರಾದರೂ ಒಂದು ವಿಚಿತ್ರವಾದ ಅನುಭವ ಪಡೆಯಬಹುದು. ಯಾವುದಾದರೂ ಆಧುನಿಕ ಲಂಕಾಷೈರ್‌ನಂತಹ ನಗರದ ಪತನದ ನಂತರ ಅದರ ಅವಶೇಷಗಳಿಂದ ಆವೃತವಾಗಿರುವಂತಹ ಭಾವ ಅದು. ಅಲಂಕಾರರಹಿತವಾದ ಕೆಂಪು ಇಟ್ಟಿಗೆಗಳ ರಾಶಿರಾಶಿಯನ್ನು ನೋಡಿದರೆ ಆಧುನಿಕ ಇಟ್ಟಿಗೆಗಳ ಪರಿಮಾಣವನ್ನೇ ಹೋಲುವ ಅವು ಇತ್ತೀಚಿನ ಕಾಲದ್ದಿರಬೇಕೆಂಬ ಭಾವನೆ ಸಹಜವಾಗಿ ಬರಬಹುದು." ನಗರಗಳನ್ನು ಅಚ್ಚುಕಟ್ಟಾಗಿ ಯೋಜಿಸುವ ಪದ್ಧತಿಯು ಹರಪ್ಪ ನಾಗರೀಕತೆ "ಯಲ್ಲಿ ಎಷ್ಟು ವ್ಯಾಪಕವಾಗಿದ್ದಿತೆಂಬುದನ್ನು ಎಸ್. ಪಿ. ಗುಪ್ತ ಮತ್ತು ಶಶಿ ಆಸ್ಥಾನ ಗುರುತಿಸಿದ್ದಾರೆ (ಆ. ೨ ಪು. ೫೮). ಮೊಹೆಂಜೊದಾರೊ, ಕಾಲಿಬಂಗನ್, ಲೋಥಾಲ್‌ಗಳಲ್ಲಿ ಸ್ಪಷ್ಟವಾಗಿ ಇದಕ್ಕೆ ಪ್ರಮಾಣಗಳು ದೊರೆಯುತ್ತವೆಂದು ಹೇಳಿ ಅನೇಕ ನಿದರ್ಶನಗಳನ್ನು ನೀಡಿದ್ದಾರೆ.

ರಸ್ತೆಗಳ ರಚನೆ, ಚರಂಡಿ ವ್ಯವಸ್ಥೆ, ರಸ್ತೆಗಳಲ್ಲಿ ಚಕ್ರದ ವಾಹನಗಳ ಸಂಚಾರಕ್ಕಾಗಿ ಅನುಕೂಲವಾಗುವಂತೆ ಏರ್ಪಾಟು, ನಗರಗಳನ್ನು ವಲಯಗಳಾಗಿ ವಿಂಗಡಿಸುವುದು, ಇವೆಲ್ಲಾ ನಗರಯೋಜನೆಯ ಸ್ವರೂಪವನ್ನು ತಿಳಿಸುತ್ತವೆ. ಆಹಾರದ

ಶೇಖರಣೆಗಾಗಿ ವ್ಯವಸ್ಥೆಗೊಳಿಸಲಾಗಿದ್ದ ಕಣಜಗಳು ಹಾಗೂ ವ್ಯಾಪಾರ ವಹಿವಾಟಿಗೆ ಅನುಕೂಲವಾಗುವಂತೆ ಬಂದರುಗಳನ್ನು ನಿರ್ಮಿಸಿದ್ದುದು ಸಹ ಇದನ್ನೇ ಸೂಚಿಸುತ್ತದೆ. ಸಮುದ್ರಯಾನವು ವೇದದಷ್ಟು ಪ್ರಾಚೀನವೆಂದು ತೋರಿಸಲು ಋಗ್ವೇದದ ಕೆಲವು ಮಂತ್ರಗಳನ್ನು ರಾಧಾ ಕುಮುದ್ ಮುಖರ್ಜಿ ೧೯೧೨ರಲ್ಲಿ ಪ್ರಕಟವಾದ ತಮ್ಮ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ವರುಣನಿಗೆ ಆಕಾಶದಲ್ಲಿ ಹಾರುವ ಹಕ್ಕಿಗಳ ಹಾಗೂ ಸಮುದ್ರದಲ್ಲಿ ಹೋಗುವ ನೌಕೆಗಳ ಹಾದಿ ತಿಳಿದಿದೆಯೆಂದು ಹೇಳುವ ಒಂದು ಮಂತ್ರ ಅವುಗಳಲ್ಲಿ ಸೇರಿದೆ (ಋ. ೧.೨೫೭: ವೇದಾ ಯೋ ವೀನಾಂ ಪದಮಂತರಿಕ್ಷೇಣ ಪತತಾಮ್ ವೇದ ನಾವಃ ಸಮುದ್ರಿಯಃ)

**ಡಾ. ಜಿ.ರಾಮಕೃಷ್ಣ**

## ೨.೧ ಗಿರಣಿ ವಿಸ್ತಾರ ನೋಡಮ್ಮ

**ಶಿಶುನಾಳ ಷರೀಫ**

ಗಿರಣಿ ವಿಸ್ತಾರ ನೋಡಮ್ಮ
ಶರಣಿ ಕೂಡಮ್ಮ
ಧರಣೀಶ ರಾಣಿ
ಕರುಣದಿ ರಾಜ್ಯಕ
ತರಿಸಿದ ಘನಚೋದ್ಯವೋ, ಚೀನಾದ ವಿದ್ಯವೋ

ಜಲ ಅಗ್ನಿ ವಾಯು ಒಂದಾಗಿ
ಕಲೆತು ಚೆಂದಾಗಿ
ಜಲ ಅಗ್ನಿ ವಾಯು ಒಂದಾಗಿ
ನೆಲದಿಂದ ಗಗನಕ್ಕೆ ಮುಟ್ಟಿದಂತೆಸೆವುದು
ಚೆಲುವ ಚನ್ನಿಗವಾದ ಕಂಭವೋ ಹೊಗಿಯ ಬಿಂಬವೋ

ಒಳಗೊಂದು ಬೇರೆ ಆಕಾರ
ತಿಳಕೋ ಚಮತ್ಕಾರ
ಒಳಗೊಂದು ಬೇರೆ ಆಕಾರ
ಒಂಬತ್ತು ದಳ ಚಕ್ರ ಸುಳಿವ ಸೂತ್ರಧಾರ
ಲಾಳಿ ಮೂರು ಕೊಳವಿಯೊಳು, ಎಳೆತುಂಬತದರೊಳು

ಅಲ್ಲಿ ಬರದಿಟ್ಟರಳಿ ಹಿಂಜಿ
ಅಲ್ಯಾದವು ಹಂಜಿ
ಅಲ್ಲಿ ಬರೆದಿಟ್ಟರಳಿ ಹಿಂಜಿ
ಗಾಲಿಯೆರಡರ ಮೇಲೆ ಮೂಲಬ್ರಹ್ಮದ ಶೀಲ
ನಾಡಿ ಸುಷುಮ್ನನು ಕೂಡಿ, ಆಯ್ತೋ ಕುಕ್ಕಡಿ

ಪರಮನೆಂಬುವ ಪಟ್ಟೇವ ಅಲ್ಲೆ
ಮಾರಾಕಿಟ್ಟಾವ
ಪರಮನೆಂಬುವ ಪಟ್ಟೇವ
ಧರೆಯೊಳು ಶಿಶುನಾಳ ದೇವಾಂಗ ಋಷಿಯಿಂದ
ನೇಸಿ ಹಚ್ಚಡ ಹೊಚ್ಚಿತೋ, ಲೋಕ ಮೆಚ್ಚಿತೋ

**ಆಕರ : ಶಿಶುನಾಳ ಶರೀಫ್ ಸಾಹೇಬರ ಗೀತೆಗಳು – ಸಂ. ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ**

# ೨.೨ ಹೆಡ್ ಹಂಟರ್

**–ವಸುಧೇಂದ್ರ**

ಆಫೀಸಿಗೆ ಬಂದ ತಕ್ಷಣ ಒಮ್ಮೆ ನನ್ನನ್ನು ಭೇಟಿ ಮಾಡು–ಸೋಮವಾರ ಬೆಳಿಗ್ಗೆ ಆಫೀಸಿಗೆ ಹೋಗಿ ಕಂಪ್ಯೂಟರ್ ಆನ್ ಮಾಡಿದ ತಕ್ಷಣ ಈ ರೀತಿ, ವಿಷಯವೇನೆಂದು ಕೂಡಾ ತಿಳಿಸದ, ಈ–ಮೇಲ್ ಯಾರಿಗಾದರೂ ಕಿರಿಕಿರಿ ಮಾಡುತ್ತೆ. ಇಂತಹ ಸಂದೇಶ ಕಳುಹಿಸಿದ ಪುಣ್ಯಾತ್ಮ ಬೇರೆ ಯಾರೂ ಅಲ್ಲ, ನನ್ನ ಮುಂದೆ ಹತ್ತು ಅಡಿ ದೂರದಲ್ಲಿರುವ ಪಾರದರ್ಶಕ ರೂಮಿನಲ್ಲಿ ಕಣ್ಣಿಗೆ ರಾಚುವಂತೆ ಕೂತಿರುವ ಸಂದೀಪ್! ಅರ್ಥಾತ್ ನನ್ನಬಾಸ್. ಯಾರನ್ನೂ ಬಾಸ್, ಸಾರ್ ಅಂತೆಲ್ಲಾ ನಾವು ಕರೆಯುವಂತಿಲ್ಲ. ಅದು ನನ್ನ ಕಂಪನಿಯ ನಿಯಮಗಳಿಗೆ ವಿರುದ್ಧವಾದದ್ದು. ಅಲ್ಲಿ ಎಲ್ಲರೂ ಒಂದೇ! ಆದ್ದರಿಂದ ನನ್ನ ಬಾಸನ್ನು ನಾನು ಸಂದೀಪ್ ಅಂತಲೇ ಕರೆಯೋದು. “ನೀವೆಲ್ಲಾ ನನ್ನನ್ನು ಸ್ಯಾಂಡಿ ಅಂತ ಕರೆದರೆ ನಂಗೆ ಇನ್ನೂ ಸಂತೋಷವಾಗುತ್ತೆ” ಅಂತ ಸಾಕಷ್ಟು ಬಾರಿ ಅಂದಿದ್ದಾನೆ.

ಏನೋ ಗಂಭೀರವಾದದ್ದೇ ಇರಬೇಕೆಂದುಕೊಂಡು ಎದ್ದು ಅವನ ರೂಮಿನೊಳಗೆ ಹೋಗಿ “ಗುಡ್ ಮಾರ್ನಿಂಗ್ ಸಂದೀಪ್” ಅಂದೆ. ಒಂದು ನಿಮಿಷ ಕಂಪ್ಯೂಟರನ್ನೇ ಗಹನವಾಗಿ ದಿಟ್ಟಿಸಿ, ಆನಂತರ ನನ್ನ ಕಡೆ ತಿರುಗಿ “ನೀನು ತಪ್ಪು ತಿಳಕೊಳ್ಳಲ್ಲ ಅಂದರೆ ಇನ್ನು ಹದಿನೈದು ನಿಮಿಷ ಬಿಟ್ಟು ಬರ್ತೀಯ? ನಾನು ಬಿಡುವಾಗಿರ್ತಿನಿ. ಯಾವುದೋ ಒಂದೆರಡು ತುಂಬಾ ಇಂಪಾರ್ಟೆಂಟ್ ಈ–ಮೇಲ್ ಬಂದಿವೆ. ಓದ್ಲೇಬೇಕು” ಅಂತಂದ. ಮೈ ಉರಿದುಹೋಯ್ತು. ಬೋಳಿಮಗ, ಅಧಿಕಾರ ಚಲಾಯಿಸ್ಲಿಕ್ಕೆ ಕಾದು ಕೂತಿರ್ತಾನೆ. ನಿನ್ನ ಮಾತಾಡಿಸೋದಕ್ಕಿಂತಲೂ ನನಗೆ ಇನ್ನೂ ಹೆಚ್ಚು ಮಹತ್ವದ ಕೆಲಸಗಳಿವೆ ಅಂತ ಹೇಳೋ ಉದ್ದೇಶ. ಇರಲಿ, ನಾನೇನೂ ಕಡಿಮೆಯಲ್ಲ. “ಪರವಾಗಿಲ್ಲ ಬಿಡು ಸಂದೀಪ್. ನೀನು ಆಫೀಸಿಗೆ ಬಂದ ತಕ್ಷಣ ಮೀಟ್ ಮಾಡೋಕೆ ಹೇಳಿದ ಅಂತ ಬಂದೆ. ಐ ಥಿಂಕ್ ಯು ಹ್ಯಾವ್ ನಾಟ್ ಪ್ಲಾನ್ಡ್ ಪ್ರಾಪರ್ಲಿ” ಅಂತಂದು ಹೊರಬಂದೆ. ನನ್ನ ಮಾತಿಗೆ ಅವನ ಮುಖ ಕೆಂಪಾಗಿರಬೇಕು ಅನ್ನಿಸಿ ನಗು ಬಂತು.

ಮತ್ತೆ ಸರಿಯಾಗಿ ಹತ್ತು ನಿಮಿಷದ ನಂತರ ರಿಸೆಪ್ಷನಿಸ್ಟ್ ನೀತುಳಿಂದ ಫೋನ್ ಬಂತು. ಎಲ್ಲೋ ಕೊಳಲು ಬಾರಿಸಿದಂತೆ ಅವಳ ಧ್ವನಿ. “ಹಾಯ್ ರಾಜು, ಗುಡ್‌ಮಾರ್ನಿಂಗ್” ಅಂತಂದಳು. “ಹಲೋ ಸ್ವೀಟಿ” ಅಂತ ಅಷ್ಟೇ ಪ್ರೀತಿಯಿಂದ ಅಂದೆ. “ಸಂದೀಪ್ ನಿನ್ನ ಸಲುವಾಗಿ ಕಾಯ್ತಾ ಇದಾನೆ. ಹೋಗ್ತೀಯಲ್ಲಾ?” ಅಂತಂದಳು. ಸಿಟ್ಟುನೆತ್ತಿಗೇರಿತು. ಈ ಬಾರಿ ನೇರವಾಗಿ ನನಗೆ ಹೇಳದೆ ಅವಳ ಮೂಲಕ ಹೇಳಿಸಿದ್ದಾನೆ. “ಸಾರಿ ನೀತು. ಯಾವುದೋ ಮುಖ್ಯ ಕೆಲಸದ ಮಧ್ಯದಲ್ಲಿದೀನಿ. ಇನ್ನ ಹದಿನೈದು ನಿಮಿಷದ ನಂತರ ಕಾಣ್ತೇನಿ ಅಂತ ಹೇಳು” ಅಂತಂದು ಟೆಲಿಫೋನು ಕೆಳಕ್ಕಿಟ್ಟೆ. ಮುಂದಿನ ಹದಿನೈದು ನಿಮಿಷಗಳ ಕಾಲ ಅಮೇರಿಕದಲ್ಲಿರುವ ನನ್ನ ಗೆಳೆಯನ್ಯಾರೋ ಕಳುಹಿಸಿದ ಒಂದೆಂಟು ಸರ್ದಾರ್ಜಿ ಜೋಕ್ಸ್ ಹಾಗೂ ಬೆತ್ತಲೆ ಹುಡುಗಿಯ ಒಂದು ಫೋಟೋವನ್ನು ನೋಡುತ್ತಿದ್ದೆ.

ಮತ್ತೆ ಅವನ ರೂಮಿನೊಳಕ್ಕೆ ಹೋದಾಗ “ಕಮಾನ್ ರಾಜು, ಹೌ ವಾಜ್ ದ ವೀಕ್ ಎಂಡ್?” ಅಂತ ನಗುತ್ತಾ ಮಾತನಾಡಿಸಿದ. ಬರೀ ನಾಟಕ! ಹತ್ತಾರು ಮ್ಯಾನೇಜ್‌ಮೆಂಟ್ ಟ್ರೈನಿಂಗ್‌ಗಳಿಗೆ ಹೋಗಿ ಬಂದಿದ್ದಾನೆ. “ನಿಮ್ಮ ಕೈಕೆಳಗೆ ಕೆಲಸ ಮಾಡುವವರನ್ನು ಖುಷಿಯಾಗಿಡುವಂತೆ ನೀವು ಇಂತಹ ಮಾತುಗಳನ್ನಾಡಿದರೆ, ಅವರು ಇನ್ನೂ ಚೆನ್ನಾಗಿ ಕೆಲಸ ಮಾಡುತ್ತಾರೆ ಮತ್ತು ಆದರಿಂದ ಪ್ರೊಡಕ್ಟಿವಿಟಿ ಹೆಚ್ಚಾಗುತ್ತೆ” ಅಂತ ಸರಿಯಾಗಿ ತಲೆ ತುಂಬಿರುತ್ತಾರೆ. ಅದನ್ನಿವನು ಶಿರಸಾವಹಿಸಿ ಪಾಲಿಸುತ್ತಾನೆ.

“ಮಗಳು ಸ್ವಿಮ್ಮಿಂಗ್ ಮಾಡಬೇಕು ಅಂತ ಆಸೆ ಪಡ್ತಿದ್ಲು. ಅದಕ್ಕೇ ರೆಸಾರ್ಟ್‌ಗೆ ಹೋಗಿದ್ವಿ”

“ಓ ದಟ್ ಈಸ್ ವಂಡರ್‌ಫುಲ್. ನಿನ್ನ ಮಗಳ ಹೆಸರು ರಚನಾ ಅಲ್ವಾ? ತುಂಬಾ ಚೂಟಿ ಅವಳು. ನಾನು ಕಳೆದ ವರ್ಷದ ಇಯರ್ ಎಂಡ್ ಪಾರ್ಟಿಯಲ್ಲಿಯೇ ಗುರುತಿಸಿದ್ದೆ” ಅಂತಂದ. ಆಫೀಸಿನ ಎಲ್ಲರ ಹೆಂಡತಿ, ಮಕ್ಕಳ ಹೆಸರನ್ನು ಬಾಯಿಪಾಠ ಮಾಡಿಕೊಂಡಿರುತ್ತಾನೆ.

ನಾಟಕದ ಮೊದಲ ಅಂಕ ಮುಗಿಯಿತು ಅಂತ ಕಾಣುತ್ತೆ. ಈಗ ಎರಡನೇ ಅಂಕ ಶುರು. ಒಂದು ಪೇಪರನ್ನು ನನ್ನ ಮುಂದೆ ತಳ್ಳಿ “ಶಶಿ ಅಪ್ರೈಸಲ್ ಇದು. ನೀನೇ ಮಾಡಿದ್ದಲ್ವಾ?” ಅಂತಂದ. ಮೆಲ್ಲಗೆ ಕೈಗೆತ್ತಿಕೊಂಡೆ. ಈಗ ಸಂದೀಪ

ನನ್ನೊಡನೆ ಮಾತನಾಡಬೇಕಾದ್ದೇನೆಂದು ಸಂಪೂರ್ಣವಾಗಿ ಅರ್ಥವಾಯಿತು. ಶಶಿಯನ್ನು ಅಂದರೆ ಶಶಿಕಲಾಳನ್ನು ಆಫೀಸಿನಿಂದ ಓಡಿಸಬೇಕು! ವಿ ಹ್ಯಾವ್ ಟು ಜಸ್ಟ್ ಫೈರ್ ಹರ್!!

"ಹತ್ತಕ್ಕೆ ಬರೀ ನಾಲ್ಕು ಸ್ಕೋರ್ ಬಂದಿದೆ ಅವಳಿಗೆ. ನಮ್ಮ ಕೆಲಸದ ಆವರೇಜ್ ಸ್ಟಾಂಡರ್ಡ್‌ಗಿಂತ ಕಡಿಮೆ ಆಯ್ತಲ್ವಾ?" ಅಂತ ಕೂಲಾಗಿ ಅಂದ. ನನ್ನ ಬಾಯಿಂದಲೇ 'ಹೌದು' ಎನ್ನಿಸದೆ ಬಿಡುವುದಿಲ್ಲ. ತಲೆಯಲ್ಲಾಡಿಸಿದೆ.

"ಈ ದಿನವೇ ಎಲ್ಲಾ ಸೆಟಲ್ ಮಾಡಿ ಕಳುಹಿಸಿಬಿಡೋಣ. ನೀನೇ ಎಲ್ಲಾ ಹ್ಯಾಂಡಲ್ ಮಾಡ್ತಿಯಲ್ವಾ?" ಅಂತ ನನ್ನ ಕಣ್ಣಲ್ಲಿ ಕಣ್ಣಿಟ್ಟು ನೋಡಿದ. ಶಶಿಯ ಮುಖ ನೆನಪಿಗೆ ಬಂದು ಅವಳಿಗೆ ಈ ದಿನವೇ ನಿನ್ನನ್ನು ಈ ಕಂಪನಿಯಿಂದ ಓರಿಸುತ್ತಿದ್ದೇನೆ ಅಂತ ಹೇಗೆ ಹೇಳೋದು ಅಂತ ಹೊಟ್ಟೆಯಲ್ಲಿ ಸಂಕಟವಾಯ್ತು. "ನನ್ನ ಕೈಯಲ್ಲಿ ಇದು ಸಾಧ್ಯವೇ ಇಲ್ಲ ಸಂದೀಪ್" ಅಂತ ಹೇಳಿಬಿಡೋಣ ಅನ್ನಿಸ್ತು. ಊಹೂಂ! ಅದು ಹೇಗೆ ಹೇಳಲು ಸಾಧ್ಯ? ನಾಳೆ ಬೆಳಿಗ್ಗೆ ನನ್ನ ಅಪ್ರೈಸಲ್ ಮಾಡೋನು ಈ ಸಂದೀಪ್! "ನೀನು ಹಾರ್ಡ್ ಡಿಸಿಷನ್ಸ್ ತೊಗೊಳ್ಳೋಕೆ ಹಿಂಜರಿತೀಯ" ಅಂತ ನೇರವಾಗಿ ನನ್ನನ್ನೇ ಅಡ್ಡಕತ್ತರಿಯಲ್ಲಿ ಸಿಗಿಸುವ ಪುಣ್ಯಾತ್ಮ. "ಓಕೆ ಸಂದೀಪ್. ನಾನು ಶಶಿ ಜೊತೆ ಈವತ್ತೇ ಮಾತಾಡ್ತೀನಿ" ಅಂದೆ. ಅವನ ಮುಖ ಇಷ್ಟಗಲ ಅರಳಿತು, "ಯು ನೋ ರಾಜು, ಐ ಬಿಲೀವ್ ಎ ಲಾಟ್ ಇನ್ ಯುವರ್ ಮ್ಯಾನೇಜ್‌ಮೆಂಟ್ ಕ್ಯಾಪಬಿಲಿಟೀಸ್. ನಿಂಗೆ ಏನಾದ್ರೂ ಪ್ರಾಬ್ಲಂ ಅನಿಸಿದ್ರೆ ನಾನು ನಿನ್ನ ಸಹಾಯಕ್ಕೆ ಇದ್ದೇ ಇರ್ತಿನಿ" ಅಂತಂದ. ನಿನ್ನ ಕೈಲೆ ಆಗದ ಕೆಲಸವನ್ನು ನಾನು ಮಾಡಬಲ್ಲೆ ಎಂಬುದನ್ನು ತಣ್ಣಗೆ ಹೇಳಿಕೊಂಡ.

'ಸೋ, ಹೌ ಆರ್ ದ ಅದರ್ ಥಿಂಗ್ಸ್" ಅಂತಂದ. "ನಾನಿನ್ನು ಹೊರಹೋಗಬಹುದು" ಅಂತ ಅರ್ಥ ಮಾಡಿಕೊಂಡು ಮೇಲಕ್ಕೆದ್ದೆ. ಬಾಗಿಲ ಬಳಿ ಬಂದಾಗ "ರಾಜು, ಒಂದ್ನಿಮಿಷ" ಅಂತ ತಡೆದ. "ನೋಡು, ನೀನು ಈ ಆಫೀಸಿನಲ್ಲಿ ದೊಡ್ಡ ಹುದ್ದೆಯಲ್ಲಿರೋನು. ನೀನೇ ಈ ರೀತಿ ಸರ್ದಾರ್ಜಿ ಜೋಕ್ಸ್ ಮತ್ತು ಬೆತ್ತಲೆ ಹುಡುಗಿಯರ ಚಿತ್ರ ನೋಡ್ತಾ ಕೂತ್ರೆ ಹೇಗೆ ಹೇಳು?" ಅಂತಂದು ಕೊಂಕು ನಗೆ ನಕ್ಕ. ರಾಸ್ಕಲ್! ನನ್ನ ಕಂಪ್ಯೂಟರ್ ಮೇಲೆ ಹತೋಟಿ ಇಟ್ಟುಕೊಂಡಿದ್ದಾನೆ. ನಾನು ಮಾಡೋ ಪ್ರತಿಯೊಂದು ಕೆಲಸವೂ ಇವನಿಗೆ ಗೊತ್ತಾಗುತ್ತೆ. "ಬೋಳಿಮಗನೆ, ನಂಗೆ ಏನು ಬೇಕೋ ಅದು ಮಾಡ್ಕೊಳ್ತೀನೋ... ನನ್ನ ಪರ್ಸನಲ್ ವಿಷಯಕ್ಕೆ ತಲೆ ಹಾಕಬೇಡ" ಅಂತ ಚೀರಬೇಕೆನ್ನಿಸಿತು. ಆದರೆ ಏನೊಂದೂ ಮಾತನಾಡದೆ ಹೊರಬಂದೆ.

ಶಶಿಕಲಾ ನನ್ನ ಬಲಕ್ಕೆ ಮೂರು ಕ್ಯೂಬ್‌ಗಳ ಆಚೆ ಕೂರುತ್ತಾಳೆ. ಅವಳೆಡೆ ಒಮ್ಮೆ ನೋಡಿದೆ. ದೀಪಕ್ ಜೊತೆ ಏನೋ ಮಾತಾಡಿ ನಗುತ್ತಿದ್ದಳು. ಇನ್ನೊಂದು ಹತ್ತು ನಿಮಿಷ, ಅಷ್ಟೇ! ಆಮೇಲೆ ಡಿಪ್ರೆಸ್ ಆಗ್ತಾಳೇನೋ? ಮೃದು ಸ್ವಭಾವದ ಹುಡುಗಿ!

ಎಲ್ಲಾ ಶುರು ಆಗಿದ್ದು ನಾಲ್ಕು ತಿಂಗಳ ಕೆಳಗೆ. ಅದೇನಾಯ್ತೋ ಏನೋ, ಇದ್ದಕ್ಕಿದ್ದಂತೆ ಒಂದಿಬ್ಬರು ಪ್ರಾಜೆಕ್ಟ್ ಲೀಡರ್‌ಗಳು ತಮ್ಮ ರಾಜೀನಾಮೆ ಕೊಟ್ಟು ಎರಡೇ ದಿನದಲ್ಲಿ ಟಾಟಾ ಹೇಳಿಬಿಟ್ಟು ಅಮೆರಿಕಾಕ್ಕೆ ಹಾರಿಬಿಟ್ಟರು. ಒಬ್ಬನಂತೂ ಇದ್ದಕ್ಕಿದ್ದಂತೆ ಒಂದು ಸೋಮವಾರ ಬರುವುದನ್ನು ನಿಲ್ಲಿಸಿ, ಎರಡು ದಿನದ ನಂತರ ನ್ಯೂಯಾರ್ಕ್‌ನಿಂದ ರಾಜೀನಾಮೆ ಪತ್ರ ಕಳುಹಿಸಿ, "ನಿಮ್ಮ ಕಂಪನಿಗೆ ನಾನು ಯಾವಾಗಲೂ ಕೃತಜ್ಞನಾಗಿರುತ್ತೇನೆ" ಅಂತ ಹೇಳಿಕೊಂಡಿದ್ದ. ಬಿಡಿ, ಇದೆಲ್ಲಾ ಸಾಫ್ಟ್‌ವೇರ್ ಕಂಪನಿಗಳಲ್ಲಿ ಮಾಮೂಲೇ!

ಆದರೆ...

ಎಲ್ಲಾ ಶನಿಗಳೂ ಒಂದೇ ಸಲಕ್ಕೆ ವಕ್ಕರಿಸುವಂತೆ ಅದೇ ಸಮಯಕ್ಕೆ ಸರಿಯಾಗಿ ಒಂದು ಹೊಸ ಪ್ರಾಜಕ್ಟ್ ನಮ್ಮ ಕಂಪನಿಗೆ ಸಿಕ್ಕಿಬಿಟ್ಟಿತು. ನೋಡಿಕೊಳ್ಳುವವರು ಯಾರು? ಅದೇ ತಾನೆ ನಾನು ಇಂಗ್ಲೆಂಡಿನಿಂದ ಹಿಂತಿರುಗಿದ್ದೆ. ಕೆಲಸವೇನೂ ಇಲ್ಲದೆ ಖಾಲಿಯಾಗಿದ್ದೆ. ಆದರೆ ಹೊಸದಾಗಿ ಬಂದ ಪ್ರಾಜೆಕ್ಟ್ ಮೇನ್‌ಫ್ರೇಂ ತಂತ್ರಜ್ಞಾನಕ್ಕೆ ಸಂಬಂಧಿಸಿದ್ದು. ನಾನೋ ಬರೀ ಮೈಕ್ರೋಸಾಫ್ಟ್ ತಂತ್ರಜ್ಞಾನದಲ್ಲಿ ಕೆಲಸ ಮಾಡಿದವನು. ನನಗೆ ಸಂಬಂಧವಿಲ್ಲದ ಕ್ಷೇತ್ರ. ಆದರೂ ಈ ದರಿದ್ರ ಸಂದೀಪ್ ಬಿಡಲಿಲ್ಲ. "ರಾಜು, ಇದು ತುರ್ತು ಪರಿಸ್ಥಿತಿ. ನೀನು ಈ ಪ್ರಾಜೆಕ್ಟ್ ನೋಡಿಕೊಳ್ಳಲೇ ಬೇಕು" ಅಂತ ನಿರ್ಧಾರದ ಧ್ವನಿಯಲ್ಲಿ ಹೇಳಿದ. ನಾನು ಒಪ್ಪಿಕೊಳ್ಳಲಿಲ್ಲ. "ಅದು ಹೇಗೆ ಸಾಧ್ಯ ಸಂದೀಪ್? ನಾಳೆ ಬೆಳಿಗ್ಗೆ ಪಾಜಕ್ಟ್ ಫ್ಲಾಪ್ ಆದರೆ ಏನು ಮಾಡ್ತೀಯ?" ಅಂತ ವಿರೋಧಿಸಿದೆ. ಸಂದೀಪ್ ಸಾಮಾನ್ಯ ವ್ಯಕ್ತಿಯಲ್ಲ. "ನೋಡು, ನೀನು ಬರೀ ಪ್ರಾಜೆಕ್ಟ್ ಮ್ಯಾನೇಜರ್ ಆಗಿ ಕೆಲಸ ಮಾಡು. ಟೆಕ್ನಿಕಲ್ ಲೀಡರ್ ಬೇರೆ ಯಾರಾದರನ್ನ ನೇಮಕ ಮಾಡೋಣ. ಬರೀ ಟೀಮ್‌ನ ಹ್ಯಾಂಡಲ್

ಮಾಡೋದಷ್ಟೇ ನಿನ್ನ ಕೆಲಸ. ಆ ಸ್ಕಿಲ್ಸ್ ನಿಂಗೆ ತುಂಬಾ ಚೆನ್ನಾಗಿ ಇದೆ. ಉಳಿದದ್ದನ್ನೆಲ್ಲ ಟೆಕ್ನಿಕಲ್ ಲೀಡರ್ ನೋಡ್ಕೊಳ್ತಾನೆ" ಅಂತ ತಲೆ ತಿಕ್ಕಿದ. ಅವನಿರೋದೇ ಅಂತಹ ಕೆಲಸಕ್ಕೆ! ಇನ್‌ಫ್ಯಾಕ್ಸ್ ಇದು ನಿನಗೆ ತುಂಬಾ ಛಾಲೆಂಜ್ ಕೆಲಸ. ನಿನ್ನದಲ್ಲದ ಕ್ಷೇತ್ರದಲ್ಲಿಯೂ ನೀನು ಯಶಸ್ವಿ ಅಂತ ನಿರೂಪಿಸಿಕೊಳ್ಳೋಕೆ ಒಳ್ಳೆ ಅವಕಾಶ ಅಂತ ಆಸೆ ತೋರಿಸಿದ. ನಾನು ಬಲೆಗೆ ಬಿದ್ದೆ.

ನಾನು, ಶಶಿಕಲಾ ಮತ್ತು ಉಳಿದ ಐದು ಹುಡುಗರೊಡನೆ ಪ್ರಾಜೆಕ್ಟ್ ಶುರು ಮಾಡಿದೆ. ಎಲ್ಲರೂ ಒಂದು ಅಥವಾ ಎರಡು ವರ್ಷ ಮಾತ್ರ ಅನುಭವವಿರುವವರು. ಇನ್ನೂ ಹುಡುಗುಬುದ್ಧಿ ಹೋಗಿಲ್ಲದವರು. ಮೊದಲನೆಯ ದಿನವೇ ಎಲ್ಲರನ್ನೂ ಮೀಟಿಂಗ್‌ಗೆ ಕರೆದು ನೇರವಾಗಿ ಹೇಳಿದ್ದೆ. "ನೋಡಿ, ಬೇರೆ ಎಲ್ಲಾ ಪ್ರಾಜೆಕ್ಟ್ ಮ್ಯಾನೇಜರ್‌ಗಳು ಕಂಪನಿ ಬಿಟ್ಟು ಹೋಗಿರುವುದರಿಂದ ನಾನೇ ಈ ಪ್ರಾಜೆಕ್ಟ್ ನಿರ್ವಹಿಸುವ ಸಂದರ್ಭ ಬಂದಿದೆ. ನಿಮಗೆಲ್ಲಾ ಗೊತ್ತಿರುವ ಹಾಗೆ ನಾನು ಕೆಲಸ ಮಾಡಿರೋದು ಬರೀ ಮೈಕ್ರೋಸಾಫ್ಟ್ ತಂತ್ರಜ್ಞಾನದಲ್ಲಿ ಮಾತ್ರ. ಈ ಮೇನ್‌ಫ್ರೇಂ ಕೆಲಸದ ತಲೆಬುಡ ನನಗೆ ಗೊತ್ತಿಲ್ಲ. ನನ್ನಿಂದ ಟೆಕ್ನಿಕಲ್ ಆಗಿ ನೀವು ಯಾವುದೇ ಸಹಾಯವನ್ನು ನಿರೀಕ್ಷಿಸುವಂತಿಲ್ಲ. ಆದರೂ ನಾನು ನಿಮ್ಮೊಡನಿರುತ್ತೇನೆ. ನಿಮಗೆ ಮಾನಸಿಕ ಧೈರ್ಯವನ್ನು ಕೊಡುತ್ತೇನೆ. ಸದ್ಯದಲ್ಲಿಯೇ ನಾವು ಟೆಕ್ನಿಕಲ್ ಲೀಡರ್ ಒಬ್ಬನನ್ನು ನೇಮಕಾತಿ ಮಾಡಿಕೋಳ್ತೇವೆ. ಅನಂತರ ಹೆಚ್ಚಿನ ಸಮಸ್ಯೆಯೇನೂ ಇರುವುದಿಲ್ಲ. ಎವರಿಥಿಂಗ್ ವಿಲ್ ಬಿ ಸ್ಮೂತ್" ಅಂತ ಮಾತಾಡಿದ್ದೆ. ಎಲ್ಲರೂ ಒಪ್ಪಿಕೊಂಡರು ಅಥವಾ ಒಪ್ಪಿಸಿದ್ದೆ.

ಹೊಸದಾಗಿ ಬರುವ ಟೆಕ್ನಿಕಲ್ ಲೀಡರ್‌ನ ಮೇಲೆ ನಮ್ಮ ಪ್ರಾಜೆಕ್‌ನ ಯಶಸ್ಸು ಅವಲಂಬಿಸಿತ್ತು. ಆದರೆ ಅಷ್ಟು ಸುಲಭವಾಗಿ ಹೊಸಬನೊಬ್ಬ ಸಿಗುತ್ತಾನೆಯೆ? ಸಂದರ್ಶನ ಮಾಡಿ ಮಾಡಿ ಸುಸ್ತಾಯ್ತು. ಈ ತಂತ್ರಜ್ಞಾನ ಸ್ವಲ್ಪ ಹಳೆಯದಾದ್ದರಿಂದ ಈಗ ಯಾರೂ ಸಿಗುತ್ತಿರಲಿಲ್ಲ. ಸಿಕ್ಕರೂ ಆಕಾಶದಷ್ಟು ಆಸೆ! ಎಂಟು ಲಕ್ಷ ಇಲ್ಲ ಹತ್ತು ಲಕ್ಷಕ್ಕೆ ಕಡಿಮೆ ಇಲ್ಲದಂತೆ ಡಿಮ್ಯಾಂಡ್ ಮಾಡುತ್ತಿದ್ದರು. ಹಾಳಾಗಿ ಹೋಗಲಿ ಅಂತ ಒಪ್ಪಿಕೊಂಡರೂ ಸೇರದೆ ಬೇರೆ ಯಾವುದೋ ಕಂಪನಿ ಅದಕ್ಕಿಂತಲೂ ಹೆಚ್ಚಿಗೆ ಹಣ ನೀಡುತ್ತಿದೆಯೆಂದು ಹೋಗಿಬಿಡುತ್ತಿದ್ದರು. ಏನೂ ಇಲ್ಲದಿದ್ದರೂ ಅಮೆರಿಕಾವಂತೂ ಇದ್ದೇ ಇದೆಯಲ್ಲ? ನಮ್ಮ ಹತ್ತು ಪಟ್ಟು ಹಣ ನೀಡಿ ತನ್ನೊಡಲಿಗೆ ಹಾಕಿಕೊಳ್ಳುವುದಕ್ಕೆ!

ನಮ್ಮ ಸಾಫ್ಟ್‌ವೇರ್ ಪ್ರಪಂಚವೇ ಅಂತಹದು. ದಿನಕ್ಕೊಂದು ಹೊಸ ತಂತ್ರಜ್ಞಾನ ಹುಟ್ಟಿಕೊಳ್ಳುತ್ತವೆ. ನಿನ್ನೆ ಇದ್ದಿದ್ದು ಇಂದಿಲ್ಲ. ಇಂದಿದ್ದದ್ದು ನಾಳೆ ಇಲ್ಲ! ಶಾಲೆ, ಕಾಲೇಜುಗಳಲ್ಲಿ ಓದಿದ್ದಕ್ಕಿಂತಲೂ ಹೆಚ್ಚಾಗಿ ಇಲ್ಲಿ ಓದಬೇಕು. ಏನಾದರೂ ಮೈಗಳ್ಳತನ ಮಾಡಿ ಒಂದು ವರ್ಷ ಸುಮ್ಮನಿದ್ದು ಬಿಟ್ಟೆವೋ, ಅಲ್ಲಿಗೆ ರಮಾರಮಣ ಗೋವಿಂದ! ಯಾರೂ ಮೂಸಿ ನೋಡದವರಂತಾಗಿಬಿಡುತ್ತೇವೆ. ಅದೇ ತಾನೆ ಈ ರಂಗಕ್ಕೆ ಕಾಲಿಟ್ಟವನಿಂದ ಹಿಡಿದು, ಹತ್ತು ವರ್ಷ ಅನುಭವವಿರುವವನವರೆಗೆ ದಿನನಿತ್ಯ ಓದುವ ವ್ಯಾಯಾಮ ಮಾಡಲೇಬೇಕು.

ಹೊಸ ಟೆಕ್ನಿಕಲ್ ಲೀಡರ್ ಈವತ್ತು ಬರ್ತಾನೆ, ನಾಳೆ ಬರ್ತಾನೆ ಅಂತ ಎರಡು ತಿಂಗಳು ಕಳೆದು ಹೋಯ್ತು. ಹುಡುಗರಿಗೆ ಪ್ರಾಜೆಕ್ಟ್ ಮಧ್ಯದಲ್ಲಿ ಬಂದ ಸಮಸ್ಯೆಗಳನ್ನು ಬಗೆಹರಿಸುವವರಾರು? ನನಗಂತೂ ಅದರ ಎ.ಬಿ.ಸಿ.ಡಿ. ಗೊತ್ತಿಲ್ಲ. ಬರೀ ಮೇಲೆ ಮೇಲೆ ಮಾತಾಡಿಬಿಟ್ಟೆ. ಸಂದೀಪ್‌ಗೆ ಪ್ರತಿವಾರ ಕೊಡುವ ರಿಪೋರ್ಟ್‌ನಲ್ಲಿ ತಪ್ಪದಂತೆ ಈ ಸಮಸ್ಯೆಯನ್ನು ಕಣ್ಣಿಗೆ ರಾಚುವಂತೆ ದಪ್ಪಕ್ಷರಗಳಲ್ಲಿ ಮುದ್ರಿಸಿದೆ. ಆದರೆ ಕಂಪನಿಯ ದುರದೃಷ್ಟವೆಂದೇ ಹೇಳಬೇಕು. ನಮಗೊಬ್ಬ ಟೆಕ್ನಿಕಲ್ ಲೀಡರ್ ಸಿಗಲಿಲ್ಲ. ಕೆಲಸ ಯೋಜನೆಯ ಪ್ರಕಾರ ನಡೆಯದಾದಾಗ ಹುಡುಗರ ಮೇಲೆ ಒತ್ತಡ ಹೇರಲಾರಂಭಿಸಿದೆ. ಹಗಲು-ರಾತ್ರಿ, ವಾರಾಂತ್ಯಗಳನ್ನೂ ಬಿಡದೆ ಅವರಿಂದ ಕೆಲಸ ಮಾಡಿಸತೊಡಗಿದೆ. ಆದರೆ ಒಂದು ಚಿಕ್ಕ ಸಮಸ್ಯೆಯ ಪರಿಹಾರಕ್ಕೂ ದಿನಗಟ್ಟಲೆ ಸಮಯ ತೆಗೆದುಕೊಳ್ಳತೊಡಗಿತು. ನಿಜ ಹೇಳಬೇಕೆಂದರೆ, ಸಾಫ್ಟ್‌ವೇರ್‌ನಲ್ಲಿ ಅನುಭವಕ್ಕೆ ಇರುವ ಮಹತ್ವ ಬೇರಾವ ರಂಗದಲ್ಲಿಯೂ ಇರಲಿಕ್ಕಿಲ್ಲ. ತಿಂಗಳುಗಟ್ಟಲೆ ನಮ್ಮನ್ನು ಕಾಡಿದ ಸಮಸ್ಯೆಗೆ ಅನುಭವಿಯೊಬ್ಬನಿಂದ ಕ್ಷಣದಲ್ಲಿ ಪರಿಹಾರ ಕಂಡುಕೊಳ್ಳುವ ಸಾಧ್ಯತೆಯಿರುತ್ತದೆ.

ಎರಡು ಮೂರು ತಿಂಗಳಿನಲ್ಲಿ ಹುಡುಗರು ತಮ್ಮ ಸ್ವಂತ ಶ್ರಮದಿಂದ ಸಾಕಷ್ಟು ಜ್ಞಾನವನ್ನು ಗಳಿಸಿದ್ದರು. ಆದರೆ ಅದನ್ನು ಪಡೆಯುವುದಕ್ಕಾಗಿ ಇಲ್ಲಿಯವರೆಗೆ ನಡೆಸಿದ ಅನುಭವದ ಹೋರಾಟದಿಂದಾಗಿ, ಈವರೆಗೆ ಮಾಡಿದ ಕೆಲಸ ಮತ್ತೆ ರಿಪೇರಿ ಮಾಡದಷ್ಟು ಹಾಳಾಗಿತ್ತು. ಹೊಸ ಮನೆಯೊಂದನ್ನು ಕಟ್ಟಬಹುದು, ಆದರೆ ಹಳೆ ಮನೆ ರಿಪೇರಿ ಮಾಡುವುದು ದೊಡ್ಡ ತಲೆನೋವು. ಮಾಡಿದರೂ ಸಮಸ್ಯೆಯೆಲ್ಲಾ ಪರಿಹಾರವಾದಂತೆನಿಸುವುದಿಲ್ಲ.

ಮೊದಮೊದಲು ಎಲ್ಲಾ ಭಾರತೀಯರಂತೆ ನಾನೂ ನಮ್ಮ ಅಮೇರಿಕಾದ ಕಸ್ಟಮರಿಗೆ "ಪ್ರಾಜೆಕ್ಟ್ ತುಂಬಾ ಚೆನ್ನಾಗಿ ನಡೆಯುತ್ತಿದೆ" ಎಂದೇ ವರದಿ ಕಳುಹಿಸಿದೆ. ಆದರೆ ಕೊಳೆತ ನಾತ ಇಲ್ಲಿಂದ ಅಲ್ಲಿಗೆ ಹೋಗದೇ ಇರುತ್ತದೆಯೆ? ಅದೂ ಈ ಕಂಪ್ಯೂಟರ್ ಯುಗದಲ್ಲಿ! ಅವರಿಗೂ ವಾಸನೆ ಬಡಿಯಲಾರಂಭಿಸಿತು. ಪ್ರತಿಯೊಂದಕ್ಕೆ ಪುರಾವೆ

ಕೇಳತೊಡಗಿದರು. ಎಷ್ಟು ದಿನವೆಂದು ಕಣ್ಣಾಮುಚ್ಚಾಲೆ ಆಟವಾಡಲು ಸಾಧ್ಯ? ಬಟ್ಟೆ ಕಳಚಿ ಅವರ ಮುಂದೆ ಬೆತ್ತಲೆ ನಿಂತಿದ್ದಾಯ್ತು. "ಇನ್ನು ಮುಂದೆ ನೀವು ನಮಗೆ ಯಾವುದೇ ಕೆಲಸ ಮಾಡಿ ಕೊಡುವ ಅವಶ್ಯಕತೆಯಿಲ್ಲ. ನೀವೀಗ ಮಾಡುತ್ತಿರುವ ಪ್ರಾಜಕ್ಟನ್ನು ಅಲ್ಲಿಗೇ ನಿಲ್ಲಿಸಿಬಿಡಿ" ಎಂದು ಅಪ್ಪಣೆ ಕೊಟ್ಟುಬಿಟ್ಟರು.

ಇದರಲ್ಲಿ ನನ್ನದೇನೂ ತಪ್ಪಿರಲಿಲ್ಲ. ನನಗೆ ವಹಿಸಿದ ಪಾತ್ರವನ್ನು ನಾನು ಯಶಸ್ವಿಯಾಗಿಯೇ ನಿರ್ವಹಿಸಲು ಪ್ರಯತ್ನಿಸಿದ್ದೆ. ನಮಗೆ ಬೇಕಾದ ಟೆಕ್ನಿಕಲ್ ಲೀಡರ್ ಇರಲಿಲ್ಲವೆಂದ ಮೇಲೆ ನಾನೇನು ತಾನೆ ಮಾಡಲು ಸಾಧ್ಯ?

ಪ್ರಾಜಕ್ಟ್ ಯಶಸ್ವಿಯಾಗಿಲ್ಲವೆಂದ ಮೇಲೆ ಅದರಲ್ಲಿ ಕೆಲಸ ಮಾಡಿದ ಹುಡುಗರಿಗೆ ತಮ್ಮ ಶ್ರಮವನ್ನು ಸಮರ್ಥಿಸಿಕೊಳ್ಳುವ ಯಾವುದೇ ನೈತಿಕ ಹಕ್ಕೂ ಇರುವುದಿಲ್ಲ. ಪ್ರಾಜಕ್ಟ್ ಅಂತ್ಯಕ್ಕೆ ಪ್ರತಿಯೊಬ್ಬರಿಂದ ಕಂಪನಿಗೆ ಎಷ್ಟರ ಮಟ್ಟಿಗೆ ಉಪಯೋಗವಾಯಿತು ಎಂಬುದನ್ನು ಅವರ ಪ್ರಾಜಕ್ಟ್ ಮ್ಯಾನೇಜರ್ (ಅಂದರೆ ನಾನು) ನಿರ್ಧರಿಸಬೇಕಾಗುತ್ತದೆ. ಇದಕ್ಕೆ ಅಪ್ರೈಸಲ್ ಎಂದು ಕರೆಯುತ್ತಾರೆ. ಹತ್ತಕ್ಕೆ ಎಷ್ಟು ಅಂಕಗಳು ಅವರಿಗೆ ಸಲ್ಲುತ್ತವೆ ಎಂದು ಹೇಳಬೇಕು. ನಾನು ಯಾವುದೇ ಸಂಕೋಚವಿಲ್ಲದೆ ಎಲ್ಲರಿಗೂ ನಾಲ್ಕಕ್ಕಿಂತ ಕಡಿಮೆ ಅಂಕವನ್ನೇ ಕೊಟ್ಟಿದೆ. ಹುಡುಗರೆಲ್ಲರೂ ಅದನ್ನು ತಿಳಿದು ಇನ್ನು ಮುಂದೆ ಇಲ್ಲಿರುವುದು ಕ್ಷೇಮವಲ್ಲವೆಂದು ಅರ್ಥ ಮಾಡಿಕೊಂಡರೇನೋ? ವಾರದೊಳಗಡೆ ಎಲ್ಲರೂ ಲಕ್ಷಣವಾಗಿ ರಾಜೀನಾಮೆ ಕೊಟ್ಟು ಬೇರೆಲ್ಲಿಗೋ ಹೊರಟು ಹೋದರು. ಆದರೆ ಶಶಿಕಲಾ ಎಷ್ಟಾದರೂ ಹೆಣ್ಣಲ್ಲವೆ? ಎಲ್ಲಿಗೆ ತಾನೆ ಹೋಗಿಯಾಳು? ಇಲ್ಲೇ ಉಳಿದಳು. ಈಗ ನಾವೇ ಬಲವಂತದಿಂದ ಅವಳನ್ನು ಹೊರದಬ್ಬುವ ಸರದಿ.

ಮನಸ್ಸು ಅವಳೊಡನೆ ಮಾತನಾಡಲು ಹಿಂಜರಿಯಲಾರಂಭಿಸಿತು. ಆದರೆ ಹಿಂದೆಯೇ ನನ್ನ ಪ್ರೊಫೆಷನಲ್ ಬುದ್ಧಿ ಎಚ್ಚೆತ್ತುಕೊಂಡಿತು. ಇಲ್ಲ, ಇಲ್ಲ! ಹೀಗೆಲ್ಲಾ ಸೆಂಟಿಮೆಂಟಲ್ ನಾನಾದರೆ ಹಣ ಹೂಡಿ ನಡೆಸುವ ಕಂಪನಿಗಳ ಗತಿಯೇನು? ಅಷ್ಟಕ್ಕೂ ಈ ಶಶಿಕಲಾ ನನಗೆ ಅಕ್ಕನೆ, ತಂಗಿಯೆ? ಯಾವ ಅನುಕಂಪವೂ ಇಲ್ಲದೆ ನೇರ ಮಾತಿನಲ್ಲಿ ಅವಳಿಗೆ ತಿಳಿಸಿ ಹೇಳಬೇಕು. ನಾನೀಗ ದೊಡ್ಡ ಹುದ್ದೆಯಲ್ಲಿರುವವನು. ಇಂತಹದನ್ನು ಅಭ್ಯಾಸ ಮಾಡಿಕೊಳ್ಳಬೇಕು. ಈ ತರಹದ ಕಠಿಣ ನಿರ್ಧಾರವನ್ನು ತೆಗೆದುಕೊಳ್ಳುವುದನ್ನು ಕರಗತ ಮಾಡಿಕೊಳ್ಳಲು ಇದೊಂದು ಅವಕಾಶ. ನಾನು ಈ ಸನ್ನಿವೇಶವನ್ನು ಸಮರ್ಥವಾಗಿ ಕಾರ್ಯಗತಗೊಳಿಸಿ "ನೋಡೋ ಸಂದೀಪ, ನಂಗೂ ವಿದ್ಯೆ ಗೊತ್ತಿದೆ" ಅಂತ ಮುಖಕ್ಕೆ ಹೊಡೆದಂತೆ ಹೇಳಬೇಕು. ಯೆಸ್, ಐ ಶುಡ್ ಎಗ್ಸಿಕ್ಯೂಟ್ ದಿಸ್ ಸಕ್ಸಸ್‌ಫುಲಿ!

ನೀತುಳಿಗೆ ಫೋನ್ ಮಾಡಿ, "ಸ್ವೀಟಿ, ಶಶೀನ್ನ ಕಾನ್‌ಫರೆನ್ಸ್ ರೂಂಗೆ ಬರ್ಲಿಕ್ಕೆ ಹೇಳ್ತೀಯ. ನಾನು ಅಲ್ಲಿ ಕಾಯ್ತಾ ಇರ್ತಿನಿ" ಅಂತ ಹೇಳಿದೆ. ಎರಡೇ ನಿಮಿಷದಲ್ಲಿ ಶಶಿ ಕಾನ್‌ಫರೆನ್ಸ್ ರೂಂಗೆ ಬಂದು "ಹಲೋ ರಾಜು" ಅಂತ ನನ್ನನ್ನು ನೋಡಿ ಸುಂದರವಾಗಿ ನಕ್ಕಳು.

"ಸೋ, ಹೌ ವಾಜ್ ದ ವೀಕೆಂಡ್" ಎಂದು ನಾನೂ ಇಷ್ಟಗಲ ನಕ್ಕು ಮಾತನ್ನು ಪ್ರಾರಂಭಿಸಿದೆ.

"ಅಯ್ಯೋ ಮಾರಾಯ, ರವಿಗೆ (ಅವಳ ಫಿಯಾನ್ಸಿ) ಜಗ್ಗೇಶ್ ಸಿನಿಮಾ ಅಂದರೆ ವಿಪರೀತ ಹುಚ್ಚು ಕಣೋ. ನನ್ನ ಕರಕೊಂಡು ಹೋಗಿದ್ದ. ಹಿಂದಿ ಸಿನಿಮಾಕ್ಕೆ ಹೋಗೋಣ್ವೋ ಅಂದ್ರೂ ಕೇಳಲ್ಲ" ಅಂತಂದಳು.

"ರವಿ ನಿನ್ನ ಕನ್ನಡ ಸಿನಿಮಾಕ್ಕೇ ಯಾಕೆ ಕರಕೊಂಡು ಹೋಗ್ತಾನೆ ಗೊತ್ತಾ? ಒಂದು ವೇಳೆ ಅಪ್ಪಿ ತಪ್ಪಿ ಹಿಂದಿ ಸಿನಿಮಾಕ್ಕೆ ಕರಕೊಂಡು ಹೋದರೆ ನೀನು ಬರೀ ಸಲ್ಮಾನ್, ಅಕ್ಷಯ್, ಹೃತಿಕ್ ಅಂತೆಲ್ಲಾ ಬಡಬಡಿಸಿಕ್ಕೆ ಶುರು ಮಾಡಿಬಿಡ್ತಿ. ರವೀನ್ನ ಮರೆತರೂ ಆಶ್ಚರ್ಯ ಇಲ್ಲ. ಅದಕ್ಕೇ ಸೇಫಾಗಿ ಕನ್ನಡ ಸಿನಿಮಾಕ್ಕೆ..." ಅಂತ ನಾನು ನಗುತ್ತಾ ಉತ್ತರಿಸಿದ ತಕ್ಷಣ "ಯು ನಾಟಿ" ಅಂತ ತನ್ನ ಕೈಯಲ್ಲಿದ್ದ ಪೆನ್ನಿಂದ ನನ್ನ ತಲೆಗೆ ಹೊಡೆದಳು. ಮಾತನ್ನು ಚೆನ್ನಾಗಿಯೇ ಶುರು ಮಾಡಿದೆ ಅಂತ ನನಗೆ ಒಳಗೇ ಖುಷಿಯಾಯ್ತು. ಅನಂತರ ಒಂದು ನಿಮಿಷ ನಾವಿಬ್ಬರೂ ಮಾತನಾಡಲಿಲ್ಲ. ಮೌನ ಮುರಿದದ್ದು ಅವಳೇ!

"ಈಗ ಹೇಳು, ವಾಟ್ ಈಜ್ ದ ಬ್ಯಾಡ್ ನ್ಯೂಸ್?"

"ಅದು ಬ್ಯಾಡ್ ಅಂತ ನಿಂಗೆ ಹೆಂಗೆ ಗೊತ್ತಾಯ್ತು?"

"ಮತ್ತಿನ್ನೇನು? ಬೆಳಿಗ್ಗೆ ಬೆಳಿಗ್ಗೆ ಆ ಸಂದೀಪ್ ರೂಂಗೆ ಹೋಗಿ ಮುಖ ಇಷ್ಟು ದಪ್ಪ ಮಾಡಿಕೊಂಡು ಹೊರಬಂದಿ. ತಕ್ಷಣ ನನ್ನ ಮೀಟ್ ಮಾಡ್ತಾ ಇದೀಯ. ಅಂದ ಮೇಲೆ ಬ್ಯಾಡ್ ನ್ಯೂಸ್ ಇರಲೇ ಬೇಕಲ್ಲಾ?"

ಪರವಾಗಿಲ್ಲ. ಇವಳು ಸೂಜಿಮೊನಿ!

"ಶಶಿ, ಒಂದು ಪ್ರಶ್ನೆ ಕೇಳೀನಿ. ಯಾವುದೇ ಮುಜುಗರ ಇಲ್ಲದಂತೆ ಉತ್ತರ ಹೇಳ್ತೀಯ?"

"ಗೋ ಅಹೆಡ್..."

"ಈ ಪ್ರಾಜೆಕ್ಟ್ ಫ್ಲಾಪ್ ಆಗೋದಕ್ಕೆ ನಿಂಗೆ ಯಾರು ಕಾರಣ ಅನ್ನಿಸುತ್ತೆ?"

ಅವಳ ಬಾಯಿಂದಲೇ, "ಟೆಕ್ನಿಕಲ್ ಲೀಡರ್ ಇರಲಿಲ್ಲ, ಮ್ಯಾನೇಜ್‌ಮೆಂಟ್ ಸರಿಯಾಗಿ ಎಚ್ಚರ ವಹಿಸಲಿಲ್ಲ. ನಾವೂ ಇನ್ನೊಂದಿಷ್ಟು ಕಷ್ಟಪಟ್ಟಿದ್ರೆ ಚೆನ್ನಾಗಿತ್ತು" ಅಂತೆಲ್ಲಾ ಹೇಳಿಸಿ ಅನಂತರ ಅವಳನ್ನು ಕೆಲಸದಿಂದ ವಜಾ ಮಾಡುವ ವಿಷಯ ಹೇಳೋದು ಅಷ್ಟೊಂದು ಕಷ್ಟ ಆಗಲ್ಲ.

"ನಾನು ನಿಜ ಹೇಳಿದ್ರೆ ನಿಂಗೆ ಕೋಪ ಬರಲ್ಲ ತಾನೆ?"

"ನೋ ನೋ... ಅದಕ್ಕೇ ನಿನ್ನಿಲ್ಲಿ ನಾನು ಕರೆಸಿದ್ದು, ಬಿ ಫ್ರಿ"

"ನೀನು ಸರಿಯಾಗಿ ಈ ಪ್ರಾಜೆಕ್ಟ್ ಹ್ಯಾಂಡಲ್ ಮಾಡಲಿಲ್ಲ. ಐ ಥಿಂಕ್ ಯು ಆರ್ ದ ಓನ್ಲಿ ರೀಜನ್ ಫಾರ್ ದಿ ಫೇಲುಯರ್ ಆಫ್ ದಿಸ್ ಪ್ರಾಜೆಕ್ಟ್"

ಸಿಟ್ಟು ನೆತ್ತಿಗೇರಿತು.

"ಶಿಟ್! ಏನಂತ ಮಾತಾಡ್ತಿದೀಯ? ಬಿ ಲಾಜಿಕಲ್ ಧ್ವನಿ ಕೊಂಚ ಏರಿತ್ತು.

"ನೋಡು, ನೀನಾಗಲೇ ಕೋಪ ಮಾಡ್ಕೊಳಲ್ಲ ಅಂತ ಹೇಳಿದ್ದೀಯ. ಈಗ..."

"ಐ ಆಮ್ ಸಾರಿ. ಗೋ ಅಹೆಡ್.." ಉಳಿದಂತೆ ಎಷ್ಟೇ ನೆಮ್ಮದಿಯನ್ನು ಕಾಪಾಡಿಕೊಂಡು ಬಂದರೂ, ನಮ್ಮನ್ನೇ ಎದುರಾ ಎದುರಾ ಜರಿದರೆ ಕೋಪ ಮಾಡಿಕೊಳ್ಳದೆ ಇರುವುದಾದರೂ ಹೇಗೆ?

"ಒಮ್ಮೆ ನಾನು ಹೇಳೋ ರೀತಿಯಲ್ಲಿಯೂ ವಿಚಾರ ಮಾಡಿ ನೋಡು, ನಿಂಗೆ ಸರಿ ಅನ್ನಿಸಿದರೂ ಅನ್ನಿಸಬಹುದು. ಪ್ರಾಜೆಕ್ಟ್ ಶುರುವಾದ ದಿನದಿಂದ ನೋಡ್ತಾ ಇದೀನಿ. ನಿಂಗೆ ಈ ಪ್ರಾಜೆಕ್ಟ್ ಹ್ಯಾಂಡಲ್ ಮಾಡೋಕೆ ಒಂಚೂರೂ ಇಷ್ಟ ಇರಲಿಲ್ಲ. ಅಂದ ಮೇಲೆ ಅದು ಸಕ್ಸಸ್ ಹೇಗೆ ಆಗುತ್ತೆ ಹೇಳು?"

"ನಿಮಗೆಲ್ಲಾ ನಾನು ಮೊದಲನೇ ದಿನವೇ ಓಪನ್ ಆಗಿ ಹೇಳಿದ್ದೆ. ನಂಗೆ ಈ ಮೇನ್‌ಫ್ರೇಂ ಟೆಕ್ನಾಲಜಿ ಗೊತ್ತಿಲ್ಲ ಅಂತ. ನಾನು ಮೈಕ್ರೋಸಾಫ್ಟ್ ಟೆಕ್ನಾಲಜಿಯಲ್ಲಿ ಮಾತ್ರ ಕೆಲಸ ಮಾಡಿದೋನು"

"ರಾಜು... ನೀನು ಐ.ಐ.ಟಿ. ಯಲ್ಲಿ ಬ್ಯಾಂಕ್ ಹೋಲ್ಡರ್ ಅಂತ ನಂಗೂ ಗೊತ್ತು. ಜೊತೆಗೆ ಏಳೆಂಟು ವರ್ಷದ ಅನುಭವ ಇರೋನು. ನಿಂಗೆ ಈ ಮೇನ್‌ಫ್ರೇಂ ಟೆಕ್ನಾಲಜಿ ಕಲಿಯೋಕೆ ಎಷ್ಟು ದಿನ ಬೇಕಾಗುತ್ತೆ ಹೇಳು? ನಿಜ ಏನಂದರೆ, ನಿಂಗೆ ಅದನ್ನು ಕಲಿಯೋಕೆ ಇಷ್ಟ ಇರಲಿಲ್ಲ".

"ಇದು ಬರೀ ನಿನ್ನ ಕಲ್ಪನೆ ಅಷ್ಟೆ! ನಾನು ಒಪ್ಪಲ್ಲ. ನಂಗೆ ಯಾವತ್ತೂ ಹೊಸ ಟೆಕ್ನಾಲಜಿ ಕಲಿಯೋಕೆ ತುಂಬಾ ಇಷ್ಟ. ನಾನು ಅದನ್ನು ಸಾಕಷ್ಟು ಬಾರಿ ಪ್ರೂವ್ ಮಾಡಿದೀನಿ".

"ಹಾಂ! ಅದೇ, ಅದೇ... ಅದೇ ನಿನ್ನ ಪ್ರಾಬ್ಲಂ, ನಿಂಗೆ ಹೊಸ ಟೆಕ್ನಾಲಜಿ ಕಲಿಯೋಕೆ ಆಸಕ್ತಿ ಇದೆಯೇ ಹೊರತು ಹಳೆಯದನ್ನಲ್ಲ. ಈಗಾಗಲೇ ಮೂಲೆಗುಂಪಾಗಿರುವ ಮೇನ್ ಫ್ರೇಂ ಟೆಕ್ನಾಲಜಿ ನಿಂಗೆ ಬೇಕಾಗಿರಲಿಲ್ಲ. ನಿಜ ಹೇಳಬೇಕು ಅಂದ್ರೆ, ನೀನು ಈ ಪ್ರಾಜೆಕ್ಟ್ ಫ್ಲಾಪ್ ಆಗಬೇಕು ಅಂತ ತುಂಬಾ ಪ್ರಯತ್ನಪಟ್ಟೆ".

"ಬುಲ್‌ಶಿಟ್! ಬಾಯಿಗೆ ಬಂದಂತೆ ಮಾತಾಡಬೇಡ. ನನಗೆ ಈ ಪ್ರಾಜಕ್ಟ್ ಫ್ಲಾಪ್ ಆದರೆ ಆಗೋ ಲಾಭ ಆದರೂ ಏನು?"

"ತುಂಬಾ ಸಿಂಪಲ್ ಲಾಜಿಕ್. ಈ ಪ್ರಾಜಕ್ಟ್ ಸಕ್ಸಸ್ ಆಗಿತ್ತು ಅಂದ್ರೆ, ಇಂಥಹದೇ ಇನ್ನೊಂದೆರಡು ಪ್ರಾಜಕ್ಟ್‌ಗಳನ್ನು ನಿನ್ನ ತಲೆಗೆ ಕಟ್ಟುತ್ತಿದ್ದರು. ಈಗ ಅವೆಲ್ಲಾ ಕಾಂಪ್ಲಿಕೇಷನ್ಸ್ ಇಲ್ಲ. 'ನೋಡಿ, ನಾನು ಹಿಂದೆ ಇಂತಹದೇ ಪ್ರಾಜಕ್ಟ್ ಮಾಡಲಿಕ್ಕೆ ಹೋಗಿ ಅದು ಫ್ಲಾಪ್ ಆಯ್ತು' ಅಂತ ಮಾತಾಡಿ ಕೈ ತೊಳೆದುಕೊಳ್ಳಬಹುದು".

"ಶಶಿ, ನೀನು ಸಾವಿರ ಹೇಳು. ನಾನಿದನ್ನೆಲ್ಲಾ ನಂಬಲ್ಲ. ಇದು ಅನ್‌ಯೆಥಿಕಲ್... ನಿನ್ನ ಮಾತಿಗೆ ನಾನು ಚಿಕ್ಕಾಸಿನ ಬೆಲೆಯೂ ಕೊಡಲ್ಲ". ನನ್ನ ಧ್ವನಿ ಕೊಂಚ ಜೋರಾಗಿತ್ತು. ಎಷ್ಟೇ ಶಬ್ದ ನಿಯಂತ್ರಣ ಹೊಂದಿದ್ದ ಕೋಣೆಯಲ್ಲಿ ಕುಳಿತಿದ್ದರೂ ಹೊರಗಿನವರಿಗೆ ಗೊತ್ತಾಗಿರಬೇಕು. ನಮ್ಮ ಪಾರದರ್ಶಕ ಕೋಣೆಯ ಕಡೆ ನೋಡಲಾರಂಭಿಸಿದರು. ಶಶಿ ತಲೆ ಬಗ್ಗಿಸಿದಳಲ್ಲದೆ ಮತ್ತೇನೂ ಮಾತನಾಡಲಿಲ್ಲ.

"ಐ ಆಂ ಸಾರಿ" ಅಂದೆ. ಅವಳದಕ್ಕೆ ಉತ್ತರಿಸಲಿಲ್ಲ. ನಾನೇ ಮಾತನ್ನು ಮುಂದುವರಿಸಿದೆ. "ನೋಡು, ನಿನ್ನ ಅಪ್ರೈಸಲ್ ಸ್ಕೋರ್ ಬರೀ ನಾಲ್ಕು ಬಂದಿದೆ, ಹತ್ತಕ್ಕೆ ನಾಲ್ಕು. ಇದು ನಮ್ಮ ಕಂಪನಿಯ ಸ್ಟಾಂಡರ್ಡ್‌ಗೆ ತುಂಬಾ ಕಡಿಮೆ. ಆದ್ದರಿಂದ ನಿನ್ನ ಈವತ್ತೇ ಕೆಲಸದಿಂದ ವಜಾ ಮಾಡುತ್ತಿದ್ದೇವೆ. ಇದು ಮ್ಯಾನೇಜ್‌ಮೆಂಟ್ ತೆಗೆದುಕೊಂಡಿರೋ ನಿರ್ಧಾರ, ನನ್ನ ಸ್ವಂತದ್ದಲ್ಲ. ದಯವಿಟ್ಟು ನಿನ್ನ ಡ್ಯೂಸ್ ಏನಿದೆಯೋ ಅದನ್ನೆಲ್ಲಾ ಈವತ್ತೇ ಕ್ಲಿಯರ್ ಮಾಡಿಕೊಂಡುಬಿಡು. ನಾನದಕ್ಕೆಲ್ಲಾ ಏರ್ಪಾಡು ಮಾಡ್ತೀನೆ. ನಾಳೆಯಿಂದ ನಮಗೆ ನಿನ್ನ ಸೇವೆಯ ಅಗತ್ಯವಿಲ್ಲ".

ಈಗಲಾದರೂ ಅವಳು ಮಾತನಾಡಿದ್ದರೆ ಚೆನ್ನಾಗಿತ್ತು. ಸುಮ್ಮನಿದ್ದಳು.

"ನಿಂಗೇನಾದರೂ ಬೇರೆ ಹೇಳೋದಕ್ಕಿದೆಯಾ?".

ಇಲ್ಲವೆಂದು ತಲೆಯಲ್ಲಾಡಿಸಿದಳು. ನಾನು ಹೊರಗೆದ್ದು ಬಂದೆ. ಆ ಹವಾನಿಯಂತ್ರಿತ ಕಟ್ಟಡದಲ್ಲಿಯೂ ನನ್ನ ಮುಖ ಬೆವರುತ್ತಿತ್ತು. ತಣ್ಣನೆಯ ನೀರು ಕುಡಿಯಬೇಕೆನ್ನಿಸಿತು. ಆಫೀಸ್ ಜವಾನನಿಗೆ ಕರೆದು ನೀರು ಕೊಡುವಂತೆ ಹೇಳಿದೆ. ತಕ್ಷಣ ತಂದುಕೊಟ್ಟ. ಅಂಗಿ, ಟೈ ಮೇಲೆಲ್ಲಾ ನೀರು ಬಿದ್ದರೂ ಕೇರ್ ಮಾಡದಂತೆ ಗಟಗಟನೆ ಕುಡಿದೆ. "ನಿಧಾನ ಸಾರ್" ಅಂತ ಅಲ್ಲೇ ನಿಂತಿದ್ದ ಜವಾನ ಹೇಳಿದಾಗ ಅವನು ಇನ್ನೂ ಅಲ್ಲಿಯೇ ನಿಂತಿರುವುದು ಸರಿ ಕಾಣಲಿಲ್ಲ. "ನೀನಿನ್ನ ಹೋಗು" ಎನ್ನುವಂತೆ ಸನ್ನೆ ಮಾಡಿದೆ. ಹಿಂಜರಿಯುತ್ತ "ಸಾರ್, ನಿಮ್ಮ ಜೊತೆ ಸ್ವಲ್ಪ ಮಾತಾಡಬೇಕಿತ್ತು" ಅಂತಂದ. ಆದರೆ ನನಗೆ ಈಗ ಯಾರ ಮಾತನ್ನೂ ಕೇಳುವ ಆಸಕ್ತಿಯಿರಲಿಲ್ಲ. "ಆಮೇಲಕ್ಕೆ ಮಾತಾಡುವೆಯಂತೆ, ಈಗ ಹೋಗು" ಅಂತಂದೆ. ಹೊರ ಹೋದ.

ಎರಡೇ ನಿಮಿಷಕ್ಕೆ ಫೋನ್ ಗೊಣಗುಟ್ಟಿತು. ಸಂದೀಪ್ ಇರಬೇಕು. ಕಾಯ್ತಾ ಕೂತಿರ್ತಾನೆ ಪುಣ್ಯಾತ್ಮ! ಜವಾನನಿಗೆ 'ಆಮೇಲಕ್ಕೆ' ಅಂದಂತೆ ಇವನಿಗೆ ಹೇಳೋ ಹಾಗಿಲ್ಲ.

"ರಾಜು, ಶಶಿಗೆ ಕನ್ವಿನ್ಸ್ ಮಾಡಿಸೋದಕ್ಕೆ ಆಯ್ತಾ?"

"ಯೆಸ್, ಸಂದೀಪ್, ಐ ಕುಡ್ ಡು ದಟ್"

"ಕಂಗ್ರಾಜುಲೇಷನ್ಸ್... ನಾನು ಆವಾಗಲೇ ನಿಂಗೆ ಹೇಳಿದ್ನಲ್ವಾ? ನಿನ್ನ ಕಪಬಲಿಟೀಸ್ ಬಗ್ಗೆ ನಂಗೆ ತುಂಬಾ ನಂಬಿಕೆ".

"ಥ್ಯಾಂಕ್ಸ್...".

ಯಾಕೋ ಎಲ್ಲಾ ಹೇಸಿಗೆಯೆನ್ನಿಸಿತು. ಶಶಿಕಲಾ ಹೇಳಿದ್ದೆಲ್ಲ ನಿಜಾನಾ? ನಾನೇ ಕಾರಣಾನ? ನಂಗೆ ಅಂಥ ಆಲೋಚನೆಗಳೆಲ್ಲಾ ಇತ್ತಾ? ಅವಳ ಅಭಿಪ್ರಾಯವನ್ನು ನಾನು ಕೇಳಿದ್ದೇ ತಪ್ಪಾಯ್ತು. ನಾನು ಊಹೆ ಮಾಡದಿದ್ದದ್ದನ್ನೆಲ್ಲಾ ಹೇಳಿಬಿಟ್ಟಳು. ಯಾರೂ ಈ ತರಹ ನನ್ನ ಮುಂದೆ ಹೇಳಿರಲಿಲ್ಲ. ಅಥವಾ ನನ್ನ ಬೆನ್ನ ಹಿಂದೆ ಎಲ್ಲರೂ ಈ ರೀತಿಯಾಗಿ ಮಾತಾಡಿಕೊಳ್ತಾರ? ಹೆದರಿಕೆಯಾಯ್ತು. ಶಶಿ ಕಡೆಗೆ ನೋಡಬೇಕೆನ್ನಿಸಿತು. ಧೈರ್ಯವಾಗಲಿಲ್ಲ. ಅವಳಾಗಲೇ ತನ್ನ ಅಕೌಂಟ್

ಸೆಟಲ್ ಮಾಡಿಕೊಳ್ಳುತ್ತಿರಬೇಕು. ಒಬ್ಬ ವ್ಯಕ್ತಿ ನಮಗೆ ಬೇಡವೆಂದು ನಿರ್ಧಾರ ಮಾಡಿಯಾದ ಮೇಲೆ ಅವನನ್ನು ಹೊರ ಕಳುಹಿಸಲು ನಾವು ಎಲ್ಲಾ ರೀತಿಯಿಂದಲೂ ಸಹಾಯ ಮಾಡುತ್ತೇವೆ. ಚಕಚಕನೆ ಎಲ್ಲಾ ಮುಗಿದು ಹೋಗಿಬಿಡುತ್ತದೆ.

ಒಂದೆರಡು ಗಂಟೆಯಲ್ಲಿ ಶಶಿಕಲಾ ನನ್ನ ಬಳಿ ಬಂದಳು. ಪ್ರಾಜೆಕ್ಟ್ ಮ್ಯಾನೇಜರ್ ಕೂಡಾ, "ಅವಳನ್ನು ಹೊರ ಕಳುಹಿಸಲು ಯಾವುದೇ ಅಭ್ಯಂತರವಿಲ್ಲ" ಅಂತ ಸಹಿ ಹಾಕಬೇಕು. ಏನೊಂದೂ ಮಾತನಾಡದೆ ಸಹಿ ಹಾಕಿ "ಆಲ್ ದಿ ಬೆಸ್ಟ್" ಅಂತ ಕೈ ಕುಲುಕಿದೆ. ಸುಮ್ಮನೆ ನಕ್ಕಳು.

ಮರುದಿನದ ಆಫೀಸಿನ ಅಟೆಂಡೆನ್ಸ್ ರಿಜಿಸ್ಟರ್‌ನಲ್ಲಿ ಅವಳ ಹೆಸರನ್ನು ತೆಗೆದುಹಾಕಲಾಗಿತ್ತು. ನಮ್ಮ ಎಲ್ಲಾ ಕಂಪ್ಯೂಟರ್‌ಗಳಲ್ಲೂ ಅವಳ ಹೆಸರನ್ನು ಕಿತ್ತುಹಾಕಲಾಗಿತ್ತು. "ಶಶಿಕಲಾ ತನ್ನ ಸ್ವಂತ ಸಮಸ್ಯೆಗಳಿಂದಾಗಿ ನಮ್ಮ ಕಂಪನಿಗೆ ತನ್ನ ಸೇವೆಯನ್ನು ಮುಂದುವರೆಸಿಕೊಂಡು ಹೋಗಲಾಗುವುದಿಲ್ಲವೆಂದು ವಿನಂತಿಸಿ ಕೊಂಡಿದ್ದರಿಂದ, ನಾವು ಅವಳ ರಾಜೀನಾಮೆಯನ್ನು ಸ್ವೀಕರಿಸಬೇಕಾಯಿತು. ಅವಳು ನಮ್ಮ ಕಂಪನಿಗಾಗಿ ಶ್ರಮಿಸಿದ್ದನ್ನು ನಾನಿಲ್ಲಿ ನೆನೆಸಿಕೊಳ್ಳುತ್ತೇನೆ. ಮುಂದೆ ಅವಳ ಜೀವನ ಸುಖಮಯವಾಗಿರಲೆಂದು ನಾವೆಲ್ಲಾ ಆಶಿಸೋಣ" ಎಂದು ಸಂದೀಪ್ ಎಲ್ಲರಿಗೂ ಈ-ಮೇಲ್ ಕಳುಹಿಸಿದ. ಅಲ್ಲಿಗೆ ಶಶಿಕಲಾ ಎಂಬ ಮುಗ್ಧ ಹುಡುಗಿಯ ಅಧ್ಯಾಯ ನಮ್ಮ ಕಂಪನಿಯ ಪುಟಗಳಲ್ಲಿ ಮುಗಿದು ಹೋಗಿತ್ತು.....

ಅಂತ ನಾನಂದುಕೊಂಡಿದ್ದು ತಪ್ಪು ಎರಡೇ ದಿನಕ್ಕೆ ನಂಗೆ ಅರ್ಥವಾಯ್ತು. ಸುಮಾರು ಐದು ಗಂಟೆಯ ವೇಳೆಗೆ ನೀತುಳಿಂದ ನನಗೆ ಫೋನ್ ಬಂತು. "ರಾಜು, ಶಶಿ ನಿನ್ನ ಸಲುವಾಗಿ ರಿಸೆಪ್ಶನ್‌ನಲ್ಲಿ ಕಾಯ್ತಾ ಇದ್ದಾಳೆ. ನೀನು ಇಲ್ಲಿಗೆ ಬರ್ತಿಯಾ?" ಅಂತ ಕೇಳಿದಳು. ಯಾಕೋ ನಂಗೆ ಮತ್ತೊಮ್ಮೆ ಶಶಿಯನ್ನು ನೋಡುವ ಧೈರ್ಯವಾಗಲಿಲ್ಲ. ಇನ್ನೂ ಏನೇನು ನನ್ನ ಮೇಲೆ ದೋಷ ಹೊರಿಸಲು ಬಂದಿದ್ದಾಳೋ? ಅಥವಾ ಯಾವುದಾದರೂ ಬೇರೆ ಕಂಪನಿಯಲ್ಲಿ ಕೆಲಸ ಕೊಡಿಸು ಅಂತ ಕೇಳುತ್ತಾಳೋ? ನಮ್ಮ ಕೈಯಲ್ಲಿ ಒಂದು ಕೆಲಸವಾಗಿ ಇನ್ನೊಂದು ಸಿಗುವುದು ಅಷ್ಟೊಂದು ಕಷ್ಟವಾಗುವುದಿಲ್ಲ. ಆದರೆ ಖಾಲಿಯಾಗಿದ್ದರೆ ಮಾತ್ರ ಯಾರೂ ಕೆಲಸ ಕೊಡುವದಿಲ್ಲ.

"ನೀತು, ಏನಾದರೂ ನೆಪ ಹೇಳಿ ಸಾಗ ಹಾಕು".

"ಓಕೆ ರಾಜು, ಮೀಟಿಂಗ್‌ನಲ್ಲಿದೀಯ ಅಂತ ಹೇಳ್ತೀನಿ"

" ದಟ್ಸ್ ಗುಡ್".

ನೀತು ನಿಜಕ್ಕೂ ಜಾಣೆ. ರಿಸೆಪ್ಷನಿಷ್ಟ್ ಅಂದ ಮೇಲೆ ಅಷ್ಟೂ ಜಾಣತನವಿರದಿದ್ದರೆ ಹೇಗೆ? ಆದರೆ ಮತ್ತೆ ಅರ್ಧ ಗಂಟೆಗೆ ಸರಿಯಾಗಿ ಅವಳಿಂದ ಫೋನ್ ಬಂತು. "ರಾಜು, ಅವಳು ಇನ್ನೂ ನಿನ್ನ ಸಲುವಾಗಿ ವೇಟ್ ಮಾಡ್ತಾ ಇದಾಳೆ" ಅಂದಳು. ಬೇರೆ ದಾರಿಯಿಲ್ಲದೆ ಅವಳನ್ನು ಮೀಟ್ ಮಾಡಲು ಹೋದೆ.

ಹಾಯ್ ಶಶಿ, ಹೇಗಿದ್ದೀಯಾ? ಸಾರಿ ಯಾವುದೋ ಇಂಪಾರ್ಟೆಂಟ್ ಮೀಟಿಂಗ್‌ನಲ್ಲಿದ್ದೆ"

"ಪರವಾಗಿಲ್ಲ ಬಿಡು. ನಿನ್ನ ಭೇಟಿಯಾಗದೆ ಹೋಗೋದಕ್ಕೆ ಸಾಧ್ಯಾನೇ ಇರಲಿಲ್ಲ. ಅದಕ್ಕೇ ವೇಟ್ ಮಾಡ್ತಾ ಇದ್ದೆ".

"ರಿಯಲಿ? ದಟ್ಸ್ ವೆರಿ ಕೈಂಡ್ ಆಫ್ ಯು, ಏನು ಅಂಥಾ ವಿಶೇಷ?".

ತನ್ನ ಬ್ಯಾಗ್‌ನಿಂದ ಕಾರ್ಡೊಂದನ್ನು ತೆಗೆದು ನನಗೆ ಕೊಟ್ಟಳು.

"ನಾನು, ರವಿ ಮದುವೆ ಆಗ್ತಾ ಇದೀವಿ, ತುಂಬಾ ದಿನ ಪೋಸ್ಟ್ ಪೋನ್ ಮಾಡೋದು ಬೇಡ ಅನ್ನಿಸ್ತು. ಖಂಡಿತಾ ನೀನು ಬರಬೇಕು. ನಿನ್ನ ಮಿಸಸ್ ಮತ್ತು ಮಗಳನ್ನ ಮರೀದೇ ಕರಕೊಂಡು ಬಾ. ನಿನ್ನ ಮಗಳ ಹೆಸರು ರಚನಾ ಅಲ್ವಾ? ತುಂಬಾ ಚೂಟಿ ಅವಳು. ನಾನು ಕಳೆದ ವರ್ಷದ ಇಯರ್ ಎಂಡ್ ಪಾರ್ಟಿಯಲ್ಲಿಯೇ ಅವಳನ್ನು ಗುರುತಿಸಿದ್ದೆ". "ಥಾಂಕ್ಸ್... ಥಾಂಕ್ಯೂ ವೆರಿ ಮಚ್, ನಾನು ಖಂಡಿತಾ ಬರ್ತೀನಿ".

ನನಗೆ ನಿಜಕ್ಕೂ ಹೃದಯ ತುಂಬಿ ಬಂತು. ಅನಾವಶ್ಯಕವಾಗಿ ಶಶಿ ಬಗ್ಗೆ ಏನೇನೋ ಕಲ್ಪನೆ ಮಾಡಿಕೊಂಡುಬಿಟ್ಟೆ. ಶಿ ಈಜ಼್ ಅ ಗುಡ್ ಗರ್ಲ್! ಸುಮ್ಮನೆ ಅವಳನ್ನು ಕಾಯಿಸಿಬಿಟ್ಟೆ.

"ಶಶಿ, ಐಸ್ ಕ್ರೀಂ ತಿನ್ನೋಣ ಬರ್ತಿಯ, ನಿನ್ನ ಮದುವೆ ಸಿಹಿ ಸುದ್ದಿಗಾಗಿ ನಾನು ಸ್ಪಾನ್ಸರ್ ಮಾಡ್ತೀನಿ"

"ಶೂರ್"

ಹೋಟೆಲಿನಲ್ಲಿ ಐಸ್ ಕ್ರೀಂಗೆ ಆರ್ಡರ್ ಮಾಡಿದ ಮೇಲೆ ನಾನೇ ಮಾತನ್ನಾರಂಭಿಸಿದೆ.

"ಶಶಿ, ಆ ದಿನ ನಾನು ಸ್ವಲ್ಪ ಖಾರವಾಗಿಯೇ ಮಾತನಾಡಿದೆ. ಐ ಆಂ ಸಾರಿ, ಆ ಸಂದರ್ಭಾನೇ ಹಾಗಿತ್ತು. ನೀನು ಹೇಳಿದ ಮಾತುಗಳಲ್ಲೂ ನಂಗೆ ನಿಜಾಂಶ ಇದೆ ಅಂತ ಈಗ ಅನ್ನಿಸ್ತಾ ಇದೆ. ಆದರೆ ಕಂಪನಿಯಿಂದ ನಿನ್ನ ಫೈರ್ ಮಾಡೋದನ್ನ ತಪ್ಪಿಸೋಕೆ ನಂಗೆ ಸಾಧ್ಯಾನೇ ಇರಲಿಲ್ಲ". ನನಗೇ ಗೊತ್ತಿಲ್ಲದಂತೆ ನನ್ನ ಧ್ವನಿಯಲ್ಲಿ ತಪ್ಪೊಪ್ಪಿಗೆಯ ಭಾವ ಮೂಡಿತ್ತು. ಆದರೆ ಶಶಿ ನನ್ನ ಮಾತನ್ನು ಕೇಳಿದ್ದೇ ಬಿದ್ದು ಬಿದ್ದು ನಗಲಾರಂಭಿಸಿದಳು.

"ರಾಜು, ನೀನು ನಿಜಕ್ಕೂ ತುಂಬಾ ಇನ್ನೋಸೆಂಟ್ ಕಣೋ... ಇನ್ನೂ ನಿಂಗೆ ನಿಜ ವಿಷಯ ಗೊತ್ತಾಗಿಲ್ಲ. ನೀನು ಅಪ್ರೈಸಲ್‌ನಲ್ಲಿ ಕಡಿಮೆ ಅಂಕ ಕೊಟ್ಟಿದ್ದಕ್ಕೆ ನನ್ನ ಫೈರ್ ಮಾಡಿದ್ದು ಅಂಡ್ಕೊಂಡಿದ್ದೀಯ?".

"ಮತ್ತಿನ್ನೇನು?".

"ಅದರ ಕಾರಣಾನೇ ಬೇರೆ. ಈಗ ಹೇಳೀನಿ ಕೇಳು, ಸಂದೀಪ್‌ಗೆ ನನ್ನ ಕಂಡರೆ ಹೆದರಿಕೆ. ಅದಕ್ಕೇ ನನ್ನ ಹೊರ ಹಾಕೋದಕ್ಕೆ ಕಾಯ್ತಾ ಇದ್ದ. ನೇರವಾಗಿ ನನ್ನ ಜೊತೆ ಮಾತಾಡೋಕೆ ಧೈರ್ಯ ಇಲ್ಲ. ಅದಕ್ಕೇ ನಿನ್ನ ಬಳಸಿಕೊಂಡ".

"ಅವನ್ಯಾಕೆ ನಿನ್ನ ಕಂಡರೆ ಹೆದರಿಕೋಬೇಕು?" ನಂಗೆ ನಿಜಕ್ಕೂ ಅವಳ ಮಾತು ಅರ್ಥವಾಗಲಿಲ್ಲ.

"ವೆರಿ ಸಿಂಪಲ. ನಾನು ಕಂಪನಿಯಲ್ಲಿ ಇನ್ನೂ ಒಂದೆರಡು ತಿಂಗಳು ಕೆಲಸ ಮಾಡಿದೆನೆಂದರೆ, ಇರೋ ಎಲ್ಲಾ ಒಳ್ಳೆಯ ಸಾಫ್ಟ್‌ವೇರ್ ಇಂಜಿನಿಯರ್ಸ್ ಅಮೆರಿಕಾದಲ್ಲಿರ್ತಾರೆ, ಅಷ್ಟೇ!"

"ಆರ್ ಯು ಅ ಹೆಡ್ ಹಂಟರ್?"

"ಯೆಸ್... ಐ ಆಂ" ಅಂತ ಮುಗುಳು ನಕ್ಕು ಮಾತನ್ನು ಮುಂದುವರೆಸಿದಳು. "ನಿಂಗೆ ನೆನಪಿದಾ? ನಿನ್ನ ಪ್ರಾಜೆಕ್ಟ್ ಶುರುವಾಗುವ ಹೊತ್ತಿಗೆ, ಅಂದರೆ ನಾನು ಈ ಕಂಪನಿ ಸೇರಿ ಒಂದು ತಿಂಗಳಾಗುವುದರೊಳಗೆ, ಇದ್ದ ಬದ್ದ ಟೆಕ್ನಿಕಲ್ ಲೀಡರ್‌ಗಳು, ಪ್ರಾಜೆಕ್ಟ್ ಮ್ಯಾನೇಜರ್‌ಗಳು ರಾಜೀನಾಮೆ ಕೊಟ್ಟು ಅಮೆರಿಕಾಕ್ಕೆ ಹಾರಿದ್ದು? ಆದರೆ ಆಗ ಸಂದೀಪ್‌ಗೆ ಗೊತ್ತಾಗಲಿಲ್ಲ. ನಾನು ಮಾಮೂಲಿ ಫ್ರೆಷರ್ ಅಂತ ಗಮನ ಕೊಡಲಿಲ್ಲ. ಆದರೆ ನೀನು ಎಷ್ಟೇ ಜನರನ್ನ ಇಂಟರ್‌ವ್ಯೂ ಮಾಡಿದರೂ ಯಾವೊಬ್ಬ ಟೆಕ್ನಿಕಲ್ ಲೀಡರ್ ಕೂಡಾ ಇಲ್ಲಿ ಸೇರದೆ ಅಮೆರಿಕಾಕ್ಕೆ ಹಾರಲಾರಂಭಿಸಿದಾಗ ಅವನಿಗೆ ಸ್ವಲ್ಪ ವಾಸನೆ ಬಡಿಯಲಿಕ್ಕೆ ಶುರುವಾಯ್ತು. ಆಮೇಲಕ್ಕೆ ಪ್ರಾಜೆಕ್ಟ್ ಫ್ಲಾಪ್ ಆಗಿ ನನ್ನ ಜೊತೆಗಾರರೆಲ್ಲಾ ರಾಜೀನಾಮೆ ಕೊಟ್ಟು ಹಾರಿ ಹೋದ ತಕ್ಷಣ ಪತ್ತೆ ಹಚ್ಚಿಬಿಟ್ಟ. ನನ್ನ ನೋಡಿದ್ರೆ ಹೆದರಿಕೊಳ್ಳಲಿಕ್ಕೆ ಶುರು ಮಾಡಿಬಿಟ್ಟ. ಕಡೆಗೆ ನಿನ್ನ ಉಪಯೋಗಿಸಿಕೊಂಡು ಹೊರ ಹಾಕಿದ, ಅಷ್ಟೇ!".

"ಐ ಕಾಂಟ್ ಬಿಲೀವ್ ದಿಸ್".

"ಯು ಹ್ಯಾವ್ ಟು.... ಯಾಕೆಂದ್ರೆ ಅದೇ ಸತ್ಯ. ಆದರೆ ಸಂದೀಪ್ ವಾಜ್ ಟೂ ಲೇಟ್... ನನ್ನ ಹೊರಹಾಕಿದೆ ಅಂತ ಖುಷಿ ಪಟ್ಟುಕೊಳ್ಳಬೇಕಿಲ್ಲ. ಈಗಾಗಲೇ ನಾನು ಸಾಕಷ್ಟು ಹಣ ಮಾಡಿ ಆಯ್ತು, ಯು ನೋ ದ ರೇಟ್ಸ್? ಒಬ್ಬ ಪ್ರೊಫೆಷನಲ್‌ನ ಕಳುಹಿಸಿದರೆ ನಂಗೆ ಎರಡು ಸಾವಿರ ಡಾಲರ್ ಸಿಗುತ್ತೆ. ಅಂದರೆ ಹತ್ತಿರ ಹತ್ತಿರ ಒಂದು ಲಕ್ಷ!".

"ಎಷ್ಟು ಜನಾನ್ನ ಕಳುಹಿಸಿ ಆಯ್ತು?".

“ಎಲ್ಲಾ ಒಳ್ಳೆ ಕ್ಯಾಂಡಿಡೇಟ್‌ಗಳು ಹೋಗಿ ಆಯ್ತು. ನಿನ್ನೊಬ್ಬನನ್ನ ಬಿಟ್ಟು...” ಅಂತ ನೇರವಾಗಿ ಬಾಣ ಬಿಟ್ಟು ಕಿರುಗಣ್ಣಲ್ಲಿ ನನ್ನನ್ನು ನೋಡಿದಳು. ನನಗೆ ಒಮ್ಮಿಂದೊಮ್ಮೆಲೆ ಮುಜುಗರವಾಯ್ತು.

“ನೋ... ನೋ... ನಂಗೆ ಕೆಲಸ ಛೇಂಜ್ ಮಾಡೋಕೆ ಆಸಕ್ತಿನೇ ಇಲ್ಲ. ನಾನು ಇಲ್ಲಿ ಖುಷಿಯಾಗಿ ಇದ್ದೀನಿ” ಅಂತ ಬಡಬಡಿಸಿದೆ.

“ರಾಜು... ನನ್ನ ಕಣ್ಣನ್ನ ನೋಡಿ ಹೇಳು. ನಿಜಕ್ಕೂ ನೀನು ಖುಷಿಯಾಗಿದೀಯ? ಸಂದೀಪ್ ನಿನ್ನ ತುದಿ ಬೆರಳಲ್ಲಿ ಆಟ ಆಡಿಸ್ತಿದಾನೆ. ಅವನು ನಿಂಗಿಂತಾ ವಯಸ್ಸಿನಲ್ಲಿ ಎರಡು ವರ್ಷ ಚಿಕ್ಕೋನು ಅಂತ ನಿಂಗೆ ಗೊತ್ತಲ್ಲ?”

“ಯೆಸ್... ನಂಗೊತ್ತು. ಆದರೆ ನಂದು ಟೆಕ್ನಿಕಲ್ ಬ್ಯಾಕ್‌ಗ್ರೌಂಡ್, ಅವನು ಮ್ಯಾನೇಜ್‌ಮೆಂಟ್ ಬ್ಯಾಕ್‌ಗ್ರೌಂಡ್‌ನಿಂದ ಬಂದವನು. ನನಗೆ ಸಂಬಳ ಅವನಿಗಿಂತಾ ಜಾಸ್ತಿ ಬರುತ್ತೆ”.

“ಇರಬಹುದು. ಆದರೆ ಅದು ಜಾಸ್ತೀನಾ? ಅಬ್ಬಬ್ಬಾ ಅಂದ್ರೆ ತಿಂಗಳಿಗೆ ನಿಂಗೆ ಐವತ್ತು ಸಾವಿರಕ್ಕಿಂತ ಹೆಚ್ಚಿಗೆ ಬರ್ತಾ ಇಲ್ಲ... ಆಂ ಐ ರೈಟ್? ಸ್ವಲ್ಪ ಯೋಚನೆ ಮಾಡು. ಐ ಹ್ಯಾವ್ ಆ ವೆರಿ ಗುಡ್ ಆಫರ್ ಫಾರ್ ಯು. ನಿನ್ನ ಯೋಗ್ಯತೆಗೆ ತಕ್ಕಂಥಹುದು. ನಿನ್ನ ಸಂಬಳಾನ ಡಾಲರ್ಸ್‌ನಲ್ಲಿ ಎಣಿಸಬಹುದು. ಒಳ್ಳೆ ಲೈಫ್ ಸ್ಟೈಲ್ ಇರುತ್ತೆ. ಥಿಂಕ್ ಅಗೇನ್. ಸಂದೀಪ್ ಕೈ ಕೆಳಗೆ ಎಷ್ಟು ದಿನ ಅಂತ ಕೊಳಿತೀಯ?”.

“ಶಶಿ, ಪ್ಲೀಸ್... ನಂಗೆ ಈಗ ಏನೂ ಯೋಚನೆ ಮಾಡೋಕೆ ಆಗ್ತಾ ಇಲ್ಲ... ಪ್ಲೀಸ್ ಲೀವ್ ಮಿ ನೌ".

“ಶೂರ್, ನೀನು ಸಾಕಷ್ಟು ಟೈಂ ತೊಗೋ. ನಾಳೆ ರಾತ್ರಿ ನಿನ್ನ ಮನೀಗೆ ಫೋನ್ ಮಾಡ್ತೀನಿ, ಸರೀನಾ?”.

“ಓಕೆ. ಆದರೆ ನನ್ನ ಮನೆ ಫೋನ್ ನಂಬರ್ ನಿನ್ನ ಹತ್ತಿರ ಇದೆಯಾ?”.

“ಹೆಡ್ ಹಂಟರ್ ಅಂತ ಹೇಳ್ತಿದೀನಿ. ಅಷ್ಟೂ ಇರಲ್ವಾ?” ಸಣ್ಣಗೆ ನಕ್ಕಳು. “ಆದರೆ ಒಂದು ಮಾತು. ಈ ವಿಷಯ ಯಾರ ಮುಂದೂ ನೀನು ಹೇಳಬಾರದು. ಇಟ್ ಶುಡ್ ಬಿ ಕಾನ್ಫಿಡೆನ್ಶಿಯಲ್”.

"ಶೂರ್... ಯು ಕಾನ್ ಬಿಲೀವ್ ಮಿ. ಐ ಥಿಂಕ್ ನೌ ಯು ಶುಡ್”.

ಐಸ್ ಕ್ರೀಂ ತಿನ್ನುವಾಗ ಹೆಚ್ಚು ಮಾತನಾಡಲಿಲ್ಲ. ಅವಳು ರವಿ ಮತ್ತೆ ಬಲವಂತದಿಂದ ಕರೆದುಕೊಂಡು ಹೋದ ಜಗ್ಗೇಶ್ ಫಿಲ್ಮ್‌ನಲ್ಲಿನ ಹಾಸ್ಯದ ತುಣುಕುಗಳನ್ನು ಹೇಳಿ ನಗುತ್ತಿದ್ದಳು. ನಾನು ನಗುವ ಸ್ಥಿತಿಯಲ್ಲಿರಲಿಲ್ಲ. ಮನಸ್ಸು ಭಾರಿ ಭಾರಿ ಯೋಚನೆಗಳಲ್ಲಿ ಸಿಕ್ಕಿ ಹಾಕಿಕೊಂಡಿತ್ತು.

ಹೌದು, ನಾನ್ಯಾಕೆ ಈ ಸಂದೀಪ್ ಕೈ ಕೆಳಗೆ ಕೆಲಸ ಮಾಡಬೇಕು? ನನ್ನ ಈ ಜುಜುಬಿ ಐವತ್ತು ಸಾವಿರದ ಸಂಬಳಕ್ಕೆ ಯಾಕಿಷ್ಟು ಒದ್ದಾಡಬೇಕು? ಹಣವನ್ನು ಡಾಲರ್‌ನಲ್ಲಿ ಎಣಿಸುವ ಅವಕಾಶವನ್ನೇ ಕಳೆದುಕೊಳ್ಳಬೇಕು? ಈ ಪೊಲ್ಯೂಟಡ್ ಸಿಟಿಯಲ್ಲಿ ನನ್ನ ಜೀವನವನ್ನೇಕೆ ಹಾಳು ಮಾಡಿಕೊಳ್ಳಬೇಕು?

“ಮದುವೆಗೆ ಖಂಡಿತಾ ಬರಬೇಕು” ಅಂತ ಮತ್ತೊಮ್ಮೆ ಹೇಳಿ ಶಶಿ ಹೊರಟು ಹೋದಳು. ಅವಳು ಹೋದ ನಂತರ ನನಗೆ ಅವಳು ನಿಜವಾಗಿಯೂ ನನ್ನನ್ನು ಮದುವೆಗೆ ಕರೆಯಲೆಂದು ಬಂದವಳೇ ಅಲ್ಲ ಅಂತನ್ನಿಸಿತು. ಮತ್ತೆ ಆಫೀಸಿಗೆ ಮರಳಿ ಬಂದಾಗ, ನನ್ನನ್ನು ನೋಡಿದ್ದೇ ನೀತು, “ರಾಜು, ಸಂದೀಪ್ ನಿನ್ನ ಸಲುವಾಗಿ ಕಾಯ್ತಾ ಇದಾನೆ” ಅಂತಂದಳು. ಆಗಲೇ ಅವನಿಗೆ ಸುದ್ದಿ ಮುಟ್ಟಿರಬೇಕು!

“ಸ್ವೀಟಿ, ಶಾಲ್ ಐ ಟೆಲ್ ಯು ಸಂ ಥಿಂಗ್ ಸ್ವೀಟ್” ಅಂತ ನೀತುಳ ಮುಖಕ್ಕೆ ಮುಖ ಕೊಟ್ಟು ಕೇಳಿದೆ. “ಶೂರ್...” ಕಣ್ಣಲ್ಲಿ ಆಹ್ವಾನವನ್ನು ತುಂಬಿ ನೀತು ಮಾತನಾಡಿದಳು. “ಯು ಆರ್ ಅ ಬ್ಲಡಿ ಬಿಚ್” ಅಂತಂದು ಅವಳ ಪ್ರತಿಕ್ರಿಯೆಗೂ ಕಾಯದೆ ನನ್ನ ಕಂಪ್ಯೂಟರ್ ಬಳಿ ಹೊರಟು ಹೋದೆ. ಹಾಗೆ ಹೋಗುವಾಗ ನಾನು ಖಂಡಿತವಾಗಿಯೂ ಶಶಿ ಕೊಡಿಸುವ ಹೊಸ ಕೆಲಸವನ್ನು ಸ್ವೀಕಾರ ಮಾಡ್ತೇನೆ ಅಂತ ನಿರ್ಧರಿಸಿದೆ.

ಕಂಪ್ಯೂಟರ್ ಮುಂದೆ ಕುಳಿತುಕೊಂಡ ಮೇಲೆ ತಣ್ಣನೆಯ ನೀರನ್ನು ಕುಡಿಯಬೇಕೆನ್ನಿಸಿತು. ಜವಾನ ಓಡುತ್ತಾ ತಂದು ಕೊಟ್ಟ. ನಾನು ನೀರು ಕುಡಿದ ಮೇಲೆ "ಸಾರ್... ಮಾತಾಡಬೇಕಿತ್ತು" ಅಂತಂದ. ಎರಡು ದಿನದ ಕೆಳಗೆ ಅವನು ಹಾಗೆ ಹೇಳಿದ್ದು ನೆನಪಾಯ್ತು.

"ಹೇಳಪ್ಪಾ... ಅದೇನು ವಿಷಯ?".

"ಸಾರ್... ಮನ್ಯಾಗೆ ನಂಗೆ ಮದುವೆ ಮಾಡಬೇಕು ಅಂತ ನಿರ್ಧಾರ ಮಾಡ್ಯಾರೆ. ಹುಡುಗಿ ಗೊತ್ತಾಗೈತೆ" ಅಂತ ತಲೆ ಕೆರೆಯುತ್ತಾ ನಕ್ಕ.

"ಗುಡ್... ಅದಕ್ಯಾಕೆ ಸಂಕೋಚ ಪಡ್ತೀಯೋ ಮಾರಾಯ... ಖುಷಿಯಿಂದ ಹೇಳು..."

"ಅದು ಹಂಗಲ್ಲ ಸಾರ್..."

"ಈಗ ಸಂಬಳ ಬರೀ ಎಂಟು ನೂರು ರೂಪಾಯಿ ಬರ್ತೆತೆ ಸಾರ್, ಸಾಕಾಗಂಗಿಲ್ಲ. ನಾಳೆ ಮದುವೆ ಮಾಡಿಕೊಂಡು ಹೆಂಡರು ಬಂದ ಮೇಲೆ ಭಾಳ ಫಜೀತಿ ಆಗೈತೆ. ಅದಕ್ಕೇ... ಇನ್ನೂ ಎರಡು ನೂರು ರೂಪಾಯಿ ಜಾಸ್ತಿ ಮಾಡಿದ್ರೆ ಹೆಂಗನ್ನ ಅಡ್ಜಸ್ಟ್ ಮಾಡ್ಕೊಬೋದು. ನೀವು ಸಂದೀಪ್ ಸಾರ್‌ಗೆ ಹೇಳಿದ್ರೆ..." ಅಂತ ಹಲ್ಲು ಕಿರಿದ. ನನಗೆ ಏನು ಮಾತನಾಡಬೇಕೋ ತೋಚಲಿಲ್ಲ. ಬೆಳಿಗ್ಗೆಯಿಂದ ಸಂಜೆಯವರೆಗೆ ಏಕಪ್ರಕಾರವಾಗಿ ದುಡಿಯುವ ಈ ಜವಾನನಿಗೆ ಬರೀ ಎಂಟು ನೂರು ರೂಪಾಯಿ ಸಂಬಳವೆ? ನನಗೆ ಗೊತ್ತೇ ಇರಲಿಲ್ಲ.

**ಆಕರ : ಯುಗಾದಿ – ವಸುಧೇಂದ್ರ**

# ೨.೩ ರಾಗಿ ಬ್ರಹ್ಮ ಲಕ್ಷ್ಮಣಯ್ಯ

**– ಶರಣಬಸವೇಶ್ವರ ಅಂಗಡಿ**

ಬೆಂಗಳೂರು ಕ್ಯಾನ್ಸರ್ ಆಸ್ಪತ್ರೆಯ ಒಂದು ವಾರ್ಡು, ಹಲವಾರು ಅವಾರ್ಡುಗಳಿಂದ ಗೌರವಿತರಾಗಿದ್ದ, ಗೌರವರ್ಣದ ವ್ಯಕ್ತಿಯೋರ್ವರು ಆ ವಾರ್ಡಿನ ಹಾಸಿಗೆಯಲ್ಲಿ ಅಂಗಾತ ಮಲಗಿದ್ದರು. ಸೂರನ್ನೇ ತದೇಕ ಚಿತ್ತದಿಂದ ದಿಟ್ಟಿಸುತ್ತ ತಮ್ಮೊಳಗೆ ಏನನ್ನೋ ಮಾತಾಡಿಕೊಳ್ಳುತ್ತಿದ್ದಂತಿತ್ತು. ನಡು ನಡುವೆ ಕೈಗಳಿಂದ ಸನ್ನೆ ಮಾಡುತ್ತ, ಬಲ ತೋರು ಬೆರಳಿನಲ್ಲಿ ಗುಣಾಕಾರದ ಚಿಹ್ನೆ ಹಾಕುವುದು, ನಂತರ ತಲೆಯಾಡಿಸಿ ಅದನ್ನು ತಿದ್ದುವುದು ನಡೆದೇ ಇತ್ತು. ಹಾಸಿಗೆ ಬದಿಯಲ್ಲಿ ಕೂತು ತುಂಬ ಹೊತ್ತಿನಿಂದ ಅವರನ್ನೇ ಗಮನಿಸುತ್ತದ್ದ ಮಗ ವಸಂತನಿಗೆ ಕುತೂಹಲ ತಡೆಯದೇ ಕೇಳಿದ.

“ಏನಣ್ಣಾ, ಏನ್ ಮಾಡ್ತಿದ್ದೀರಾ?”

ಆಲೋಚನೆಯಲ್ಲಿ ನೆರಿಗೆಗಟ್ಟಿದ್ದ ಹಣೆ ಸಡಿಲವಾಯ್ತು, ಮುಖದಲ್ಲಿ ಕಿರು ಮಂದಹಾಸ ಮಿನುಗಿತು.

’ಏನಿಲ್ಲ ಕಣೋ, ರಾಗಿ ಹೈಬ್ರಿಡ್‌ಗಳನ್ನು ಮಾಡ್ತಿದೀನಿ.”

ಕ್ಷೀಣದನಿಯ ಉತ್ತರ. ರಾಗಿಯ ಏಳಿಗೆಗೆ ಜೀವನವನ್ನೇ ತೇಯ್ದ ತಂದೆಯ ಉತ್ತರದಿಂದ ಮಗನ ಕಣ್ಣು ತುಂಬಿಬಂದವು.

ಆ ಮಹಾನ್ ವ್ಯಕ್ತಿಯೇ ಶ್ರೀಯುತ ಲಕ್ಷ್ಮಣಯ್ಯ. ’ರಾಗಿ ಲಕ್ಷ್ಮಣಯ್ಯ’ ಎಂದೇ ಖ್ಯಾತರಾಗಿದ್ದ ಅಪೂರ್ವ ತಳಿ ತಜ್ಞ.

ರಾಗಿಯ ಮೇಲೆ ಲಕ್ಷ್ಮಣಯ್ಯನವರಿಗೆ ಅನುರಾಗ ಮೊಳೆತದ್ದು ಐವತ್ತರ ದಶಕದಲ್ಲಿ ಆಗ ಅವರಿಗೆ ಮೂವತ್ತರ ಹರೆಯ. ಹರೆಯದ ಈ ಪ್ರೀತಿ ಗಾಢವಾಗುತ್ತಲೇ ಹೋಗಿ ಅವರು ಕಾಲವಶರಾಗುವವರೆಗೂ ಮುಂದುವರಿಯಿತು.

ಲಕ್ಷ್ಮಣಯ್ಯನವರ ಹುಟ್ಟೂರು ಮೈಸೂರು ತಾಲ್ಲೂಕಿನ ಹಾರೋಹಳ್ಳಿ, ೧೯೨೧ ಇಸವಿಯ ಮೇ ಹದಿನೈದರಂದು ಬಡ ರೈತ ಪರಿವಾರದಲ್ಲಿ ಜನಿಸಿದ ಇವರು ಎಳವೆಯಿಂದಲೇ ಎಲ್ಲ ಬಗೆಯ ಕೃಷಿ ಕಾಯಕಗಳಲ್ಲಿಯೂ ಕೈಯಾಡಿಸುತ್ತಿದ್ದರು. ಇದರಿಂದ ಅವರಲ್ಲಿ ಬೇಸಾಯ ಬಗ್ಗೆ ಒಲವು ಮೂಡಿತು.

ಅವರ ಮೊದಲ ಎರಡು ವರ್ಷಗಳ ವಿದ್ಯಾಭ್ಯಾಸ ನಡೆದದ್ದು ಕೂಲಿಮಠದಲ್ಲಿ, ಅರೆಬರೆ ಅಕ್ಷರಸ್ಥ ಮಾಸ್ತರರಿಂದ; ಅದಕ್ಕೆ ಕೊಡುತ್ತಿದ್ದ ಶುಲ್ಕ, ತಿಂಗಳಿಗೆ ನಾಲ್ಕಾಣೆ, ವರ್ಷಕ್ಕೊಂದು ಕ್ವಿಂಟಾಲು ರಾಗಿ ಮತ್ತು ಹತ್ತು ಕಿಲೋ ಬೇಳೆಕಾಳು.

ಅನಂತರ ಅದೇ ಹಳ್ಳಿಯ ಸರ್ಕಾರಿ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪೂರೈಸಿದ ಲಕ್ಷ್ಮಣಯ್ಯನವರ ನುಡಿಗಳಲ್ಲಿ, ಆಗಿನ ದಿನಗಳಲ್ಲಿ ನಮಗೆ ಸ್ಲೇಟು (ಪಾಟಿ), ಬಳಪ ಏನೂ ಸಿಗುತ್ತಿರಲಿಲ್ಲ. ಮರಳನ್ನು ನೆಲದ ಮೇಲೆ ಸಮನಾದ ದಪ್ಪಕ್ಕೆ ಹರಡಿ, ಅದರ ಮೇಲೆ ಅಕ್ಷರಾಭ್ಯಾಸ ಮಾಡುತ್ತಿದ್ದೆವು.

ಶಾಲೆ ಮುಗಿದ ಮೇಲೆ ಮರಳನ್ನು ಗುಡ್ಡೆ ಹಾಕುತ್ತಿದ್ದೆವು. ಪ್ರತಿ ಶುಕ್ರವಾರವೂ ಆ ಮರಳ ಗುಪ್ಪೆಗೆ ವಿದ್ಯಾಧಿದೇವತೆ ಸರಸ್ವತಿಯ ಹೆಸರಿನಲ್ಲಿ ಪೂಜೆ ನಡೆಯುತ್ತಿತ್ತು. ಬಾಲ್ಯದ ಆ ಮುಗ್ಧತೆಯ ದಿನಗಳು ಅತ್ಯಂತ ಆನಂದದ ದಿನಗಳಾಗಿದ್ದವು.

ಗ್ರಾಮೀಣ ಪರಿಸರದಿಂದ ಬಂದ ಜಾಣ ವಿದ್ಯಾರ್ಥಿಯೆಂದು ಅವರಿಗೆ ಉಚಿತ ವಸತಿ ಮತ್ತು ಊಟದ ಸೌಕರ್ಯಗಳುಳ್ಳ ಮಾಧ್ಯಮಿಕ ಶಾಲೆಗೆ ಪ್ರವೇಶ ದೊರಕಿತು. ಅಲ್ಲಿ ಸಾಮಾನ್ಯ ಶಿಕ್ಷಣದ ಜೊತೆ ಚರಕದಿಂದ ನೂಲು ತೆಗೆಯುವುದನ್ನೂ ನೇಯ್ಗೆಯನ್ನೂ ಲಕ್ಷ್ಮಣಯ್ಯ ಕಲಿತರು.

ಅವರದೇ ಶಬ್ದಗಳಲ್ಲಿ “ನನ್ನ ಕ್ರಮಬದ್ಧ ವ್ಯಾಸಂಗದೊಟ್ಟಿಗೇ ಜೀವನದ ಶಿಸ್ತನ್ನೂ ನಾನು ಕಲಿತಿದ್ದು ಸ್ವತಃ ಕಟ್ಟುನಿಟ್ಟಿನ ಶಿಸ್ತುಗಾರ ಮತ್ತು ಮಾನವತಾವಾದಿ ವಾರ್ಡನ್, ಶ್ರೀ ಎಸ್. ದೊರೆರಾಜ್‌ರವರಿಂದ. ಅಲ್ಲಿ ಏಳನೆಯ ಇಯತ್ತೆಯನ್ನು ಫಸ್ಟ್ ಕ್ಲಾಸಿನಲ್ಲಿ ಪಾಸು ಮಾಡಿಕೊಂಡು, ಹಾಸನದ ಸರಕಾರಿ ಹರಿಜನ ಹಾಸ್ಟೆಲಿನಲ್ಲಿ ಸೀಟು ಪಡೆದೆ. ಹೈಸ್ಕೂಲ್ ವಿದ್ಯಾಭ್ಯಾಸ ಮುಗಿದ ಮೇಲೆ ಇಂಟರ್ ಮೀಡಿಯೆಟ್ ವ್ಯಾಸಂಗವನ್ನು ಮೈಸೂರಿನ ಮಹಾರಾಜಾ

ಕಾಲೇಜಿನಿಂದ ಪೂರೈಸಿದೆ. ಆ ನಂತರ ರಸಾಯನ ಶಾಸ್ತ್ರ, ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ ವಿಷಯಗಳನ್ನು ಆಯ್ದುಕೊಂಡು ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಬಿ.ಎಸ್.ಸಿ. ವಿದ್ಯಾರ್ಥಿಯಾದೆ.”

ಬಿ.ಎಸ್ಸಿ ಆನರ್ಸ್ ಪದವೀಧರ ಲಕ್ಷ್ಮಣಯ್ಯ ರೈಲ್ವೆ ಇಲಾಖೆಯಲ್ಲಿ ಕ್ಲರ್ಕ್ ಕೆಲಸಕ್ಕೆ ಸೇರಿದರು. ವಿದ್ಯಾರ್ಥಿ ದೆಸೆಯಲ್ಲೇ ಗಾಂಧೀಜಿಯವರ ಬದುಕು, ಚಿಂತನೆ ಮತ್ತು ಬರಹಗಳಿಂದ ಗಾಢವಾಗಿ ಪ್ರಭಾವಿತರಾಗಿದ್ದ ಅವರಿಗೆ ಇಲಾಖೆಯಲ್ಲಿ ತುಂಬಿದ ಭ್ರಷ್ಟಾಚಾರ, ಲಂಚಗುಳಿತನ ಕಂಡು ರೋಸಿ ಹೋಯಿತು. ಸೇರಿದ ಆರೇ ತಿಂಗಳಿಗೆ ಸ್ಥಾನ ತೆರವು ಮಾಡಿದರು. ಉದ್ಯೋಗ ವಿನಿಮಯ ಕಚೇರಿಯಲ್ಲಿ ಹೆಸರು ನೋಂದಾಯಿಸಿ ಕಾಯ್ದರು. ಆರು ತಿಂಗಳಲ್ಲೇ ಅವಕಾಶ ಅವರನ್ನು ಅರಸಿ ಬಂತು. ಅವರು ಎಳವೆಯಿಂದಲೇ ಬೆಳೆಸಿಕೊಂಡ ಕೃಷಿ ಕುರಿತ ಆಸ್ಥೆಗೆ ಅನುಗುಣವಾದ ಅವಕಾಶ. ಕೃಷಿ ಇಲಾಖೆಯಲ್ಲಿ ಕಿರಿಯ, ಸಹಾಯಕ ಸಸ್ಯಶಾಸ್ತ್ರಜ್ಞನ ಹುದ್ದೆ. ಮಂಡ್ಯದ ವಿಶ್ವೇಶ್ವರಯ್ಯ ಕಾಲುವೆ (ವಿ.ಸಿ.) ಕೃಷಿ, ಸಂಶೋಧನಾ ಫಾರ್ಮಿನಲ್ಲಿ ಜ್ಯೂನಿಯರ್ ಅಸಿಸ್ಟೆಂಟ್ ಬಾಟನಿಸ್ಟ್ ಆಗಿ ಸೇರಿಕೊಂಡಾಗ ಅವರಿಗೆ ದೊರೆತ ಸೌಲಭ್ಯಗಳೆಂದರೆ ಚಿಕ್ಕದೊಂದು ಶೆಡ್ಡಿನ ಆಫೀಸು ಮತ್ತು ಖಾಲಿ ಸೀಮೆಯೆಣ್ಣೆ ಡಬ್ಬಗಳ ಮೇಲೆ ಅಡ್ಡಡ್ಡಲಾಗಿ ಇಟ್ಟ ಹಲಗೆಯ ಮೇಜು, ಫಾರ್ಮಿನ ಮ್ಯೂಸಿಯಂ ಪ್ಲಾಟು (ಬೆಳೆ ಸಂಗ್ರಹಾಲಯದ ತೌರು)ಗಳಲ್ಲಿ ವಿವಿಧ ಬೆಳೆಗಳ ತಳಿಗಳನ್ನು ಬೆಳೆಸಿ ರೈತರ ಬೆಳೆಗಳ ದೃಶ್ಯ ಬೋಧನೆಯ ಕೋರ್ಸ್ ಕಲಿಕೆಗೆ ನೆರವಾದರು.

“ಬರೀ ಬೆಳೆ ಬೆಳೆದು ರೈತರಿಗೆ ಅವನ್ನು ತೋರಿಸುವ ಈ ಕೆಲಸ ಬೋರು. ಇದರಲ್ಲಿ ಸಾಧಿಸಲು ಏನಿದೆ? ಸಂಶೋಧನೆ ಕೈಗೊಂಡು ಮಹತ್ತರವಾದದ್ದನ್ನೇನಾದರೂ ಸಾಧಿಸಬೇಕು” ಎಂಬ ತುಡಿತ ಈ ಕಿರಿಯ ವಿಜ್ಞಾನಿಯ ಎದೆಯನ್ನು ಮಿಡಿಯುತ್ತಿತ್ತು.

ಆದರೆ ತೀರಾ ಕಿರಿಯ ಹುದ್ದೆಯಲ್ಲಿದ್ದುದರಿಂದ ಅವರಿಗೆ ಆಯ್ಕೆಯ ಸ್ವಾತಂತ್ರ್ಯವಿರಲಿಲ್ಲ. ಸಸ್ಯಶಾಸ್ತ್ರಜ್ಞನಾದ್ದರಿಂದ ಯಾವುದಾದರೊಂದು ಬೆಳೆಯ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಆಸೆ ಅವರಲ್ಲಿ ಬಲವಾಗುತ್ತಲೇ ಹೋಯ್ತು. ಆ ದಿನಗಳಲ್ಲೆಲ್ಲ ರಾಗಿ ಬೆಳೆ ಅವರ ಆಲೋಚನೆ, ಅನ್ನಿಸಿಕೆಗಳನ್ನಾವರಿಸಿತ್ತು.

ವೈಜ್ಞಾನಿಕವಾಗಿ ‘ಎಲುಸಿನೆ ಕೊರಕಾನೂ’ ಹೆಸರಿನಿಂದ ಗುರುತಿಸಲ್ಪಡುವ ರಾಗಿಯಲ್ಲಿ ಪುಷ್ಕಳ ಪೋಷಕಾಂಶಗಳಿದ್ದರೂ ಅದು ಬಡವರ ಬೆಳೆ. ಐದೂ ಬೆರಳನ್ನು ಒಗ್ಗೂಡಿಸಿ, ಮೇಲಕ್ಕೆತ್ತಿ ಹಿಡಿದ ಕೈಯಂತೆ ಕಾಣುವ ರಾಗಿ ತೆನೆಯ ಇಲುಕು (ತೆನೆ)ಗಳು ಕೈಬೆರಳನ್ನು ಹೋಲುವುದರಿಂದ ಅದಕ್ಕೆ ’ಫಿಂಗರ್ ಮಿಲ್ಲೆಟ್’ ಎಂಬ ಇಂಗ್ಲಿಷ್ ಹೆಸರು.

ರಾಗಿಯ ಮೇಲೆ ಲಕ್ಷ್ಮಣಯ್ಯನವರಿಗಿದ್ದದ್ದು ಸಹಜ ಪ್ರೇಮ. ಬಾಲ್ಯದಿಂದಲೇ ಬೆಳೆದು ಬಂದ ಸ್ವಾಭಾವಿಕ ಒಲವು. ಆದ್ದರಿಂದಲೇ ಕ್ರಮೇಣ ಅದು ಉತ್ಕಟ ಪ್ರೀತಿಯಾಗಿ ತಿರುಗಿತು. ರಾಗಿ ತಳಿ ಸುಧಾರಣೆಯ ನಿರ್ಧಾರ ಕೈಗೊಳ್ಳಲು ಇದು ಪ್ರೇರಣೆಯಾಯ್ತು. ಒಣಹವೆಯಲ್ಲೂ ಸುಮಾರಾಗಿ ಬೆಳೆದುಕೊಂಡಿದ್ದು ತೇವ ದೊರೆತೊಡನೆಯೇ ಪುನಃ ಹುಲುಸಾಗಿ ಬೆಳೆಯುವ ರಾಗಿಯ ಗುಣ ಅವರನ್ನು ಸೆಳೆದಿತ್ತು. ಬಡವರ ಹೊಟ್ಟೆಗೆ ಹಿಟ್ಟು, ಅವರ ಬಡಕಲು ದನಗಳಿಗೆ ಮೇವೊದಗಿಸುವ ಈ ಕಷ್ಟ ಸಹಿಷ್ಣು ಬೆಳೆ ಅವರನ್ನು ಮೋಡಿ ಮಾಡಿತ್ತು.

ಆದರೆ ಕೆಲ ತೊಂದರೆಗಳಿದ್ದವು. ರಾಗಿ ತಳಿ ಅಭಿವೃದ್ಧಿ ೧೯೧೦ಕ್ಕಿನೇ ಇಸವಿಯಷ್ಟು ಹಿಂದೆಯೇ ಆಗಿನ ಮೈಸೂರಿನಲ್ಲಿ ಶುರುವಾಗಿದ್ದರೂ ನಡೆದ ಅಭಿವೃದ್ಧಿ ಅತ್ಯಲ್ಪವಾಗಿತ್ತು. ಅಂದಿನ ದಿನಗಳಲ್ಲಿ ಖ್ಯಾತರಾದ ಲೆಸ್ಲಿ ಕೋಲ್‌ಮನ್, ರಾಗಿಯ ರೋಗ ನಿರೋಧಕತ್ವ, ಬರ ಸಹಿಷ್ಣುತೆಗಳನ್ನು ಗಮನಿಸಿ, ವಿವಿಧೆಡೆಯ ತಳಿಗಳನ್ನು ಕಲೆಹಾಕಿ ಅವನ್ನು ತಿದ್ದುವ ಪ್ರಯತ್ನ ಮಾಡಿದ್ದರೂ ಅಷ್ಟೊಂದು ಪ್ರಯೋಜನವೇನೂ ಆಗಿರಲಿಲ್ಲ. ಅದನ್ನು ನೋಡಿದ ಇತರ ತಳಿತಜ್ಞರು ರಾಗಿಯ ಗೊಡವೆಯೇ ಬೇಡವೆಂದು ಸುಮ್ಮನಾಗಿದ್ದರು. ಹೀಗೆ ಲಕ್ಷ್ಮಣಯ್ಯನವರು ರಾಗಿಯನ್ನೆತ್ತಿಕೊಂಡಾಗ ಅದು ಯಾರಿಗೂ ಬೇಡವಾಗಿದ್ದ ಕೂಸು. ಆದರೆ ಆಗ ಇದ್ದ ನಿರಾಸೆಯ ವಾತಾವರಣವನ್ನು ಅವರು ಲೆಕ್ಕಿಸಲಿಲ್ಲ. ಇತರರ ಅಸಫಲತೆಯಿಂದ ಅಳುಕಲಿಲ್ಲ. ಅವರ ನಿರ್ಧಾರ ದೃಢವಾಗಿತ್ತು. ರಾಗಿ ತಳಿ ಸುಧಾರಣೆಯ ಸವಾಲನ್ನು ಸ್ವೀಕರಿಸಿ ಅದಕ್ಕಾಗಿ ಅಹರ್ನಿಶಿ ದುಡಿದರು.

ರಾಗಿ ಸ್ವಭಾವತಃ ಸಕೀಯ ಪರಾಗ ಸ್ಪರ್ಶದ ಬೆಳೆ. ಅದರ ತೆನೆಯ ತುಂಬ ತುಂಬಿರುವುದು ಅತಿ ಕಿರಿದಾದ ಅಸಂಖ್ಯ ಹೂಗಳು. ಅಲ್ಲದೇ ಹೂ ಭಾಗಗಳೂ ಅತ್ಯಂತ ಸೂಕ್ಷ್ಮ. ಈ ಹೂಗಳಲ್ಲಿರುವ ತನ್ನ ಪರಾಗದಿಂದಲೇ ಫಲಿತಗೊಳ್ಳುವ ಅತಿ ಕಟ್ಟುನಿಟ್ಟಿನ ನೈಸರ್ಗಿಕ ಏರ್ಪಾಡನ್ನು ತಡೆದು ಮತ್ತೊಂದು ತಳಿಯ ಪುಷ್ಪಪರಾಗದಿಂದ ಅವನ್ನು

ಫಲಿಸುವಂತೆ ಮಾಡಿ, ಸಂಕರಬೀಜ ಪಡೆಯುವುದು ಬಹಳ ಕಷ್ಟದ ಕೆಲಸ. ಇದರಿಂದಾಗಿ ರಾಗಿಯ ಅಭಿವೃದ್ಧಿಗೆ ಸೂಕ್ತ ಸಂಸ್ಕರಣ ವಿಧಾನಗಳು ರೂಪುಗೊಂಡಿರಲಿಲ್ಲ. ಪರಿಣಾಮ ಅತ್ಯಲ್ಪ ಅಭಿವೃದ್ಧಿ: ಲಭ್ಯವಿದ್ದ ಕೆಲವೇ ಕೆಲವು ಹಳೆಯ ಸ್ಥಾನೀಯ ತಳಿಗಳ ಲಾಭಕರವಿಲ್ಲದ ಬೇಸಾಯ. ಈ ರೀತಿ ಸುಮಾರು ೨೫ ವರ್ಷಗಳವರೆಗೆ ರಾಗಿ ತಳಿ ಅಭಿವೃದ್ಧಿ ತಟಸ್ಥವಾಗಿತ್ತು. ಆದರೆ ಈ ನಿರಾಶಾಮಯ ಇತಿಹಾಸದಿಂದ ಲಕ್ಷ್ಮಣಯ್ಯ ಧೃತಿಗೆಡಲಿಲ್ಲ.

ಸ್ಥಾನೀಯ ಜನತೆಯ ಅಗತ್ಯಾನುಸಾರ ಸ್ಥಳೀಯ ಬೆಳೆ, ತಳಿಗಳನ್ನು ತಿದ್ದಿ ರೂಪಿಸಬೇಕೆಂಬುದು ಸಸ್ಯ ಸಂಕರಣ ಶಾಸ್ತ್ರದ ಮುಖ್ಯ ನಿಯಮ. ಆದರೆ ಇದು ಬಡತನದ ಬೇಗೆಯಿಂದ ಬೆಳೆದ ಲಕ್ಷ್ಮಣಯ್ಯನವರಿಗೆ ಬದುಕಿನ ಪಾಠವಾಗಿತ್ತು. ಈ ಬೆಳೆಯನ್ನು ಬಾಧಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರವಿದ್ದೇ ಇರುತ್ತದೆನ್ನುವ ಅಚಲ ವಿಶ್ವಾಸದಿಂದ ಅವರು ಮುನ್ನಡೆದರು. ಆಗ ಅವರ ಗಮನಕ್ಕೆ ಬಂದದ್ದು ಸಂಪರ್ಕ ಸಂಕರಣಾವಿಧಾನ (ಕ್ಯಾಂಟ್ಯಾಕ್ಟ್ ಮೆಥಡ್). ಅಯ್ಯಂಗಾರ್ ಹೆಸರಿನ ವಿಜ್ಞಾನಿಯೊಬ್ಬರು ೧೯೩೦ರನೇ ಇಸವಿಯಲ್ಲಿ ಸೂಚಿಸಿದ ಈ ವಿಧಾನದಲ್ಲಿ ವಿಭಿನ್ನ ಗುಣಗಳುಳ್ಳ ಎರಡು ಭಿನ್ನ ತಳಿಗಳನ್ನು ಒಟ್ಟೊಟ್ಟಿಗೆ ಬೆಳೆದು ಅವುಗಳ ತೆನೆಗಳನ್ನು, ಹೂ ಬಿಡುವ ಕಾಲದಲ್ಲಿ ಒಟ್ಟಾಗಿ ಸೇರಿಸಿ ಕಟ್ಟಿ, ಅದನ್ನು ಕವರಿನಿಂದ ಮುಚ್ಚುತ್ತಾರೆ. ಈ ಸಂಪರ್ಕ ಸಾಮೀಪ್ಯದಲ್ಲಿ ಕನಿಷ್ಠ ಕೆಲ ಹೂಗಳಲ್ಲಾದರೂ ಪರಕೀಯ ಪರಾಗ ಸ್ಪರ್ಶವೇರ್ಪಟ್ಟು ಅವು ಸಂಕರ (ಹೈಬ್ರಿಡ್) ಬೀಜ ನೀಡುತ್ತವೆ.

ಫಲಿತವಾಗಿ ಕಟ್ಟಿದ ಬೀಜ ಬಿತ್ತಿ ಸಸಿ ಬೆಳೆದು ಅವುಗಳ ಗುಣಗಳನ್ನು ಪರೀಕ್ಷಿಸಲಾಗುತ್ತದೆ. ಎರಡೂ ತಳಿಗಳ ಗುಣ ಹೊಂದಿರುವ ಸಸ್ಯಗಳನ್ನು ಸಂಕರ ಸಸ್ಯಗಳೆಂದು ಗುರುತಿಸುವುದು ಸುಲಭ. ಈ ವಿಧಾನದಿಂದ ವಿಭಿನ್ನ ತಳಿಗಳ ಗುಣಗಳನ್ನು ಒಗ್ಗೂಡಿಸಬಹುದು. 'ಆದರೆ ತೆನೆಗಳಲ್ಲಿನ ಅಸಂಖ್ಯ ಅಂಕುರಗಳಲ್ಲಿ ಸಂಕರಿತ ಅಂಕುರ ಗುರುತಿಸುವುದು ಹೇಗೆ? ಇದು ಹುಲ್ಲುಮೆದೆಯಲ್ಲಿ ಸೂಜಿ ಹುಡುಕುವಷ್ಟೇ ಕಷ್ಟದ ಕೆಲಸ' ಎಂದು ಈ ವಿಧಾನವನ್ನು ಬಳಸುವವರಿಲ್ಲದೇ ಅದೊಂದು ಬರೀ ಪುಸ್ತಕದ ವಿಧಾನವಾಗಿ ಉಳಿದಿತ್ತು. ಈ ವಿಧಾನ ಬಳಸುವ ಪರಿಯನ್ನು ಕುರಿತು ಲಕ್ಷ್ಮಣಯ್ಯ ಆಲೋಚಿಸಿದರು. ಆಗ ಅವರಿಗೆ ಹೊಳೆದ ಉಪಾಯ–ಸುಲಭವಾಗಿ ಕಣ್ಣಿಗೆ ಕಾಣುವಂತಿರುವ ಗುಣವೊಂದನ್ನು ಆಧಾರವಾಗಿರಿಸಿಕೊಂಡು ಅದರ ನೆರವಿನಿಂದ ಸಂಕರ ಬೀಜ ಗುರುತಿಸುವುದು. ತಮ್ಮ ಆಲೋಚನೆಯನ್ನು ಕಾರ್ಯರೂಪಕ್ಕಿಳಿಸಲು ಅವರು ಆರಿಸಿಕೊಂಡಿದ್ದು ಸ್ಪಷ್ಟ ಗುಣ ವ್ಯತ್ಯಾಸಗಳಿದ್ದ 'ಕರಿಕಡ್ಡಿ' ತಳಿ ಮತ್ತು 'ಹುಲ್ಲು ಬೆಳೆ' ತಳಿ. ಹೆಸರೇ ಹೇಳುವಂತೆ ಕಡ್ಡಿಯ ಸ್ವರೂಪದ ಕರಿಕಡ್ಡಿರಾಗಿಯ ಕಾಂಡದ್ದು, ದೂರಕ್ಕೆ ಕಪ್ಪಾಗಿ ಕಾಣುವ, ಕಡುಕೆಂಪಾದ ಬಣ್ಣ. ಇದಕ್ಕೆ ವ್ಯತ್ಯಾಸವಾಗಿ ಹುಲ್ಲು ಬೆಳೆಯದು. ಹುಲುಸಾದ, ನಳನಳಿಸುವ ಹಸುರು ಕಾಂಡ, ಕಾಳಿನ ಜೊತೆ ಹೇರಳ ಮೇವನ್ನು ನೀಡುವ ಗುಣ ಅದರದ್ದು.

ಲಕ್ಷ್ಮಣಯ್ಯ, ತಮ್ಮ ಕಾಂಟ್ಯಾಕ್ಟ್‌ಮೆಥಡ್‌ನ ಪ್ರಯೋಗಕ್ಕೆ ಇವೆರಡು ತಳಿಗಳನ್ನು ಬಳಸಿದರು. ಫಲಿತಾಂಶ ಪ್ರೋತ್ಸಾಹದಾಯಕವಾಗಿತ್ತು. 'ಹುಲ್ಲುಬೆಳೆ' ತಳಿಯ ಸಸ್ಯದ ತೆನೆಯಲ್ಲಿ ಕಟ್ಟಿದ ಕಾಳನ್ನು ಬಿತ್ತಿ ಬೆಳೆದ ಹಸುರು ಸಸ್ಯಗಳೇ ಹೇರಳವಾಗಿದ್ದ ಬೆಳೆಯಲ್ಲಿ ಕೆಲ ಸಸ್ಯಗಳ ಕಾಂಡ 'ಕರಿಕಡ್ಡಿ'ಯ ಕಾಂಡಗಳಂತಿದ್ದವು. ಅವು ನಿಸ್ಸಂದೇಹವಾಗಿ ಎರಡೂ ತಳಿಗಳ ಸಂಕರ ಸಸ್ಯಗಳೆಂಬುದು ಸ್ಪಷ್ಟವಾಗಿತ್ತು. ಅದು ರಾಗಿ ವಿಜ್ಞಾನಿಯ ಮೊದಲ ಯಶಸ್ವೀ ಹೆಜ್ಜೆಯಾಗಿತ್ತು.

ತಮ್ಮ ಯಶಸ್ಸಿನ ಸಂತಸವನ್ನು ಹಿರಿಯ ಸಹೋದ್ಯೋಗಿಗಳೊಡನೆ ಹಂಚಿಕೊಳ್ಳುವ ಆಸೆ ಒಂದೆಡೆ, "ಬರೀ ಬಿ.ಎಸ್.ಸಿ ಬಾಟನಿ ಓದಿದ್ದ ಈ ಹುಡುಗನಿಗೇನು ಗೊತ್ತು" ಎಂದು ಗೇಲಿ ಮಾಡಿಯಾರೆಂಬ ಅನುಮಾನ ಇನ್ನೊಂದೆಡೆ. ಇವೆರಡರ ಮಧ್ಯೆ ಏನಾದರಾಗಲಿ ಇದನ್ನು ಮಾಡಿನೋಡಲೇಬೇಕು ಎನ್ನುವ ಛಲ. "ಯಾರಿಗೂ ತಿಳಿಸದಂತೆ, ಸದ್ದಿಲ್ಲದೇ ಸ್ವಂತ ಮಟ್ಟದಲ್ಲಿ ಈ ವಿಧಾನವನ್ನು ಪರೀಕ್ಷಿಸುವುದು. ಯಶಸ್ವಿಯಾದರಷ್ಟೇ ಇತರರಿಗೆ ತಿಳಿಸುವುದು" ಎನ್ನುವ ಅವರ ಆಶಯ ಈಡೇರಿತ್ತು. ಅವರ ಯಶಸ್ಸು, ಕಾಲು ಶತಮಾನದ ಕಾಲ ತಟಸ್ಥವಾಗಿದ್ದ ರಾಗಿ ಸಂಶೋಧನೆಗೆ, ತಳಿ ಅಭಿವೃದ್ಧಿಗೆ ಹೊಸ ಚಾಲನೆ ನೀಡಿತು. ತಮ್ಮ ಸಾಫಲ್ಯದಿಂದ ಉತ್ತೇಜಿತರಾದ ಲಕ್ಷ್ಮಣಯ್ಯ, ಸಂಪರ್ಕ ವಿಧಾನದಿಂದ ಮೈಸೂರು ಪ್ರಾಂತ್ಯ ಮತ್ತು ತಮಿಳುನಾಡು ರಾಜ್ಯದ ಅನೇಕ ತಳಿಗಳ ಮಧ್ಯೆ ಸಂಕರಣ ನಡೆಸಿದರು. ದೊರತ ಫಲಿತಾಂಶಗಳು ಅವರಿಗೆ ಅಪಾರ ಸಂತಸವನ್ನಿತ್ತವು. ತಮ್ಮ ಫಲಿತಾಂಶಗಳನ್ನು ಮೇಲಧಿಕಾರಿಯೋರ್ವರಿಗೆ ಅಭಿಮಾನದಿಂದ ತೋರಿಸಿದಾಗ ದೊರೆತ ಪ್ರತಿಕ್ರಿಯೆ ಅಷ್ಟೇನೂ ಪ್ರೋತ್ಸಾಹಕರವಾಗಿರಲಿಲ್ಲ. ಬದಲಿಗೆ "ರೀ, ಲಕ್ಷ್ಮಣಯ್ಯ, ಇದನ್ನೆಲ್ಲಾ ಮಾಡಿದ್ದೀನಿ ಅಂತ ಬೇರಾರಿಗೂ ಹೇಳೇಡಿ. ನಕ್ಕಾರು ಅಂಥಾ ಕೋಲ್‌ಮನ್‌ರಿಗೇ ಮಾಡೋಕಾಗದ್ದನ್ನ ನೀವು ಮಾಡಿದ್ದೀರಿ ಅಂದ್ರೆ ಯಾರು ನಂಬಾರೆ" ಎನ್ನುವ, ಉತ್ಸಾಹಕ್ಕೆ ತಣ್ಣೀರೆರಚುವ ಮಾತುಗಳು. ಅದರಿಂದ ಅರೆಕ್ಷಣವೂ ವಿಚಲಿತರಾಗದ ಲಕ್ಷ್ಮಣಯ್ಯ ಶಾಂತ ಚಿತ್ತದಿಂದ "ಸತ್ಯ,

ನನ್ನ ಹಿಡಿತದಲ್ಲಿರುವವರೆಗೆ, ದೇವರಿಗೂ ನಾನು ಹೆದರಬೇಕಾಗಿಲ್ಲ ಎನ್ನುವ ಬಾಪೂಜಿಯವರ ನುಡಿಗಳನ್ನುದ್ಧರಿಸಿದ್ದರಂತೆ. ಈ ಸಂಗತಿಯನ್ನು ಸ್ಮರಿಸಿಕೊಳ್ಳುತ್ತಾರೆ ಅವರ ಮಗ ವಸಂತಕುಮಾರ್.

ಯಶಸ್ಸು ಅವರಲ್ಲಿ ಮೂಡಿಸಿದ ಆತ್ಮ ವಿಶ್ವಾಸ ದಿನೇ ದಿನೇ ಬಲವಾಗುತ್ತಲೇ ಹೋಯಿತು. ಫಲಿತಾಂಶವಾಗಿ ವಿವಿಧ ಹಂತಗಳಲ್ಲಿ ಹಲವು ಅಧಿಕ ಇಳುವರಿ ಕೊಡುವ ತಳಿಗಳು ರೂಪುಗೊಂಡವು. ೧೯೫೧ ರಿಂದ ೧೯೬೪ರವರೆಗಿನ ಹದಿಮೂರು ವರ್ಷಗಳ ಅವಧಿಯನ್ನು ಅವರೇ ಮೊದಲ ಹಂತವೆಂದು ಗುರುತಿಸಿದ್ದಾರೆ. ಈ ಹಂತದಲ್ಲಿ ಏಶಿಯಾದ ತಳಿಗಳ ಮಧ್ಯೆ ಸಂಕರಕ್ರಿಯೆ ಸಾಗಿತು. ವಿಶೇಷವಾಗಿ ಕೊಯಮತ್ತೂರಿನ ಕೊ–೧ ಮೈಸೂರಿ ಎಚ್–೨೨, ಕೆ–೧, ಇಎಸ್–೧೧ ಇತ್ಯಾದಿ ತಳಿಗಳನ್ನು ಸಂಕರಿಸಿದುದರ ಫಲವಾಗಿ ರಾಜ್ಯ ವಿವಿಧ ಹವಾಗುಣಗಳಿಗೆ ಒಗ್ಗುವ ‘ಅರುಣ’, ‘ಉದಯ’, ‘ಪೂರ್ಣ’, ‘ಅನ್ನಪೂರ್ಣ’ ‘ಕಾವೇರಿ’ ಮತ್ತು ‘ಶಕ್ತಿ’ ತಳಿಗಳು ತಯಾರಾದುವು.

ಇವುಗಳಿಂದಾಗಿ ವರ್ಷದ ಎಲ್ಲ ಕಾಲಗಳಲ್ಲೂ ರಾಗಿ ಬೆಳೆಯುವುದು ಸಾಧ್ಯವಾಯಿತು. ಅಲ್ಲಿಯವರೆಗೆ ರಾಜ್ಯದ ವಿವಿಧ ಹವಾಗುಣಗಳಿಗೆ ಹೊಂದಿಕೊಂಡು ಬೆಳೆಯುವ ರಾಗಿ ತಳಿಗಳೇ ಇರಲಿಲ್ಲ. ಬೆಳೆಯನ್ನು ಒಣ ಬೇಸಾಯ ಪದ್ಧತಿಯಿಂದ ಮುಂಗಾರಿಗೆ ಮುನ್ನ (ಕಾರು ರಾಗಿ), ಮತ್ತು ಮಳೆಗಾಲದಲ್ಲಿ (ಹೈನ್ ಅಥವಾ ಖರೀಫ್ ರಾಗಿ) ಮಾತ್ರ ಬೆಳೆಯಲಾಗುತ್ತಿತ್ತು. ಈ ನಿರ್ಬಂಧಿತ ಒಣ ಬೇಸಾಯದಿಂದ ರಾಜ್ಯದಲ್ಲಿ ಕೆಲವೊಮ್ಮೆ ಈ ಮುಖ್ಯ, ಬಡವರ ಆಹಾರ ಧಾನ್ಯದ ಉತ್ಪಾದನೆ ಕುಂಠಿತಗೊಳ್ಳುತ್ತಿತ್ತು.

ನೀರಾವರಿ ಪ್ರದೇಶಗಳಲ್ಲಿ ಹಿಂಗಾರು ಮತ್ತು ಬೇಸಗೆಯ ಬೇಸಾಯಕ್ಕೆ ಯೋಗ್ಯವಾದ ತಳಿಗಳಿರಲಿಲ್ಲ. ಇದರಿಂದಾಗಿ ಎರಡು ಮುಂಗಾರು ಬೆಳೆ ಕಾಲಗಳ ನಡುವಿನ ಅವಧಿಯಲ್ಲಿ ಜಮೀನು ಖಾಲಿಯಿರುತ್ತಿತ್ತು. ಜೊತೆಗೆ ಜಲ ಸಂಪನ್ಮೂಲ ಲಭ್ಯವಿದ್ದರೂ ಅದರ ಸರಿಯಾದ ಉಪಯೋಗವಾಗುತ್ತಲಿರಲಿಲ್ಲ. ಈ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡ ಲಕ್ಷ್ಮಣಯ್ಯನವರು, ಎಲ್ಲ ವಿಭಿನ್ನ ಬೇಸಾಯಗಳಿಗೆ ಸೂಕ್ತವಾದ, ಹಲವಾರು ಹಂಗಾಮುಗಳಿಗೆ ಹೊಂದುವಂಥ ತಳಿಗಳನ್ನು ಸೃಷ್ಟಿಸಿದ್ದರು.

ಕಿರು ಅವಧಿಯಲ್ಲಿ ಮಾಗುವ ‘ಆರುಣ’, ‘ಉದಯ’ ಮತ್ತು ‘ಪೂರ್ಣ’ ತಳಿಗಳು ನೀರಾವರಿ ಬೇಸಾಯಕ್ಕೆ ಸೂಕ್ತವಾದರೆ, ಚಳಿ ತಡೆದುಕೊಳ್ಳುವ ಗುಣ ಪಡೆದ ‘ಅನ್ನಪೂರ್ಣ’ ಹಿಂಗಾರಿಗೆ ಯೋಗ್ಯವೆನ್ನಿಸಿತು. ಬರ ನಿರೋಧಕ ಗುಣದ ‘ಕಾವೇರಿ’ ಮತ್ತು ‘ಶಕ್ತಿ’ ಮುಂಗಾರಿನಲ್ಲಿ ಮಳೆಯಾಸರೆಯಿಂದ ಬೆಳೆಯಲು ಸರಿಹೊಂದಿದವು.

ಆ ಹದಿಮೂರು ವರ್ಷಗಳಲ್ಲಿ ರಾಗಿ, ಲಕ್ಷ್ಮಣಯ್ಯನವರ ಬದುಕನ್ನು ಸಂಪೂರ್ಣವಾಗಿ ಆವರಿಸಿತು. ಅವರ ಜೀವನದೊಡನೆ ಹಾಸುಹೊಕ್ಕಾಯಿತು. ‘ನಮ್ಮ ತಂದೆಗೆ ರಾಗಿಯೇ ಮೊದಲ ಹೆಂಡತಿ, ಅವರು ಮೊದಲು ಮದುವೆಯಾದದ್ದು ರಾಗಿಯನ್ನೇ, ನಮ್ಮಮ್ಮ ಲಕ್ಷ್ಮಮ್ಮ ಅವರಿಗೆ ಎರಡನೆಯ ಹೆಂಡತಿ’ ಮಗ ವಸಂತ, ಮುಂದುವರಿಸಿದರು. ವಾಸದ ಮನೆಯ ಸುತ್ತಲಿನ ಜಾಗದಲ್ಲೆಲ್ಲ ಹಲವಾರು ತಳಿ ಮತ್ತು ಅವುಗಳ ಹೈಬ್ರಿಡ್‌ಗಳನ್ನು ಬೆಳೆದು ಪ್ರತಿ ಸಸ್ಯವನ್ನೂ ಕೂಲಂಕಷವಾಗಿ ಅಭ್ಯಸಿಸುವುದು ಅವರ ಅತಿ ಮೆಚ್ಚಿನ ಹವ್ಯಾಸವಾಗಿತ್ತು. ಅವರ ಮಟ್ಟಿಗೆ ರಾಗಿಯೇ ಬದುಕು, ಬದುಕೇ ರಾಗಿ. ಇನ್ನಾವ ರೀತಿಯ ಹವ್ಯಾಸ ಅಥವಾ ಮನೋರಂಜನೆಯೂ ಅವರಿಗೆ ಬೇಕಿರಲಿಲ್ಲ. ರಾಗಿಯ ಗೀಳಿನ ಜೊತೆಗೆ ವಿಜ್ಞಾನದ ಅಧ್ಯಯನದ ಮೇಲೂ ಅವರಿಗೆ ಅತೀವ ಆಸಕ್ತಿಯಿತ್ತು. ನಸುಕಿನ ೫ ರಿಂದ ೬ ಗಂಟೆಯವರೆಗೆ ಏನಾದರೂ ಓದುತ್ತಿರುತ್ತಿದ್ದರು. ಆಮೇಲೆ ಸುಮಾರು ಕಾಲು ಗಂಟೆ ಗಾಢವಾದ ಆಲೋಚನೆಯಲ್ಲಿ ಕೂತಿರುತ್ತಿದ್ದರು. ಓದಿದ್ದನ್ನು, ತಿಳಿದುಕೊಂಡದ್ದನ್ನು ಕುರಿತು ಚಿಂತನೆ ಮಾಡಬೇಕು. ಅದರ ಬಗ್ಗೆ ಮಂಥನ, ಮನನಗಳು ಅಗತ್ಯವೆನ್ನುತ್ತಿದ್ದರು.

ಅನಂತರದ ಸಮಯವನ್ನು ಈ ರಾಗಿಯ ಅನುರಾಗಿ ಕಳೆಯುತ್ತಿದ್ದುದು ತಮ್ಮ ಪ್ರಾಯೋಗಿಕ ತಳಿಗಳನ್ನು ಬೆಳೆದ ಜಾಗದಲ್ಲಿ. ಕೆಲವೊಮ್ಮೆ ನಸುಕಿನಲ್ಲಿಯೇ ಅಲ್ಲಿ ಹೋಗಿ ಕೂತವರು, ಪತ್ನಿ ಲಕ್ಷ್ಮಮ್ಮನವರಿಂದ ತಿಂಡಿಗೆ ಕರೆ ಬರುವವರೆಗೂ ಅಲ್ಲೇ ಇರುತ್ತಿದ್ದರು. ಪ್ರತಿ ಸಸ್ಯದ ತೆನೆಯನ್ನು ಅತ್ಯಂತ ಪ್ರೀತಿಯಿಂದ, ನವಿರಾಗಿ ನೇವರಿಸುತ್ತ ಅವರು ಅತ್ಯುನ್ನತ ಮಟ್ಟದ ಆನಂದ ಅನುಭವಿಸುತ್ತಿದ್ದರು.

ಮೊದಲ ಹಂತದಲ್ಲಿ ಏಶಿಯಾದ ತಳಿವೈವಿಧ್ಯದ ಪೂರ್ಣ ಪ್ರಯೋಜನ ನಡೆದಾದ ಮೇಲೆ, ಇನ್ನೂ ಹೆಚ್ಚಿನ ಸಾಧನೆಗೆ ಮತ್ತಷ್ಟು ಹೊಸ ತಳಿವೈವಿಧ್ಯದ ಅಗತ್ಯವಿತ್ತು. ಆಗ ಲಕ್ಷ್ಮಣಯ್ಯನವರಿಗೆ ಒದಗಿ ಬಂದದ್ದು ಉತ್ಕೃಷ್ಟವಾದ ಆಫ್ರಿಕದ ತಳಿಗಳು. ಅವುಗಳ ಪರಿಚಯದೊಂದಿಗೆ ೧೯೬೪ರಲ್ಲಿ ಶುರುವಾದ ಎರಡನೆಯ ಹಂತದ ಒಡನಾಟ, ನಂತರದ ಇಪ್ಪತ್ತು

ವರ್ಷ, ಅಂದರೆ ಅವರು ನಿವೃತ್ತರಾಗುವವರೆಗೂ ಮುಂದುವರಿಯಿತು. ಎರಡೂ ಉಪಖಂಡಗಳ ತಳಿಗಳ ಮಧ್ಯೆ ಅಪಾರ ಆನುವಂಶಿಕ ಅಂತರವಿತ್ತು. ಇಚ್ಛಿತ ವ್ಯತ್ಯಾಸಗಳಿದ್ದುವು. ಆಫ್ರಿಕಾ, ರಾಗಿಯ ತವರು. ಆದ್ದರಿಂದ ಅಲ್ಲಿ ತಳಿ ವಿಭಿನ್ನತೆಯೂ ಅಪಾರ, ರಾಕಿಫೆಲ್ಲರ್ ಸಂಸ್ಥೆಯ ಡಾ. ರಾಚಿ ಅಲ್ಲಿನ ವಿವಿಧ ರಾಗಿ ತಳಿಗಳನ್ನು ಇಲ್ಲಿನ ರಾಗಿಬ್ರಹ್ಮನಿಗೊದಗಿಸಿದ್ದು ಹಸಿದವನಿಗೆ ಅನ್ನವಿತ್ತಂತಾಗಿತ್ತು. ಆ ತಳಿಗಳ ಬರ ಮತ್ತು ರೋಗ ನಿರೋಧಕ ಗುಣಗಳ ಲಾಭ ಪಡೆಯಲು ಲಕ್ಷ್ಮಣಯ್ಯ ತಕ್ಷಣ ಸನ್ನದ್ಧರಾದರು. ಇಂಡಿಯಾ ಮತ್ತು ಆಫ್ರಿಕಾದ ತಳಿಗಳ ಸಮ್ಮಿಲನದಿಂದ ಉದಿಸಿದ ತಳಿಗಳಿಗೆ "ಇಂಡಾಫ್" ಹೆಸರು ಸಂದಿತು. ಆಯ್ಕೆ ಮಾಡಿಕೊಂಡ ಹದಿನೈದು ಸುಧಾರಿತ ತಳಿಗಳಿಗೆ ಇಂಡಾಫ್-೧ ರಿಂದ ಇಂಡಾಫ್ – ೧೫ರ ವರೆಗೆ ಹೆಸರಿಡಲಾಯ್ತು. ಪರೀಕ್ಷೆಯ ನಂತರ ಇಂಡಾಫ್ ೧, ೩ ಮತ್ತು ೬ ಒಣ ಬೇಸಾಯಕ್ಕೆ ಶಿಫಾರಿತಗೊಂಡವು. ಮುಂಗಾರು ತಡವಾದಾಗ ಇಂಡಾಫ್–೫ ಬೇಸಗೆಗೆ ಸೈಯನ್ನಿಸಿದವು. ಈ ತಳಿಗಳ ಸರಾಸರಿ ಇಳುವರಿ ಆ ಮೊದಲಿನ ತಳಿಗಳ ಇಳುವರಿಗಿಂತ ಎರಡೂವರೆ ಪಟ್ಟು ಅಧಿಕವಿತ್ತು. ಇಂಡಾಫ್–೮, ಸೂಕ್ತವಾದ ಮಳೆಯಾಧಾರಿತ ಬೇಸಾಯದಲ್ಲಿ ಒಂದು ಹೆಕ್ಟೇರಿನಲ್ಲಿ (ಎರಡೂವರೆ ಎಕರೆ)ನಲ್ಲಿ ಅರವತ್ತರಿಂದ ಎಪ್ಪತ್ತು ಕ್ವಿಂಟಾಲ್ ಧಾನ್ಯ ನೀಡಿದರೆ ಇಂಡಾಫ್–೫ ನೀರಾವರಿಯಲ್ಲಿ ಹೆಕ್ಟೇರಿಗೆ ೬೫ ಕ್ವಿಂಟಾಲ್ "ಕಾಳು" ಕೊಟ್ಟಿತು.

ರಾಗಿಯ ಅನುರಾಗಿ ಲಕ್ಷ್ಮಣಯ್ಯನವರ ಜನಾನುರಾಗವೂ ಆದರ್ಶಪ್ರಾಯವಾಗಿತ್ತು. ತಮ್ಮ ತಳಿಗಳ ಬೀಜ ಕೊಳ್ಳಲು ಬಂದ ರೈತರನ್ನು ಮನೆಗೆ ಕರೆದೊಯ್ದು ಅವರ ಕಷ್ಟ, ಸುಖ ವಿಚಾರಿಸಿ, ಉಪಚರಿಸಿ, ಊಟಕ್ಕಿತ್ತು, ಫಾರಂ ಆಫೀಸಿನಿಂದ ತಮ್ಮ ಹಣದಲ್ಲೇ ಅವರಿಗೆ ಬೀಜ ಕೊಡಿಸಿ, ಮೇಲೆ ನಾಲ್ಕೈದು ರೂಪಾಯಿ ನೀಡಿ ಅವರನ್ನು ಅತ್ಯಂತ ಆತ್ಮೀಯವಾಗಿ ಬೀಳ್ಕೊಡುವ ಹೃದಯವಂತಿಕೆ ಅವರಿಗಿತ್ತು. 'ನೀವು ಬೆಳೆದ ಮೇಲೆ ನಿಮಗೆ ಒಳ್ಳೆಯದೆಂದು ಕಂಡರೆ ಈ ತಳಿಯ ಬೀಜಗಳನ್ನು ಇತರ ರೈತ ಬಾಂಧವರಿಗೂ ಕೊಡಿ' ಎಂದು ಹೇಳುತ್ತಿದ್ದರು. ಹೀಗೆ ತಳಿ ಸುಧಾರಿಸುವ ಕಾರ್ಯದ ಜೊತೆ ಜೊತೆಗೇ ಅವನ್ನು ರೈತರಿಗೆ ತಲಪಿಸುವ ಮಹಾತ್ಕಾರ್ಯವನ್ನೂ ಲಕ್ಷ್ಮಣಯ್ಯ ಮಾಡಿದರು. ತಮ್ಮ ಸರಳತೆ, ಸಜ್ಜನಿಕೆ ಮತ್ತು ರೈತಪರ ಕಾಳಜಿಗಳಿಂದ, ರೈತಸಮುದಾಯದ ಮನ ಗೆದ್ದರು. ಈ ಜನಪ್ರಿಯತೆಯೇ ಅವರಿಗೆ ರಾಗಿ ಲಕ್ಷ್ಮಣಯ್ಯನವರೆಂಬ ಖ್ಯಾತಿ ತಂದಿತು.

ಬದುಕಿನ ಮೂವತ್ನಾಲ್ಕು ವಸಂತಗಳನ್ನು ರಾಗಿಯ ಸೇವೆಗೆ ಮುಡುಪಾಗಿಟ್ಟಿದ್ದ ಈ ರಾಗಿಯ ಯೋಗಿಯದು ದೊಡ್ಡ ಪರಿವಾರ. ಅವರಿಗೆ ಏಳು ಜನ ಮಕ್ಕಳು ತಮ್ಮ ರಾಗಿಯ ಗಿಳಿನಲ್ಲಿ ಮಕ್ಕಳು ಅಲಕ್ಷಿತರಾಗದಂತೆ ನೋಡಿಕೊಂಡು ಅವರ ಸರ್ವತೋಮುಖ ಳವಣಿಗೆಗೆ ಸಹಾಯಕರಾದರು. ತಮ್ಮ ಜೀವನ ಮೌಲ್ಯಗಳನ್ನು, ಸತ್ಯಸಂಧತೆಯನ್ನು ಮಕ್ಕಳಲ್ಲಿ ಬಿತ್ತಿದರು.

"ತಮ್ಮ ಕೈಯಾರೆ ಚರಕದಲ್ಲಿ ತಯಾರಿಸಿದ ನೂಲನ್ನು ಸಾಬರಮತಿ ಆಶ್ರಮಕ್ಕೆ ಕಳುಹಿಸಿ, ಅಲ್ಲಿಂದ ನೇಯ್ದ ಬಟ್ಟೆ ತರಿಸಿಕೊಂಡು ತೊಡುತ್ತಿದ್ದರು" ಎಂದು ಹೆಮ್ಮೆಯಿಂದ ಹೇಳಿದ ಅವರ ಮಗ ವಸಂತ್ "ನಾನು ಅವರು ಸುಳ್ಳು ಹೇಳಿದ್ದನ್ನೇ ನೋಡಲಿಲ್ಲ. ಪ್ರಾಯಶಃ ಅವರು ಜೀವನದಲ್ಲಿ ಒಮ್ಮೆಯೂ ಸುಳ್ಳು ಹೇಳಿರಲಿಲ್ಲ. ಸತ್ಯವೆಂದರೆ ಅವರಿಗೆ ಅಷ್ಟು ಗೌರವ" ಸ್ಮರಿಸಿದರು.

ಲಕ್ಷ್ಮಣಯ್ಯನವರ ಗಾಂಧೀತತ್ವ ಮತ್ತು ಅವರ ಮೌಲ್ಯಗಳ ಅನುಷ್ಠಾನ, ಮಕ್ಕಳ ಮೇಲೆ ಗಾಢ ಪರಿಣಾಮ ಬೀರಿದವು.

ತಾವು ಕಷ್ಟ ಕಾರ್ಪಣ್ಯದಲ್ಲಿ ಬೆಳೆದು, ತಮ್ಮ ಜನಾಂಗಕ್ಕೆ ಸರಕಾರ ನೀಡುವ ಉಚಿತ ಊಟ, ವಿದ್ಯಾರ್ಥಿ ನಿಲಯದ ಸೌಲಭ್ಯ ಪಡೆದಿದ್ದರೂ ಮಗ ವಸಂತ ತನ್ನ ಕಲಿಕೆಯ ಸಮಯದಲ್ಲಿ ಸರಕಾರಿ ಸವಲತಿಗೆ ಕೈಯೊಡ್ಡುವುದು ಅವರಿಗಿಷ್ಟವಿರಲಿಲ್ಲ. ಬರುವ ಸಂಬಳದಲ್ಲಿ ಸಂಸಾರದ ಖರ್ಚು ನಿಭಾಯಿಸಿ ಮಗನನ್ನೋದಿಸುವುದು ಕಷ್ಟವಾದಾಗ ಹಿತ್ತಲಲ್ಲಿ ಹಿಪ್ಪುನೇರಿಳೆ ಬೆಳೆದು, ರೇಷ್ಮೆ ಸಾಕಣೆ ಮಾಡಿ, ಅದರಿಂದ ಬಂದ ಹಣದಲ್ಲಿ ಮಗನ ವಿದ್ಯಾಭ್ಯಾಸದ ಖರ್ಚನ್ನು ಧರಿಸಿದರು. ಅವನನ್ನು ಕೃಷಿ ಪದವೀಧರನನ್ನಾಗಿಸಿದರು. ಮಗ ತಮಗೆ ಬರೆದ ಪ್ರತಿ ಪತ್ರದಲ್ಲೂ ಭಾಷೆಯ ಬಳಕೆ, ವ್ಯಾಕರಣಗಳನ್ನು ತಿದ್ದಿ ಇಂಗ್ಲಿಷಿನ ಸರಿಯಾದ ಉಪಯೋಗ ತಿಳಿಸಿಕೊಡುತ್ತಿದ್ದ ಲಕ್ಷ್ಮಣಯ್ಯರಿಗೆ ಇಂಗ್ಲಿಷ್ ಭಾಷೆಯ ಉತ್ತಮ ಜ್ಞಾನವಿತ್ತು. ಒಳ್ಳೆಯ ಸುಭಾಷಿತಗಳನ್ನು, ಖ್ಯಾತರ ಉತ್ಕೃಷ್ಟ ವಿಚಾರಗಳನ್ನು ಸಂಗ್ರಹಿಸುವುದು ಅವರ ಮೆಚ್ಚಿನ ಹವ್ಯಾಸವಾಗಿತ್ತು. ಅವರೊಬ್ಬ ಉತ್ತಮ ತತ್ವಶಾಸ್ತ್ರದ ವಿದ್ಯಾರ್ಥಿಯಾಗಿದ್ದರು. ಅನ್ನದ ಮೇಲೆ ಲಕ್ಷಣಯ್ಯ ಅವರಿಗಿದ್ದುದು ಅಪಾರ ಗೌರವ, ಭಕ್ತಿ. 'ಅನ್ನವೆಂದರೆ ದೇವರು, ಒಂದಗುಳು ಅನ್ನವನ್ನು ವೇಸ್ಟ್ ಮಾಡಿದರೂ ಅದು ದೇವರಿಗೆ ಅವಮಾನ ಮಾಡಿದಂತೆ' ಎಂದು

ಮಕ್ಕಳಿಗೆ ಹೇಳುತ್ತಿದ್ದರು. ಊಟದ ತಟ್ಟೆಯಲ್ಲಿ ಊಟವಾದ ಮೇಲೆ ಒಂದಗುಳು ಅನ್ನ ಬಿಟ್ಟರೆ ಬೈಗುಳ ತಪ್ಪುತ್ತಿರಲಿಲ್ಲ. ಮುಸುರೆ ಪಾತ್ರೆ ತೊಳೆಯುವಲ್ಲಿಗೆ ಹೋಗಿ ಚೆಕ್ ಮಾಡುತ್ತಿದ್ದರು. ಅಲ್ಲಾದರೂ ಆಹಾರದ ಅವಶೇಷಕ ಅವರು ಕೆಂಡವಾಗುತ್ತಿದ್ದುದು ಗ್ಯಾರಂಟಿ.

ರಾಗಿ ರೈತರ ಪಾಲಿಗೆ ಅವರೊಬ್ಬ ಪವಾಡ ಪುರುಷರಾಗಿದ್ದರು. ಅವರ ತಳಿಗಳನ್ನು ಬೆಳೆದು ಉದ್ಧಾರವಾದ ರೈತರು ಅವರಿಗೆ ಪತ್ರಮುಖೇನ ಕೃತಜ್ಞತೆ ಸಲ್ಲಿಸಿ ಕೃತಾರ್ಥರಾಗುತ್ತಿದ್ದರು. ಅವರಿಗೆ ಬಂದ ಅಸಂಖ್ಯ ಪ್ರಶಂಸಾಪತ್ರಗಳನ್ನು ಅವರ ಸೇವೆಯ ಸ್ಮರಣೆಯಾಗಿ ಅವರ ಕುಟುಂಬ ಸಂರಕ್ಷಿಸಲ್ಪಟ್ಟಿದೆ.

ರಾಗಿ ಬೆಳೆಗಾರರು ಅವರಿಗೆ ಬರೆದ ಪತ್ರಗಳೆಲ್ಲಾ, ಕೋಲಾರದ ವೃದ್ಧ ರೈತನೋರ್ವನ ಪತ್ರ ಅತ್ಯಂತ ಹೃದಯಸ್ಪರ್ಶಿಯಾಗಿದೆ. ಅದರ ಒಕ್ಕಣೆ "ಸ್ವಾಮಿ, ನಿಮ್ಮ ರಾಗಿ ತಳಿ ಬೆಳೆದು ನಾನೂ ಒಬ್ಬ ಮನುಷ್ಯನಾದೆ. ನೀವೇ ನನ್ನ ಪಾಲಿನ ದೇವರು. ನಿಮ್ಮನ್ನು ಒಮ್ಮೆ ನೋಡುವ ಆಸೆಯಾಗಿದೆ. ನನ್ನ ವಯಸ್ಸಿನ ತೊಂದರೆಯಿಂದ ನಿಮ್ಮನ್ನು ನೋಡಲು ಬರಲಾಗದು. ದಯವಿಟ್ಟು ನಿಮ್ಮದೊಂದು ಫೋಟೋ ಇದ್ದರೆ ಕಳಿಸಿಕೊಡಿ. ಅದನ್ನು ನೋಡಿ ಧನ್ಯನಾಗುತ್ತೇನೆ."

ಈ ಅಪೂರ್ವ ಜನಾನುರಾಗಿಯ ಮೂರುವರೆ ದಶಕಗಳ ರಾಗಿ ಪ್ರಣಯ ಅವರ ನಿವೃತ್ತಿಯ ನಂತರವೂ ಮುಂದುವರಿಯಿತು. ೧೯೬೪ರಲ್ಲಿ ನಿವೃತ್ತರಾದ ಮೇಲೆ ಪೊನ್ನಂಪೇಟೆಯ ಕೃಷಿ ಸಂಶೋಧನಾ ಕೇಂದ್ರದಲ್ಲಿ ಫಾರ್ಮ್ ಸೂಪರಿಂಟೆಂಡೆಂಟ್ ಆಗಿ ಕೆಲಸದಲ್ಲಿದ್ದ ಮಗ ವಸಂತ್‌ಕುಮಾರನ ಜೊತೆಯಲ್ಲಿದ್ದು ತಮ್ಮ ರಾಗಿ ಸಂಶೋಧನೆ ಮುಂದುವರಿಸುವ ಪ್ರಯತ್ನ ಮಾಡಿದರು. ಅವರದೇ ಶಬ್ದಗಳಲ್ಲಿ ಮೂರುವರೆ ದಶಕ ರಾಗಿ ತಳಿ ವಿಜ್ಞಾನಿಯಾಗಿ ಹಲ ಉತ್ತಮ ತಳಿಗಳನ್ನು ರೂಪಿಸಿ, ಆಹಾರೋತ್ಪಾದನೆಗೆ ನನ್ನ ನಮ್ರ ಅಲ್ಪ ಕಾಣಿಕೆ ಸಲ್ಲಿಸಿದ್ದೆನಾದರೂ ಇನ್ನೂ ಮಾಡಬೇಕಾದ ಕೆಲಸದ ಯೋಜನೆಯಲ್ಲಿ ಒಂದು ತೆರನಾದ ಅಪೂರ್ಣತೆಯಿದೆಯೆಂದು ನನಗನ್ನಿಸುತ್ತಿತ್ತು. ಅಭಿವೃದ್ಧಿಗೊಳಿಸಿದ ತಳಿಗಳಲ್ಲಿ ಸೂಕ್ತ ಗುಣಗಳನ್ನೇನೋ ಅಳವಡಿಸಿಯಾಗಿತ್ತು. ಮಳೆಯಾಸರೆಯಲ್ಲಿ ಬೆಳೆವ ತಳಿ, ಜನರಿಗೆ ಧಾನ್ಯವೊದಗಿಸುವುದರೊಟ್ಟಿಗೆ ಅವರ ಜಾನುವಾರುಗಳಿಗೆ ಮೇವೊದಗಿಸುವುದೂ ಮುಖ್ಯವಾಗಿತ್ತು. ಅದಕ್ಕೆಂದೇ ಸಮ ಸಮನಾಗಿ ಕಾಳು ಹಾಗೂ ಹುಲ್ಲುಗಳ ಇಳುವರಿ ನೀಡುವ ತಳಿಗಳನ್ನು ಸೃಷ್ಟಿಸಿಯಾಗಿತ್ತು. ಆದರೆ ನೀರಾವರಿಯಲ್ಲಿ ಹೆಚ್ಚು ಮುತುವರ್ಜಿ ವಹಿಸಿ ಬೆಳೆಯುವ ಪ್ರದೇಶಗಳಿಗಾಗಿ, ಮೇವಿಗಿಂತ ಅಧಿಕ ಧಾನ್ಯದ ಇಳುವರಿ ಕೊಡವ ತಳಿಗಳನ್ನು ರೂಪಿಸುವ (ನಾನು ವೃತ್ತಿಯಲ್ಲಿದ್ದಾಗ) ಸಮಯಾಭಾವದಿಂದಾಗಿ ಸಾಧ್ಯವಾಗಿರಲಿಲ್ಲ. ನಿವೃತ್ತಿಯ ನಂತರ ಮಗನೊಡನೆ ಪೊನ್ನಂಪೇಟೆಯಲ್ಲಿ ನೆಲೆನಿಂತ ಮೇಲೆ ಅಂಥ ತಳಿ ತಯಾರಿಸುವ ಯೋಚನೆ ಮಾಡಿದೆ."

ಯೋಚನೆಯನ್ನು ಕಾರ್ಯರೂಪಕ್ಕಿಳಿಸುವುದು ಕಷ್ಟವಿತ್ತು. ಪೊನ್ನಂಪೇಟೆಯ ಅಧಿಕ ಮಳೆ ಮತ್ತು ತೇವಾಂಶಗಳ ಹವಾಗುಣ ರಾಗಿ ಬ್ರಹ್ಮರ ಪ್ರಯತ್ನಕ್ಕೆ ಪ್ರತಿಕೂಲಕರವಾಗಿತ್ತು. ಇದರಿಂದ ಕೆಲ ಕಾಲ ನಿರಾಶೆಗೊಂಡರೂ ರಾಗಿ ತಳಿ ಸುಧಾರಣೆಯ ಕೆಲಸ ಮುಂದುವರಿಸುವ ತೀವ್ರ ತುಡಿತ ಅವರನ್ನು ಸುಮ್ಮನಿರಲು ಬಿಡಲಿಲ್ಲ. ಮನೆಯ ಹಿತ್ತಿಲ ಜಾಗೆಯಲ್ಲಿ ಕೆಲ ಹೊಂದಾಣಿಕೆಗಳನ್ನು ಮಾಡಿ ರಾಗಿ ಬೆಳೆಯುವಲ್ಲಿ ಯಶಸ್ವಿಯಾದರು.

ಆ ವೇಳೆಗೆ ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿನ ಅಖಿಲ ಭಾರತ ತೃಣಧಾನ್ಯ ಸಂಶೋಧನಾ ಸಂಯೋಜಕರಾಗಿದ್ದ ಡಾ. ಸೀತಾರಾಮ್, ಲಕ್ಷ್ಮಣಯ್ಯನವರಿಗೆ ಕೆಲವ ಉತ್ತಮವಾದ ಆಫ್ರಿಕಾದ ಮಾಲಾವಿ ತಳಿಗಳನ್ನು ಪೂರೈಸಿದರು. ದಪ್ಪನೆಯ ತೆನೆಯುಳ್ಳ, ಅಧಿಕ ಇಳುವರಿ ನೀಡುವ ಈ ತಳಿಗಳನ್ನು ಇಂಡಾಫ್ ಸರಣಿಯ ತಳಿಗಳೊಡನೆ ಸಂಕರಿಸಿ, ಹಲವಾರು ಅಧಿಕ ಇಳುವರಿ ನೀಡುವ ಗಿಡ್ಡ ತಳಿಗಳನ್ನು ಲಕ್ಷ್ಮಣಯ್ಯ ಸಿದ್ಧಪಡಿಸಿದರು. ಆ ಮೊದಲಿನ ತಳಿಗಳಿಗಿಂತ ಶೇಕಡ ೭೫ರಷ್ಟು ಅಧಿಕ ಇಳುವಳಿ ಕೊಟ್ಟ ಗಿಡ್ಡ ತಳಿಗಳಲ್ಲಿ ಕೆಲವನ್ನು ಆಯ್ದು, ಸ್ಥಿರೀಕರಿಸಿ ರೈತರ ಹೊಲಗಳಲ್ಲಿ ಅವನ್ನು ಪರೀಕ್ಷಿಸಲು ಮುಂದಾದರು. ಅವರ ಈ ಸತತ ಪ್ರಯತ್ನ ಮತ್ತು ಫಲಿತಾಂಶಗಳಿಂದ ಪ್ರಭಾವಿತಗೊಂಡ ಕೃಷಿ ವಿಶ್ವವಿದ್ಯಾಲಯ, ಅವರ ಸಂಶೋಧನೆಗಳಿಗೆ ಅನುಕೂಲವಾಗಲೆಂದು ಅವರ ಮಗನನ್ನು ಮೈಸೂರಿಗೆ ಹತ್ತಿರದ ನಾಗೇನಹಳ್ಳಿಯ ಕೃಷಿ ಸಂಶೋಧನಾ ಕೇಂದ್ರಕ್ಕೆ ವರ್ಗ ಮಾಡಿತು. ಅಲ್ಲಿ ಲಕ್ಷ್ಮಣಯ್ಯನವರ ಉತ್ಸಾಹ ಇಮ್ಮಡಿಸಿತು. ರಾಗಿ ಬೆಳೆಗಾರರೊಂದಿಗೆ ಅಧಿಕ ಸಾಮಿಪ್ಯಕ್ಕೂ ಆ ಸ್ಥಳ ಪ್ರಶಸ್ತವಾಗಿತ್ತು.

ಕೃಷಿವಿಶ್ವವಿದ್ಯಾಲಯ ಲಕ್ಷ್ಮಣಯ್ಯನವರನ್ನು ರಾಗಿಯ ವಿಸಿಟಿಂಗ್ ಪ್ರೊಫೆಸರ್ ಎಂದೂ ನೇಮಕ ಮಾಡಿದ್ದು ಅವರ ಕಾರ್ಯಕ್ಕೆ ಸಂದ ಗೌರವವಾಗಿತ್ತು. ತಮ್ಮ ಹೊಸ ಹುದ್ದೆಯಲ್ಲಿ ಲಕ್ಷ್ಮಣಯ್ಯ ರಾಗಿಯ ಏಳಿಗೆ ಪುನಃ ತಮ್ಮನ್ನರ್ಪಿಸಿಕೊಂಡರು.

ತೃಣಧಾನ್ಯ ಪರಿಯೋಜನೆಯಡಿಯಲ್ಲಿ ಅವರಿಗೆ ಪೂರೈಕೆಯಾದ ಜಿಂಬಾಬ್ ದೇಶದ ರಾಗಿ ತಳಿಗಳ ವೈವಿಧ್ಯವನ್ನುಪಯೋಗಿಸಿಕೊಂಡು ಇನ್ನಷ್ಟು ಉತ್ತಮ ತಳಿಗಳನ್ನು ರೂಪಿಸತೊಡಗಿದರು. ಅವರ ಸತತ ಪರಿಶ್ರಮದ ಫಲವಾಗಿ ರಾಗಿ ಬೆಳೆಯ ವಿಸ್ತೀರ್ಣ ಹೆಚ್ಚಿತು. ಉತ್ಪಾದನೆಯೂ ಹಲವು ಪಟ್ಟು ವೃದ್ಧಿಸಿತು. ರಾಜ್ಯಕ್ಕೆ ಆಹಾರೋತ್ಪಾದನೆಯ ಸಮೃದ್ಧಿಯನ್ನಿತ್ತಿತ್ತು. ಆದ ಇದರಿಂದ ರಾಗಿ ಬೆಳೆಗಾರರಿಗಾದದ್ದು ಎರಡು ತೆರನಾದ ಲಾಭ, ಸಣ್ಣ ಮತ್ತು ಅತಿ ಸಣ್ಣ ಹಿಡುವಳಿದಾರರೂ ತಮ್ಮ ಆಹಾರಾಗತ್ಯದ ಪೂರೈಕೆಯಲ್ಲಿ ಸ್ವಾವಲಂಬಿಗಳಾದರು. ಹೊಸ ಅಧಿಕ ಇಳುವರಿಯ ತಳಿಗಳಿಂದಾಗಿ, ಇಡೀ ಜಮೀನಿನಲ್ಲಿ ಹಳೆಯ ರಾಗಿ ತಳಿ ಬೆಳೆಯುವ ಪದ್ಧತಿಗೆ ಬದಲಾಗಿ ಹೊಲದ ಕೆಲಭಾಗದಲ್ಲಿ ಎಣ್ಣೆ ಕಾಳು, ಬೇಳೆ ಕಾಳು ಅಥವಾ ಹಿಪ್ಪುನೇರಳೆ ಬೆಳೆದು ರೈತರ ಆರ್ಥಿಕ ಪರಿಸ್ಥಿತಿ ಸುಧಾರಿಸಿತು.

ರೈತ ಸಮುದಾಯಕ್ಕೆ ಇವರು ಸಲ್ಲಿಸಿದ ಸೇವೆಯನ್ನು ಗುರುತಿಸಿ ಹಲವಾರು ಸಂಘ, ಸಂಸ್ಥೆಗಳು ರೈತ ಸಂಘಟನೆಗಳು, ಲಕ್ಷ್ಮಣಯ್ಯನವರನ್ನು ಸನ್ಮಾನಿಸಿ, ಗೌರವಿಸಿದ್ದವು. ಅವುಗಳಲ್ಲಿ ಮುಖ್ಯವಾದವೆಂದರೆ ೧೯೬೮ರಲ್ಲಿ ನೀಡಿದ ರಾಜ್ಯ ಸರಕಾರದ ಜನಸೇವಾ ಪ್ರಶಸ್ತಿ, ಕರ್ನಾಟಕ ಕೃಷಿಕ ಸಮಾಜ ೧೯೭೭ರಲ್ಲಿ ಇವರಿಗೆ ನೀಡಿದ್ದ ಕ್ಯಾಶ್ ಅವಾರ್ಡ್‌ನ್ನು ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರಿಂದ ಸ್ವೀಕರಿಸಿದ್ದಲಕ್ಷ್ಮಣಯ್ಯನವರನ್ನು ರಾಜ್ಯೋತ್ಸವ ಪ್ರಶಸ್ತಿ ಅಲಂಕರಿಸಿದ್ದು ೧೯೮೨ರಲ್ಲಿ, ಕರ್ನಾಟಕ ರಾಜ್ಯರೈತ ಸಂಘದಿಂದಲೂ ಸನ್ಮಾನಿತರಾದ ಈ ರಾಗಿ ಬ್ರಹ್ಮರನ್ನು ಕೃಷಿ ವಿಶ್ವವಿದ್ಯಾಲಯ ೧೯೮೯ರಲ್ಲಿ ಗೌರವ ಡಾಕ್ಟರೇಟ್ ಪದವಿಯಿಂದ ಸನ್ಮಾನಿಸಿತು.

ಮರಳಿನಲ್ಲಿ ಓಂನಾಮ ತಿದ್ದುತ್ತ ಅಕ್ಷರ ಕಲಿತ ಲಕ್ಷ್ಮಣಯ್ಯ ಸಮಯದ ಮರಳಿನ ಮೇಲೆ ತಮ್ಮ ಹೆಜ್ಜೆಗುರುತನ್ನು ಶಾಶ್ವತವಾಗಿ ಮೂಡಿಸಿ, ಹೆಜ್ಜೆಮೂಡದ, ಮರಳಿ ಬಾರದ ಹಾದಿಯಲ್ಲಿ ತೆರಳಿದ್ದು ೧೯೯೩ನೇ ಇಸವಿಯ ಮೇ ೧೪ ರಂದು, ಎಪ್ಪತ್ತೆರಡನೆಯ ಹುಟ್ಟುಹಬ್ಬದ ಮುನ್ನಾದಿನ. ಮೂತ್ರಕೋಶದ ಕ್ಯಾನ್ಸರ್ ಅವರನ್ನು ಬಲಿ ತೆಗೆದುಕೊಂಡಿತ್ತು. ಆರಂಭದಲ್ಲಿ ಅದನ್ನು ಪ್ರಾಸ್ಟೇಟ್ ಗ್ರಂಥಿಯ ಊತವೆಂದು ತಪ್ಪಾಗಿ ಗುರುತಿಸಲಾಗಿತ್ತು. ಅದು ಕ್ಯಾನ್ಸರ್ ಎಂದು ತಿಳಿಯುವ ವೇಳೆಗೆ ಕಾಲ ಮಿಂತಿತ್ತು.

ತಾವು ಕೈಗೊಂಡ ಕಾರ್ಯದಲ್ಲಿ ಇನ್ನೂ ಮಾಡಬೇಕಾದದ್ದು ಬಹಳಷ್ಟಿದೆ. ಇನ್ನಷ್ಟು ದಿನ ಬದುಕುವಂತಿದ್ದರೆ, ಅದರಲ್ಲಿ ಕೆಲಭಾಗವನ್ನಾದರೂ ಮಾಡಿ ಮುಗಿಸಬಹುದಿತ್ತು ಎನ್ನುವ ಕೊರಗು ಅವರನ್ನು ಅಂತ್ಯಕಾಲದಲ್ಲಿ ಕಾಡಿತ್ತು.

ಅವರ ನಿಧನದ ಶೋಕ ಸಮಾಚಾರವನ್ನು ನಾಡಿನ ಖ್ಯಾತ ಪತ್ರಿಕೆಗಳು 'ರಾಗಿ ಬ್ರಹ್ಮ ಲಕ್ಷ್ಮಣಯ್ಯ ಇನ್ನಿಲ್ಲ' ಎಂದು ವರದಿ ಮಾಡಿದವು.

ರಾಗಿ ಲಕ್ಷ್ಮಣಯ್ಯ ಶಾರೀರಿಕವಾಗಿ ಇಂದು ನಮ್ಮೊಡನಿಲ್ಲ, ನಿಜ. ಆದರೆ ಅವರ ಅಪೂರ್ವ ತಳಿ ಸೃಷ್ಟಿಗಳ ಮೂಲಕ ಅಸಂಖ್ಯ ರೈತರ ಬಾಳು ಬೆಳಗುತ್ತಲಿದ್ದಾರೆ. ಅವರ ಹೃನ್ಮನಗಳಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ.

ವಿಶ್ವದ ತೃಣಧಾನ್ಯ ಬೆಳೆಗಳಲ್ಲಿ ಸಜ್ಜೆ, ನವಣೆ, ಬರಗು ಬೆಳೆಗಳ ನಂತರದ ಸ್ಥಾನ ರಾಗಿಯದು. ರಾಗಿ ಬೇಸಾಯದಲ್ಲಿ ಭಾರತಕ್ಕೆ ಅಗ್ರಸ್ಥಾನವಿದೆ. ವರ್ಷಂಪ್ರತಿ ಸುಮಾರು ೨೨ ಲಕ್ಷ ಹೆಕ್ಟೇರು ಪ್ರದೇಶದಲ್ಲಿ ರಾಗಿ ಬೆಳೆದು ೨೬ ರಿಂದ ೨೮ ಲಕ್ಷ ಟನ್ ರಾಗಿಯನ್ನು ದೇಶದಲ್ಲಿ ಉತ್ಪಾದಿಸಲಾಗುತ್ತಿದೆ. ಈ ಉತ್ಪಾದನೆಯಲ್ಲಿ ಮುಕ್ಕಾಲು ಭಾಗದಷ್ಟನ್ನು ಕರ್ನಾಟಕ, ತಮಿಳ್ನಾಡು, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳು ಉತ್ಪಾದಿಸಿದರೆ, ಕಾಲು ಭಾಗವನ್ನು ಬಿಹಾರ, ಉತ್ತರಪ್ರದೇಶ, ಒರಿಸ್ಸಾ, ಮಧ್ಯಪ್ರದೇಶ, ಅಸ್ಸಾಂ ಮತ್ತು ಹಿಮಾಚಲ ಪ್ರದೇಶಗಳು ಪೂರೈಸುತ್ತವೆ.

ಭಾರತದಲ್ಲಿನ ಒಟ್ಟು ರಾಗಿ ಬೆಳೆಯ ವಿಸ್ತೀರ್ಣದಲ್ಲಿ ಸುಮಾರು ಅರ್ಧದಷ್ಟು ಪ್ರದೇಶ ಕರ್ನಾಟಕದಲ್ಲಿದೆ. ಸುಮಾರು ಹನ್ನೊಂದು ಲಕ್ಷ ಹೆಕ್ಟೇರುಗಳಿಂದ ಸುಮಾರು ಹದಿನೈದು ಲಕ್ಷ ಟನ್ ರಾಗಿಯನ್ನು ರಾಜ್ಯ ಉತ್ಪಾದಿಸುತ್ತಲಿದೆ. ಈ ಮಹತ್ವದ ಕೊಡುಗೆ ಲಕ್ಷ್ಮಣಯ್ಯನವರ ಮಹತ್ತರವಾದ ಸಾಧನೆಯ ಪರಿಣಾಮ. ಮಹತ್ತರವಾದುದನ್ನು ಸಾಧಿಸಲು ಎಂ.ಎಸ್ಸಿ., ಪಿಎಚ್.ಡಿ. ಮಾಡಬೇಕಾದ ಅಗತ್ಯವಿಲ್ಲ. ದೃಢ ನಿರ್ಧಾರ, ಸೂಕ್ಷ್ಮ ದೃಷ್ಟಿ, ಸತತ ಪರಿಶ್ರಮಗಳಿಂದ ಯಾವುದೂ ಅಸಾಧ್ಯವಲ್ಲ ಎಂಬ ಸತ್ಯವನ್ನು ಲಕ್ಷ್ಮಣಯ್ಯ ತಮ್ಮ ಸ್ವಂತ ಜೀವನ ಉದಾಹರಣೆಯಿಂದ ನಿರೂಪಿಸಿದರು. ತಮ್ಮ ಅಧ್ಯಯನದಿಂದ ವೇದ್ಯವಾದ ಸಂಗತಿಗಳನ್ನು, ಸೂಕ್ಷ್ಮ ಅವಲೋಕನದಿಂದ ಗಮನಕ್ಕೆ ಬಂದ ವಿಷಯಗಳನ್ನು ಆಧರಿಸಿ ತಮ್ಮದೇ ಆದ ಅಭಿಪ್ರಾಯಗಳನ್ನು, ವಿಧಾನಗಳನ್ನು ರೂಪಿಸಿಕೊಂಡರು. ಅದನ್ನು ಶ್ರದ್ಧೆಯಿಂದ ತಮ್ಮ ಕಾರ್ಯದಲ್ಲಿ ಅಳವಡಿಸಿಕೊಂಡರು. ತನ್ಮೂಲಕ ಅಪಾರ ಯಶಸ್ಸನ್ನು ಪಡೆದರು.

ತಮ್ಮ ಕಾರ್ಯವನ್ನು, ಸಂಶೋಧನೆ, ಸಾಧನೆಗಳನ್ನು ಪ್ರಕಟಿಸಿ ಖ್ಯಾತರಾಗುವ ಆಶಯ ಅವರಿಗಿರಲಿಲ್ಲ. ರಾಗಿಯ ಮುನ್ನಡೆಯ ದಾಖಲೆಗಳಲ್ಲಿ ಅವರ ತಳಿಗಳೆಲ್ಲ ಉಲ್ಲೇಖಗೊಂಡಿವೆಯಾದರೂ ಅವರ ಹೆಸರಿಲ್ಲ.

ದೀನರ ಆಹಾರವಾಗಿದ್ದ ರಾಗಿ ದೈನ್ಯತೆಯ ಆಳದಿಂದ ಧನ್ಯತೆಯ ಎತ್ತರಕ್ಕೆ ಬೆಳೆಯಿತು.

ಫಿಂಗರ್, ಮಿಲ್ಲೆಟ್, ಲಕ್ಷ್ಮಣಯ್ಯನವರು ಬೆರಳು ಹಿಡಿದು ಅವರು ನಡೆಸಿದ ಹಾದಿಯಲ್ಲಿ ನಡೆಯಿತು. ಅದರ ಏಳಿಗೆ ತಮ್ಮದೇ ಆದ ಹಾದಿಯನ್ನು ಲಕ್ಷ್ಮಣಯ್ಯ ರೂಪಿಸಿದರು. ಆ ಹಾದಿಯಲ್ಲಿ ನಡೆದು ಬೆಳೆಯ ಭವ್ಯ ಭವಿಷ್ಯಕ್ಕೆ ಲಕ್ಷ್ಮಣಯ್ಯ ಭದ್ರ ಬುನಾದಿ ಹಾಕಿದರು. "ಅವರು ಸಸ್ಯ ಸಂಕರಣ ಮತ್ತು ತಳವಿಜ್ಞಾನವನ್ನು ಒಂದು ಕಲೆಯಾಗಿ ಪ್ರಾಕ್ಟಿಸು ಮಾಡಿದರು. ರಾಗಿಯ ನರನಾಡಿಗಳ ಸೂಕ್ಷ್ಮ ಪರಿಚಯ ಅವರಿಗಿತ್ತು. ಅದರ ನಾಡಿ ಮಿಡಿತಕ್ಕೆ ಪ್ರತಿಯಾಗಿ ಮಿಡಿಯುವಷ್ಟು, ಅದಕ್ಕೆ ಸ್ಪಂದಿಸುವಷ್ಟು ಅನ್ಯೋನ್ಯತೆಯನ್ನು ಬೆಳೆಸಿಕೊಂಡಿದ್ದರು. ಅದೇ ಅವರ ಯಶಸ್ಸಿಗೆ ಮೂಲಕಾರಣ" ಎನ್ನುತ್ತಾರೆ. ಖ್ಯಾತ ತಳಿ ತಜ್ಞರಾದ ಡಾ. ಸೀತಾರಾಮ್ ಮತ್ತು ಡಾ. ಶಂಕರೇಗೌಡರು.

ಲಕ್ಷ್ಮಣಯ್ಯನವರು 'ಅವರಿಗೆ, ಅವರೇ ಸಾಟಿ' ಎನ್ನುವಂಥ ವ್ಯಕ್ತಿತ್ವ. ಅವರದೇ ನುಡಿಗಳಲ್ಲಿ

The sum total of my being is -

"what I thought has made me what I am" ಈ ಎರಡು ಸಾಲು ಅವರ ಸಮಗ್ರ ವ್ಯಕ್ತಿತ್ವದ ಸಮರ್ಥ ಚಿತ್ರಣ ನೀಡುತ್ತವೆ.

**ಆಕರ : ತ್ರಿವಿಕ್ರಮ ಹೆಜ್ಜೆಗಳು – ಸಂ. ಟಿ.ಆರ್. ಅನಂತರಾಮು**

## ೨.೪ ತಂತ್ರಜ್ಞಾನ ಕನ್ನಡ (ಓದು ಪಠ್ಯ)

**ಸುಧೀಂದ್ರ ಹಾಲ್ದೊಡ್ಡೇರಿ**

ಬೆಂಗಳೂರು ಎಂದೊಡನೆ ದೇಶದ ಬಹುತೇಕ ಜನರಿಗೆ 'ಮಾಹಿತಿ ತಂತ್ರಜ್ಞಾನ ರಾಜಧಾನಿ' ಎಂಬ ಪದಗಳು ನೆನಪಾಗುತ್ತವೆ. ವಿಜ್ಞಾನ ಹಾಗೂ 'ತಂತ್ರಜ್ಞಾನ'ಗಳನ್ನು ಹೆಚ್ಚು ಅರ್ಥಮಾಡಿಕೊಂಡವರಿಗೆ ಬೆಂಗಳೂರು 'ನ್ಯಾನೊ ತಂತ್ರಜ್ಞಾನ' ನಗರವಾಗುತ್ತಿವೆಯೆಂಬುದೂ ಅರಿವಾಗುತ್ತದೆ. ಶಿಸ್ತುಬದ್ಧವಾಗಿ ಕಲಿಯುವಾಗ ಅನ್ವಯಿಕ ವಿಜ್ಞಾನವೇ 'ತಂತ್ರಜ್ಞಾನ' ಎಂದು ಹೇಳಿಕೊಡಲಾಗುತ್ತಿದೆಯಾದರೂ 'ತಂತ್ರಜ್ಞಾನ' ಕ್ಷೇತ್ರದಲ್ಲಿ ಕೆಲಸಮಾಡುವ ಅನೇಕರಿಗೆ ಮೂಲ ವಿಜ್ಞಾನದ ಹೊಳಹು ತಿಳಿದಿರದಿರುವ ಸಂರ್ಭಗಳೂ ಉಂಟು. ಹೊಸ 'ತಂತ್ರಜ್ಞಾನ'ಗಳನ್ನು ಆವಿಷ್ಕರಿಸುವವರಿಗೆ ಮೂಲ ವಿಜ್ಞಾನದ ಆಳ-ಅರಿವು ಇರಬೇಕಾಗುತ್ತದೆಯೇ ಹೊರತು, 'ತಂತ್ರಜ್ಞಾನ'ವನ್ನು ಒಂದು ಸಲಕರಣೆಯಾಗಿ ಬಳಸಬಲ್ಲ 'ತಂತ್ರಜ್ಞ'ರಿಗೆ ಅದು ಹೇಗೆ ಕೆಲಸ ಮಾಡುತ್ತದೆ ಮತ್ತು ಅದನ್ನು ತನ್ನ ಹಿತಕ್ಕೆ ಹೇಗೆ ಬಳಸಿಕೊಳ್ಳಬಹುದು ಎಂಬುದಷ್ಟೇ ತಿಳಿದರೆ ಸಾಕು.

ಹಾಗಿದ್ದರೆ 'ತಂತ್ರಜ್ಞಾನ'ದ 'ಉತ್ಸವ ಮೂರ್ತಿ'ಗಳಾದ ಕಂಪ್ಯೂಟರ್‌ಗಳು ಅವುಗಳ ಜತೆಗಿನ ಸಾಫ್ಟ್‌ವೇರ್‌ಗಳು, ವಿಮಾನಗಳು, ಕೀಟನಾಶಕಗಳು, ಕೊಳಚೆ ಸಂಸ್ಕರಣಾ ಯಂತ್ರಗಳು, ಮೈಕ್ರೋವೇವ್ ಒಲೆಗಳು – ಇಂಥವುಗಳನ್ನೇ 'ತಂತ್ರಜ್ಞಾನ' ಎಂದು ಭಾವಿಸಬಹುದೆ? ಎಂಬ ಪ್ರಶ್ನೆ ಏಳುತ್ತದೆ. ಇಲ್ಲ ಎಂದೊಡನೆ 'ತಂತ್ರಜ್ಞಾನ'ದ ನಿಜವಾದ ಅರ್ಥ ಹುಡುಕುವ ಕೆಲಸ ಆರಂಭವಾಗುತ್ತದೆ. ಈ ಬಗ್ಗೆ ಸುದೀರ್ಘ ಅಧ್ಯಯನ ನಡೆಸಿರುವ, ಸ್ವತಃ 'ತಂತ್ರಜ್ಞಾನಿ'ಗಳೂ ಆಗಿರುವ ಪ್ರಮುಖ ಪ್ರಕಾರ ಪ್ರಕೃತಿಯಲ್ಲಿ ಲಭ್ಯವಿರುವ ಯಾವುದೇ ಸಾಮಗ್ರಿಯನ್ನು, ತನಗೆ ಬೇಕೆಂದಂತೆ ಬದಲಿಸಿ, ಜೋಡಿಸಿ, ಬಳಸಿಕೊಳ್ಳುವ ಚಾಣಕತನವನ್ನೇ 'ತಂತ್ರಜ್ಞಾನ' ಎನ್ನಬಹುದು. ಅಂದ ಮೇಲೆ ಬಯಸಿದಂಥ ಉಪಕರಣ, ಯಂತ್ರ ನೆರವಿನ-ಸಲಕರಣೆಯನ್ನು ಸೃಷ್ಟಿಸಲು ಅಗತ್ಯವಾದ ಎಲ್ಲ ಸಂಪನ್ಮೂಲಗಳನ್ನೂ, ಆ ಸಂಪನ್ಮೂಲಗಳ ಸೃಷ್ಟಿ ಕಾರ್ಯವನ್ನೂ 'ತಂತ್ರಜ್ಞಾನ'ದ ವಿಶಾಲ ಪರಿಧಿಯೊಳಗೆ ದೂಡಬಹುದು, ವಿನ್ಯಾಸ, ಉತ್ಪಾದನೆ, ನಿರ್ವಹಣೆ, ದುರಸ್ತಿ ಹಾಗೂ ಕೊನೆಗೆ ವಿಲೇವಾರಿ ಕಾರ್ಯಗಳಲ್ಲಿ ಭಾಗಿಯಾದ ಎಂಜಿನಿಯರಿಂಗ್ ಕಾಲೇಜುಗಳು, ತಯಾರಿಕಾ ಘಟಕಗಳು ಮತ್ತು ಬಳಕೆದಾರ ಸಮೂಹ ಈ 'ತಂತ್ರಜ್ಞಾನ'ದ ವ್ಯಾಪ್ತಿಯಲ್ಲಿ ಸೇರಿಕೊಳ್ಳುತ್ತವೆ. ಈ ಎಲ್ಲದರ ನಿರ್ಮಾಣಕ್ಕೆ ಅಗತ್ಯವಾದ ತಿಳಿವಳಿಕೆ, ಉತ್ಪಾದನಾ ಪ್ರಕ್ರಿಯೆಗಳು, ಪರಿಣತಿ, ತಾಂತ್ರಿಕ ಕೌಶಲಗಳು 'ತಂತುಜ್ಞಾನ'ದ ಬಹುಮುಖ್ಯ ಭಾಗಗಳು. ಒಟ್ಟಿನಲ್ಲಿ 'ಟೆಕ್ನಾಲಜಿ' ಎಂಬ ಇಂಗ್ಲಿಷ್ ಪದಕ್ಕೆ ಸಂವಾದಿಯಾಗಿ 'ತಂತ್ರಜ್ಞಾನ' ಪದವನ್ನು ಬಳಸುವುದು ವಾಡಿಕೆ.

'ವಿಶ್ವ ಕನ್ನಡ ಸಮ್ಮೇಳನ'ದ ಹೊತ್ತಿನಲ್ಲಿ 'ತಂತ್ರಜ್ಞಾನ ವಿಶ್ವ'ದೊಳಗೆ 'ಕನ್ನಡನಾಡಿನ' ಪಾತ್ರವೆಂಥದ್ದು? ಎಂದು ಅರಿಯಬೇಕಾದ ಜರೂರಿದೆ. ಕ್ಷಿಪ್ರವೇಗದಲ್ಲಿ ಬದಲಾಗುತ್ತಿರುವ ತಂತ್ರಜ್ಞಾನಗಳೇ ನಮ್ಮ ಜೀವನದ ಗತಿಯನ್ನು ಬದಲಿಸುವ, ನಮ್ಮೆಲ್ಲ ಸುಖ-ಸವಲತ್ತುಗಳಿಗೂ ನೆರವಾಗುವ ಹಾಗೂ ನಮ್ಮ ಸಂಕಷ್ಟಗಳಿಗೂ ಕಾರಣವಾಗುವ ಸಂರ್ಭದಲ್ಲಿ ಈ ಚರ್ಚೆ ಹೆಚ್ಚು ಪ್ರಸ್ತುತವೆನಿಸುತ್ತದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ನಗರ ಕಳೆದ ಆರವತ್ತು-ಎಪ್ಪತ್ತುರ್ಷಗಳಲ್ಲಿ ಕಂಡ ಬದಲಾವಣೆಗಳನ್ನು ಗ್ರಹಿಸಿದರೆ ಕೇವಲ ಕರ್ನಾಟಕವಷ್ಟೇ ಅಲ್ಲ, ಇಡೀ ಭಾರತದ 'ತಂತ್ರಜ್ಞಾನ ಬೆಳವಣಿಗೆ'ಯ ಚಿತ್ರಣ ಸಿಕ್ಕೀತು.

ತಂತ್ರಜ್ಞಾನ ಅಳವಡಿಕೆಯ ಬೇರುಗಳನ್ನು ಕೋಲಾರದಲ್ಲಿನ ಆಳದ ಚಿನ್ನದಗಣಿಗಳಲ್ಲಿ ಹುಡುಕಬಹುದು. ಆ ಕೆಲಸಕ್ಕೆ ಬೇಕಾದ ವಿದ್ಯುತ್ ಶಕ್ತಿಯನ್ನು ಶಿವನಸಮುದ್ರದಲ್ಲಿ ಉತ್ಪಾದಿಸಿ ಅದನ್ನು ತಂತಿಗಳ ಮೂಲಕ ಅತಿದೂರದ ಕೋಲಾರಕ್ಕೆ ಸಾಗಿಸಲು ನೆರವಾದ ತಂತ್ರಜ್ಞಾನ ಕೌಶಲಗಳು ಇಡೀ ದೇಶವನ್ನೇ ನಿಬ್ಬೆರಗಾಗಿಸಿತ್ತು. ನೀರಾವರಿಗೆಂದು ಆಣೆಕಟ್ಟು ಅಲ್ಲಿನ ಹೆಚ್ಚುವರಿ ನೀರಿನಿಂದ ವಿದ್ಯುತ್ತು, ಅಂಗಳದಲ್ಲಿ ಉದ್ಯಾನವನ... ಈ ಬಗೆಯ ತಂತ್ರಜ್ಞಾನ ಸೋಪಾನಗಳನ್ನು ಕಟ್ಟುತ್ತಾ ಬಂದಂತೆ ಮೈಸೂರು 'ಮಾದರಿ' ರಾಜ್ಯದ ಸಾಲಿನಲ್ಲಿ ಸೇರುವಂತಾಯಿತು. ಅಂದು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಂಥ ದೂರರ್ಶಿತ್ವದ ಮಹಾರಾಜರ ಆಡಳಿತವಿತ್ತು. ಶೇಷಾದ್ರಿ ಐಯ್ಯರ್, ಮಿರ್ಜಾ ಇಸ್ಮಾಯಿಲ್ ಅವರಂಥ ದಿವಾನ ಪರಂಪರೆಯಿತ್ತು. ವಿಶ್ವೇಶ್ವರಯ್ಯನವರಂಥ ಎಂಜಿನಿಯರ್ ಅಡಳಿತಗಾರರಿಗೆ ದಿವಾನರಾಗುವ ಅವಕಾಶವೂ ಲಭಿಸಿತ್ತು. ಎಲ್ಲಕ್ಕೂ ಮಿಗಿಲಾಗಿ ಸ್ವಂತ ಲಾಭಕ್ಕೆ ನೆರವಾಗುವ 'ಆಯ್ದ' ತಂತ್ರಜ್ಞಾನಗಳನ್ನು ವರ್ಗಾಯಿಸುತ್ತಿದ್ದ ಬ್ರಿಟಿಷ್ ವಸಾಹತುಶಾಹಿಯ ನೆರವಿತ್ತು. ರಾಜಧಾನಿ ಮೈಸೂರಿನಲ್ಲಿ ಮಹಾರಾಜಾ ಕಾಲೇಜು, ವಿಶ್ವವಿದ್ಯಾಲಯಗಳು ಉತ್ಸಾಹಿ ವಿದ್ಯಾರ್ಥಿಗಳು ವಿಜ್ಞಾನ ಹಸಿವನ್ನು ತಣಿಸ ತೊಡಗಿದೆವು. ರಾಜಧಾನಿಯಲ್ಲದ ಬೆಂಗಳೂರಿನಲ್ಲಿ ಜೆಮ್ ಷೇಟ್ ಜಿ ನಸರವಾಂಜಿ ಟಾಟಾ ಅವರಿಗೆ ಜಾಗತಿಕ ಮಟ್ಟದ ವಿಜ್ಞಾನ ವಿದ್ಯಾಸಂಸ್ಥೆ ಕಟ್ಟುವ ಹುಮ್ಮಸ್ಸಿತ್ತು. ಎಂಜಿನಿಯರಿಂಗ್ ಶಾಲೆ

ತೆರೆಯುವ ಕನಸು ವಿಶ್ವೇಶ್ವರಯ್ಯನವರಿಗಿತ್ತು. ಸೆಂಟ್ರಲ್ ಕಾಲೇಜಿನ ವಿಜ್ಞಾನದಂಗಳಕ್ಕೆ ಮೇಘನಾದ ಸಹಾ, ಸಿ.ವಿ.ರಾಮನ್ ಅವರಂಥ ಮೇಧಾವಿಗಳು ಕಾಲಿಡುತ್ತಿದ್ದರು. ನೋಡ ನೋಡುತ್ತಿದ್ದಂತೆ ಬೆಂಗಳೂರಿನ ಕಂಟೋನೆಂಟಿನಲ್ಲಿ ವಿಮಾನ ದುರಸ್ತಿ ಕಾರ್ಖಾನೆಗೆ ಬುನಾದಿಯಾಯಿತು. ಕಾರು ಕಾರ್ಖಾನೆ ಆರಂಭಿಸುವ ವಿಶ್ವೇಶ್ವರಯ್ಯನವರ ಕನಸಿಗೆ ತಣ್ಣೀರೆರಚಿದ ಬ್ರಿಟಿಷ್ ಸರ್ಕಾರ ಮಹಾಯುದ್ಧದಲ್ಲಿ ಬಳಕೆಯಾದ ವಿಮಾನಗಳ ದುರಸ್ತಿಗೆ ಬೆಂಗಳೂರನ್ನೇ ತಾಣ ಮಾಡಿಕೊಂಡಿತು. ಕೇಂದ್ರ ಬ್ರಿಟಿಷ್ ಸರ್ಕಾರ, ರಾಜ್ಯದ ಮೈಸೂರು ಸರ್ಕಾರ, ಖಾಸಗಿ ಉದ್ದಿಮೆದಾರ ಸೇಠ್ ವಾಲ್‌ಚಂದ ನಡುವಣ ಒಪ್ಪಂದದ ಮೂಲಕ 'ಹಿಂದೂಸ್ತಾನ್ ಏರ್ ಕ್ರಾಫ್ಟ್ ಲಿಮಿಟೆಡ್' ಕಂಪನಿ ಕಾರ್ಯಾರಂಭ ಮಾಡಿತು. ಅಷ್ಟರಲ್ಲಿ ಮೈಸೂರು ಸರ್ಕಾರದ ನೆರವಿನ ಭದ್ರಾವತಿ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ, ಮೈಸೂರು ಗಂಧದೆಣ್ಣೆ ಕಾರ್ಖಾನೆಗಳ ಯಂತ್ರಗಳಿಗೆ ಕೀಲೆಣ್ಣೆ ಸಿಂಪರಣೆಯಾಯಿತು. ಬೆಳೆದಿದೆ ನೋಡಾ, ಬೆಂಗಳೂರು ನಗರಾ ಎಂದು ಮೈಸೂರು ರಾಜ್ಯದ ಜನತೆಗೆ ಬೆರಗಾಗುವಂತೆ ಮಾಡಿತು.

ದೇಶದೆಲ್ಲೆಡೆ ವಿವಿಧ ಮಜಲುಗಳಲ್ಲಿ ಸ್ವಾತಂತ್ರ್ಯ ಹೋರಾಟ ನಡೆಯುತ್ತಿತ್ತು. ಸ್ವತಂತ್ರ ಭಾರತ ಸದೃಢವಾಗಲು ತಂತ್ರಜ್ಞಾನದ ಬೆನ್ನೆಲುಬು ಅಗತ್ಯವೆಂಬುದನ್ನು ರಾಜಕೀಯ ನಾಯಕರೂ ಮನಗಂಡಿದ್ದರು. ಒಂದಾದ ಮೇಲೊಂದರಂತೆ ಕಾರ್ಖಾನೆಗಳು ನಿರ್ಮಾಣವಾದವು. ನೋಡ ನೋಡುತ್ತಿದ್ದಂತೆ ಕಾಗದ ಕರ್ಖಾನೆ ಬಂತು. ಆಧುನಿಕ ಭಾರತದ ದೇವಾಲಯಗಳೆಂದರೆ ಸಾರ್ವಜನಿಕ ವಲಯದ ಬೃಹತ್ಕರ್ಖಾನೆಗಳೇ ಎಂದು ಬಲವಾಗಿನಂಬಿದ್ದ ಪಂಡಿತ ಜವಾಹರಲಾಲ್ ನೆಹರು ಪ್ರಧಾನಿಯ ಹುದ್ದೆಯಲ್ಲಿದ್ದರು. ಬೆಂಗಳೂರಿನ ನೆಂಟು ಉಳಿಸಿಕೊಂಡಿದ್ದ ಮೇರು ವಿಜ್ಞಾನಿ ಹೋಮಿ ಜಹಾಂಗೀರ್ ಬಾಬಾ ಅವರ ಮಾತುಗಳಿಗೆ ನೆಹರು ಪ್ರಾಶ್ಯಸ್ತ್ಯ ನೀಡುತ್ತಿದ್ದರು. ಅರಸರಿಂದ ಬಿಡುಗಡೆಯಾದ ಮೈಸೂರು ಜನಪ್ರತಿನಿಧಿಗಳ ಆಡಳಿತಕ್ಕೆ ದಕ್ಕಿತು, ಶರಾವತಿ ನದಿಯ ಕಣಿವೆಗೆ ಬೃಹತ್ ಅಣೆಕಟ್ಟು ಕಟ್ಟಿ, ವಿದ್ಯುತ್ ಉತ್ಪಾದನಾ ಕೇಂದ್ರಕ್ಕೆ ನಾಂದಿ ಹಾಡಲಾಯಿತು. ಯಾವುದೇ ರಾಜ್ಯಗಳಲ್ಲಿರದಿದ್ದ ಅಪಾರ ವಿದ್ಯುತ್ಶಕ್ತಿ ಮೈಸೂರು ರಾಜ್ಯದಲ್ಲಿ ಲಭ್ಯವಾಯಿತು. ಮೆಶಿನ್ ಟೂಲ್ ಕಾರ್ಖಾನೆ, ಟೆಲಿಫೋನ್ ಕಾರ್ಖಾನೆ, ರೇಡಿಯೋ ಕಾರ್ಖಾನೆ, ಎಲೆಕ್ಟ್ರಾನಿಕ್ಸ್ ಕಾರ್ಖಾನೆಗಳು... ಒಂದೊಂದಾಗಿ ಬೆಂಗಳೂರಿನಲ್ಲಿ ಕೇಂದ್ರೀಕೃತವಾದವು. ಹಿಂದೂಸ್ತಾನಿ ವಿಮಾನ ಕಾರ್ಖಾನೆ ಬೆಳೆದಂತೆಲ್ಲಾ ಟಾಟಾ ಇನ್ಸಿಟ್ಯೂಟ್‌ನ ವಿಮಾನ ಎಂಜಿನಿಯರಿಂಗ್ ವಿಭಾಗವೂ ಬೆಳೆಯಿತು. ಉಳಿದ ಉದ್ದಿಮೆಗಳಿಗೆ ಅಗತ್ಯವಾದ ಎಲೆಕ್ಟ್ರಿಕಲ್, ಎಲೆಕ್ಟಾನಿಕ್ಸ್, ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗಗಳು ಟಾಟಾ ಇನ್‌ಸ್ಟಿಟ್ಯೂಟ್ ಹಾಗೂ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿನಲ್ಲಿ ವಿಸ್ತೃತಗೊಂಡವು. ಬೆಂಗಳೂರು ಹಾಗೂ ಮೈಸೂರು, ಮುಂದೆ ಹುಬ್ಬಳ್ಳಿ, ದಾವಣಗೆರೆ, ಬೆಳಗಾವಿ ನಗರಗಳಲ್ಲಿ ಸರ್ಕಾರಿ ಹಾಗೂ ಖಾಸಗಿ ಸಹಭಾಗಿತ್ವದ ಎಂಜಿನಿಯರಿಂಗ್ ಶಿಕ್ಷಣ ಸಂಸ್ಥೆಗಳು ಆರಂಭವಾದವು. ಬೆಂಗಳೂರಿನಲ್ಲಿನ ಹಿರಿಯ ಕರ್ಖಾನೆಗಳ ಸುತ್ತ ಸಣ್ಣ ಕಾರ್ಖಾನೆಗಳ ಸಮೂಹವೇ ಕಾರ್ಯಾರಂಭ ಮಾಡಿತು. ದೇಶದ ಎಲ್ಲೆಡೆಯಿಂದ ಕುಶಲಕರ್ಮಿಗಳು ಬೆಂಗಳೂರಿಗೆ ವಲಸೆಬಂದರು. ರಸ್ತೆಗಳು ವಿಸ್ತೀರ್ಣಗೊಂಡವು, ಬಡಾವಣೆಗಳಾದವು. ನೀರಿಗೆ ತಾಪತ್ರಯ ಶುರುವಾಯಿತು, ಕೊಳವೆ ಬಾವಿಗಳ ಆರ್ಭಟ ಹೆಚ್ಚಿತು, ಉದ್ಯಾನನಗರ, ವಿಮಾನನಗರವಾಗಿ ಉದ್ದಿಮೆ ನಗರವಾಯಿತು. ನೆಮ್ಮದಿ ಕಲಕಿತು, ಗಾಳಿಯಲ್ಲಿ ವಿಷದ ಅಂಶ ಹೆಚ್ಚಿತು, ಧೂಳು-ಪರಾಗರೇಣುವಿನ ಅಲರ್ಜಿಗೆ ಬಳಲುವವರ ಸಂಖ್ಯೆ ಹೆಚ್ಚಿತು. ಜಮೀನಿಗೆ ಚಿನ್ನದ ಬೆಲೆ ಬಂತು, ಹೊಸ ಬಡಾವಣೆಗಳಿಗೆಲ್ಲಾ ಬಸ್ಸು ಪೂರೈಸುವ ಜವಾಬ್ದಾರಿ ಸರ್ಕಾರದ್ದಾಯಿತು. ಪರಭಾಷಾ ಪ್ರಾಂತ್ಯದವರ ಸಂಖ್ಯೆ ಹೆಚ್ಚಿದಂತೆ ಅವರ ರುಚಿಗೆ ತಕ್ಕಂಥ ರೆಸ್ಟಾರೆಂಟುಗಳು, ಅವರ ಭಾಷೆಯ ಸಿನಿಮಾಗಳನ್ನೇ ಪ್ರದರ್ಶಿಸುವ ಮಂದಿರಗಳು ಆರಂಭವಾದವು. ಭಾಷಾ ಸಾಮರಸ್ಯಕ್ಕೆ ಕೊಂಚ ಧಕ್ಕೆಯೂ ಆಯಿತು. ಮಹಾನಗರಗಳ ಪಟ್ಟಿಯಲ್ಲಿ ಶೀಘ್ರವೇ ದಾಖಲಾಗುವ ಹುಮ್ಮಸ್ಸಿನಲ್ಲಿ ಬೆಂಗಳೂರು ಬೆಳೆಯಲಾರಂಭಿಸಿತು.

ರಕ್ಷಣಾ ಅಗತ್ಯಗಳಿಗೆ ಮಾತ್ರ ಪೂರೈಕೆಯಾಗುತ್ತಿದ್ದ ಬೆಂಗಳೂರಿನ ಎಲೆಕ್ಟಾನಿಕ್ಸ್ ಬಿಡಿಭಾಗಗಳು ಬಾಹ್ಯಾಕಾಶ ಪ್ರಯೋಗಾಲಯಗಳಿಗೂ ಲಭ್ಯವಾದವು. ವಿಮಾನ ನಿರ್ಮಾಣದಲ್ಲಿನ ಅನುಭವ, ಕೃತಕ ಉಪಗ್ರಹಗಳನ್ನು ವಿನ್ಯಾಸಗೊಳಿಸುವಲ್ಲಿ ನೆರವಾದವು. ನಮ್ಮದೇ ಉಪಗ್ರಹ ಸಿದ್ಧವಾಯಿತು. ನಿರ್ದಿಷ್ಟ ಕಕ್ಷೆಯಲ್ಲಿ ಉಪಗ್ರಹಗಳನ್ನು ಕೂರಿಸಬಲ್ಲ ಸಾಮರ್ಥ್ಯ ನಮ್ಮದಾಯಿತು. ಬೆಂಗಳೂರಿನಲ್ಲಿ ನಿರ್ಮಾಣಗೊಂಡ ಉಪಗ್ರಹಗಳು ರಶಿಯಾದ ಬೈಕನೂರಿನಲ್ಲೊ ಇಲ್ಲವೆ ಫ್ರೆಂಚ್ ಗಯಾನಾದಲ್ಲೊ ಯಶಸ್ವಿಯಾಗಿ ಉಡ್ಡವಣೆಯಾದವು. ದೇಶದ ರೇಡಿಯೊ ಸಂಪರ್ಕಕ್ಕೂ ಪೈಪೋಟಿ ನೀಡುವಂತೆ ದೂರದರ್ಶನ ಜಾಲ ಸ್ಥಾಪನೆಗೊಂಡಿತು. ಡಿ.ಆರ್.ಡಿ.ಓ. ಪ್ರಯೋಗಶಾಲೆಗಳು, ಸಿ.ಎಸ್.ಐ.ಆರ್. ಪಯೋಗಶಾಲೆಗಳು ವಿಮಾನಗಳಿಗೆ ಸಂಬಂಧಿಸಿದ ಎಲ್ಲ ಪ್ರಯೋಗಶಾಲೆಗಳನ್ನೂ ಬೆಂಗಳೂರಿನಲ್ಲಿ ಸ್ಥಾಪಿಸಿದವು. ಈ ಪ್ರಯೋಗಶಾಲೆಗಳ ಜತೆಗೆ ಇಸ್ರೋ ಸಂಸ್ಥೆಗೆ ಅಗತ್ಯವಾದ ಬಿಡಿಭಾಗಗಳನ್ನು ನಿರ್ಮಿಸುವತ್ತ ಎಚ್.ಎ.ಎಲ್, ಬಿ.ಇ.ಎಲ್, ಐ.ಟಿ.ಐ. ಸಂಸ್ಥೆಗಳು ಮುಂತಾದವು ಒಂದಾದ ಮೇಲೊಂದರಂತೆ ಉಪಗ್ರಹ ಉಡ್ಡವಣೆಗಳು ಯಶಸ್ಸಿನ ಹಾದಿ ಹಿಡಿದವು. ದೂರ ಸಂಪರ್ಕದಲ್ಲಿ

ಹೊಸ ಬಗೆಯ ಕಾಂತಿ ಆರಂಭವಾಯಿತು. ದುಬಾರಿ ಎನಿಸಿದ್ದ ಟೆಲಿಫೋನ್ ಕರೆ, ಕಂಪ್ಯೂಟರ್, ಇಂಟರ್‌ನೆಟ್ ಸೇವೆಗಳು ಕೈಗೆಟುಕುವ ಬೆಲೆಯಲ್ಲಿ ಲಭ್ಯವಾದವು. ಕೇವಲ ವಿಮಾನದ ಟಿಕೆಟ್‌ಗಳ ಮುಂಗಡ ಬುಕಿಂಗ್‌ಗೆ ನೆರವಾಗುತ್ತಿದ್ದ ಕಂಪ್ಯೂಟರ್ ಸಂಪರ್ಕ ವ್ಯವಸ್ಥೆ ರೈಲು ಹಾಗೂ ಬಸ್ ಟಿಕೇಟ್‌ಗಳನ್ನೂ ಕಾದಿರಸಲು ನೆರವಾದವು. ಜನ ಸಾಮಾನ್ಯರಿಗೆ ಮಾಹಿತಿ ತಂತ್ರಜ್ಞಾನದ ಪರಿಚಯವಾಯಿತು. ಇತ್ತ ಖಾಸಗಿ ಕಾಲೇಜುಗಳು ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಪರಿಣತರನ್ನು ಮಾತ್ರ ತರಬೇತಿಗೊಳಿಸುವತ್ತ ಗಮನ ಕೇಂದ್ರೀಕರಿಸಿದವು. ಬದಲಾದ ಆರ್ಥಿಕ ಪರಿಸ್ಥಿತಿಯಿಂದ ಹೊರದೇಶಗಳಿಂದಲೂ ಬ್ಯುಸಿನೆಸ್ ತರಬಹುದೆನ್ನುವ ಆತ್ಮ ವಿಶ್ವಾಸ ಉದ್ಯಮಿಗಳಿಗೆ ಬಂತು.

ಯಾವುದೇ ದೇಶಕ್ಕೆ ಹೋಲಿಸಿದರೆ ಅಗ್ಗದ ದರದಲ್ಲಿ ಕ್ಷಿಪ್ರ ವೇಗದಲ್ಲಿ ಕೆಲಸಮಾಡಬಲ್ಲ ಸಂಪರ್ಕ ವ್ಯವಸ್ಥೆ ದೊರಕಿತು. ಉದ್ಯೋಗದ ಪರಿಕಲ್ಪನೆಯೇ ಬದಲಾಯಿತು. ಭೌಗೋಳಿಕ ಅಂತರ ಕಡಿಮೆಯಾಗಿ ಜಗತ್ತಿನ ಎಲ್ಲ ಸಮಯ ವಲಯಗಳಿಗೂ ಸೇವೆ ನೀಡಬಲ್ಲ ತಂತ್ರಜ್ಞರ ದಂಡು ಬೆಂಗಳೂರಿನಲ್ಲಿ ಬಹುದೊಡ್ಡ ಸಂಖ್ಯೆಯಲ್ಲಿ ಸಜ್ಜಾದವು. ಬೆಂಗಳೂರು ನಗರಕ್ಕೆ, ಕರ್ನಾಟಕದ ಕೆಲಭಾಗಗಳಿಗೆ 'ಸಾಫ್ಟ್‌ವೇರ್' ಸಂಸ್ಕೃತಿ ಕಾಲಿಟ್ಟಿತು. ವಿವಿಧ ರಂಗಗಳ ತಜ್ಞರು ಹೊಸ ಜೀವನಶೈಲಿಯ, ಅಗಾಧ ಲೋಲುಪತನದ ನವ ಉದ್ಯೋಗಾವಕಾಶಗಳತ್ತ ಮೊಗ ಮಾಡಿದರು. ಬಿಲಿಯಗಟ್ಟಲೆ ಡಾಲರ್ ಆದಾಯ ತರುವ ಕಂಪನಿಗಳ ತವರೆಂಬ ಬಿರುದಿಗೆ ಬೆಂಗಳೂರು ಭಾಜನವಾಯಿತು. ಷಾಪಿಂಗ್ ಮಾಲುಗಳ ಸರಣಿಯೇ ಹುಟ್ಟಿಕೊಂಡವು. ಆಯಕಟ್ಟಿನ ಜಾಗಗಳಿಗೆ ಚಿನ್ನಕ್ಕಿಂತಲೂ ಹೆಚ್ಚಿನ ಬೆಲೆಬಂತು. ಐಶಾರಾಮಿ ಕಾರುಗಳ ಭರಾಟೆ ಹೆಚ್ಚಾಯಿತು. ಮೇಲು ಸೇತುವೆಗಳು ನಿರ್ಮಾಣವಾದವು, ಕೆರೆಗಳೆಲ್ಲ ಬತ್ತಿದವು. ತಗ್ಗು ತುಂಬಿ ಬಹುಮಹಡಿ ವಸತಿ ಸಮುಚ್ಚಯಗಳು ತಲೆಯೆತ್ತಿದವು. ಮಳೆ ಬಂದಾಗ ನೆರೆಹಾವಳಿ ಹೆಚ್ಚಾದವು, ಬೆಂಗಳೂರೆಂಬ ಬೆಂಗಳೂರು ಆಮೆರಿಕದಲ್ಲೂ ಹೆಸರಾಯಿತು, ಹಸಿರು ಬತ್ತಿ ಹೋಯಿತು. ಯಾರಿಗೆ ಬಂತು ನಲವತ್ತೇಳರ ಸ್ವಾತಂತ್ರ್ಯ ಎಂದು ಉಳಿದ ಜನರು ಹಲುಬುವಂತಾಯಿತು. ಅತ್ತ ಅಮೆರಿಕ, ಯುರೋಪ್ ದೇಶಗಳ ಸಾಮಾನ್ಯ ಜನರ ನಿತ್ಯಜೀವನವನ್ನು ಹಗುರ ಮಾಡುವ ಕೈಂರ್ಯಕ್ಕೆ ನಮ್ಮ ಪ್ರತಿಭಾವಂತ ಎಂಜಿನಿರ್‌ಗಳು ಸಜ್ಜಾದರು. ಅವರನ್ನು ಪೋಷಿಸುವ ಸಂಸ್ಥೆಗಳ ವಹಿವಾಟು ಹಗುರ ಮಾಡಲು ಕಟಿಬದ್ಧರಾಗಿದ್ದೇವೆಂಬ ಸಂದೇಶ ಸರ್ಕಾರಿ ಕಚೇರಿಗಳಿಂದ ಮೊಳಗಿತು. ತರಕಾರಿ ಮಾರುವವನ ಕೈಗೂ ಮೊಬೈಲ್ ಬಂತು ನಿಜ, ಗ್ರಾಮ್ ಲೆಕ್ಕದಲ್ಲಿ ತರಕಾರಿ ಕೊಳ್ಳುವ ಪರಿಸ್ಥಿತಿ ಉಳಿದವರದಾಯಿತು. ವೋಲ್ವೋ ಬಸ್ಸುಗಳ ಸಂಖ್ಯೆ ಹೆಚ್ಚಿದವು. ಸಾಮಾನ್ಯ ಬಸ್ಸುಗಳಲ್ಲಿ ಫುಟ್‌ಬೋರ್ಡ್ ಮೇಲೆ ನಿಂತು ಪಯಣಿಸಲೇಬೇಕಾದ ಅನಿವಾರ್ಯದಿಂದ ಹೊರಬರಲಾಗಲೇ ಇಲ್ಲ.

ಇದು ಕೇವಲ ಬೆಂಗಳೂರಿನ ಕತೆಯಲ್ಲ, ಬೆಂಗಳೂರೆಂಬ ತಂತ್ರಜ್ಞಾನ ನಗರ ಇಡೀ ಭಾರತದ ಸಂಕ್ಷಿಪ್ತ ಚಿತ್ರವನ್ನು ಬಿಂಬಿಸುತ್ತಿದೆ. ಒಂದೊಂದು ಮಹಾನಗರವೂ ಪರಿಸರ ಮಾಲಿನ್ಯದಿಂದ, ಗ್ಯಾಡ್ಜೆಟ್ಟುಗಳ ಅಟ್ಟಹಾಸದಿಂದ, ಕೌರ್ಯದ ಕ್ರೈಮುಗಳಿಂದ, ಅಪರಿಚಿತ ವಾತಾವರಣದಿಂದ, ದುಬಾರಿ ಜೀವನದಿಂದ ನರಳುವಂತಾಗಿದೆ. ಹಾಗೆಂದ ಮಾತ್ರವೇ ಪರಿ ಹಾರವಿಲ್ಲವೆಂದಲ್ಲ. ವಹಿವಾಟು ನಡೆಸುವ ಉದ್ದಿಮೆದಾರರಿಗೆ ಪರವಾನಗಿ ನೀಡುವ ಮೊದಲೇ ಪರಿಸರ ಬದ್ಧತೆಯ ಬಗ್ಗೆ ಮುಚ್ಚಳಿಗೆ ಪಡೆಯುವ ಶಕ್ತಿ ಸರ್ಕಾರಿ ಯಂತ್ರಗಳಿಗಿರಬೇಕು. ಯಾವುದೇ ಹೊಸ ಸ್ಥಾಪನೆ ಜನಜೀವನದ ಮೇಲೆ ಬೀರುವ ಪರಿಣಾಮವೆಂಥದು? ಎಂದು ಅಳೆಯುವ ದೂರದೃಷ್ಟಿ ಆಡಳಿತವರ್ಗಕ್ಕಿರಬೇಕು. ನೆಲದ ಸಾಹಿತ್ಯ, ಸಂಸ್ಕೃತಿಗೆ ಎರವಾಗುವ ಯೋಜನೆಗಳಿಗೆ ಅನುವು ಮಾಡಿಕೊಡಬಾರದು. ಸಾಮಾನ್ಯ ಜನರ ಜೀವನ ಹೆಚ್ಚು ಸಹ್ಯವಾಗುವಂಥ ತಂತ್ರಜ್ಞಾನಕ್ಕೆ ಮಾತ್ರ ಅಭಿವೃದ್ಧಿಯಾಗುವ ಅವಕಾಶವಿರಬೇಕು.

ಇತಿಹಾಸದ ಕಾಲಘರ್ಭದಲ್ಲಿ ಎಂತೆಂಥ ಪಾಠಗಳಿವೆ? ಅಂದು ಆಳದ ಗಣಿಯಿಂದ ಚಿನ್ನ ತೆಗೆಯುವ ತಂತ್ರಜ್ಞಾನ ಕರಗತ ಮಾಡಿಕೊಂಡವರು ನಮ್ಮ ಆಡಳಿತ ನಡೆಸಿದರು. ಬೊಕ್ಕಸ ಬರಿದಾಗಿಸಿದರು. ಸ್ವಾತಂತ್ರ್ಯ ದುಸ್ತರವಾಗಿಸಿದರು. ಇಂದು?

**ಆಕರ : ಪುನರಾವಲೋಕನ – ಸಂ. ನಾಡೋಜ ಹಂಪ ನಾಗರಾಜಯ್ಯ**

## ಭಾಗ – ೩. ದಾಂಪತ್ಯ

### ಆಶಯ: ಒಂದಿರುಳು ಕನಸಿನಲಿ

**ಕೆ.ಎಸ್.ನರಸಿಂಹಸ್ವಾಮಿ**

ಒಂದಿರುಳು ಕನಸಿನಲಿ ನನ್ನವಳ ಕೇಳಿದನು
ಚೆಂದ ನಿನಗಾವುದೆಂದು–
ನಮ್ಮೂರು ಹೊನ್ನೂರೋ, ನಿಮ್ಮೂರು ನವಿಲೂರೋ
ಚೆಂದ ನಿನಗಾವುದೆಂದು

ನಮ್ಮೂರು ಚೆಂದವೋ ನಿಮ್ಮೂರು ಚೆಂದವೋ
ಎಂದೆನ್ನ ಕೇಳಲೇಕೆ?
ನಮ್ಮೂರ ಮಂಚದಲಿ ನಿಮ್ಮೂರು ಕನಸಿದನು
ವಿಸ್ತರಿಸಿ ಹೇಳಬೇಕೆ?

ನಮ್ಮೂರು ಚಂದವೋ ನಿಮ್ಮೂರು ಚೆಂದವೋ
ಎಂದೆನ್ನ ಕೇಳಲೇಕೆ? – ಎನ್ನರಸ
ಸುಮ್ಮನಿರಿ ಎಂದಳಾಕೆ

ತೌರೂರು ದಾರಿಯಲಿ ತೆಂಗುಗಳು ತಲೆದೂಗಿ
ಬಾಳೆಗಳು ತೋಳ ಬೀಸಿ,
ಮಲ್ಲಿಗೆಯ ಮೊಗ್ಗುಗಳು ಮುಳ್ಳುಬೇಲಿಯ ವರಿಸಿ
ಬಳುಕುತಿರೆ ಕಂಪಸೂಸಿ

ನಗುನಗುತ ನಮ್ಮೂರ ಹೆಣ್ಣುಗಳು ಬರುತ್ತಿರಲು
ನಿಮ್ಮೂರ ಸಂತೆಗಾಗಿ
ನವಿಲೂರಿಗಿಂತಲೂ ಹೊನ್ನೂರೆ ಸುಖವೆಂದು
ನಿಲ್ಲಿಸಿತು ಪ್ರೇಮ ಕೂಗಿ

ನಮ್ಮೂರು ಚಂದವೋ ನಿಮ್ಮೂರು ಚೆಂದವೋ
ಎಂದೆನ್ನ ಕೇಳಲೇಕೆ? – ಎನ್ನರಸ
ಸುಮ್ಮನಿರಿ ಎಂದಳಾಕೆ

ನಿಮ್ಮೂರ ಬಂಡಿಯಲಿ ನಮ್ಮೂರ ಬಿಟ್ಟಾಗ
ಓಡಿದುದು ದಾರಿ ಬೇಗ
ಪುಟ್ಟಕಂದನ ಕೇಕೆ ತೊಟ್ಟಿಲನು ತುಂಬಿತ್ತು–
ನಿಮ್ಮೂರ ಸೇರಿದಾಗ

ಊರ ಬೇಲಿಗೆ ಬಂದು, ನೀವು ನಮ್ಮನು ಕಂಡು
ಕುಶಲವನು ಕೇಳಿದಾಗ
ತುಟಿಯಲೇನೋ ನಿಂದು, ಕಣ್ಣಲೇನೋ ಬಂದು
ಕೆನ್ನೆ ಕೆಂಪಾದುದಾಗ

ನಮ್ಮೂರು ಚಂದವೋ ನಿಮ್ಮೂರು ಚೆಂದವೋ
ಎಂದೆನ್ನ ಕೇಳಲೇಕೆ? – ಎನ್ನರಸ
ಸುಮ್ಮನಿರಿ ಎಂದಳಾಕೆ

# ೩.೧ ನನ್ನಾಕೆಯ ಸ್ವಗತ

**ಬೇಲೂರು ರಘುನಂದನ್**

ಹೇವಿಳಂಬಿ ಉತ್ತರಾಯಣ
ಗ್ರೀಷ್ಮ ಋತು
ಜೇಷ್ಠ ಮಾಸ
ಕೃಷ್ಣ ಪಕ್ಷ
ಪೂರ್ವಾಷಾಢ ನಕ್ಷತ್ರ
ದಿನಾಂಕ ಹದಿಮೂರು
ಸೂರ್ಯೋದಯ ಐದು ಐವತ್ಮೂರಕ್ಕಂತೆ

ನೇಸರ ಮೂಡುವ ಮುನ್ನ
ಸಿಂಕಿನ ಪಾತ್ರೆಗಳು ಕೂಗುತ್ತಿರುತ್ತವೆ
ಸ್ನಾನಕ್ಕಾಗಿ
ಅಗ್ನಿ ಮೂಲೆಯ ಅಗ್ನಿ ಕುಂಡಗಳು
ಕಾಯುತ್ತಿರುತ್ತವೆ ಬೇಯಿಸಲಿಕ್ಕಾಗಿ
ಪೊರಕೆ ಹಿಡಿದೇ ಬಾಗಿಲು ತೆರೆಯಬೇಕು ಎನ್ನುವ ಪಾಠ
ಪರಂಪರೆಯದ್ದು
ರಜವಿದ್ದ ಮನೆಯು ದರಿದ್ರ ಲಕ್ಷ್ಮಿ ವಾಸ್ತವ್ಯವಂತೆ
ವರ್ಕಿಂಗ್ ವುಮೆನ್ ನಾನು
ಕಸ ಪಸ ಬಟ್ಟೆ ಬರೆ ಎಲ್ಲಾ

ವಾರಕ್ಕೊಮ್ಮೆ
ಯಾಕೆಂದರೆ ವೀಕ್ ಎಂಡ್ ಕಂಪ್ಲಿಟ್
ಆಗಬೇಕಲ್ಲ ಅದಕ್ಕೆ
ವಾರದ ನಿದ್ದೆಯನ್ನು ಪಕ್ಕಕ್ಕಿಟ್ಟು
ಲಕ ಲಕ ಅಲಂಕರಿಸಿಕೊಂಡು ಹೋಗಲೇಬೇಕಾದ
ಮದುವೆ ನಾಮಕರಣ ತಿಥಿ
ಇನ್ನೂ ಏನೇನೋ ಪ್ರೋಗ್ರಾಮುಗಳು
ಹೌದು
ಸಂಬಂಧ ಬಿಡಬಾರದ ಬಂಧ

ಹಾಡು ಕೇಳುತ್ತಾ
ಅಡುಗೆಗೆ ರುಚಿ ಕಟೋಣ ಎಂದರೆ
ಟಿ.ವಿ ರಿಮೋಟ್ ಒತ್ತಿದ್ದೇ ತಡ
ಪವಿತ್ರ ಅಪವಿತ್ರ
ಮಾಂಸಾಹಾರ ಸಸ್ಯಾಹಾರ
ಆ ಪಕ್ಷ ಈ ಪಕ್ಷ
ವಿಚಾರ ನುಂಗಿದ ಆಚರಣೆಗಳ
ಗಿಳಿಪಾಠ
ಮಗನನ್ನು ಲೋಕದ ಮಗುವಾಗಿ ಬೆಳೆಸಬೇಕೆಂಬುದು
ನನ್ನ ಧರ್ಮ

ಕಟಕ ರಾಶಿ ಹೇಳುತ್ತದೆ
ಆರ್ಥಿಕ ವ್ಯವಹಾರದಲ್ಲಿ ಎಚ್ಚರ
ಷೇರು ಮಾರುಕಟ್ಟೆಯಲ್ಲಿ ನಷ್ಟ
ಹಾಲಿನವನು ಕೂಗುತ್ತಾನೆ
ತಿಂಗಳಾಯಿತು ಎಂದು
ದಡಬಡ ಹೋಗಿ ಇದ್ದ ಬದ್ದ ಚಿಲ್ಲರೆ ಸೇರಿದ್ದಕ್ಕೆ
**ಹಾಲಿನ ಋಣ ತೀರಿತು**
ಗ್ಯಾಸು ಕರೆಂಟು ಇಂಟರ್ ನೆಟ್ಟು ಜೊತೆಗೆ ಕ್ರೆಡಿಟ್ಟು

ಎಲ್ಲ ತೀರಿಸಿದ ಬಳಿಕ
ಮತ್ತೆ ಕಾಣದವರ ಮುಮದೆ ಕೈಚಾಚಿ ನಿಂತ
ತಿಂಗಳ ಸಾಲಗಾತಿ
ಹೌದು ನಾವು ಸಾಲದಲ್ಲೇ ಹುಟ್ಟಿ ಸಾಲದಲ್ಲೇ ಸಾಯುವ
ಭಾರತೀಯರು

ಒಮ್ಮೊಮ್ಮೆ ಯೋಚಿಸುತ್ತೇನೆ
ಇವರು ಕಟ್ಟುವ ಕವಿತೆಗಳಿಗೆ
ಒಂದೊಂದು ಸಾವಿರ ಸಿಕ್ಕರೆ ಸಾಕು
ಸ್ವಂತ ಮನೆಯ ಕನಸಿನಲ್ಲಿ
ಅವರಿಗೊಂದು ರೀಡಿಂಗ್ ರೂಮು
ವಿಶಾಲವಾದ ಮಲಗುವ ಕೋಣೆ
ಏಕಾಂತಕ್ಕೆ ದೊಡ್ಡ ಬಚ್ಚಲಕೋಣೆ

ಅತ್ತೆ ಮಗನಿಗೆ ಒಂದು ರೂಮು
ನನ್ನಿಷ್ಟದ ಅಡುಗೆ ಕೋಣೆ
ದೇವರಿಗೊಂದು ಪೆಟ್ಟಿಗೆಯಂಥಾ ಗೂಡು
ಜೊತೆಗೆ ಒಂದು ಪುಟ್ಟ ಕಾರು
ಇಷ್ಟು ಸಾಕು

ಸ್ವಲ್ಪ ನಿಲ್ಲು ಮನಸೇ
ಇನ್ನು ಯೋಚಿಸಲು ಸಮಯವಿಲ್ಲ
ಕ್ಯಾಬಿನವನು ಹಾರ್ನ್ ಮಾಡುತ್ತಿದ್ದಾನೆ
ನನಗೆ, ಮಗನಿಗೆ ಮತ್ತು ಅವರಿಗೆ ಡಬ್ಬಿ ಕಟ್ಟಬೇಕು

ಆಫೀಸು ಸೇರುವದರೊಳಗೆ
ಮನೆಯ ಕಡೆಗೆ ಸೆಳೆತ
ಮೊಬೈಲ್ ಕಾಲ್ ರಿಂಗಣಿಸಿಬಿಟ್ಟಿತ್ತು
"ರೀ ಸ್ನಾನ ಮಾಡಿಸಿ ಮಗುವಿಗೆ ಶಾಲೆಗೇ ಕಳಿಸಿ
ಬೆಳಗಿನ ತಿಂಡಿಗೆ ಚಿತ್ರಾನ್ನ
ಮಧ್ಯಾನಕ್ಕೆ ನಿಮ್ಮಿಷ್ಟದ ಮಸ್ಸೊಪ್ಪು ಮಾಡಿದ್ದೀನಿ
ರಾತ್ರಿ ಚಾಪಾತಿನೋ ಮುದ್ದೆನೋ ಮಾಡಿ
ಒಟ್ಟಿಗೆ ಊಟ ಮಾಡೋಣ"

**ಆಕರ: ಸೊನ್ನೆಯಾಗುವ ಕಾಯ – ಬೇಲೂರು ರಘುನಂದನ್**

## ೩.೨ ಮರಳಿ ಬದುಕಿಗೆ ಈ ಪಯಣ...

**ನೇಮಿಚಂದ್ರ**

ಒಂದು ಮುಂಜಾನೆ, ಹಗಲು ಕಣ್ಣುಬಿಡುವ ಬೆಳಗು ಮುಂಜಾನೆ, ನನ್ನ ಜಗತ್ತು ಕತ್ತಲಾಯಿತು.ಬೆಳಗ್ಗೆ ಜಾಗಿಂಗ್ ಹೊರಟ ನೀನು ಹಿಂತಿರುಗಲಿಲ್ಲ. ಆಸ್ಪತ್ರೆಯಿಂದ ಫೋನ್ ಬಂದಾಗ ಗಂಟೆ ಒಂಬತ್ತು ದಾಟಿತ್ತು.

'ನರ್ಸಿಂಗ್ ಹೋಂ' ನಾ ತಲುಪುವ ಹೊತ್ತಿಗೆ ಬದುಕಿನಾಚೆಗೆ ಒಂದು ಕಾಲಿಟ್ಟು ಕಾದಿದ್ದೆ. ಐ.ಸಿ.ಯು.ನಲ್ಲಿ ನೀ ಮಲಗಿದ್ದೆ. ಬಿಳಿಯ ಹೊದಿಕೆಯಲ್ಲಿ ನೀಲಿಗಟ್ಟಿ ಕಪ್ಪಿಟ್ಟ ಮುಖ. 'ಮಿ. ರಿಪುದಮನ್ ಸಿಂಗ್, ಐ ಆಮ್ ಸಾರಿ...' ಎಂದ ವೈದ್ಯರು ನೀ ಉಳಿಯುವ ಯಾವ ಭರವಸೆಯನ್ನೂ ನೀಡಲಿಲ್ಲ. ಸುಳ್ಳಾದರೂ ಸರಿ ಈ ಕ್ಷಣಕ್ಕೆ ಅವರು 'ಎಲ್ಲ ಸರಿ ಹೋಗುತ್ತ ಧೈರ್ಯವಾಗಿರಿ' ಎನ್ನಬಹುದೆಂದು ಕಾದೆ.ಹಾಗಾಗಲಿಲ್ಲ, ಆಪರೇಷನ್‌ಗೆ ಅನುಮತಿ ಕೋರಿ ಪತ್ರಕ್ಕೆ ಸಹಿ ಹಾಕಲು ಕೈಗಿಟ್ಟರು.ಅರ್ಥವಾದದ್ದಿಷ್ಟು-'ತಲೆಗೆ ವಿಪರೀತ ಪೆಟ್ಟು ಬಿದ್ದಿದೆ.ಒಳಗೆ ರಕ್ತಸ್ರಾವವಾಗಿ ಹೆಪ್ಪುಗಟ್ಟಿದೆ.'ಕ್ಲಾಟ್ಸ್' ತೆಗೆಯುತ್ತಾರಷ್ಟೆ, ಜೀವ ಉಳಿಯುವ ಭರವಸೆಯಿಲ್ಲ. ಬದುಕಬಹುದು ಜೀವಂತ ಹೆಣದಂತೆ, ಮಿದುಳು ಸತ್ತ ದೇಹವೊಂದೆ'.ಸಹಿ ಹಾಕದೆ ಪೆನ್ನು ಪಕ್ಕಕ್ಕಿಟ್ಟೆ, ಹೊರಗೆ ಬಂದೆ, ಎರಡೂ ಕೈಯಲ್ಲಿ ತಲೆ ಹಿಡಿದು ಸದ್ದಿಲ್ಲದೆ ಬಿಕ್ಕಿದೆ.ಸಂಜೆ ಕತ್ತಲಾಯಿತು.ಎಷ್ಟೋ ಹೊತ್ತಿನ ಮೇಲೆ ಏನೋ ನಿರ್ಧರಿಸಿದೆ, ನಿನ್ನನ್ನು ಬೀಳ್ಕೊಡಲು ಸಿದ್ಧವಾದೆ.ಒಂದೊಂದಾಗಿ ಫೋನು ತಿರುಗಿಸಿದೆ.

ಕ್ಷಣದಲ್ಲಿ ನಿನ್ನ ಅಪಘಾತದ ಸುದ್ದಿ ಸುತ್ತು ಹಬ್ಬಿತ್ತು.ಅಮ್ಮ, ತಮ್ಮ, ತಂಗಿಯರು, ನೆಂಟರು, ಇಷ್ಟರು, ಇಷ್ಟವಿಲ್ಲದವರು, ಸ್ನೇಹಿತರು, ಸಹೋದ್ಯೋಗಿಗಳು, ಎಲ್ಲರ ಜಾತ್ರೆ ನೆರೆದಿತ್ತು.ಇದೀಗ ನಿನ್ನ ಬದುಕಿನ ನಿರ್ಣಯ ನನ್ನ-ನಿನ್ನದಾಗಿರಲಿಲ್ಲ. ಒತ್ತಡಗಳು, ಒತ್ತಾಯಗಳು, ನನಗೆ ಆಯ್ಕೆಯ ಹಕ್ಕು ಉಳಿದಿರಲಿಲ್ಲ. ನೀನು ನನ್ನೊಬ್ಬನಿಗೆ ಸೇರಿದವಳಾಗಿರಲಿಲ್ಲ. ಈ ಕ್ಷಣ ನೀನು ಎಲ್ಲರ ಸ್ವತ್ತಾಗಿದ್ದೆ.ನಿನ್ನ ಅಪರೇಷನ್‌ಗೆ ಸಹಿ ಹಾಕುವಾಗ ಕೈ ನಡುಗಿತ್ತು.

ನೆನಪಿತ್ತು ನನಗೆ, ವರ್ಷದ ಹಿಂದೆ ಲತಾಳ ಗಂಡ ರಮೇಶ, ಸ್ಕೂಟರ್ ಅಪಘಾತದಲ್ಲಿ ನಿಮ್ಹಾನ್ಸ್‌ನಲ್ಲಿ ಮೂರು ತಿಂಗಳು ಮಲಗಿ, ಜೀವಚ್ಛವವಾಗಿ ಮನೆಗೆ ಬಂದದ್ದು.ಮತ್ತೆ ಒಂದೂವರೆ ವರ್ಷಗಳ ಕಾಲ ದೇಹಕ್ಕೆ ಉಸಿರು ಅಂಟಿತ್ತು.ಬದುಕು ಮುಗಿದಿತ್ತು ಬರೀ ರಮೇಶನಿಗಲ್ಲ, ಲತಾಗೂ.ಸತ್ತ ಮಿದುಳಿನ ರಮೇಶ ಬದುಕಿದ್ದ, ಬದುಕಿದ್ದ ಲತಾ ಸತ್ತಿದ್ದಳು, ಹಗಲಿರುಳು ಆಸ್ಪತ್ರೆ ಓಡಾಟದಲ್ಲಿ, ದಿನಬೆಳಗು ರಕ್ತ ಮಾಂಸಗಳ ದೇಹದ ಆರೈಕೆಯಲ್ಲಿ ನೀ ಹೇಳಿದ್ದೆ 'ರಿಪು ನನಗೆಂದಾದರೂ ಇಂಥಾ ಸ್ಥಿತಿ ಬಂದರೆ, ನೀ ನನ್ನನ್ನು ಬದುಕಿಸಿಕೊಳ್ಳಬಾರದು.ನಾನು 'ನಾನಾಗಿಲ್ಲದ' ಬರಿ ದೇಹವನ್ನು ಹಿಡಿದು ಜಗ್ಗಬಾರದು.ನಾ ಯಾರಿಗೂ ಹೊರೆಯಾಗಿ ಬದುಕಲು ಇಚ್ಛಿಸೋಲ್ಲ. ನನ್ನ ಬದುಕಿನ ಈ ಅಭಿಮಾನವನ್ನು ಸಾವಿನಲ್ಲಿ ಕಳೆಯಬೇಡ.ಗೌರವದ ಸಾವು ಬೇಕು' ಎಂದಿದ್ದೆ.ಆಪರೇಷನ್ ನಂತರವೂ ನಿಶ್ಚಲವಾಗಿ ಮಲಗಿದ್ದ ನಿನ್ನ ಬದಿ ಕುಳಿತು ನಾನು ಬಿಕ್ಕಿದೆ- 'ನೀನು ಬಯಸಿದ ಸಾವನ್ನು ನಾನೆಲ್ಲಿಂದ ತಂದುಕೊಡಲಿ'.ಮುಂದಿನೆರಡು ದಿನ ಸಾವು ಬದುಕಿನ ನಡುವೆ ಜೀವ ಜೋಕಾಲಿ.ನಿನ್ನ ದೇಹ ಮಲಗಿತ್ತು ಅಲುಗಾಡದೆ.ಮೂಗು, ಬಾಯಿ, ಮೂತ್ರ ಎಲ್ಲಕ್ಕೂ ತೂರಿಸಿದ ನಳಿಕೆಗಳ ನಡುವೆ. ಕೈ ಮೈಯಲ್ಲೆಲ್ಲ ಚುಚ್ಚಿ ಸುರಿದ ಜೀವರಸದ ಹನಿಹನಿಗಳ ಮೇಲೆ ಉಸಿರು ನಿಂತಿತ್ತು.ಗಂಟೆಗಟ್ಟಲೆ ನಿನ್ನ ಬಳಿ ಕುಳಿತು ಮಾತನಾಡಿದೆ.ನಿನ್ನ ಮುಖದಲ್ಲಿ, ದೇಹದಲ್ಲಿ ನನ್ನ ದನಿ ಕೇಳಿಸಿದ ಜೀವ ಲಕ್ಷಣದ ಒಂದು ಸಣ್ಣ ಸುಳಿವು ಕಾಣಲು ಕಾತರಿಸಿದೆ.ಏನೋ ಆಸೆ ನೀನೆಲ್ಲೋ ಇರುವೆ, ಇಲ್ಲೆಲ್ಲೋ ಒಳಗೆ.ತಟ್ಟಿದ ನನ್ನ ಕರೆಗೆ ಓಗೊಟ್ಟು ಬರುವೆ, ಕಣ್ಣು ಬಿಡುವೆ.

ದಿನಗಳುರುಳಿದವು, ಕಾದೆ ಹುಡುಗಿ, ನಿನ್ನ ಎಚ್ಚರದ ಗಳಿಗೆಗೆ.ಮತ್ತೆ ಪಡೆಯುವೆನೆ ನಿನ್ನ ಹಿಂದಕ್ಕೆ, ನೀನಿದ್ದಂತೆ, ಮೊದಲಿನಂತೆ.ಯಾವ ರೂಪದಲ್ಲಿ ನಿನ್ನ ಪಡೆಯುವನು ಮತ್ತೆ?ಪ್ರಶ್ನೆಗಳ ಪ್ರವಾಹದಲ್ಲಿ ಕೊಚ್ಚಿ ಹೋಗುವ ಬದಲು ವಾಸ್ತವದ ದಂಡೆಯಲ್ಲಿ ಕಾಲೂರಿ ನಿಂತೆ. ಮನೆಗೆ ಬರುವೆ, ಗ್ಯಾಸ್ ಹಚ್ಚಿ ಚಹಾ ತಯಾರಿಸಿ ಕುಡಿಯುವೆ, ಮಗಳಿಗೆ ಹಾರ್ಲಿಕ್ಸ್ ಕಲಕಿ ಕೊಡುವೆ. ಉದ್ದನೆಯ ಕೂದಲನ್ನು ಕತ್ತರಿಸಿ ಎರಡು ಜುಟ್ಟು ಏರಿಸಿ ಶಾಲೆಗೆ ಕಳುಹಿಸುವೆ. ಬಹುಪಾಲು ಗಂಡಂದಿರಂತೆ ನಾ ನಿನ್ನನ್ನು ಅಡಿಗೆ ಮನೆಯಲ್ಲಿ, ಮಲಗುವ ಕೋಣೆಯಲ್ಲಿ 'ಮಿಸ್' ಮಾಡುವುದಿಲ್ಲ. ಈ ಮನೆಯ ಕೋಣೆ ಕೋಣೆಯಲ್ಲಿ ನಿನ್ನ ಇರುವಿತ್ತು.ಜೀವಂತಿಕೆಯಿತ್ತು.ಅದನ್ನು ಬೆಳಗಿನ ಬಿಸಿ ಕಾಫಿಗೆ, ರಾತ್ರಿಯ ರುಚಿ ಅಡುಗೆಗೆ ಹೋಲಿಸಲಾಗದು.ಬಹುಶಃ ಇವೆಲ್ಲವೂ ಈ ಕ್ಷಣ ನನಗೆ ಬೇಕೆಂದರೆ ಸಿಕ್ಕಿ ಬಿಡುತ್ತವೆ, ಆದರೆ ನಿನ್ನ 'ಇರುವನ್ನು' ಹೇಗೆ ತರುವುದು. ಬಂದವಳೇ ಕೋಣೆಯಲ್ಲಿ ಕಂಪ್ಯೂಟರ್ ಮುಂದೆ ಕುಳಿತು 'ಶೂ... ಗಲಾಟೆ ಮಾಡಬೇಡಿ...' ಎಂದು ನಮ್ಮತ್ತ ಒಂದು ಕೂಗು ಎಸೆದು, ಕಛೇರಿಯ ಕೆಲಸದೊಡನೆ ಗುದ್ದಾಡುತ್ತಾ ಕುಳಿತ ದಿನಗಳು ಎಷ್ಟೋ ಇದ್ದವು.ಆದರೂ ಆ ಕೋಣೆಯಲ್ಲಿ ನೀನಿದ್ದ 'ಇರುವು' ಸಾಕಿತ್ತು, ನಿನ್ನ ಬಳಿ ಬಂದು ಕಾಡಿಸುವಲ್ಲಿ ಖುಷಿಯಿತ್ತು.ನೀ ಇಲ್ಲಿದ್ದೆ, ನಮ್ಮ ನಡುವಿದ್ದೆ, ಅದು ಮುಖ್ಯವಿತ್ತು.ನಿನ್ನ ಇರುವಿಕೆಗೆ ತನ್ನದೇ ಶಕ್ತಿಯಿತ್ತು.

* * * *

ಅದೆಷ್ಟೋ ದಿನಕ್ಕೆ ಕಡೆಗೂ ಕಣ್ಣು ಬಿಟ್ಟೆ.ಆದರೆ ಕಣ್ಣಲ್ಲಿ ನೋಟವಿಲ್ಲ, ತೆರೆದ ಅಕ್ಷಿಪಟಲಗಳಲ್ಲಿ ನನ್ನ ಬಿಂಬವಿಲ್ಲ. ತೆರೆದ ಬಾಯಲ್ಲಿ ನಿನ್ನ ದನಿಯಿಲ್ಲ, ನನ್ನ ಹುಡುಗಿಯ ಸ್ವರವಿಲ್ಲ. ಉದರದಾಳದಿಂದೆಲ್ಲೋ ಹೊರಡುವ ವಿಕಾರದ ನೋವಿನ ಸದ್ದುಗಳು.

ನನ್ನ ಮಾತುಗಳು ನಿನಗೆ ಕೇಳಿಸುವುದೆ, ಈ ಮುಖ, ಈ ಚೆಹರೆ, ಈ ಸ್ಪರ್ಶ ನಿನಗೆ ನೆನಪಿಲ್ಲವೆ?ಗಂಟೆಗಟ್ಟಲೆ ನಿನ್ನ ಬದಿಯಲ್ಲಿ ಕುಳಿತು ಕೈ ಹಿಡಿದು ಸ್ವಗತವೆಂಬಂತೆ ಮಾತನಾಡುವೆ. ನಿಶ್ಚಲ ದೇಹದಲ್ಲಿ ಪ್ರತಿಕ್ರಿಯೆಯ ಸುಳಿವಿಗಾಗಿ ಕಣ್ಣು ಕಾತರಿಸಿ ಕಾಯುವುದು. ಬಂದ ಬಂದವರೆಲ್ಲ ಮಾತನಾಡಿದರು, ನಿನ್ನ ತೆರೆದ ಕಣ್ಣುಗಳಲ್ಲಿ ತಮ್ಮದೇ ಭಾವಗಳನ್ನು ಓದಿಕೊಂಡರು. 'ಸುಧಕ್ಕ ನನ್ನ ನೋಡಿ ಗುರುತಿಸಿದರು' ಎಂದು ಬೀಗಿದರು.ಭ್ರಮಿಸಿದರು. ಬಂದರು ಬಂದೇ ಬಂದರು, ನನ್ನ ನೋವಿಗೆ ಸಾಂತ್ವನ ವಾದವರು. ಕುಸಿದ ಕ್ಷಣದಲ್ಲಿ ತೋಳು ನೀಡಿ ಆಸರೆಯಾದವರು.ಜೊತೆಗೆ ಬಂದರು, ಕುತೂಹಲಕ್ಕೆಷ್ಟೋ ಜನರೋ. 'ಸದ್ಯ ನಮಗೆ ಹೀಗಾಗಿಲ್ಲ' ಎಂಬ ಕೆಟ್ಟ ಸಮಾಧಾನದವರೂ.

ಸಮಯ ಸರಿಯಿತು. ಐ.ಸಿ.ಯು.ನ ಹೊರಬೆಂಚಿನ ಮೇಲೇ ನನ್ನ ಹಗಲು ರಾತ್ರಿಗಳು, ತಿಂಗಳುಗಳಾದವು. ಸಾವು ಖಚಿತವಿದ್ದ ನಿನ್ನ ಸ್ಥಿತಿಯಲ್ಲಿ ನೀ ಬದುಕಿದ್ದೇ ವೈದ್ಯರಿಗೆ ಅಚ್ಚರಿಯಾಗಿತ್ತು.ಮೆಲ್ಲನೆ ನಾಭಿಯಾಳದಿಂದೆಲ್ಲೋ ಪ್ರಯಾಸದಿಂದ ಹೊಮ್ಮುತ್ತಿದ್ದ ನೋವಿನ ವಿಕಾರ ಸ್ವರ ನಿಂತಿತ್ತು.ಆದರೆ ಮೂರು ತಿಂಗಳು ಬರೀ ನಳಿಕೆಗಳಲ್ಲಿ ಸುರಿದ ದ್ರವದ ಮೇಲೆ ಹಸಿ ಇದ್ದ ದೇಹಕ್ಕೆ, ಉಸಿರು ಕೂಡಾ ಭಾರವಾಗಿತ್ತು.ಬಲವಂತವಾಗಿ ತಿನ್ನಿಸಲು ಹೊರಟರೆ ಮಗುವಿನಂತೆ ರಚ್ಚೆ ಹಿಡಿದ ಅಳು.ಏನು ಬೇಕು, ಏನು ಬೇಡ ಏನೊಂದೂ ಹೇಳಿಕೊಳ್ಳಲಾರದ ಸ್ಥಿತಿಯಲ್ಲಿ ನೀನಿದ್ದೆ.ಕನ್ನಡ, ಇಂಗ್ಲಿಷ್ ಇರಲಿ ಜರ್ಮನ್, ಫ್ರೆಂಚ್ ಭಾಷೆಗಳಲ್ಲೂ ಚಟಪಟ ಮಾತನಾಡುತ್ತಿದ್ದ ಹುಡುಗಿ ನೀನು.ನಿನ್ನ ಸಂಸ್ಥೆಗೆ ಫ್ರೆಂಚ್ ಫರ್ಮ್ ಒಂದು ಬಂದಾಗ, ಇಂಗ್ಲಿಷ್ ಬಾರದೆ ಅವರು ತಡವರಿಸುವಾಗ, ಅವರದೇ ಭಾಷೆಯಲ್ಲಿ ನೀನು ಸರಾಗವಾಗಿ ನೀಡಿದ 'ಪ್ರಾಜೆಕ್ಟ್ ಪ್ರೊಪೋಸಲ್ ಪ್ರೆಸೆಂಟೇಷನ್' ದಂಗುಗೊಳಿಸಿದ್ದು, ಆರು ಕೋಟಿಯ ಪ್ರಾಜೆಕ್ಟ್ ಮತ್ತೆರಡೇ ತಿಂಗಳಿಗೆ ಸ್ಯಾಂಕ್ಷನ್ ಆದದ್ದು ನೀನೇ ಹೇಳಿದ್ದೆ.ಇಂದು ಯಾವ ಭಾಷೆಯೂ ನಿನ್ನ ತುಟಿಯಲಿಲ್ಲ. ಸದ್ದಿಲ್ಲದ ಅಳು, ಖಾಲಿ ನೋಟ ಎರಡೇ ನಿನ್ನ ಅಭಿವ್ಯಕ್ತಿ, ನಿನ್ನ ಅಂತರಾಳದ ನೋವೇನಿತ್ತೋ, ಒಂದೂ ಹೊರಹಾಕಲಾರದ ಮೂಕ ಅಸಹಾಯಕತೆ. ಕ್ಷಣದಲ್ಲಿ ಬದುಕು ಬದಲಾಗಿತ್ತು, ಇದ್ದಂತೆ ಇತಿಹಾಸವಾಗಿದ್ದೆ ನೀನು.

ಒಂದು ದಿನದ ರಜೆಗೆ ಪುರುಸೊತ್ತಿಲ್ಲದ ಹುಡುಗಿ, ಮಲಗಿದ್ದೀಯ ತಿಂಗಳುಗಟ್ಟಲೆ, ಗಂಟೆ ದಿನ ವಾರಗಳ ಲೆಕ್ಕ ತಪ್ಪಿ, ಹೊರಗೆ ಜಗತ್ತು ನಿಂತಿಲ್ಲ. ಸುತ್ತುತ್ತಿದೆ ನಿನ್ನ ಹೊರತಾಗಿಯೂ.ನಿಂತದ್ದು, ನನ್ನ ಜಗತ್ತು ಮಾತ್ರ 'ರಿಪುನನಗೆ ರಜೆ ಹಾಕೋಕ್ಕಾಗೋಲ್ಲ ಇವತ್ತು ಹೋಗಲೇ ಬೇಕು ಜರ್ಮನಿಯಿಂದ ರೆಪ್ರೆಸೆಂಟೇಟಿವ್ ಬರ್ತಾ ಇದ್ದಾರೆ. ಬಹಳ ಮುಖ್ಯವಾದ ಮೀಟಿಂಗ್ ಇದೆ.. ನೀ ಪುಟ್ಟಿ ಶಾಲೆಗೆ ಹೋಗಿ ಬಂದುಬಿಡು', 'ರಿಪು ಐದು ಕೋಟಿ ರೂಪಾಯಿ ಪ್ರಾಜೆಕ್ಟ್, ನೆಗೋಶಿಯೇಷನ್‌ಗೆ ಸ್ವೀಡನ್‌ಗೆ ಹೋಗಬೇಕು...'ಎಂದು ಕೆಲಸದ ಮೇಲೆ ನೀ ಹಾರುತ್ತಿದ್ದ ಜೆಟ್ ವಿಮಾನದ ವೇಗದಲ್ಲಿಯೇ ನಿನ್ನ ಬದುಕು ಓಡುತ್ತಿತ್ತು.ಇಂದು ಎಲ್ಲವೂ ಸ್ತಬ್ಧ, ತಟಸ್ಥ.ನಿನ್ನ ಕಛೇರಿ, ಪ್ರಾಜೆಕ್ಟ್ ಯಾವುದೂ ನಿಂತಿಲ್ಲ. ಮೊದಲೆರಡು ತಿಂಗಳು ಮನೆ ಮಠ ಬಿಟ್ಟು ಬಂದು ಅಸ್ತವ್ಯಸ್ತವಾದ ನಿನ್ನಮ್ಮ, ತಮ್ಮ ತಂಗಿಯರ ಬದುಕು ಕೂಡಾ ಯಥಾಸ್ಥಿತಿಗೆ ಹಿಂತಿರುಗಿದೆ.ಹಿಂತಿರುಗದ ತಾಣದಲ್ಲಿ ಹಳಿ ತಪ್ಪಿ ನಿಂತವರು ನಾವು ಮಾತ್ರ.

* * *

ಮೂರು ತಿಂಗಳ ಸಾವಿನಂಚಿನ ಹೋರಾಟ ಮುಗಿಸಿ ಮನೆಗೆ ಬಂದೆ.ಈ ಮನೆ, ಈ ಹೊಸಿಲು, ಈ ಅಂಗಳ ನಿನ್ನದಲ್ಲವೆಂಬಂತೆ ನಿರ್ಲಿಪ್ತಳಾಗಿ ನಿಂತೆ.ನೀ ನೆಟ್ಟ ಸೂಜಿಮಲ್ಲೆಯ ಬಳ್ಳಿ ಅರಳಿ ನಿಂತಿದೆ, ಸುತ್ತು ಬೇಲಿಯ ತುಂಬಾ ಹರಡಿ ಹೂ ಬಿಟ್ಟಿದೆ.ಯಾವುದೂ ನಿನಗೆ ನೆನಪಿಲ್ಲ. 'ನಾನು ರಿಪು ನಿನ್ನ ಗಂಡ, ಇವಳು ಪುಟ್ಟಿ ನಿನ್ನ ಮಗಳು...' ಬಾಯಿಪಾಠದಂತೆ ಹೇಳಿಕೊಡುವೆ, ನಾನಾರೆಂಬುದಿರಲಿ, ಬಿಟ್ಟ ಬಟ್ಟಲುಗಣ್ಣಲ್ಲಿ ಖಾಲಿ ಖಾಲಿ ನೋಟ.ನಿನಗೆ ನೀನಾರೆಂದು ನೆನಪಿರಲಿಲ್ಲ, ನಾನಾರೆಂಬುದಿರಲಿ.ನಿನ್ನ ನಿನ್ನೆಯ ನೆನಪುಗಳೊಡನೆ, ನನ್ನ ನಾಳಿನ ಕನಸುಗಳೂ ಕಳೆದು ಹೋಗಿದ್ದವು.

ಮನುಷ್ಯ ಅಂದರೆ ಅವನ ವ್ಯಕ್ತಿತ್ವ, ಬುದ್ಧಿ, ಆಸ್ತಿ, ಅಂತಸ್ತು, ಡಿಗ್ರಿ ಹುದ್ದೆ ಏನೇನೋ ಅಂದುಕೊಳ್ಳುತ್ತೇವೆ. ಮನುಷ್ಯ ಎಂದರೆ ನೆನಪುಗಳು, ಹಿಡಿ ಹಿಡಿ ನೆನಪುಗಳು, 'ನಾನಾರೆಂಬ' ನೆನಪಗಳು, 'ನೀನಾರೆಂಬ' ನೆನಪುಗಳು.ನೆನಪಗಳಿಲ್ಲದ ಜೀವ ಬರೀ ತೊಗಲ ಚೀಲ, ಮೊದಲ ಬಾರಿಗೆ ಅರಿವಾಗಿತ್ತು.

ಬಚ್ಚಲು ಮನೆಯಲ್ಲಿ ಮೋಟು ಮಣೆಯಿಟ್ಟು ನಿನ್ನ ಕುಳ್ಳಿರಿಸಿದೆ. ನೀರು ಸುರಿದೆ, ಸೋಪು ಹಚ್ಚಿದೆ.ದೇಹದ ಅಂಗ ಅಂಗಗಳ ಸ್ಪರ್ಶದಲ್ಲಿ ಮನಸ್ಸು ಬಿಸಿಯಾಗಲಿಲ್ಲ. ಪುಟ್ಟಿಗೆ ಸ್ನಾನ ಮಾಡಿಸಿ ಮಲಗಿಸಿದಂತೆ ಹಸಿಯಾದ ಭಾವ. ನಿನ್ನ ದೇಹದಲ್ಲಿ ಕಾಮವಿರಲಿಲ್ಲ. ಸಂಜೆ ಕಛೇರಿಯ ಹೊರೆ ಕೆಲಸ ಹೊತ್ತು ಬಂದು ಕಂಪ್ಯೂಟರ್ ಮುಂದೆ ಕೂಡುವಾಗ, ಬಂದು ಕಾಡುತ್ತಿದ್ದ ಆ ನನ್ನ ಮನಸ್ಸಿನ ಉದ್ರೇಕ, ಉದ್ವಿಗ್ನತೆ ತಣ್ಣಗಾಗಿತ್ತು. ನಿನ್ನ ತುಟಿ ಕದವುತುಂಬಿದೆದೆ ನಿತಂಬಗಳಲ್ಲಿ

ಕಾಮವಿರಲಿಲ್ಲ. ಅದು ನಿನ್ನಲ್ಲಿತ್ತು, ನಿನ್ನ ಕಿಲಕಿಲ ನಗುವಿನಲ್ಲಿ. ಹೊರೆ ಹೊರೆ ಕೆಲಸದ ನಡುವೆಯೂ ಇಣುಕಿದ ತುಂಟಾಟದಲ್ಲಿ.ಮತ್ತೆ ನಿನ್ನ ಕಣ್ಣಲ್ಲಿ ಕಾಮನಬಿಲ್ಲು ಕಾಣುವ ಬಯಕೆ.

ಮನೆಗೆ ಬಂದ ಒಂದೇ ತಿಂಗಳಲ್ಲಿ ನಿನ್ನ ದೇಹ ಸುಧಾರಿಸಿತ್ತು.ಎದ್ದೆ, ಕುಳಿತೆ, ನಡೆದೆ.ನಿನ್ನದೆಲ್ಲವನ್ನೂ ಕೀಲಿಕೊಟ್ಟ ಬೊಂಬೆಯಂತೆ ಮಾಡಿಕೊಂಡೆ.ಅದೇ ಮುಖ ಅದೇ ದೇಹ, ಕೈಕಾಲು. ಉಂಗುಷ್ಟವೂ ಊನವಾಗದೆ ಉಳಿದ ಪರಿಪೂರ್ಣ ದೇಹ.ಆದರೆ ಇಲ್ಲಿ ನೀನಿಲ್ಲ, ಒಳಗೆ ಸದ್ದಿಲ್ಲ, ತಟ್ಟಿದ ಕದಕೆ ಉತ್ತರವಿಲ್ಲ. ಖಾಲಿ ಖಾಲಿ ಮನೆಯನ್ನು ಬಿಗಿದ ಬೀಗದ ಹಾಗೆ ಬಿಮ್ಮನೆ ಕುಳಿತಿರುವೆ. ನಿನ್ನಿಂದ ನೀ ಹೊರಗೆ ನಿಂತಿರುವೆ.

ನಿನ್ನ ಬದಿ ಕುಳಿತು ಆಲ್ಬಮ್ ತೆಗೆದುತೋರಿಸಿದೆ– 'ಸುಧಾ, ನಿನ್ನ ಹೆಸರು ಸುಧಾ. ನಾನು ನಿನ್ನ ಗಂಡ ರಿಪುದಮನ್.... ನಿನ್ನ ರಿಪು... ದಶಕ ದಶಕಗಳ ಇತಿಹಾಸವನ್ನೆಲ್ಲ ಹರವಿ ನಿನ್ನೆದುರು ಇಟ್ಟೆ. ತನ್ನದಲ್ಲದ ಕತೆಯ ಕೇಳುವಂತೆ ನೀ ಬಿಟ್ಟ ಬಟ್ಟಲುಗಣ್ಣು ಮಿಟಿಕಿಸದೆ ಕುಳಿತೆ. ಈ ಕತೆಯ ಪಾತ್ರ ನೀನು, ಈ ಕತೆಯ ನಾಯಕಿ, 'ನೀನು ಸುಧಾ... ನಾನು ರಿಪು.... ಇವಳು ನಮ್ಮ ಮಗಳು...' ನೀನು ಯಾರೆಂದು, ಸಾವಿನೊಡನೆಯ ಯುದ್ಧದಲ್ಲಿ ಗೆದ್ದು ಬಂದಿರುವೆ, ಬದುಕಿನೊಡನೆಯ ನಿನ್ನ ಕದನ ಈಗ ಆರಂಭ.

****

ನಾಲ್ಕು ತಿಂಗಳು ಕಳೆದಿತ್ತು.ಒಂದು ಸಂಜೆ ಅಂಗಳದಲ್ಲಿ ಕುರ್ಚಿ ಹಾಕಿ ಕುಳ್ಳಿರಿಸಿ, ಸಂಜೆ ಗಾಳಿಗೆ ಬೆಚ್ಚಗೆಂದು ಶಾಲು ಹೊದಿಸುವಾಗ ನಿನ್ನ ತುಟಿಗಳು ಅಲುಗಿದವು. ಹಾಲು ಕುಡಿ ಎಂದು ಮತ್ತೆ ಬಲವಂತಿಸುವಾಗ 'ಒಲ್ಲೆ ಒಲ್ಲೆ' ಎಂದು ಮುಖ ತಿರುಗಿಸುತ್ತಲೇ ಮೆಲ್ಲನೆ ಏನೋ ಹೇಳಿದಂತಾಯ್ತು. ನಿನ್ನ ಬಾಯಿಗೆ ಕಿವಿ ಇಟ್ಟು ಕೇಳಿದೆ ಅಸ್ಪಷ್ಟ ದನಿ, ಅರ್ಥವಿಲ್ಲದಿದ್ದರೂ ಪದಗಳು ಹೊಮ್ಮಿದ್ದವು.ನನ್ನ ಖುಷಿ ಹೇಳತೀರದು.ಕೆಲವೇ ದಿನ, ದೇಹಕ್ಕೆ ಆಹಾರ ಬಿದ್ದಂತೆ ನೂಕು ಗಾಲಿಯ ಕುರ್ಚಿ ಹಿಡಿದು ಮನೆಯ ತುಂಬಾ ನಡೆದಾಡಿಸಿದೆ. ಹದಿನೈದು ದಿನಕ್ಕೆ ಸೊಂಟಕ್ಕೆ ಕೈಕೊಟ್ಟೊಡನೆ ಹೊರಗೆ ನಡೆಯತೊಡಗಿದೆ. ಮಾತು ಹೊರಟಿತ್ತು.ಪದಗಳಿಗೆ ವಾಕ್ಯಗಳಿಗೆ ವಾಸ್ತವದಲ್ಲಿ ಅರ್ಥವಿರಲಿಲ್ಲ. ನಾನು ಕೇಳಿದ ಪ್ರಶ್ನೆಗಳಿಗೆ ನಿನ್ನದು ಉತ್ತರವಾಗಿರಲಿಲ್ಲ. ಆದರೆ ನಿನ್ನ ಬಾಯಿಂದ ಹೊರಬಿದ್ದ ಅಸ್ಪಷ್ಟದ ಒಂದೊಂದು ಮಾತಿನಲ್ಲೂ, ಬದುಕು ಭರವಸೆಯ ಉನ್ಮಾದ.ನಿನ್ನ ಅರೆಕ್ಷಣದ ಕಣ್ಣ ಮಿಂಚಲ್ಲಿ ನನ್ನ ಕನಸುಗಳು ಜಾಗೃತ.

ನನ್ನ ಪ್ರೀತಿಯ ಹುಡುಗಿ, ನನ್ನೊಡನೆ ದಾಂಪತ್ಯದಲ್ಲಿ ದಶಕ ಕೂಡಿದ ಹುಡುಗಿ, ಐದು ವರ್ಷದ ಪ್ರೇಮಕಥನಕ್ಕೆ ಕತೆಯಾದ ಹುಡುಗಿ, ಸಾವು ಬದುಕಿನೊಡನೆ ಹೋರಾಡಿ ಹೊರಬಂದಿರುವೆ. ತಿಳಿದೋ, ತಿಳಿಯದೆಯೋ ಅರಿತೋ ಅರಿಯದೆಯೋ ಬದುಕಿನ ಹೊಸಿಲಿನಾಚೆ ಹೆಜ್ಜೆ ಇಟ್ಟವಳನ್ನು, ಹಿಡಿದು ಜಗ್ಗಿ ಕರೆತಂದಿರುವೆ. ಮತ್ತೆ ಬಾ ಬದುಕಿಗೆ, ನೆನಪುಗಳ ಬುತ್ತಿ ಬಿಟ್ಟೋಣ ಬಾ. ಮತ್ತೆ ಈ ಅಂಗಳದಲ್ಲಿ ಕುಳಿತು ಸಂಜೆ ಮಲ್ಲಿಗೆಯ ಸವಿಗಂಪಿನಲ್ಲಿ ನಾಳೆಗಳ ಕುರಿತು ಹರಟೋಣ ಬಾ.

ನನ್ನ ದಿನಚರಿ ಪೂರ್ಣ ಬದಲಾಗಿತ್ತು. ನಿನ್ನನ್ನು ಏಳಿಸುವೆ, ಕುಳ್ಳಿರಿಸುವೆ, ಶೂನ್ಯದತ್ತ ನೆಟ್ಟ ದೃಷ್ಟಿಯನ್ನು ಬಲವಂತಿಸಿ ನನ್ನೆಡೆಗೆ ಸೆಳೆಯುವೆ, ಪುಸ್ತಕದ ಅಕ್ಷರಗಳನ್ನು ತೋರಿಸಿ ಬೆಟ್ಟಿಟ್ಟು 'ಓದು' ಎನ್ನುವೆ. ಪೆನ್ನು ಕೈಗೆ ತುರುಕಿ 'ಬರಿ ಬರಿ' ಗೋಗರೆವೆ, ಯಾವ ಪ್ರತಿಕ್ರಿಯೆ ಇಲ್ಲದೆ ನೀ ಗುಮ್ಮನಂತೆ ಕುಳಿತಿರುವೆ. ಮತ್ತೆ ಯಾವಾಗಲೋ ಯಾವುದೋ ಜನ್ಮದ ಕನವರಿಕೆಯಂತೆ ನಿನ್ನ ಬಾಯಿಂದ ಹೊರಟ ಮಾತುಗಳಲ್ಲಿ, ಹಾಳೆಯ ಮೇಲೆ ಗೀಚಿದ ಗೀಟು ಗೆರೆಗಳಲ್ಲಿ ಆತುರದಿಂದ ಅರ್ಥಗಳನ್ನು ಹುಡುಕುವೆ.

ಸದ್ದಿಲ್ಲದೆ ಕಾಲ ಜಾರುತ್ತದೆ. ಬಂದು ಹೋಗುವ ಜನರ ಗದ್ದಲದಲ್ಲಿ ಹಗಲು ಕಾಡದ ಏಕಾಂಗಿತನ ರಾತ್ರಿ ಕಟಕುತ್ತದೆ. ಕತ್ತಲ ಮೌನದಲ್ಲಿ ಎದೆಯ ಭೀತಿಗಳು ಬುಸುಗುಟ್ಟುತ್ತವೆ. ಅಗಾಧ ಆಶಾವಾದವೂ ಕುಸಿದು, ಎಚ್ಚರವಾಗದ ದುಃಸ್ವಪ್ನದಲ್ಲಿ ಸಿಕ್ಕಿಕೊಂಡಂತೆ ಚಡಪಡಿಸುವೆ. ನಾವು ಉಳಿಸಿಕೊಂಡದ್ದು ಯಾರನ್ನು?ನಿನ್ನನ್ನೇ, ನೀ ಗೂಡು ಬಿಟ್ಟು ಹಾರಿದ ಅಸ್ಥಿ ಪಂಜರವನ್ನೆ?ಜೀವ ಇರುವುದೆಲ್ಲ 'ನೀನಲ್ಲ', ನೀನು ದೇಹವಲ್ಲ, ಎದೆಯ ಏರಿಳಿತದ ಉಸಿರಲ್ಲಿ ನೀನಿಲ್ಲ. ಕಣ್ತೆರೆದ ನಿದ್ದೆಗಲ್ಲಿ ಎಚ್ಚರ? ನೀನು ಬಯಸಿದ ಬದುಕು ಇದೇ ಏನು?ಮುಸುಕು ಮುಂಜಾವದಲ್ಲಿ, ಮುಸ್ಸಂಜೆ ಕೆಂಪಿನಲ್ಲಿ, ರೆಪ್ಪೆಯಪ್ಪಿದ ಇರುಳ ನಿದಿರೆಯಮಲಿನಲ್ಲೂ ಬೇಡವೆಂದರೂ ಬಂದು ಕಾಡುವ ಪ್ರಶ್ನೆ.

ಹೋದ ಜನವರಿ, ನೀನು ಎಂಟು ತಿಂಗಳಿಂದ ದುಡಿದ ಸ್ವೀಡನ್ ಪ್ರಾಜೆಕ್ಟ್ ಮುಗಿದು, ಕಂಪ್ಯೂಟರಿನಲ್ಲಿ ತಿಂಗಳುಗಟ್ಟಲೆ ನೀನು ಉಣಿಸಿ ತಯಾರಿಸಿದ್ದ ರಿಪೋರ್ಟ್, ಯಾವುದೋ ವೈರಸ್ ಬಡಿದು ಪೂರಾ ಅಳಿಸಿ ಹೋದಾಗ ಕುಸಿದಿದ್ದೆ, ಅತ್ತೆ. ಅದು ಯಾವು ಯಾವುದೋ 'ಕಂಪ್ಯೂಟರ್ ಟೂಲ್ಸ್' ಬಳಸಿ ಎಲ್ಲೆಲ್ಲೋ ಅಡಗಿದ್ದ ತುಂಡು ತುಂಡು ಮಾಹಿತಿಯನ್ನು ಮತ್ತೆ ಹೆಕ್ಕಿ ಪಡೆದು, ಪೇರಿಸಿ ಕೂಡಿಸಿ ಮುಗಿಸಿದ್ದೆ.ಅಂತೂ ಮರುವಾರ ಸ್ವೀಡನ್‌ಗೆ ಹೋಗುವಷ್ಟರಲ್ಲಿ ಎಲ್ಲ

ಸಿದ್ಧವಾಗಿ ನಿಟ್ಟುಸಿರು ಬಿಟ್ಟಿದ್ದೆ.ಒಂದುಕ್ಷಣದಲ್ಲಿ ವಿಧಿಯ ಕೈ ಅಳಿಸಿದೆ ನಿನ್ನ ದಶಕದಶಕಗಳ ನೆನಪಿ ಸಂಗ್ರಾಹಕವನ್ನು, ಬದುಕಿನ ಉಗ್ರಾಣವೇ ಚೆಲ್ಲಿ ಖಾಲಿಯಾಗಿದೆ.ಎಲ್ಲವನ್ನೂ ಮತ್ತೆ ಸಂಗ್ರಹಿಸಬಹುದೆ?

‘ಏಕೆ ಹೀಗಾಯಿತು, ನಮಗೇ ಏಕೆ ಹೀಗಾಯಿತು?’ಉತ್ತರವಿಲ್ಲದ ಪ್ರಶ್ನೆಗಳೊಡನೆ ಗುದ್ದಾಡಿದ್ದೇನೆ. ಜಗತ್ತಿನ ದೊಡ್ಡ ದುರಂತ ನನ್ನ ಬಾಳಿನಲ್ಲಿ ಎಂದು ಕುಸಿದ ಕ್ಷಣ, ನನಗೆ ಕಂಡಿತ್ತು ಮತ್ತೊಂದೇ ವಿಶ್ವ, ಈ ಹಾದಿಯ ಪಯಣದಲ್ಲಿ ನಾನು ಒಂಟಿ ಇರಲಿಲ್ಲ. ಅದೆಷ್ಟು ಸಹಯಾತ್ರಿಗಳಿದ್ದರು ಈ ನೋವಿನ ನೆರಳಲ್ಲಿ.ಮೂಲೆ ಮನೆಯ ರಂಗಪ್ಪನ ಮಗಳು ಹಿತ್ತಲಿನ ಬದುವಲ್ಲಿ ಜಾರಿ ಬಿದ್ದವಳು, ಎದ್ದಿರಲಿಲ್ಲ ಮೂರು ತಿಂಗಳು.ಒಂದು ವರ್ಷದ ಅಂಚಿಗೆ ಮತ್ತೆ ನಡೆದಳು, ನೋಡು ಎಲ್ಲ ಮೊದಲಿನಂತೆ, ರಾಜು ಚಿಕ್ಕಪ್ಪನ ಮಗ ಲಾರಿ ಗುದ್ದಿ ಬದುಕುಳಿದ.ಎರಡು ವರ್ಷದ ಅಂಚಿಗೆ ಮತ್ತೆ ಕಛೇರಿಗೆ ಹೋಗುವಂತಾದ ಎಷ್ಟು ಕತೆಗಳಿವೆ ಇಲ್ಲಿ ಸುತ್ತ ಮುತ್ತ.ನಿನ್ನೆ ಮೊನ್ನೆಯವರೆಗೆ ನನಗೆ ಕಣ್ಣಿದ್ದು ಕಂಡಿರದ, ಕಿವಿಯಿದ್ದು ಕೇಳಿರದ ಎಷ್ಟೊಂದು ಕತೆಗಳು.ನಾವು ನಮ್ಮ ಬದುಕಿನಲ್ಲಿ ಎಷ್ಟು ವ್ಯಸ್ತರಾಗಿದ್ದೆವು. ಹಳಿಯ ಮೇಲೆ ಹೊರಟ ರೈಲಿನಂತೆ ಎಡಬಲ ನೋಡದೆ ಉದ್ದಕ್ಕೆ ಹೊರಟು ಬಿಟ್ಟಿದ್ದೆವು. ಬೆಳಗು ಮಧ್ಯಾಹ್ನ ಸಂಜೆ ರಾತ್ರಿಗಳ ಅದೇ ಬದಲಿಲ್ಲದ ದಿನಚರಿಯಲ್ಲಿ ಕಳೆದು ಹೋಗಿದ್ದೆವು.

ಹುಡುಕಿ ಹೋಗಿ ಎಷ್ಟೆಲ್ಲ ಕತೆಗಳನ್ನು ಕೇಳಿದೆ, ಗಂಟುಕಟ್ಟಿ ಹೊತ್ತು ಮನೆಗೆ ತಂದೆ. ವಾಸಿಯಾಗದೆ, ಮತ್ತೆ ಬಾರದೆ ಸತ್ತು ಮುಗಿದ ಕತೆಗಳ ಮಡಿಕೆ ಬಿಡಿಸದೆಯೇ ಬದಿಗೆ ಸರಿಸಿದೆ.ಇದ್ದು ಗೆದ್ದ ಕತೆಗಳನ್ನು ಆಯ್ದು ಎದೆಗೊತ್ತಿಕೊಂಡೆ.ರಾತ್ರಿಯ ನೀರವ ಕ್ಷಣದಲ್ಲಿ ತಟ್ಟನೆ ಎದ್ದು ಕುಳಿತ ಪುಟ್ಟಿಯೊಡನೆ ಹಂಚಿಕೊಂಡೆ. ‘ಅಮ್ಮ ಮತ್ತೆ ಸರಿ ಹೋಗುವುದೇ ಇಲ್ಲವೇ?’ಅವಳ ಕಣ್ಣ ಪಶ್ನೆಗಳಿಗೆ ನೂರು ಕತೆಗಳ ಭರವಸೆ ಕೊಟ್ಟೆ.ಸತ್ತವರು ಎದ್ದು ಬಂದಿದ್ದರು, ಮಲಗಿದವರು ಎದ್ದು ನಡೆದಿದ್ದರು.ಪವಾಡವೇನೂ ಇರಲಿಲ್ಲ. ವಿಜ್ಞಾನದ ಸರಹದ್ದಿನಲ್ಲಿ ನಿಂತ ಮನುಷ್ಯನಿಗೂ ತಿಳಿದಿರುವುದು ಎಷ್ಟು ಅಲ್ಪ, ತಿಳಿಯಬೇಕಿರುವುದು ಎಷ್ಟು ಅಗಾಧ ಎಂದು ನೆನಪಿಸಿತ್ತು.ಅಚ್ಚರಿಗಳಿವೆ ಪ್ರಕೃತಿಯಲ್ಲಿ, ಮನುಷ್ಯನ ‘ನಾನೆಲ್ಲ ಬಲ್ಲೆ’ನೆಂಬ ಅಹಂಕಾರವನ್ನು ಅಡಗಿಸುವ ಅದ್ಭುತ ಅಚ್ಚರಿಗಳು.‘ನಿನಗೆ ಗೊತ್ತಿಲ್ಲದ್ದು ಅಖಂಡವಿದೆ’ ಎಂದು ಅಣಕಿಸುವುದು. ‘ಸಾಧ್ಯತೆ ಸಂಭವನೀಯತೆಯ ಈ ವಿಶ್ವದಲ್ಲಿ ನೀನು ಏನನ್ನೂ ಊಹಿಸಲಾರೆ ಮನುಜ’ ಎಂಬ ನೇಗಾಟದ್ದು, ಮಿದುಳೆಂಬ ರಹಸ್ಯದ ಪೆಟ್ಟಿಗೆಯಲ್ಲಿ ಏನೆಲ್ಲ ಅಡಗಿದೆಯೆಂದು ಪೂರ್ಣವಾಗಿ ಯಾರು ಬಲ್ಲರು.ಬುದ್ಧಿವಂತಿಕೆ ಎಲ್ಲಿ ಅಡಗಿತ್ತು ಎಂದು. ಯಾರಿಗೆ ಗೊತ್ತು ನಿನ್ನ ಮಿದುಳಿನ ಯಾವ ಮೂಲೆಯಲ್ಲಿ ನೆನಪುಗಳು ಅಡಗಿದೆಯೋ, ಯಾವ ಕ್ಷಣದಲ್ಲಿ ಯಾವ ರೂಪದಲ್ಲಿ ಎದ್ದು ಹೊರಬೀಳುವುವೋ ಕಂಡವರಾರು, ಎಲ್ಲಿ ಹೋದಿರಿ ನೆನಪಗಳೆ ಮತ್ತೆ ಬನ್ನಿ, ಭೂತ ಭವಿಷ್ಯದ ನಡುವೆ ತೂಗು ಸೇತುವೆ ಕಟ್ಟಬನ್ನಿ. ನೆನಪ ಜೋಲಿಯಲ್ಲೊಮ್ಮೆ ನನ್ನ ಹುಡುಗಿಯ ಜೀಕಿ ಬಿಡಬನ್ನಿ. ಕದಡಿ ಬಗ್ಗಡವಾದ ಬದುಕ ತಿಳಿಗೊಳಿಸಬನ್ನಿ.

***

ಆರು ತಿಂಗಳು.ನಿನ್ನ ಕೆನ್ನೆಗಳು ತುಂಬಿಕೊಂಡವು.ಬೋಡು ಹೊಡೆದಿದ್ದ ತಲೆಯ ತುಂಬಾ ಜೊಂಪೆ ಕೂದಲು ಚಿಗುರಿತ್ತು.ಮಟ್ಟ ಭಾವದ ಒಡೆದ ದನಿ ಮೆಲ್ಲನೆ ಮೃದುವಾಗಿತ್ತು.ಚೆದುರಿ ಹೋದ ನಿನ್ನ ನೆನಪುಗಳ ಸಂಗ್ರಹಿಸ ಹೊರಟೆ.ಕರೆದೊಯ್ದು ನಿನ್ನ ಕಛೇರಿಗೆ, ನಿನ್ನ ದಿನದಿನದ ಪರಿಚಯದ ತಾಣಗಳಿಗೆ, ಕಂಡ ಮುಖಗಳ ಭೆಟ್ಟಿಗೆ.

ವಸಂತದ ಒಂದು ದಿನ, ನಿನ್ನ ತವರಿಗೆ ಕರೆದೊಯ್ದೆ. ‘ಇಲ್ಲಿ ನೀನು ಆಡಿದ್ದೆ, ಅಲ್ಲಿ ನೀನು ನಡೆದಿದ್ದೆ, ಇದೋ ನೋಡು ನಿಮ್ಮ ಮನೆ… ಈ ಜಗುಲಿಯ ಮೇಲೆ ಮಲ್ಲಿಗೆಯ ದಂಡೆ ಕಟ್ಟಿದ್ದೆ.ಅಪ್ಪನ ಶಿವಪೂಜೆಗೆ ತುಂಬೆ ಹೂ ಬಿಡಿಸಿ ಪೋಣಿಸಿದ್ದೆ’.ನಾನು ಹೇಳುತ್ತಿದ್ದಂತೆ ನೀನು ಯಾರದೋ ಕತೆಯೆಂಬಂತೆ ಕೇಳಿದೆ.ಇವೆಲ್ಲ ನೀನು ಹೇಳಿದ ಕಥೆಗಳು.ಪಂಜಾಬಿನ ನೆಲದ ನನಗೆ ನಿನ್ನ ನೆಲವನ್ನು ಪರಿಚಯಿಸಲೆಂದು ಅದೆಷ್ಟು ಬಾರಿ ಇಲ್ಲಿಗೆ ಕರೆತಂದಿದ್ದೆ.ನನ್ನೊಡನೆ ಪುರುಸೊತ್ತಿನ ನಿನ್ನ ಬಾಲ್ಯವನ್ನು, ಮತ್ತೆಂದೂ ಹಿಂತಿರುಗದ ಬದುಕಿನ ಆ ಹಂತವನ್ನು ಅದೆಷ್ಟು ಬಾರಿ ನೆನೆಸಿಕೊಂಡಿದ್ದೆ.ಇಂದು ಖಾಲಿಯ ನೋಟ.ಈ ಅಂಗಳ, ಈ ನೆಲ, ಹಿತ್ತಿಲ ತುಂಬಾ ಅರಳಿದ ಕಾಕಡ, ಕನಕಾಂಬರ ಯಾವುದೂ ನಿನಗೆ ನೆನಪಿಲ್ಲ. ಯಾರದೋ ಅಂಗಳಕೆ ಅಪರಿಚಿತರು ಬಂದಂತೆ ತಟಸ್ಥ ನಿಂತಿರುವೆ. ಕೆಂಡ ಸಂಪಿಗೆ ಕಂಪಿಗೆ ನೆನಪು ಬಾರದು ಹೇಗೆ?ಈ ಗಲ್ಲಿ, ಈ ಓಣಿ, ಈ ಮನೆಯ ಈ ಜಗುಲಿ, ಮೂಲೆಮೂಲೆಗಳನ್ನು ಹುಡುಕಿ ಬಂದೆ, ತಡಕಿ ನಿಂತೆ.ಕದದ ಹಿಂದೆ, ಜಂತೆಯ ಸಂದಿಯಲ್ಲಿ, ಎಲ್ಲಿ ಅಡಗಿದೆ ನಿನ್ನ ನೆನಪುಗಳು?ಅವ್ವ ಕರೆದಳು, ಜಾಕಾಯಿ ಪೆಟ್ಟಿಗೆಯೊಳಗೆ ಮಡಿಚಿಟ್ಟ ಪೀತಾಂಬರವ ತೆಗೆದಿಟ್ಟಳು.ಮಡಿಕೆ ಮಡಿಕೆಯಲ್ಲಿ ಅಡಗಿದ್ದ ನೆನಪುಗಳ ಹರವಿಟ್ಟಳು, ನಿನ್ನದಲ್ಲವೆಂಬಂತೆ ಒಲ್ಲೆನೆಂದೆ. ಹದಿಮೂರರ ಹರೆಯಕ್ಕೆ ಮೈ ನೆರೆದು ಕುಳಿತಾದ ಬಲವಂತವಾಗಿ ಪಟ್ಟೆ ಪೀತಾಂಬರ ಉಡಿಸಿ ಆರತಿ ಎತ್ತಿದಳೆಂದು ನೀ ಮುನಿದ ಕತೆಯನ್ನುನೀನೇ ಹೇಳಿದ್ದೆ. ಈ ನೆಲದ ನೂರು ಕತೆಗಳು ನನಗೆ ನೆನಪಿದೆ, ನಿನಗೆ ಮರೆತದ್ದು ಹೇಗೆ?ಇದೋ ನಿನ್ನ ಸೋದರಮಾವ… ತೂಗು ತೊಟ್ಟಿಲಿನಲ್ಲಿ, ಎಂಟು ವರ್ಷದ ಪೋರ, ಎತ್ತಿ ಆಡಿಸಿದ್ದ, ನೀನೇ ಹೇಳಿದ್ದೆ. ಹೆಸರಿಟ್ಟು ಕೂಗಿದ್ದು, ಹದಿನಾರು ದಾಟಿದ್ದು, ಲಗ್ನ ನಿಶ್ಚಯವಾದದ್ದು, ನೀನು ಒಲ್ಲೆನೆಂದು ಓದಲು ಮೈಸೂರು ಸೇರಿದ್ದು ಎಲ್ಲ ಮರೆತದ್ದು ಹೇಗೆ? ಕನ್ನಡದ ಹುಡುಗಿಯನ್ನು ಕದ್ದು ಕೊಂಡೊಯ್ದನೆಂದು ನಮ್ಮ ಮದುವೆಯ ದಿನ, ನನ್ನ ಮೇಲೆ ಎಗರಿ ಬಿದ್ದವ, ಇಂದು ನೋಡು ನನ್ನ ಕೈತಟ್ಟಿ ಸಮಾಧಾನಿಸುತ್ತಿದ್ದಾನೆ.

***

ಹಿಂತಿರುಗಿ ಬಂದೆವು ಮನೆಗೆ, ಈಗ ಕರೆದೊಯ್ದು, ನನ್ನೂರಿಗೆ ಅಮೃತಸರಕ್ಕೆ.ಅಮ್ಮ ಅಪ್ಪ ನಿನ್ನ ಸ್ಥಿತಿ ನೋಡಿ ಸ್ತಬ್ಧರಾದರು.'ರಿಪು ಹೀಗಾಯ್ತಲ್ಲೋ ನಿನ್ನ ಬಾಳು' ಅಮ್ಮ ಅಪ್ಪಿ ಅತ್ತಳು.ನೀ ಕೂಡಿಸಿದಲ್ಲಿ ಕುಳಿತೆ, ನಿಲ್ಲಿಸಿದಲ್ಲಿ ನಿಂತೆ.ನಾ ಕೀಲಿ ಕೊಟ್ಟ ಬೊಂಬೆಯಂತೆ ನಡೆದೆ.

ಆದರೆ ನನಗೇಕೋ ಅನಿಸುವುದು, ನೀ ಹೊರಗೆ ಕಂಡಷ್ಟು ಸ್ತಬ್ಧಳಾಗಿಲ್ಲ, ಸುಮ್ಮನಿಲ್ಲ. ನನ್ನ ಹುಡುಗಿ ವಿಧಿಗೆ ಅಂಜಿ ಕೈ ಕುಸಿದು ಕೂಡುವುದನ್ನು ನಾ ಊಹಿಸಲಾರೆ.ನಿನ್ನೊಳಗೆ ನೀ ಗುದ್ದಾಡುತ್ತಿರುವೆ ಮರೆವು ನೆನಪುಗಳ ನಡುವೆ, ಅರಿವು ಅಜ್ಞಾನದ ನಡುವೆ. ಅಮ್ಮನಿಗೆ ಅಪ್ಪನಿಗೆ ಹಾಗೆನಿಸಲಿಲ್ಲ. ಅವರ ಮಟ್ಟಿಗೆ ರಿಪು, ಅವರ ಮಗ ರಿಪದಮನ್ ಎಲ್ಲಿಯೋ ಕಳೆದು ಹೋಗಿದ್ದ.

ಇನ್‌ಸ್ಟಿಟ್ಯೂಟ್‌ನಲ್ಲಿ ನಮ್ಮ ಭೆಟ್ಟಿಯಾದ ಮೊದಲ ದಿನ ನೀ ಕೇಳಿದ್ದೆ – ಸಿಂಗ್, ರಿಪದಮನ್ ಎಂದರೆ ಏನು?''ಶತ್ರುಗಳನ್ನು ಸದೆಬಡಿವ ರಣಧೀರ' ಎಂದು ನಾನು ಉತ್ತರಿಸಿದಾಗ ಜೋರು ನಕ್ಕಿದ್ದೆ.ನಿಮ್ಮ ಹೆಸರು ಕೇಳೇ ಶತ್ರು ಓಡಿಹೋಗುತ್ತಾನೆ. ಅಷ್ಟು ಮದ್ದು ಗುಂಡಿನ ಗುಡುಗಿದೆ ನಿಮ್ಮ ಹೆಸರಲ್ಲಿ' ಎಂದಿದ್ದೆ.ನಮ್ಮ ಹಿನ್ನೆಲೆಯಲ್ಲಿ ಎಷ್ಟು ಅಂತರವಿತ್ತು.ದಕ್ಷಿಣದ ಒಂದು ತಣ್ಣನೆಯ ಸಣ್ಣ ಊರಿನಲ್ಲಿ ನೀ ಹುಟ್ಟಿದ್ದೆ. ನಾನು ಹೊತ್ತಿ ಉರಿದ ಪಂಜಾಬಿನ ನೆಲದಿಂದ ಬಂದವನು.ನನ್ನ ತಂದೆ, ಚಿಕ್ಕಪ್ಪ, ದೊಡ್ಡಪ್ಪನ ಮಕ್ಕಳು ಎಲ್ಲರೂ 'ಆರ್ಮಿ'ಗೆ ಸೇರಿದವರು.೧೯೬೨ರ ಯುದ್ಧದಲ್ಲಿ ಭಾಗವಹಿಸಿದ ಅಪ್ಪನ ಸೇನೆಯ ಸಾಹಸಗಾಥೆಗಳನ್ನು ಕೇಳುತ್ತಾ ಕಳೆದಿತ್ತು ನನ್ನ ಬಾಲ್ಯ. 'ರಜಪೂತ್ ರೆಜಿಮೆಂಟ್'ನಲ್ಲಿ ಸಿಪಾಯಿಯಾಗಿದ್ದ ಅಪ್ಪ, ಯದ್ಧದ ಆ ಸಮಯದಲ್ಲಿ ಮೈಲಿ ಮೈಲಿಗಳು ಹಿಮದಲ್ಲಿ ನಡೆದಿದ್ದರು, ಮೂಳೆ ಕೊರೆಯುವ ಚಳಿಯಲ್ಲಿ ಹೋರಾಡಿದ್ದರು.ಸರಹದ್ದಿನ ಯುದ್ಧ ಆರಂಭವಾದಾಗ ಎರಡು ಸಾವಿರ ಯೋಧರಿದ್ದ ರೆಜಿಮೆಂಟ್ ಅವರದಾಗಿತ್ತು.

ಯುದ್ಧದಂಚಿಗೆ ಬದುಕುಳಿದು ಬಂದ ಹನ್ನೊಂದು ಜನರಲ್ಲಿ ಅಪ್ಪ ಒಬ್ಬರಾಗಿದ್ದರು.'ಫ್ರಾಸ್ಟ್ ಬೈಟ್'ಗೆ ತುತ್ತಾಗಿ ಜಡಗಟ್ಟಿದ ಎಡಗಾಲನ್ನು ಕತ್ತರಿಸಿ ಹಾಕಲಾಗಿತ್ತು.ಅಪ್ಪ ತಮ್ಮ ಮರದ ಕಾಲನ್ನು ಹೆಮ್ಮೆಯಿಂದ ತೋರಿಸುತ್ತಾ ಕತೆ ಹೇಳುತ್ತಿದ್ದರು.ಚಿಕ್ಕಪ್ಪ ಅಜಬೀರ್ ಸಿಂಗ್, ೧೯೭೧ರ ಪಾಕಿಸ್ತಾನದ ಯುದ್ಧದಲ್ಲಿ ಭಾಗವಹಿಸಿದ್ದರು. 'ಜಾಟ್ ರೆಜಿಮೆಂಟ್'ನಲ್ಲಿ ದುಡಿಯುತ್ತಿದ್ದ ಚಿಕ್ಕಪ್ಪ, ಗಾಯಗೊಂಡ ಸಹಯೋಧನನ್ನು ಹೊತ್ತು ಬರುವಾಗ ಶತ್ರುಗಳು ನೆಟ್ಟ 'ಲ್ಯಾಂಡಮೈನ್' ಸ್ಫೋಟಿಸಿ ಎಡಗಣ್ಣು ಕಿತ್ತುಕೊಂಡಿತ್ತು. ಅಪ್ಪನಿಗೆ ಹೆಮ್ಮೆಯಿತ್ತು.ತಮ್ಮ ಸಮವಸ್ತ್ರ ತೊಟ್ಟ ಕುಟುಂಬದ ಹಿನ್ನೆಲೆಯಲ್ಲಿ.ಅಪ್ಪ ಬಯಸಿದ್ದರು, ಹಿರಿಯ ಮಗನಾದ ನಾನೂ ಸೇನೆ ಸೇರಬೇಕೆಂದು.ಏಕೋ ಅತ್ತ ಆಸಕ್ತಿಯೇ ಇಲ್ಲದ ನಾನು, ಓದಿದ್ದು ಭೌತಶಾಸ್ತ್ರ ಹಿಡಿದದ್ದು ಪ್ರಾಧ್ಯಾಪಕ ವೃತ್ತಿ, ಅಪ್ಪನ ಕನಸನ್ನು ನನಸು ಮಾಡುವಂತೆ ತಮ್ಮ ಸತವಿಂದರ್, ನ್ಯಾಷನಲ್ ಡಿಫೆನ್ಸ್ ಅಕಾಡೆಮಿ ಸೇರಿದ್ದ.ಇಷ್ಟೆಲ್ಲ ವೀರಗಾಥೆಯ ಪಂಜಾಬ್ ತೊರೆದು, ಕನ್ನಡದ ನೆಲದಲ್ಲೆಲ್ಲೋ ಕನ್ನಡದ ಹುಡುಗಿಯ ಕೈ ಹಿಡಿದು ತಣ್ಣಗೆ ನೆಲೆಸಿದ ನನ್ನ ಬಗ್ಗೆ ಒಳಗೆಲ್ಲೋ ಹಬೆಯಾಡಿದ ಅಪ್ಪನ ಅಸಮಾಧಾನವಿತ್ತು.

ಮಧ್ಯಾಹ್ನ ಅಮ್ಮನ ಪಕ್ಕ ಕುಳಿತಂತೆ, ಕೇಳಿದಳು.'ಮುಂದೇನು ಮಾಡ್ತೀಯಾ ರಿಪು?''ಯಾವುದನ್ನು ಏನು ಮಾಡುವುದು?'ಅರ್ಥವಾಗದೆ ಕೇಳಿದೆ. 'ಅಲ್ಲ ಸುಧಾ ಸ್ಥಿತಿ ಹೀಗಿದೆಯಲ್ಲ....' ಅಮ್ಮ ತಡವರಿಸಿದರು.'ಇಲ್ಲಮ್ಮ ನೀನು ಆರು ತಿಂಗಳ ಹಿಂದೆ ನೋಡಬೇಕಿತ್ತು.ಈಗ ನೋಡು ಕಣ್ಣಲ್ಲಿ ಎಷ್ಟು ಹೊಳಪಿದೆ.ದಿನದಿನಕ್ಕೆ ಸ್ಥಿತಿ ಸುಧಾರಿಸ್ತಾ ನಿಟ್ಟುಸಿರಿಟ್ಟು 'ಏನೋ ಅಪ್ಪ, ನನಗೇಕೋ ನಿನ್ನದೆಲ್ಲ ವ್ಯರ್ಥ ಶ್ರಮ ಅನಿಸುತ್ತೆ.......' ಮುಂದೇನೋ ಹೇಳಬಯಸಿ ಏಕೋ ತಡೆದು ಸುಮ್ಮನಾದಳು.ನಾನು ಮಾತು ಬೆಳೆಸಲು ಹೋಗಲಿಲ್ಲ. ಅಷ್ಟರಲ್ಲಿ ಕೋಣೆಯಿಂದ ಎದ್ದು ನೀ ಹೊರಗೆ ಬಂದಿದ್ದೆ.

'ಬಾ ಸುಧಾ, ಕುಳಿತುಕೋ' ಚಾಪೆ ಹಾಸಿ ಕರೆದೆ.ಸದ್ದಿಲ್ಲದೆ ಬಂದು ಕುಳಿತೆ, ಗ್ಯಾಸ್ ಹಚ್ಚಿ, ಅಮ್ಮ ಬಡಿದು ಹಾಕಿದ ಆಲೂ ಪರೋಠ ನಿನಗೆ ಸೇರದಾಗಿತ್ತು.ಒಲ್ಲೆ ಒಲ್ಲೆನೆಂದೆ.ಬಲವಂತ ಮಾಡಿದಾಗ ಮತ್ತೆ ಮಗುವಿನಂತೆ ಬಾಯ್ದೆರೆದು ಅತ್ತೆ. 'ಸುಧಾ ಅನ್ನ–ರಸಂ ಮಾಡಿ ಕೊಡಲಾ?' ರಮಿಸಿ ಕೇಳಿದಾಗ, ಹುಂಗುಟ್ಟಿದೆ.ಅಡಿಗೆ ಮನೆಗೆ ಹೋಗಿ ಒಂದಿಷ್ಟು ಅನ್ನ ತೊಳೆದಿಟ್ಟು, ರಸಂ ತಯಾರಿಸಲು ತೊಡಗಿದಾಗ ಅಮ್ಮ ಕಲಕಿದಳು.'ಇದೇನು ಹಣೆಬರಹವೋ ನಿನ್ನದು.ಕತ್ತಿ ಬಂದೂಕ ಹಿಡಿದ ನಮ್ಮ ವಂಶದಲ್ಲಿ ಯಾವ ಗಂಡು ಹುಡುಗರೂ ಸೌಟು ಹಿಡಿದದ್ದಿಲ್ಲ'. ಅಮ್ಮ ಗೊಣಗಿದಾಗ ನಾ ಮತ್ತೆ ಮಾತು ಬೆಳೆಸಲಿಲ್ಲ. ನಮ್ಮ ವಂಶದ ಇತಿಹಾಸವನ್ನು ನಾನು ಮರೆಯಲು ಎಲ್ಲಿ ಸಾಧ್ಯವಿತ್ತು. ಎದೆಹಾಲಿನೊಡನೆ ಕುಡಿಸಿ ಬೆಳೆಸಿದ ಕತೆಗಳವು.೧೬೦೬ರಲ್ಲಿ ಮುಘಲ್ ದೊರೆ ಜಹಂಗೀರ್ ಹಿಂಸಿಸಿ ಕೊಂದು ಹಾಕಿದ್ದ ಗುರು ಅರ್ಜುನರ ಮಗ ಗುರು ಹರಗೋವಿಂದ್, ಕತ್ತಿ ಹಿಡಿದು ಮೊಘಲರ ಸರ್ವಾಧಿಕಾರಕ್ಕೆ ಸವಾಲೆಸೆದ ಕತೆಗಳವು.ಆತನ ಸೇನೆಯಲ್ಲಿ ಹೋರಾಡಿ ಹುತಾತ್ಮನಾದವನು ನಮ್ಮ ಪೂರ್ವಜ ತೇಜಿಂದರ್ ಸಿಂಗ್.ದೊಡ್ಡಪ್ಪನ ಮನೆಯ ದೊಡ್ಡ ಟ್ರಂಕಿನಲ್ಲಿ ಈಗಲೂ ಆತ

ಬಳಸಿದ್ದೆನ್ನುವ ತುಕ್ಕು ಹಿಡಿದ ಅತಿ ಪುರಾತನ ಕತ್ತಿಯೊಂದಿದೆ. ಆದರೆ ಎಲ್ಲ ಯುದ್ಧಗಳೂ ರಣರಂಗದಲ್ಲಿ ನಡೆಯುವವಲ್ಲ. ಎಲ್ಲ ಕದನಗಳನ್ನು ಕತ್ತಿಯ ಮೊನೆಯಿಂದ, ಬಂದೂಕಿನ ಗುಂಡಿನಿಂದ ಗೆಲ್ಲಲಾಗುವುದಿಲ್ಲ.

ಒಂದು ವಾರ ಇದ್ದದ್ದು ಅಮೃತಸರದಲ್ಲಿ.'ಸುಧಾ ಇದು ಅಮೃತಸರ, ಪ್ರತಿ ವರ್ಷ ಬೇಸಿಗೆ ರಜೆ ನಾವು ಬರುವ ತಾಣ' ನಾನು ಹೇಳುತ್ತಿದ್ದಂತೆ ನೀನು ಪಿಳಿ ಪಿಳಿ ಕಣ್ಣು ಬಿಟ್ಟೆ, ಏನೋ ಅಸ್ಪಷ್ಟವಾಗಿ ಅಸಂಬದ್ಧವಾಗಿ ಮಾತು ಹೊರಟಿತು.ಪ್ರತಿಬಾರಿ ನೀನು ಭೆಟ್ಟಿ ಕೊಡುತ್ತಿದ್ದ ಸ್ವರ್ಣ ಮಂದಿರ, ದುರ್ಗ್ಯಾನ ಮಂದಿರ, ಜಲಿಯನವಾಲಾ ಬಾಗ್ ಎಲ್ಲಕ್ಕೂ ಕರೆದೊಯ್ದೆ.ನಿನ್ನ ಕಣ್ಣಲ್ಲಿ ಗುರುತಿಸಿದ ಕಳೆಗೆ ಕಾತರಿಸಿ ನೋಡಿದೆ. ಹುಟ್ಟಿ ಬೆಳೆದ ತವರನ್ನೆ ಮರೆತವಳಿಗೆ, ಆಡಿ ಬೆಳೆದ ತಾಯ್ಮಡಿಲೇ ನೆನಪಿಲ್ಲದವಳಿಗೆ, ಅತ್ತೆ ಮನೆಯನ್ನು ನೆನಪಿಸುವುದ್ದೇಗೆ? ಆದರೆ ನನ್ನ ಪ್ರಯತ್ನ ಬಿಡಲೊಲ್ಲೆ.ಯಾರಿಗೆ ಗೊತ್ತು, ಯಾವ ಊರಲ್ಲಿ, ಯಾವ ಗಲ್ಲಿಯ ಮೂಲೆಯಲ್ಲಿ ಅವಿತಿರುವ ನೆನಪುಗಳು ಜಿಗಿದು ನಿನ್ನ ಗಪ್ಪೆಂದು ಹಿಡಿದುಕೊಳ್ಳುವುದೋ ಯಾರು ಬಲ್ಲರು.

ಒಂದು ವಾರದ ಕೊನೆಗೆ ನಾ ಹೊರಟಂತೆ, ಅಪ್ಪ ತಡೆದು ಹೇಳಿದರು.'ಯೋಚಿಸು ರಿಪು, ಅವಳದಂತೂ ವಿಧಿ, ಹಣೆಬರಹ ತಪ್ಪಿಸುವರಾರು.ನಿನ್ನ ಬದುಕು ಹಾಳಾಗಬಾರದು.ಸುಧಾನ ಅವರಮ್ಮನೋ, ಅಣ್ಣನೋ ನೋಡಿಕೊಳ್ತಾರೆ.ಟ್ರೈನ್ಡ್‌ನರ್ಸ್ ಬೇಕಿದ್ದರೆ ಇರಿಸು. ಇಂಥವರಿಗೆಂದೇ ಸಂಸ್ಥೆಗಳೂ ಇವೆ. ಹಣದ ಬಗ್ಗೆ ಯೋಚಿಸಬೇಡ.ನೀನು ಪುಟ್ಟಿ ಇಲ್ಲಿಗೇ ಬಂದು ಬಿಡಿ. ಪುಟ್ಟಿ ಹೇಗೂ ಸೆಂಟ್ರಲ್ ಸ್ಕೂಲಿನಲ್ಲಿದ್ದಾಳೆ...' ಮೆಲ್ಲನೆ ಒಂದು ವಾರದಿಂದ ಹಿಡಿದಿಟ್ಟ ಮಾತುಗಳನ್ನು ಅಪ್ಪ ಹೊರಹಾಕಿದರು.ಒಂದು ಕ್ಷಣ ಗರಬಡಿದಂತೆ ನಿಂತೆ.ಅಷ್ಟೆಲ್ಲ ವೀರವಂಶದ ಅಭಿಮಾನದಲ್ಲಿ ಮೆರೆದ ಅಪನ ಬಾಯಲ್ಲಿ ಅಪ್ಪಟ ರಣಹೇಡಿಯ ಮಾತುಗಳನ್ನು ನಿರೀಕ್ಷಿಸಿರಲಿಲ್ಲ. ದೀರ್ಘವಾಗಿ ಉಸಿರೆಳೆದು ಸಾವಧಾನವಾಗಿ ಹೇಳಿದೆ– 'ಅಪ್ಪ ಈ ರಿಪುದಮನ ಸಿಂಗ್ ಧಮನಿಗಳಲ್ಲೂ ತೇಜಿಂದರ್ ಸಿಂಗ್ ರಕ್ತವೇ ಹರಿತಾ ಇದೆ.ಯುದ್ಧದಲ್ಲಿ ಬೆನ್ನು ಕೊಟ್ಟು ಹಿಂತಿರುಗೋಲ್ಲ ಈ ರಿಪು.ಇದು ಬರೀ ಸುಧಾಳ ಕಾಳಗವಲ್ಲ.ಇದು ನಮ್ಮ ಯುದ್ಧ.ವಿಧಿಗೆ ಎದುರು ನಿಂತ ನಮ್ಮ ಜೊತೆಯ ಯುದ್ಧಅಪ್ಪ, ಹತನಾದ ಜೊತೆಯ ಯೋಧರನ್ನೂ ರಣರಂಗದಲ್ಲಿ ಬಿಟ್ಟು ಬರೋಲ್ಲ. ಜೀವ ಪಣವಿಟ್ಟು ಹೊತ್ತು ತರುತ್ತಾರೆ.ನನ್ನ ಹುಡುಗಿ ಬದುಕಿದ್ದಾಳೆ, ಅವಳನ್ನು ಸಾವಿಗೊಪ್ಪಿಸಿ ನಾ ಸೋತು ಹಿಂತಿರುಗುವುದಿಲ್ಲ'. ಅಪ್ಪ ಮಾತನಾಡಲಿ ನಿನ್ನೆ ಕೈಹಿಡಿದು ನಾ ಹೊರಟು ಬಂದೆ. ಈ ಆರು ತಿಂಗಳಲ್ಲಿ ಎಷ್ಟೊಂದು ಮುಖಗಳನ್ನು, ಮುಖವಾಡಗಳನ್ನು ಕಂಡಿದ್ದೆ!

****

ರೈಲಿನಲ್ಲಿ ಕುಳಿತಂತೆ ನೀ ಕೇಳಿದೆ 'ಎಲ್ಲಿಗೆ?' 'ಮರಳಿ ಬದುಕಿಗೆ ಸುಧಾ ಈ ಪಯಣ, ಮರಳಿ ಬದುಕಿಗೆ' ನಾನೆಂದೆ.ನಾನು 'ಮೈಸೂರಿಗೆ' ಎಂದು ಹೇಳಿದೆನೇನೋ ಎಂಬಷ್ಟು ಸಹಜವಾಗಿ ನೀ 'ಹೂಂ'ಗಟ್ಟಿ ಮಲಗಿದೆ.ಮಗುವಿನಂತೆ ಸುರುಳಿ ಮಲಗಿದ ನಿನ್ನ ಮೇಲೆ ಮೆಲ್ಲನೆ ಹೊದಿಕೆ ಹೊದಿಸುತ್ತಾ ಹೇಳಿದೆ 'ಸುಧಾ ನಿನ್ನ ಕದನದಲ್ಲಿ ನಿನ್ನ ಬದಿಗೆ ನಾನಿದ್ದೇನೆ. ನಿನ್ನೊಡನೆ ಜೊತೆ ನಿಂತು ಈ ರಿಪು ಹೋರಾಡುತ್ತಾನೆ'. ವಿಚಿತ್ರವೆನಿಸಿದರೂ ಏಕೋ ಎದೆಯ ಭಾರ ಇಳಿದು ನಿರಾಳವಾಯಿತು.ನನ್ನ ಬದುಕಿಗೀಗ ಹೊಸ ಅರ್ಥ, ಹೊಸ ಉದ್ದೇಶ, ಹೊಸ ಧ್ಯೆಯ ಸಿಕ್ಕದಂತೆನಿಸಿತು. ಕಾಲೇಜಿನಲ್ಲಿ ಪಾಠ ಮಾಡಿ ಬಂದು, ಮೆತ್ತನೆಯ ಕುರ್ಚಿಯಲ್ಲಿ ಕುಸಿದು ಟಿ.ವಿ ನೋಡುತ್ತಾ ಹರವಿಕೊಂಡ ಬದುಕಿಗೊಂದು ನಿರ್ದಿಷ್ಟ ದಿಕ್ಕು ದೊರೆತಿತ್ತು. ನಿನ್ನೆ ಮೊನ್ನೆಯವರೆಗು ನನ್ನ ಅತಿ ದೊಡ್ಡ ದುರಂತವೆನಿಸಿದ್ದು, ಇಂದು ಸವಾಲೆನಿಸಿತ್ತು.ಛಲದಿಂದ ಎದುರಿಸುವ ಉತ್ಸಾಹ ಮೈದುಂಬಿತ್ತು.

ನನ್ನ ಬದುಕು ಪೂರಾ ಈಗ ನಿನ್ನ ಸುತ್ತ ಸುತ್ತಿ ಇಟ್ಟೆ.ನಿನಗೆ ಪೆನ್ನು ಹಿಡಿದು ಬರೆಸುವೆ. ಕಂಪ್ಯೂಟರ್ ಮುಂದೆ ಕೂಡಿಸಿ ಕೀಲಿ ಒತ್ತಿಸುವೆ. ಕಲಿತದ್ದೆಲ್ಲ ಮರೆತ ಹುಡುಗಿ, ಮರೆತದ್ದೆಲ್ಲ ಮತ್ತೆ ಕಲಿಸುವೆ.

ನನ್ನ ನಿನ್ನ ಪ್ರಯತ್ನ ವ್ಯರ್ಥವಿರಲಿಲ್ಲ. ಎಂಟು ತಿಂಗಳ ಅಂಚಿಗೆ ಎದೆಯ ಕಡಲಲ್ಲಿ ಕಡೆ ಕಡೆದು ಹೊರಬಿದ್ದ ನೆನಪುಗಳಿದ್ದವು. 'ಹೋದ ವರ್ಷ ಅಮ್ಮ ಬಂದಿದ್ದಳಲ್ಲ...' ಎನ್ನುವೆ. 'ಹೋದ ವರ್ಷ ಅಲ್ಲ ಸುಧಾ, ನಿನ್ನೆ ಬಂದಿದ್ದರು...' ನಾನು ತಿದ್ದುವೆ. 'ಹಾಂ ನಿನ್ನೆ ವೆಂಕಟೇಶನೂ ಬಂದಿದ್ದನಲ್ಲ...' ಎನ್ನುವೆ. 'ವೆಂಕಟೇಶ ಅಲ್ಲ ಸುಧಾ, ನಿನ್ನ ತಮ್ಮ ಸುರೇಶ...' ನಾ ಹೇಳುವೆ. 'ಹಾಂ... ಸುರೇಶ... ಸುರೇಶ...''ನಾ ಹೇಳಿದ ಮಾತುಗಳನ್ನು ನೀ ಮೆಲುಕು ಹಾಕುವೆ. ಮಿದುಳಲ್ಲಿ ಹೆಸರು, ಸಮಯ ಎಲ್ಲ ಕಲಸು ಮೇಲೋಗರವಾದಂತಿತ್ತು.ಆದರೆ ನನಗೆ ಚಿಂತೆಯಿರಲಿಲ್ಲ. ಆ ನೆನಪಿನಸಮುದ್ರದಾಳದಿಂದ ಕಡೆಕಡೆದು ಹೊರಬಿದ್ದ ನೆನಪುಗಳಿದ್ದವು, ಭೂತ ವರ್ತಮಾನಕ್ಕೆ ಕೊಂಡಿಯಾದ ನನಪುಗಳು.ಅವು ಒಂದೊಂದೇ ಕೂಡಿಕೊಂಡು ಸರಣಿಯಾಗಿ ತಮ್ಮ ತಮ್ಮ ಸ್ಥಾನವನ್ನು ಮೆಲ್ಲಮೆಲ್ಲ ಪಡೆಯುತ್ತಾ, ಚೆದುರಿ ಛಿದ್ರವಾದ ಒಂದು ಚಿತ್ರ ಮತ್ತೆ ರೂಪು ಪಡೆಯಲಿತ್ತು.ಇನ್ನು ನನಗೆ ಚಿಂತೆ ಇರಲಿಲ್ಲ. ಅಖಂಡ ಆಸೆ ಇರಲಿಲ್ಲ. ಬದುಕಿನ ಅತ್ಯಂತ ನಿಧಾನಗತಿಯಲ್ಲೂ, ಭವಿಷ್ಯದತ್ತ ನೀನಿಟ್ಟ ಒಂದೊಂದು ಹೆಜ್ಜೆಯಲ್ಲಿ ನನಗೆ ಭರವಸೆ ಇತ್ತು.ನನ್ನ ಹುಡುಗಿ ಮೆಲ್ಲನೆ ಮತ್ತೆ ನನ್ನತ್ತ, ಬದುಕಿನತ್ತ ಹೆಜ್ಜೆ ಹಾಕಿದ ಸ್ಪಷ್ಟ ಗುರುತುಗಳಿತ್ತು.

***

ಒಂದು ಮುಸ್ಸಂಜೆ ನಾನು ಕಾಲೇಜಿಂದ ಬಂದಾಗ, ಕಿಟಕಿಯ ಬಳಿಯ ಕುರ್ಚಿಯಲ್ಲಿ ಬಗ್ಗಿ ಏನೋ ಬರೆಯುತ್ತಿದ್ದೆ, 'ಏನು ಬರೆದೆ ಸುಧಾ?'ಮೆಲ್ಲನೆ ಕೇಳಿದೆ.ತಟ್ಟನೆ ಎಕ್ಸರ್‌ಸೈಸ್ ಪುಸ್ತಕ ಮುಚ್ಚಿಟ್ಟು ಗಪ್ಪೆಂದು ಕುಳಿತೆ. 'ಎಲ್ಲಿ ನೋಡಲಾ?' ಕೇಳಿದೆ. 'ಇಲ್ಲ ಸರಿ ಇಲ್ಲ' ಬೆನ್ನ ಹಿಂದೆ ಪುಸ್ತಕ ಮುಚ್ಚಿಟ್ಟ ನಿನ್ನ ಮುಖದಲ್ಲಿ ಮತ್ತೆ ಮಗುವಿನ ಮುಗ್ಧತೆ ಕಂಡರೂ, ಅಲ್ಲಿ ಎಲ್ಲೋ 'ನಾ ಸರಿ ಬರೆದಿಲ್ಲ' ಎಂಬ ದೊಡ್ಡವರಲ್ಲಿ ಮಾತ್ರ ಕಾಣುವ ಸಂಕೋಚ ಇಣುಕಿತ್ತು. 'ಪರವಾಗಿಲ್ಲ. ಕೊಡು ಸುಧಾ' ಎತ್ತಿಕೊಂಡೆ.'ಅರೆ, ಅಕ್ಷರ ಮೊದಲಿನಂತೆ ಗುಂಡಾಗ್ತಾ ಇದೆ'.ನಿನ್ನ ಮುಖ ಅರಳಿತು, ಹಾಳೆಗಳನ್ನು ಒಂದೊಂದಾಗಿ ತಿರುಗಿಸಿದೆ.'ಪಪ್ಪ... ತತ್ತ....'ಗಳಿಂದ ತುಂಬಿದ ಹತ್ತು ಹದಿನೈದು ಹಾಳೆಗಳ ತಿರುವಿದವನು ಗಕ್ಕನೆ ನಿಂತೆ.ಆ ಬಿಡಿ ಬಿಡಿ ಅಕ್ಷರಗಳ ನಡುವೆ ಒಂದೊಂದೇ ಪದಗಳು, ಅರ್ಥವಿದ್ದ ಪದಗಳು ಮೂಡಿ ಬಂದಿದ್ದವು. 'ನಾನು...... ಅಮ್ಮ..... ಪುಟ್ಟಿ' ನೋಡ ನೋಡುತ್ತಾ ಎದೆ ಹೊಡೆದುಕೊಂಡಿತು.ಅರೆ ನೀನು ಪದಗಳನ್ನು ಬರೆದಿದ್ದೀಯ.ಇನ್ನು ವಾಕ್ಯಗಳು ಎಷ್ಟು ದೂರ.ಒಂದೇ ತಿಂಗಳಲ್ಲಿ ನನ್ನ ಹುಡುಗಿ ವರ್ಷವರ್ಷಗಳ ಕಲಿಕೆಯ ಜಿಗಿದು ನಿಂತಿದ್ದಾಳೆ.ನಿಜ ದೂರವಿದೆ, ನಮ್ಮ ನಿಲ್ದಾಣ ಬಲು ದೂರವಿದೆ.ಆದರದು ಅಸಾಧ್ಯವಾಗಿ ಅಸಂಭವವಾಗಿ ಕಾಣುತ್ತಿಲ್ಲ. ತಲುಪುತ್ತೇವೆಂಬ ವಿಶ್ವಾಸವಿದೆ.

'ರಿಪು ದೀಪ ಹಾಕ್ತೀಯ ನಾ ಬರೆಯಬೇಕು...' ಪೆನ್ನು ಹಿಡಿದು ನೀ ಕೇಳಿದೆ, ದೀಪದ ಗುಂಡಿ ಒತ್ತಿ, 'ಕತ್ತಲನ್ನು ಶಪಿಸುವ ಬದಲು ಸಣ್ಣ ಹಣತೆಯನ್ನು ಹಚ್ಚಿಡೋಣ ಅಲ್ಲ?'ಯಾರೋ ಹೇಳಿದ ಮಾತುಗಳನ್ನು ಪುನರುಚ್ಚರಿಸಿದೆ.

**ಆಕರ : ನೇಮಿಚಂದ್ರರ ಕಥೆಗಳು – ನೇಮಿಚಂದ್ರ**

## ೩.೩ ಮಂತ್ರಮಾಂಗಲ್ಯ

**ಕುವೆಂಪು**

ಇದು ಮಂತ್ರಗಳ ಮತ್ತು ಹಲವಾರು ಸನ್ನಡವಳಿಕೆ ಸಂಹಿತೆಗಳ ಒಂದು ಸಂಕಲನ, ಮಂತ್ರ ಎಂಬ ಪದ ತನ್ನ ಧ್ವನಿಶಕ್ತಿಯ ವಿಶಾಲಾರ್ಥದಲ್ಲಿ ಸ್ತೋತ್ರ ಪ್ರಾರ್ಥನೆ, ಹಾರೈಕೆ ಮೊದಲಾದ ಮಾನವೀಯ ಆಶಯಗಳನ್ನೆಲ್ಲ ಒಳಗೊಳ್ಳುತ್ತದೆ. ನಮ್ಮ ದೇಶದ ಋಷಿಗಳು ದಾರ್ಶನಿಕರು ಸಂತರೂ ರಚಿಸಿದ ಮಂತ್ರ, ಸ್ತೋತ್ರ, ಪ್ರಾರ್ಥನೆಗಳು ಇಲ್ಲಿವೆ. ಇದರೊಡನೆ ಗಂಡು ಹೆಣ್ಣುಗಳಿಗೆ ಮದುವೆ ಮಾಡಿಸುವ ಹಿರಿಯರು ಅವರಿಗೆ ಉಪದೇಶಿಸಿಬೇಕಾದ ಮಾರ್ಗದರ್ಶಕ ನಡವಳಿಕೆ ಸಂಹಿತೆಯು ಇದೆ. ತಮ್ಮ ಜೀವನವು ಮಂಗಳವಾಗಲೆಂದು ಎಲ್ಲರೂ ನಿತ್ಯವೂ ಈ ಮಂತ್ರಗಳನ್ನು ಧ್ಯಾನಿಸಿ ತಮ್ಮತಮ್ಮ ಜೀವನ ಸಂದರ್ಭಗಳಲ್ಲಿ ಅವುಗಳಿಂದ ಹೊಮ್ಮುವ ಅರ್ಥಗಳನ್ನು ಗ್ರಹಿಸಿ ಬದುಕಿನ ಸತ್ಯಾನ್ವೇಷಣೆಯ ಪಥದಲ್ಲಿ ಮುಂದುವರಿಯಬಹುದು. ಇವುಗಳಿಗೆ ಪೂರಕವಾಗಿರುವ ವಿವಾಹ ಸಂಹಿತೆ ಪ್ರತಿ ವಧೂವರರಿಗೂ ನಿರ್ದಿಷ್ಟ ಸಾಮಾಜಿಕ ಮೌಲ್ಯಗಳನ್ನು ಬೋಧಿಸುತ್ತದೆ.

ಮಂತ್ರ ಮಾಂಗಲ್ಯ ಎನ್ನುವುದು ಒಂದು ಪುಸ್ತಕದ ಒಂದು ಸಂಕಲನದ ಹೆಸರು ಮಾತ್ರವಲ್ಲ ಇದೊಂದು ವಿವಾಹ ಪಾನ ಸಹಸ್ರಾರು ವರ್ಷಗಳ ಕಾಲ ಯಾವ ಮೌಲ್ಯಗಳನ್ನು ಭಾರತೀಯರು ದೊಡ್ಡದು ಎಂದು ಭಾವಿಸಿ ಆರಾಧಿಸುತ್ತಾ ಬಂದಿದ್ದಾರೆ. ಸಂಕೇತವಾಗಿರುವ ಶಕ್ತಿಯನ್ನು ವಧೂವರರು ತಮ್ಮ ಬದುಕಿನ ಅಮೃತ ಮುಹೂರ್ತದಲ್ಲಿ ಈ ಮಂತ್ರಗಳ ಮೂಲಕ ವಿವಾಹ ಸಂಹಿತೆಯ ಪ್ರತಿಜ್ಞಾವಿಧಿಗಳ ಮುಖಾಂತರ ತಮ್ಮ ಚೇತನಕ್ಕೆ ಆಹ್ವಾನಿಸುತ್ತಾರೆ.ವಿವಾಹ ವಿಧಾನವು ಕ್ರಮೇಣ ವಧೂವರರ ಜೀವನ ವಿಧಾನವು ಆಗಬೇಕೆಂಬುದು ಮಂತ್ರಮಾಂಗಲ್ಯದ ಮೂಲ ಆಶಯ ಆದ್ದರಿಂದಲೇ ಈ ಕ್ರಮದಲ್ಲಿ ಮದುವೆಯಾಗುವ ವಧೂವರರು ಅವರ ಮಾತಾಪಿತೃಗಳು ಬಂಧೂಮಿತ್ರರು ಕೆಲವು ಕನಿಷ್ಠ ಶಿಸ್ತನ್ನು ಕಡ್ಡಾಯವಾಗಿ ಪಾಲಿಸಬೇಕು.

ಮಂತ್ರಮಾಂಗಲ್ಯ ಸರಳ ವಿವಾಹ ವಿಧಿಯಲ್ಲಿ ರೂಪಿಸುವ ರೂಪಿಸಿರುವುದರಿಂದ ವಿವಾಹದ ಯಾವೊಂದು ಕಾರ್ಯಕ್ರಮವನ್ನು ಅದ್ದೂರಿಯಾಗಿ ನೆರವೇರಿಸಕೂಡದು ಯಾವ ರೂಪದಿಂದಲೂ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ವರದಕ್ಷಣೆಯನ್ನಾಗಲಿ. ವಧುದಕ್ಷಿಣೆ ಯನ್ನಾಗಲಿ ಯಾರು ಸ್ವೀಕರಿಸಕೂಡದು. ವಧೂವರರನ್ನು ಆತ್ಮಗೌರವವಿಲ್ಲದ ಮೃಗಗಳನ್ನಾಗಿ ಪರಿಗಣಿಸುವ ದುಡ್ಡಿನ ದಳ್ಳಾಳಿ ವ್ಯವಹಾರ ಮಂತ್ರಮಾಂಗಲ್ಯದಲ್ಲಿ ಸಂಪೂರ್ಣ ನಿಷೇಧಿಸಲಾಗಿದೆ. ಹೆಣ್ಣು ಭ್ರೂಣ ಹತ್ಯೆಯಿಂದ ಹೇಳಿದು ಮದುವೆ ಮಾಡಿಕೊಂಡ ಹೆಣ್ಣುಮಕ್ಕಳನ್ನು ಬೆಂಕಿಹಚ್ಚಿ ಸುಡುವ ಪರಮ ಪಾತಕಗಳವರೆಗೂ ಕಾರಣವಾಗಿರುವ ಈ ದುಡ್ಡಿನ ದಳ್ಳಾಳಿ ವ್ಯವಹಾರದಲ್ಲಿ ಭಾಗಿಗಳಾಗುವ ಹಿರಿಯರು ಮಂತ್ರೋಪದೇಶಕ್ಕೂ, ಪ್ರತಿಜ್ಞಾ ವಿಧಿ ಉಪದೇಶಕ್ಕೂ ವಧೂವರರು ಮಂತ್ರೋಚ್ಚಾರಕ್ಕೂ. ಪ್ರತಿಜ್ಞೆ ತೆಗೆದುಕೊಳ್ಳಲೂ ಅನರ್ಹರಾಗಿರುತ್ತಾರೆ.

ಮಂತ್ರಮಾಂಗಲ್ಯ ವಿವಾಹವು ಗುರುಹಿರಿಯರ ಮತ್ತು ಬಂಧು ಬಾಂದವರ ಸಮ್ಮುಖದಲ್ಲಿ ನಡೆಯುವ ಪವಿತ್ರ ವಿಧಿಯಾದುದರಿಂದ ಎರಡೂ ಕಡೆಯಿಂದ ಒಟ್ಟು ಇನ್ನೂರು ಜನರನ್ನು ಮೀರದಂತೆ ಆಹ್ವಾನಿಸಬೇಕು. ಸಂಪ್ರದಾಯದಂತೆ ಇದ್ದು ಬಂದವರನ್ನೆಲ್ಲಾ ಆಹ್ವಾನಿಸಿ ದೊಂಬಿ ಎಬ್ಬಿಸುವುದು ಮಂತ್ರಮಾಂಗಲ್ಯದ ಪಾವಿತ್ರ್ಯವನ್ನೂ ಗಾಂಭೀರ್ಯವನ್ನೂ ಸಂಪೂರ್ಣ ನಾಶ ಮಾಡುತ್ತದೆ. ಗಂಡನ ಕುಟುಂಬದವರೂ ಹೆಣ್ಣಿನ ಕುಟುಂಬದವರೂ ತಮ್ಮ ನಿಜವಾದ ಶ್ರೇಯಾಕಾಂಕ್ಷಿಗಳನ್ನು ಮಾತ್ರ ಕರೆದರೆ ಅದು ನೂರರ ಮಿತಿಯನ್ನು ಖಂಡಿತಮೀರುವುದಿಲ್ಲ.

ಮಂತ್ರಮಾಂಗಲ್ಯದ ಮದುವೆಯಲ್ಲಿ ಉಡುಗೊರೆಗಳು ನಿಷಿದ್ಧ. ಯಾರು ಯಾವಾಗಬೇಕಾದರೂ ವಿವಾಹದ ಸವಿನೆನಪಿಗೆ ವಧೂವರರಿಗೆ ಉಡುಗೊರೆಗಳನ್ನು ಕೊಡಬಹುದು. ಅಥವಾ ಅವರಿಂದ ತೆಗೆದುಕೊಳ್ಳಬಹುದು ಆದರೆ ಮದುವೆ ಸಂದರ್ಭದಲ್ಲಿ ವಿವಾಹವೇದಿಕೆಯ ಬಳಿ ಎಲ್ಲರೆದುರು ತಮ್ಮತಮ್ಮ ಉಡುಗೊರೆಗಳನ್ನು ತಂದು ಗುಡ್ಡೆಹಾಕಿ ತಮ್ಮ ಶ್ರೀಮಂತಿಕೆ ಮತ್ತು ಔದಾರ್ಯಗಳ ಸಾರ್ವಜನಿಕ ಪ್ರದರ್ಶನ ಮಾಡಲು ಯಾರಿಗೂ ಅವಕಾಶ ಇರಲೇ ಕೂಡದು.

ಯಾವುದೇ ವಾದ್ಯ ಒಲಗ ತಮ್ಮಟೆ ಧ್ವನಿವರ್ಧಕ ಮುಂತಾದ ಪ್ರಚಾರ ಸಾಮಗ್ರಿಗಳನ್ನು ಬಳಸಬಾರದು. ಮಂತ್ರಮಾಂಗಲ್ಯವು ಮದುವೆಯನ್ನು ವಧೂವರರ ಮತ್ತು ಅವರ ಕುಟುಂಬದವರ ಅತ್ಯಂತ ಖಾಸಗಿ ಸಂದರ್ಭವೆಂದು ಪರಿಗಣಿಸುತ್ತದೆ. ಈ ಸಂದರ್ಭವು ಅಲ್ಲಿ ನೆರೆಯುವವರ ಆತ್ಮಾವಲೋಕನದ. ಅಂತಃಸಾಕ್ಷಿಯ ಸಂದರ್ಭ. ಆದ್ದರಿಂದಲೇ ಅದು ಪ್ರಶಾಂತವಾದ ಗಂಭೀರವಾದ ವಾತಾವರಣದಲ್ಲಿ ನಡೆಯಬೇಕು.

ಮಂತ್ರಮಾಂಗಲ್ಯ ವಿವಾಹಕ್ಕೆ ರಾಹುಕಾಲ, ಗುಳಿಕಕಾಲ, ಯಮಗಂಡಕಾಲ, ಯಾರು ಇಲ್ಲ ಇಡೀ ಮನುಷ್ಯನ ಜೀವಿತಕಾಲವೇ ಬದುಕಿನ ಸಾರ್ಥಕ್ಯಕ್ಕಾಗಿ ಒದಗಿರುವ ಸುಮೂಹೂರ್ತವೆಂದು ಪರಿಗಣಿಸುವ ಮಂತ್ರಮಾಂಗಲ್ಯವು ಅದರೊಳಗೂ ಸುಮುಹೂರ್ತ ಹುಡುಕುವುದನ್ನು ತಿರಸ್ಕರಿಸುತ್ತದೆ. ಆದ್ದರಿಂದ ವಧೂವರರಿಗೆ ಸಂಬಂಧಪಟ್ಟ ಗುರುಹಿರಿಯರು ಸೇರಿ ತಮ್ಮೆಲ್ಲರಿಗೂ ಅನುಕೂಲವಾದ ದಿನಾಂಕ ಮತ್ತು ಸಮಯವನ್ನು ಪರಿಗಣಿಸಿ ಕಾಲ ನಿಶ್ಚಯ ಮಾಡಬೇಕುನಿಶ್ಚಯ ಮಾಡಬೇಕು.

ಮಂತ್ರಮಾಂಗಲ್ಯ ಮದುವೆಯಲ್ಲಿ ಈ ಪುಸ್ತಕದಲ್ಲಿ ಸೂಚಿಸಿರುವ ಮಂತ್ರ ಮತ್ತು ಪ್ರತಿಜ್ಞಾವಿಧಿಗಳ ಉಪದೇಶವಿಲ್ಲದೆ ಇನ್ನಾವುದೇ ಶಾಸ್ತ್ರಾಚಾರಗಳನ್ನಾಗಲೀ, ಜೋಯಿಸರಿಂದ ಜಾತಕಾದಿಗಳನ್ನು ನೋಡಿಸುವುದೇ ಆಗಲೀ ನಿಸಿದ್ದ. ಜಾತಿಪದ್ಧತಿ, ಸ್ತ್ರೀ ಅಸಮಾನತೆ, ಅಸ್ಪೃಶ್ಯತೆ, ಮೊದಲಾದ ಅನಿಷ್ಟಗಳಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಕಾರಣವಾಗಿರುವ ಈ ಶಾಸ್ತ್ರಾಚಾರಗಳಿಂದಭಾರತೀಯರನ್ನು ಮುಕ್ತಗೊಳಿಸುವುದೇ ಮಂತ್ರಮಾಂಗಲ್ಯದ ಮೂಲ ಉದ್ದೇಶ. ಇಲ್ಲಿ ಯಾವ ವೃತ್ತಿ ಪುರೋಹಿತನಿಗೂ ಪ್ರವೇಶವಿಲ್ಲ. ಓದು ಬರಹ ಕಲಿತ. ಈಮಂತ್ರಗಳನ್ನು ಓದಿ ಅರ್ಥಮಾಡಿಕೊಳ್ಳಬಲ್ಲ ವಧೂವರರ ತಂದೆ ತಾಯಿಗಳಾಗಲೀ ಗುರುಹಿರಿಯರಾಗಲೀ ಯಾರಾದರೊಬ್ಬರು ಮಂತ್ರಮಾಂಗಲ್ಯದ ಮಂತ್ರಗಳನ್ನೂ, ವಿವಾಹ ಸಂಹಿತೆಯನ್ನೂ ವಧೂವರರಿಗೆ ಬೋಧಿಸಬಹುದು, ಮಂತ್ರಗಳನ್ನು ಮತ್ತು ಪ್ರತಿಜ್ಞೆಗಳನ್ನು ಸ್ಪಷ್ಟವಾಗಿ ಹೇಳಿ ಅದನ್ನು ವಧೂವರರ ಕೈಲೂ ಹೇಳಿಸಬೇಕು. ಅವರು ಮಂತ್ರಗಳನ್ನು ಹೇಳಿದನಂತರ ಅವುಗಳ ಕೆಳಗೆ ಕೊಟ್ಟಿರುವ ಕನ್ನಡದ ಅರ್ಥವನ್ನು ಉಪದೇಶಿಸುವವರು ಎಲ್ಲರಿಗೂ ಕೇಳುವಂತೆ ವಿವರಿಸಬೇಕು. (ಇದನ್ನು ವಧೂವರರು ಪುನರುಚ್ಚರಿಸುವ ಅಗತ್ಯವಿಲ್ಲ) ಇದಾದನಂತರ ವಧೂವರರಿಗೆ ಅವರ ಮುಂದಿನ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಾದ ಪ್ರತಿಜ್ಞಾ ವಿಧಿಗಳನ್ನು ಬೋಧಿಸಬೇಕು. ಹಿರಿಯರು ಬೋಧಿಸಿದನಂತರ ವಧೂವರರು ಅವನ್ನು ಪುನರುಚ್ಚರಿಸಿ ಪ್ರತಿಜ್ಞಾಸ್ವೀಕಾರ ಮಾಡಬೇಕು. ಪ್ರತಿಜ್ಞಾಸ್ವೀಕಾರನಂತರ ವರನು ವಿವಾಹ ವೇದಿಕೆಯ ಮೇಲೆ ಇಟ್ಟಿರುವ ಮಹಾಪುರುಷರ ಫೋಟೋಗಳಿಗೂ ವಧೂವರರ ತಂದೆ–ತಾಯಿಗಳಿಗೂ, ಅಲ್ಲಿ ನೆರೆದಿರುವ ಗುರುಹಿರಿಯರಿಗೂ, ಕೊನೆಯದಾಗಿ ವೇದಿಕೆಯ ಮೇಲೆ ತಟ್ಟೆಯಲ್ಲಿಟ್ಟಿರುವ ಮಾಂಗಲ್ಯಕ್ಕೂ ನಮಸ್ಕರಿಸಿ ವಧುವಿಗೆ ಮಾಂಗಲ್ಯ ಕಟ್ಟಬೇಕು.

**ಮಂತ್ರಮಾಂಗಲ್ಯ ವಿವಾಹಕ್ಕೆಬೇಕಾದ ಏರ್ಪಾಡುಗಳು:**

ಮಂತ್ರಮಾಂಗಲ್ಯ ಪ್ರಕಾರದ ಮದುವೆಗೆ ಒಂದು ಚಿಕ್ಕ ವೇದಿಕೆ ಬೇಕು. ವೇದಿಕೆ ಎಂದರೆ ಮದುವೆ ಮಂಟಪವೇನೂ ಅಲ್ಲ. ಇನ್ನೂರು ಜನರ ಸಮ್ಮುಖದಲ್ಲಿ ನಡೆಯುವ ಸಮಾರಂಭವಾದ್ದರಿಂದ ಅಷ್ಟು ಜನರಿಗೂ ಕಾಣುವಂಥ ಒಂದು ಎತ್ತರದ ಜಾಗ. ಐದಾರು ಬೆಂಚುಗಳನ್ನು ಒಟ್ಟಿಗೆ ಇಟ್ಟು ರಚಿಸುವ ವೇದಿಕೆಯಾದರೂ ಆದೀತು. ಈ ಯಾವ ಅನುಕೂಲಗಳಿಲ್ಲದಿದ್ದರೆ ಊರೊಳಗಿನ ಎತ್ತರದ ಅರಳಿಕಟ್ಟೆಯಾದರೂ ಸರಿ. ಅದರ ಮೇಲೆ ಈ ಪವಿತ್ರ ಸಮಾರಂಭಕ್ಕೆ ಆಧ್ಯಾತ್ಮಿಕ ಸಾಕ್ಷಿಗಳಾಗಿ ನಾಲ್ವರು ಮಹಾಪುರುಷರು ಫೋಟೋಗಳನ್ನು ಇಡಬೇಕು. ಈಗ ಪೌರಾಣಿಕ ಆದರ್ಶ ದಂಪತಿಗಳಾದ ಶ್ರೀರಾಮಚಂದ್ರ ಸೀತದೇವಿಯರ ಮತ್ತು ಆಧುನಿಕ ಆದರ್ಶದಂಪತಿಗಳೆಂದು ಪರಿಗಣಿಸಿರುವ ಶ್ರೀ ರಾಮಕೃಷ್ಣ ಪರಮಹಂಸ ಮತ್ತು ಮಹಾಮಾತೆ ಶಾರದಾದೇವಿಯವರ ಫೋಟೋಗಳನ್ನು ಇಡಲಾಗುತ್ತಿದೆ. ಇದರೊಡನೆ ನೀವು ಇನ್ನಾವುದೇ ದಂಪತಿಗಳನ್ನು ಆದರ್ಶವೆಂದು ಪರಿಗಣಿಸಿದಲ್ಲಿ ಅದನ್ನು ಇಡಬಹುದು. ಅದರ ಮುಂದೆ ಹಣ್ಣು ಹೂಗಳಿರುವ ತಟ್ಟೆಯಲ್ಲಿ ವಧು ಧರಿಸುವ ಮಂತ್ರಮಾಂಗಲ್ಯವನ್ನಿಟ್ಟು ಆ ಮಹಾಪುರುಷರ ಕೃಪಾಶೀರ್ವಾದಕ್ಕಾಗಿ ಅದನ್ನು ಅವರಿಗೆ ಸಮರ್ಪಿಸಿ ಎರಡು ಹಣತೆಗಳನ್ನು ಹಚ್ಚಿ ದೀಪ ಬಳಸಲಾಗುತ್ತದೆ.

ವೇದಿಕೆಯ ಬಲಭಾಗದಲ್ಲಿ ಮೂರು ಕುರ್ಚಿಗಳನ್ನೂ ಎಡಭಾಗದಲ್ಲಿ ಮೂರು ಕುರ್ಚಿಗಳನ್ನು ಇಡಬೇಕು. ಬಲಗಡೆ ಒಂದು ಕುರ್ಚಿಯಲ್ಲಿ ವಧುವೂ ಮಿಕ್ಕೆರಡರಲ್ಲಿ ಆಕೆಯ ತಂದೆತಾಯಿಗಳೂ ಅವರಿಲ್ಲದಿದ್ದರೆ ಅವರಿಗೆ ಪರ್ಯಾಯವಾಗಿ ಇನ್ನೂ ಯಾವ ಹಿರಿಯರಿರುತ್ತಾರೋ ಅವರೂ ಕುಳಿತುಕೊಳ್ಳಬೇಕು. ಇದೇ ಪ್ರಕಾರವಾಗಿ ಎಡಗಡೆ ಕುರ್ಚಿಯಲ್ಲಿ ವರನನ್ನು ವರನ ಕಡೆಯವರನ್ನೂ ಕುಳ್ಳಿರಿಸಬೇಕು. ತದನಂತರ ಮಂತ್ರ ಮತ್ತು ಪ್ರತಿಜ್ಞಾವಿಧಿ ಉಪದೇಶ ಮಾಡುವ ಹಿರಿಯರು ವೇದಿಕೆಯ ಮೇಲೆ ಬಂದು ಮಂತ್ರ ಮಾಂಗಲ್ಯದ ಎರಡು ಪುಸ್ತಕಗಳನ್ನು ವಧೂವರರಿಗೆ ಕೊಡಬೇಕು. ಆರಂಭಿಸುವ ಮೊದಲು ಇಂಥ ಮದುವೆಯ ಉದ್ದೇಶಗಳನ್ನು ಸಮಾರಂಭದಲ್ಲಿ ನೆರೆದಿರುವ ಸಮುದಾಯಕ್ಕೆ ವಿವರಿಸುವುದಾದರೆ ವಿವರಿಸಬಹುದು ಅನಂತರ ಅವರು ವರನಕ್ಕೈಯ್ಯಲ್ಲಿರುವ ಪುಸ್ತಕ ತೆಗೆದುಕೊಂಡು ಮಂತ್ರ ಮತ್ತು ಪ್ರತಿಜ್ಞಾವಿಧಿಗಳ ಉಪದೇಶವನ್ನು ಪ್ರಾರಂಭಿಸಬಹುದು ಅವರು ಉಪದೇಶಿಸುವ ಸಮಯದಲ್ಲಿ ವಧೂವರರಿಬ್ಬರೂ ಎದ್ದು ಒಟ್ಟಿಗೆ ನಿಂತು ಒಂದೇ ಪುಸ್ತಕವನ್ನು ಇಬ್ಬರು ನೋಡಿಕೊಳ್ಳುತ್ತಾ ಅವರು ಹೇಳಿಕೊಟ್ಟಿದ್ದನ್ನು ಅಲ್ಲಿ ಗುರುಹಿರಿಯರಿಗೂ ಬಂಧು ಬಾಂಧವರಿಗೂ ಸ್ಪಷ್ಟವಾಗಿ ಕೇಳುವಂತೆ ಪುನರುಚ್ಚರಿಸಿಬೇಕು ಮಂತ್ರ ಮತ್ತು ಪ್ರತಿಜ್ಞಾವಿಧಿ ಪೂರ್ಣವಾದ ನಂತರ ವರನು ವಧುವೂ ಮೊದಲೇ ವಿವರಿಸಿದಂತೆ ಎಲ್ಲರಿಗೂ ನಮಸ್ಕರಿಸಿ ಮಾಂಗಲ್ಯಧಾರಣೆ ಮಾಡಬಹುದು.

ಆ ಯುವಕ ಯುವತಿಯರು ಈ ಪ್ರಕಾರ ಅಲ್ಲಿ ನೆರೆದಿರುವ ಗುರುಹಿರಿಯರ ಸಮ್ಮುಖದಲ್ಲಿ ದಂಪತಿಗಳಾದನಂತರ ಈ ಪುಸ್ತಕದ ಕೊನೆಯಲ್ಲಿ ಪ್ರತಿಜ್ಞಾವಿಧಿಗಳನಂತರ ಕೊಟ್ಟಿರುವ ಕಾಲಮ್ಮುಗಳಲ್ಲಿ ರುಜು ಮಾಡಬೇಕು. ಆಮೇಲೆ ವಧೂವರರ ತಂದೆತಾಯಿಗಳು ಅಥವಾ ಅದಕ್ಕೆ ಪರ್ಯಾಯವಾಗಿ ಉಪಸ್ಥಿತರಿರುವ ಹಿರಿಯರು ಅವರಿಗೆಂದಿರುವ ಕಾಲಮ್ಮುಗಳಲ್ಲಿ ರುಜು ಮಾಡಬೇಕು. ಸಾಕ್ಷಿಗಳಾಗಿ ಅಲ್ಲಿ ನೆರೆದಿರುವ ವಧೂವರರ ಗುರುಹಿರಿಯರು ಶ್ರೇಯಾಕಾಂಕ್ಷಿಗಳೂ ಅವರಿಗೆಂದಿರುವ ಕಾಲಮ್ಮುಗಳಲ್ಲಿ ಸಹಿ ಮಾಡಬೇಕು. ಈ ಪ್ರಕಾರವಾಗಿ ಅಷ್ಟು ಜನರೂ ರುಜು ಮಾಡಿರುವ ಎರಡು ಮಂತ್ರಮಾಂಗಲ್ಯ ಪುಸ್ತಕಗಳಲ್ಲಿ ಒಂದನ್ನು ವಧುವಿಗೂ ಒಂದನ್ನು ವರನಿಗೂ ಕೊಡತಕ್ಕದ್ದು ವಧೂವರರಿಬ್ಬರೂ ಈ ಎರಡು ಪವಿತ್ರ ದಾಖಲೆಗಳನ್ನು ತಮ್ಮೊಡನೆ ಅಜೀವಪರ್ಯಂತ ಜೋಪಾನವಾಗಿ ಇಟ್ಟುಕೊಳ್ಳತಕ್ಕದ್ದು.

ಮಂತ್ರಮಾಂಗಲ್ಯವು ಭಾರತರಾಜ್ಯಾಂಗದ ಕಾನೂನುಗಳಿಗೆ ಸಂಪೂರ್ಣ ಬದ್ಧವಾದುದು ಮತ್ತು ಸಂವಿಧಾನ ದತ್ತವಾದ ವ್ಯಕ್ತಿಸ್ವಾತಂತ್ರ್ಯಕ್ಕೆ ಅನುಗುಣವಾದುದು. ಯಾರು ಯಾರನ್ನು ಯಾವುದೇ ವಿಧಾನದಲ್ಲಿ ಮದುವೆಯಾಗುವುದಾದರೆ ವಧೂವರರಿಬ್ಬರೂ ಪ್ರಾಪ್ತವಯಸ್ಕರಾಗಿರಬೇಕು. ಅಪ್ರಾಪ್ತ ವಯಸ್ಕರ ಮದುವೆ ಕೂಡದು.

ಅಲ್ಲದೆ ಯಾರು ಯಾವುದೇ ವಿಧಾನದಲ್ಲಿ ಮದುವೆಯಾದರೂ ಅದನ್ನು ರಿಜಿಸ್ಟರ್ ಮಾಡಿಸಬೇಕಾದುದು ಕಡ್ಡಾಯ ಮಾಡಬೇಕೆನ್ನುವುದು ನಮ್ಮ ಧೋರಣೆ. ಇದಕ್ಕೆ ಮಂತ್ರಮಾಂಗಲ್ಯವೂ ಹೊರತಾದುದಲ್ಲ. ನಮ್ಮ ಸಾಮಾಜಿಕ ಸನ್ನಿವೇಶದಲ್ಲಿ ಸ್ತ್ರೀಯರು ಅನೇಕವಿಧವಾದ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಬೇಕಾದುದರಿಂದ. ಮಂತ್ರಮಾಂಗಲ್ಯವು ಸಂಪೂರ್ಣ ಸ್ತ್ರೀ ಸಮಾನತೆಯನ್ನು ಬೋಧಿಸಿದರೂ ಅದು ಭಾರತೀಯ ಸಮಾಜದಲ್ಲಿ ಸಂಪೂರ್ಣ ಆಚರಣೆಗೆ ಬರುವವರೆಗೂ ವಧೂವರರು ತಮ್ಮ ವಿವಾಹವನ್ನು ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ನೊಂದಾಯಿಸುವುದು ಕಡ್ಡಾಯ. ವಧೂವರರು ತಮ್ಮ ವಿವಾಹ ಸಂದರ್ಭದ ಸಂತೋಷದಲ್ಲಿ ಈ ಕರ್ತವ್ಯವನ್ನು ಮರೆಯಬಾರದು. ಅದಕ್ಕಾಗಿಯೇ ತಮಗೆ ಕೊಡುವ ಗುರುಹಿರಿಯರ ಸಹಿ ಇರುವ ಮಂತ್ರಮಾಂಗಲ್ಯ ದಾಖಲೆಯನ್ನು ಜೋಪಾನವಾಗಿ ಇಟ್ಟುಕೊಳ್ಳತಕ್ಕದ್ದು.

## ವಿವಾಹ ಸಂಹಿತೆ

ಶೀಯುತ.............................................................................................................ಎಂಬ ವರನೇ

ಶೀಮತಿ.............................................................................................................ಎಂಬ ವಧುವೇ

ನಿಮ್ಮಿಬ್ಬರ ವಿವಾಹದ ಈ ಸಂದರ್ಭದಲ್ಲಿ ಈ ಕೆಲವು

ಮೂಲಭೂತ ಸ್ವಾತಂತ್ರ್ಯದ ಸಂದೇಶಗಳನ್ನು ತಿಳಿಸಿದ್ದೇವೆ.

ದಯವಿಟ್ಟು ನೀವಿಬ್ಬರೂ ಗಮನವಿಟ್ಟು ಕೇಳಿಕೊಳ್ಳಿರಿ.

1. ಈ ದಿನ ಇಲ್ಲಿ ಈ ರೀತಿ ಮದುವೆಯಾಗುವುದರ ಮೂಲಕ ನೀವು ನಿಮ್ಮ ಎಲ್ಲ ಮಾನಸಿಕ ಮತ್ತು ಆಧ್ಯಾತ್ಮಿಕ ಸಂಕೋಲೆ ಮತ್ತು ದಾಸ್ಯಗಳಿಂದ ವಿಮುಕ್ತರಾಗಿ. ಸ್ವತಂತ್ರರಾಗುತ್ತಿದ್ದೀರಿ.
2. ನೀವು ಇನ್ನು ಈ ಭೂಮಂಡಲದ ಯಾವುದೇ ಜಾತಿ ಮತ್ತು ಜನಾಂಗಗಳಿಗಿಂದ ಮೇಲಾದವರಲ್ಲ.
3. ಹಾಗೇಯೇ ಯಾವುದೇ ಜಾತಿ ಮತ್ತು ಜನಾಂಗಗಳಿಗಿಂತ ಕೀಳಾದವರೂ ಅಲ್ಲ.
4. ನಿಮ್ಮನ್ನು ಇಂದು ಮನುಷ್ಯ ಸಮಾಜದ ಎಲ್ಲ ಕೃತಕ ಜಾತಿಗಳಿಂದ ಮುಕ್ತರನ್ನಾಗಿ ಮಾಡಿದ್ದೇವೆ.
5. ನಿಮ್ಮನ್ನು ಇಂದು ಎಲ್ಲಾ ಸಂಕುಚಿತ ಮತಧರ್ಮಗಳಿಂದ ಮುಕ್ತರನ್ನಾಗಿ ಮಾಡಿದ್ದೇವೆ.
6. ನಿಮ್ಮನ್ನು ಎಲ್ಲ ಆಚಾರ ಸಂಪ್ರದಾಯಗಳಿಂದ ಮುಕ್ತರನ್ನಾಗಿ ಮಾಡಿದ್ದೇವೆ.
7. ನಿಮ್ಮನ್ನು ಎಲ್ಲಾ ಅಸತ್ಯ ಮತ್ತು ಮೂಢನಂಬಿಕೆಗಳಿಂದ ಮುಕ್ತರನ್ನಾಗಿ ಮಾಡಿದ್ದೇವೆ.
8. ಮನುಷ್ಯನ ಜೀವಿ ಕಾಲವೇ ಒಂದು ಸುಮುಹೂರ್ತ. ಇದರೊಳಗೆ ನೀನು ಬೇರೆ ಸುಮುಹೂರ್ತಗಳನ್ನೂ ಗುಳೀಕಕಾಲಗಳನ್ನೂ ನೋಡುವ ಅಗತ್ಯವಿಲ್ಲ ಕಾಲವು ನಿರ್ಗುಣ.
9. ಎಂದೂ ಸಂಪಾದಿಸಲು. ಸೃಷ್ಟಿಸಲು. ಕೂಡಿಡಲು ಸಾಧ್ಯವೇ ಇಲ್ಲದ. ಮನುಷ್ಯನ ಜೀವಿತಕಾಲದ ಪ್ರತಿ ಕ್ಷಣವೂ ಅತ್ಯಮೂಲ್ಯ. ಯಾರು ಈ ಸತ್ಯವನ್ನು ಅರಯುತ್ತಾರೋ ಅವರು ತಮ್ಮ ಕರ್ತವ್ಯ ಮತ್ತು ನವಳಿಕೆಗಳಿಂದ ಕಾಲವನ್ನು ಒಳ್ಳೆಯ ಅಥವಾ ಕೆಟ್ಟ ಕಾಲವನ್ನಾಗಿ ಪರಿವರ್ತಿಸಬಲ್ಲರು.
10. ನೀವು ಯಾವುದೇ ಮನೆದೇವರು ಅಥವಾ ಕುಲದೇವರುಗಳ ಅಡಿಯಾಳಾಗಿ ಬದುಕಬೇಕಾಗಿಲ್ಲ. ಮನುಷ್ಯ ಸಮಾಜದ ಮಾನವೀಯ ಮೌಲ್ಯಗಳೇ ಮನುಷ್ಯನ ಮೊದಲನೆಯ ಹಾಗೂ ಕೊನೆಯ ದೇವರು.
11. ಮಾನವರೆಲ್ಲರೂ ಸಮಾನರು. ಪುರುಷನು ಸ್ತ್ರೀಗಿಂತ ಮೇಲು ಎಂದು ಹೇಳುವ ಎಲ್ಲ ಧರ್ಮಗಳನ್ನೂ. ಎಲ್ಲ ಸಂಪ್ರದಾಯಗಳನ್ನೂ ನೀವು ಇಂದು ತಿರಸ್ಕರಿಸಿದ್ದೀರಿ.
12. ಹೆಂಡತಿಯಾಗಲೀ. ಗಂಡನಾಗಲೀ ಪರಸ್ಪರ ಅಧೀನರೂ ಅಲ್ಲ; ಆಜ್ಞಾನುವರ್ತಿಯೂ ಅಲ್ಲ. ಹೆಂಡತಿಯೂ ಗಂಡನಷ್ಟೇ ಸ್ವತಂತ್ರಳೂ ಸಮಾನತೆಯುಳ್ಳವಳೂ ಆಗಿರುತ್ತಾಳೆ.
13. ಗಂಡ–ಹೆಂಡಿರನ್ನು ಒಟ್ಟಿಗೇ ಬದುಕುವಂತೆ ಮಾಡುವ ಸಾಧನ ಪ್ರೀತಿಯೊಂದೇ. ಒಬ್ಬರನ್ನೊಬ್ಬರು ಪ್ರೀತಿಸದವರು ತಾಳಿ ಕಟ್ಟಿಕೊಂಡರೂ ವ್ಯರ್ಥ. ಅಗ್ನಿಯನ್ನು ಸುತ್ತಿದರೂ ವ್ಯರ್ಥ. ಯಾವ ಯಾಔ ಶಾಸ್ತ್ರಾಚಾರದ ಪ್ರಕಾರ ಮದುವೆಯಾದರೂ ವ್ಯರ್ಥ.

14. ದೇವರ ಬಗ್ಗೆ ಎಂದೂ ಸುಳ್ಳು ಹೇಳಕೂಡದು. ನಿಮ್ಮ ಅನುಭವ. ನಿಮಗೆ ದೇವರು ಇಲ್ಲವೆಂದು ತಿಳಿಸಿದರೆ ದೇವರು ಇಲ್ಲವೆಂದು ಹೇಳಿ.
15. ನಿಮ್ಮ ಅನುಭವ. ನಿಮಗೆ ದೇವರು ಇದ್ದಾನೆಂದು ತಿಳಿಸಿದರೆ ದೇವರು ಇದ್ದಾನೆಂದು ಹೇಳಿ.
16. ನಿಮ್ಮ ಅನುಭವ. ದೇವರು ಇದ್ದಾನೆಯೋ ಇಲ್ಲವೋ ತಿಳಿಯದೆಂದು ತಿಳಿಸಿದರೆ. ದೇವರು ಇದ್ದಾನೆಯೋ ಇಲ್ಲವೋ ತಿಳಿಯದೆಂದು ತಿಳಿಸಿದರೆ. ದೇವರು ಇದ್ದಾನೆಯೋ ಇಲ್ಲವೋ ತಿಳಿಯದೆಂದು ಹೇಳಿ.
17. ನಮ್ಮ ಅನುಭವವನ್ನು ಸುಳ್ಳು ಹೇಳದೆ ಒಪ್ಪಿಕೊಳ್ಳುವುದು. ನಿರ್ಭೀತಿಯಿಂದ ವಾಸ್ತವ ಸ್ಥಿತಿಯನ್ನು ನೋಡುವುದು. ಸತ್ಯಾನ್ವೇಷಣೆಯ ಮೊದಲನೆಯ ಹಂತ. ಜ್ಞಾನ ಯೋಗದ ಮೊದಲ ಪಾಠ.
18. ಪರವಂಚನೆ ಮತ್ತು ಆತ್ಮವಂಚನೆ ಮಾಡಿಕೊಳ್ಳುವವನಿಗೆ ತಮಸ್ಸಿನಿಂದಲೂ. ಅಜ್ಞಾನದಿಂದಲೂ ವಿಮುಕ್ತಿಯೇ ಇಲ್ಲ.
19. ದೇವರ ಹೆಸರಿನಲ್ಲಿ ಸುಳ್ಳು ಹೇಳುವ ಮಠಾಧಿಪತಿಗಳನ್ನು ಆಚಾರ್ಯರನ್ನೂ ಜಗದ್ಗುರುಗಳನ್ನೂ ತಿರಸ್ಕರಿಸಿರಿ.
20. ದೇವರ ಹೆಸರಿನಲ್ಲಿ ಧನಾರ್ಜನೆ ಮಾಡುವ ತೀರ್ಥಕ್ಷೇತ್ರಗಳನ್ನೂ ದೇವಸ್ಥಾನಗಳನ್ನೂ ತಿರಸ್ಕರಿಸಿ. ದೇವರ ಹೆಸರಿನಲ್ಲಿ ದರೋಡೆ ಮಾಡುವ ಯಾತ್ರಾಸ್ಥಳಗಳನ್ನು ತಿರಸ್ಕರಿಸಿರಿ.

ವರದಕ್ಷಿಣೆ ಅಥವಾ ವಧುದಕ್ಷಿಣೆ ವ್ಯವಹಾರಗಳಿಗೆ ಒಳಗಾಗದೆ. ನೀವು ನಿಮ್ಮ ಸ್ವಂತ ಪ್ರಯತ್ನದಿಂದ ನಿಮ್ಮ ತಂದೆ ತಾಯಿಗಳಿಗೆ ಯಾವ ರೀತಿಯ ಆರ್ಥಿಕ ಹೊರೆಯಾಗದಂತೆ ವಿವಾಹ ಮಾಡಿಕೊಳ್ಳುತ್ತಿದ್ದೀರಿ.

ಎಲ್ಲ ಮತಧರ್ಮ, ಕಂದಾಚಾರ. ಅಜ್ಞಾನಗಳಿಂದ ವಿಮುಕ್ತರಾಗಿರುವ ವಧೂವರರೇ. ಮಾನವ ಕೋಟಿಯನ್ನು ನಿಮ್ಮಂತೆಯೇ ವಿಮುಕ್ತರನ್ನಾಗಿ ಮಾಡುವ ಪವಿತ್ರ ಕರ್ತವ್ಯವನ್ನು ನೀವೂ ಮಾಡಿರಿ. ಇನ್ನು ನೀವು ಯಾವುದೇ ಧರ್ಮಕ್ಕೂ ಸೇರುವ ಅಗತ್ಯವಿಲ್ಲ. ಯಾವುದೇ ಮತಕ್ಕೂ ಸೇರುವ ಅಗತ್ಯವಿಲ್ಲ ಯಾವುದೇ ಶಾಸ್ತ್ರಾಚಾರವನ್ನೂ ಅನುಸರಿಸಬೇಕಾದ ಅಗತ್ಯವಿಲ್ಲ ಮೇಲೆ ಬೋಧಿಸಿರುವ ಪ್ರತಿಜ್ಞಾವಿಧಿಗಳೇ ನಿಮ್ಮ ಜೀವನದ ದಾರಿದೀಪವಾಗಲಿ. ಮೌಢ್ಯ. ಅಜ್ಞಾನ. ಅಂಧಕಾರಗಳ ವಿರುದ್ಧ ಭಾರತೀಯರಾದ ನಾವೆಲ್ಲ ಹೂಡಿರುವ ಈ ಮಹಾ ಹೋರಾಟದಲ್ಲಿ ನೀವೂ ಭಾಗಿಗಳಾಗಬೇಕೆಂದು ನಾವು ವಿನಂತಿಸಿಕೊಳ್ಳುತ್ತೇವೆ. ನೀವು ಇಲ್ಲಿ ಈ ದಿನದಿಂದ ದಂಪತಿಗಳೆಂದು ನಾವು ಘೋಷಿಸುತ್ತೇವೆ.

ವರನ ಸಹಿ — ವಧುವಿನ ಸಹಿ

ಸಾಕ್ಷಿಗಳು:

ವರನ ತಂದೆ–ತಾಯಿ

ವಧುವಿನ ತಂದೆ–ತಾಯಿ

ಬಂಧು. ಬಳಗ. ಸ್ನೇಹಿತರು:

ಶ್ರೀ

"ಚಿತ್ರಕೂಟ" — ದಿನಾಂಕ: 27/11/1966

ಗೋಣಿಬೀಡು ಅಂಚೆ,

ಚಿಕ್ಕಮಗಳೂರು ಜಿಲ್ಲೆ.

ಶ್ರೀಯುತ/ಶ್ರೀಮತಿ

ಶ್ರೀಯುತ/ಶ್ರೀಮತಿ

ತಾವೆಲ್ಲರೂ ಕ್ಷೇಮ ಎಂದು ಹಾರೈಸುತ್ತೇವೆ. ಈ ಕಾಗದ ಬರೆಯುತ್ತಿರುವ ವಶೇಷ ಕಾರಣ ಏನೆಂದರೆ: ನಮ್ಮ ಜ್ಯೇಷ್ಠಪುತ್ರ ಚಿರಂಜೀವಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಎಂ.ಎ., ಮತ್ತು ದಿವಂಗತ ಶ್ರೀ ರಂಗಪ್ಪನವರ ಪುತ್ರಿ

ಕುಮಾರಿ ಆರ್. ರಾಜೇಶ್ವರಿ ಎಂ. ಎ ಇವರಿಗೆ ದಿನಾಂಕ 27-11-1966 ರಂದು "ಚಿತ್ರಕೂಟ"ದಲ್ಲಿ ಮದುವೆ ನಡೆಯುತ್ತದೆ. ನಮ್ಮ ಹಿತೈಷಿಗಳಾದ ತಾವು ತಮಗೆ ಅನುಕೂಲ ವಿರಾಮ ದೊರೆತಾಗ "ಚಿತ್ರಕೂಟ"ಕ್ಕೆ ಆಗಮಿಸಿ, ವಧೂವರರ ಆತಿಥ್ಯ ಸ್ವೀಕರಿಸಿ, ಅವರನ್ನು ಆಶೀರ್ವದಿಸಿ, ಅವರ ಶ್ರೇಯೋಭಿವೃದ್ಧಿ ಕೋರಬೇಕೆಂದು ವಿಜ್ಞಾಪಿಸಿಕೊಳ್ಳುತ್ತೇವೆ.

ಇಂತಿ

ಕುವೆಂಪು ದಂಪತಿ

ಶ್ರೀ ಕುವೆಂಪು ಅವರು ತಮ್ಮ ಪುತ್ರ ಶ್ರೀ ಪೂರ್ಣಚಂದ್ರ ತೇಜಸ್ವಿ ಅವರ ವಿವಾಹ ಸಂದರ್ಭದಲ್ಲಿ ಸ್ವಹಸ್ತಾಕ್ಷರದಲ್ಲಿ ಬರೆದ ಮದುವೆ ಪತ್ರವನ್ನು ಮಂತ್ರಮಾಂಗಲ್ಯ ವಿಧಾನದಲ್ಲಿ ಮದುವೆಯಾಗ ಬಯಸುವವರಿಗೆ ಮಾದರಿಗೆಂದು ಇಲ್ಲಿ ಕೊಟ್ಟಿದ್ದೇವೆ. ಇದು ಮದುವೆ ನಡೆಯುವುದನ್ನು ಎಲ್ಲರಿಗೂ ತಿಳಿಸುವ ಪತ್ರವೇ ಹೊರತು ಮದುವೆಗೆ ಆಮಂತ್ರಣ ಪತ್ರ ಅಲ್ಲ. ತಮ್ಮ ಹಿತೈಷಿಗಳಿಗೂ ಗುರುಹಿರಿಯರಿಗೂ ಅವರು ಅನುಕೂಲವಿರಾಮ ದೊರೆತಾಗ ಬಂದು ವಧೂವರರ ಆತಿಥ್ಯ ಸ್ವೀಕರಿಸಿ ಅವರನ್ನು ಆಶೀರ್ವದಿಸಿ ಎಂದು ಹೇಳಿದ್ದಾರೆಯೇ ಹೊರತು ಎಲ್ಲರಿಗೂ ಮದುವೆಗೆ ಬನ್ನಿ ಎಂದು ಆಮಂತ್ರಿಸಿಲ್ಲ ಎಂಬುನ್ನು ಗಮನಿಸಿ ತಾವೂ ಸಹ ಇದೇ ವಿಧಾನವನ್ನನುಸರಿಸಿ ಮದುವೆ ಸಂದರ್ಭದಲ್ಲಿ ಅನವಶ್ಯಕ ಜನಜಂಗಳಿಯನ್ನು ನಿವಾರಿಸಬಹುದು ಮತ್ತು ಬಹುಪಾಲು ಸ್ನೇಹಿತರನ್ನು ಅವರ ಮತ್ತು ನಿಮ್ಮ ಅನುಕೂಲ ವಿರಾಮವನ್ನವಲಂಬಿಸಿ ನಿಧಾನವಾಗಿ ಕರೆದು ಸತ್ಕರಿಸಬಹುದು.

## ಕೆಲವು ಸೂಚನೆ ಹಾಗೂ ಮನವಿಗಳು

(ಈ ಕೆಳಕಂಡ ಕೆಲವು ಸೂಚನೆಗಳು ಯಾವುವೂ ಕಡ್ಡಾಯ ನಿಬಂಧನೆಗಳಲ್ಲ. ಮಂತ್ರ ಮಾಂಗಲ್ಯದ ಪ್ರಕಾರ ಮದುವೆಯಾದ ನಿಮ್ಮ ವೈಯಕ್ತಿಕ ಬದುಕಿನ ಸುಧಾರಣೆಯೊಂದಿಗೆ ಭಾರತದ ಸಾಮಾಜಿಕ ಸ್ಥಿತಿಗಳಿಗಳೂ ಬದಲಾಗಲೆಂಬ ಸದಾಶಯದಿಂದ ಈ ಕೆಳಗಿನ ಸೂಚನೆಗಳನ್ನು ಪಾಲಿಸಲು ಪ್ರಯತ್ನಿಸಿ.)

ಸಾಂಪ್ರದಾಯಕ ಆಡಂಬರದ ವಿವಾಹಗಳನ್ನೂ. ವರದದಕ್ಷಿಣೆಯ ದಳ್ಳಾಳಿ ವಿವಾಹಗಳನ್ನೂ ಪ್ರೋತ್ಸಾಹಿಸದಿರಲು ಪ್ರಯತ್ನಿಸಿ. ಪ್ರತಿಭಟಿಸಿ ಹೋರಾಡಲು ಸಾಧ್ಯವಾಗದಿದ್ದರೂ ಕೊನೆಯಪಕ್ಷ ಅದರಲ್ಲಿ ಭಾಗಿಗಳಾಗದೆ ಉಳಯಲು ಪ್ರಯತ್ನಿಸಿ. ಮಂತ್ರಮಾಂಗಲ್ಯದ ಕರ್ತೃಗಳಾದ ಶ್ರೀಕುವೆಂಪು ಇಂಥ ವಿವಾಹಗಳಲ್ಲಿ ಎಂದೂ ಭಾಗಿಗಳಾಗಲಿಲ್ಲ.

ಮದುವೆ ಸಮಾರಂಭಗಳಲ್ಲಿ ಕೊಡುವ ಫಲತಾಂಬೂಲಗಳಿಗೆ ಬದಲು ಅನುಕೂಲವಿದ್ದವರು ಅತಿಥಿಗಳಿಗೆ ಒಂದೊಂದು ಮಂತ್ರಮಾಂಗಲ್ಯ ಪುಸ್ತಕವನ್ನು ಕೊಡಿರಿ. ಈ ಪುಸ್ತಕದಲ್ಲಿನ ಶ್ರೀಕುವೆಂಪು ಅವರ ಧ್ಯೇಯಾದರ್ಶಗಳು ಮತ್ತು ಆಲೋಚನೆಗಳು ನಿದಾನವಾಗಿಯಾದರೂ ಅವರ ಮತ್ತು ಅದನ್ನು ಓದುವ ಇತರರ ಮನಸ್ಸನ್ನು ಪರಿವರ್ತಿಸಿ ಊರ್ಧ್ವಗಾಮಿಯಾಗದಂತೆ ಮಾಡುತ್ತವೆ. ಯುವಕರಲ್ಲಿ ನಿಮ್ಮಂತೆಯೇ ಇಂದು ಸದ್ದಿಲ್ಲದೆ ಸಂಭವಿಸುತ್ತಿರುವ ವಿಚಾರಕ್ರಾಂತಿಗೆ ಇದು ಸಹಾಯ ಮಾಡುತ್ತದೆ.

ಈ ಕ್ರಮದಲ್ಲಿ ಸಂಪ್ರದಾಯಾಗಳನ್ನು ತಿರಸ್ಕರಿಸಿ ಮದುವಯಾದ ವಧೂವರರನ್ನು ಜಾತ್ಯಾತೀತರೆಂದು ಪರಿಗಣಿಸಿ ಅವರಿಗೂ ಸರ್ಕಾರೀ ಸೌಲಭ್ಯಗಲ್ಲಿ, ನೌಕರಿಯಲ್ಲಿ ಮೀಸಲಾತಿ ಸೌಲಭ್ಯ ಒದಗಿಸಲು ಮತ್ತು ಅವರ ಮಕ್ಕಳಿಗೆ ಒಂದು ತಲೆಮಾರಿಗೆ ಮಾತ್ರ ವಿದ್ಯಾಭ್ಯಾಸದಲ್ಲಿ ಮೀಸಲಾತಿ ಒಗಿಸಲೂ ಪ್ರಯತ್ನಿಸುತ್ತಿದ್ದೇವೆ. ಜಾತೀಯತೆ ಉಲ್ಬಣಗೊಳ್ಳುತ್ತಿರುವ ಭಾರತೀಯ ಸಾಮಾಜಿಕ ಸಂದರ್ಭದಲ್ಲಿ ಜಾತ್ಯಾತೀತ ಧೋರಣೆಯವರ ಸಂಘಟಿತ ಪ್ರಯತ್ನ ಅನಿವಾರ್ಯವಾಗಿದೆ.

ಮಂತ್ರಮಾಂಗಲ್ಯದ ಪ್ರಕಾರ ಮದುವೆಯಾದವರು ಇದರ ಮೂಲ ಆಶಯಕ್ಕೆ ಭಂಗ ಬರದಂತೆ ಅದರ ವಿಧಿ ವಿಧಾನಗಳಲ್ಲಿ ಅಲ್ಪಸ್ವಲ್ಪ ಮಾರ್ಪಾಡುಗಳನ್ನು ಮಾಡಬಹುದು. ಶ್ರೀಕುವೆಂಪು ಅವರೇ ಕಾಲಾನುಕ್ರಮದಲ್ಲಿ ಕೊಂಚಕೊಂಚ ಮಾರ್ಪಾಡು ಮಾಡಿರುವುದರಿಮದ ತಮಗೆ ಉಚಿತವೆನ್ನಿಸಿದ ಬದಲಾವಣೆಗಳನ್ನು ನಮಗೆ ತಿಳಿಸಿದರೆ ಅದನ್ನು ಪರಿಗಣೀಸಲಾಗುತ್ತದೆ.

**ಆಕರ : ಮಂತ್ರಮಾಂಗಲ್ಯ – ಕುವೆಂಪು**

## ೩.೪ ಕಾವ್ಯದೇವಿಯು ನಿಂತು ಹೇಳಿ ಮಾಡಿಸಿದ ಕವಿಜೋಡಿ... (ಓದು ಪಠ್ಯ)

**ನಟರಾಜ್ ಹುಳಿಯಾರ್**

ಕೊನೆಗೂ ಕವಿಜೊಡಿಯ
ರಮ್ಯ ಮರುಭೇಟಿಗೆ ಕಾಲ ಕೂಡಿ ಬಂತು
ಕಣ್ಣು ಕಣ್ಣು ಅದೂ ಇದೂ
ಮಾತಾಡಿಕೊಂಡವು.

ಲಂಡನ್ನಿನ ಅವನ ಪುಟ್ಟ ಮನೆಯಲ್ಲಿ
ಆ ರಾತ್ರಿಯಿಡೀ ಅವರ
ಕಾವ್ಯ ರಾತ್ರಿ ಕಳೆಗಟ್ಟಿ
ಪ್ರಥಮ ಕಾಮ ರಾತ್ರಿ ಕೆನೆಗಟ್ಟಿತು.

ಇದಾದ ಮಾರನೆಗೆ ಪ್ಯಾರಿಸ್ಸಿಗೆ ಹಾರಿದ ಸಿಲ್ವಿಯಾ
ಹಳೆಯ ಗೆಳೆಯರಿಬ್ಬರ ಬೆಂಬತ್ತಿ ಊರೂರು ಸುತ್ತಿದಳು...
ಹಳೆಯ ಗೆಳೆಯ ಸಿಕ್ಕಾಗ ಮೊಗೆಮೊಗೆದು ಕುಡಿದಳು;

ಮಾರನೆಯ ದಿನ ಇನ್ನೊಬ್ಬ ಹಳೆಯ ಗೆಳೆಯ
ಆ ಊರಲ್ಲೆಲ್ಲೂ ಕಾಣದೆ ಕಣ್ಣೀರು ಸುರಿಸುತ್ತಿದ್ದಳು;

ಅವತ್ತು ಅವಳು ಬರುವ ಹಾದಿಯಲ್ಲಿ ಏನಾಯಿತೆಂದರೆ...
ಎದುರಿಗೆ ಸಿಕ್ಕ ಪಡ್ಡೆ ಕಲಾವಿದನೊಬ್ಬನ ಜೊತೆಗೆ
ಸಣ್ಣಮಟ್ಟ ಚೆನ್ನಾಟ ಆಡುತ್ತ ಆಡುತ್ತ ಮತ್ತೆ ಮುದಗೊಂಡಳು;
ಕಣ್ಣೀರೊರೆಸಿಕೊಂಡು ಥಟ್ಟಂತ ಗೆಲುವಾದಳು!

ಈ ರಮ್ಯಸಾಹಸಗಳ ನಡುವೆ ಕವಿ ಟೆಡ್ಡಿಯ ಗುಂಗು
ಹಗಲೂ ಇರುಳೂ ಬಿಡದೆ ಗುಂಯ್‌ಗುಡುತ್ತಿತ್ತು;
'ಅವನು ಜಗಜಟ್ಟಿ; ದೇವರ ಸಿಡಿಲಿನಂತೆ ಅವನ ದನಿ!
ಈ ಲೋಕದಲ್ಲಿ ನನಗೆ ಅವನೊಬ್ಬನೇ ಸರಿಸಾಟಿ...'
ಎಂದು ಮೈದುಂಬಿ ಬಣ್ಣಿಸಿದಳು.

ಈ ಸಲ ಸಂಜೆ ಅವನು ಸಿಕ್ಕಾಗ
ಸರಕ್ಕನೆ ಮನೆಯ ಕದ ಮುಚ್ಚಿ ಕವಯಿತ್ರಿ
ಮದವೇರಿ ಬೆತ್ತಲಾಗಿ ನಿಂದಳು
ಆ ನಗ್ನ ಮೈಸಿರಿಗೆ ಕವಿ ದಂಗಾಗಿ ಐಕ್ಯವಾದ!

ಆ ರಮ್ಯ ಚಣದಲ್ಲಿ ಆ ಹುಚ್ಚು ಕವಯಿತ್ರಿ
ಮಧುರ ಹಾಡಿನ ಬದಲು
ತನ್ನ ಹದಿಹರೆಯದ ವಿಚಿತ್ರ ಆತ್ಮಹತ್ಯೆಯ ಕರೆಯನ್ನು
ಇನಿಯನಿಗೆ ಉಸುರಿದಳು!

ಅವಳು ಬೆರಳಿಟ್ಟು ತೋರಿದ್ದ
ಅವಳ ಕಣ್ಣ ಕುಳಿ ಕೆಳಗೆ ಮೃತ್ಯುಕಲೆ ಕಂಡ ಗಳಿಗೆ
ಇವಳಿಂದ ದೂರ ಸರಿಯೆಂದು
ಕವಿಯ ಒಳದನಿ ಎಚ್ಚರಿಸಿದಂತಾಯ್ತು.

ಮೃತ್ಯುವಾಸನೆಗೆ ಮೂ ಮುದುಡಿ ಹಿಂಜರಿದ ಕವಿಯನ್ನು
ಸುಂದರಿಯ ಮೈ ಕಾವು ಮೈ ಸೆಳೆದು
ಬಳಿ ಕರೆದು ಬರಸೆಳೆದು ಎರಗಿಸಿತ್ತು;
ಅವನೊಳಗು ಅವಳೊಳಗೆ ಲೀನವಾಗಿತ್ತು.

ಕವಿಯ ಬಡ ಗೂಡಲ್ಲಿ ಈ ಹಕ್ಕಿಜೋಡಿಯ ಆಟ;
ಕವಿತೆ ಓದುತ್ತ ಕವಿಯನ್ನು ಪ್ರೇಮಿಸುತ್ತ
ಅವಳು ಅವನಲ್ಲಿ ತನ್ನನ್ನು ಕಾಣುವಳು
ಅವನು ಅವಳಲ್ಲಿ ಆದಿಮದ ಹೆಣ್ಣನ್ನು ಹುಡುಕುವನು.

'ಅವನು ಅದ್ಭುತ ಕವಿಯು
ಅವನು ಹಾಡು ಹಾಡೋ ಧೀರನು,
ಲೋಕ ಸುತ್ತುವ ಅಲೆಮಾರಿಯು
ಎಲ್ಲೂ ನಿಲ್ಲದ ಅಪಾಪೋಲಿಯು...

ಎಲ್ಲ ಬಲ್ಲನು ಅವನು
ಎಲ್ಲ ಗೆಲ್ಲಬಲ್ಲನು ಅವನು
ಈಗ ಈ ನಮ್ಮ ಕಾಲಮಾನದಲ್ಲಿ
ಅವನಂತೆ ಕವಿತೆ ಬರೆವ ಮತ್ತೊಬ್ಬನಿಲ್ಲ...

ಪ್ರೀತಿ ಮೈದುಂಬಿ ಉಕ್ಕುಕ್ಕಿ ಹೊರಬಿದ್ದ
ಅವಳ ದುಂದು ಬಣ್ಣನೆಗಳಿಗೆ ಪೂರ್ಣ ವಿರಾಮವಿರಲಿಲ್ಲ
ಆ ಮುಗ್ಧ ನಿಜ ಆರಾಧಾನೆಗೆ ಕೊನೆಯೆಂಬುದಿರಲಿಲ್ಲ...

ಅತ್ತ: ಪದ ಪದಾರ್ಥ ತೂಗಿ ಬಳಸುವ ಕವಿಯ ವರ್ಣನೆ
ಅವನ ಮಿತ ಬಳಕೆ ಉಪಮೆಗಳ ಲೋಕಕ್ಕೆ ತಕ್ಕಂತಿತ್ತು:
'ನಿನ್ನೊಳಗಿಳಿಯುತ್ತಿದೆ ಅವಳ ಆ ನೆನಪು
ಸುಡು ಸುಡು ಬ್ರ್ಯಾಂಡಿಯ ಹಾಗೆ...'

ಇನ್ನು ಸಿಲ್ವಿಯಾ ನನ್ನ ಬದುಕು
ಎಂದು ಅವನು ತೀರ್ಮಾನಿಸಿಯಾಗಿತ್ತು.
ಅವನ ಕವಿತೆಗಳನ್ನು ಕಣ್ಣಲ್ಲಿ ಕಣ್ಣಿಟ್ಟು ಓದುವ ಅವಳ ಪರಿ
ಅವನ ಬದುಕಿನ ಬಹುದೊಡ್ಡ ಭಾಗ್ಯದಂತಿತ್ತು.

ಅವಳ ಕವಿತೆಗಳನ್ನು ಕಣ್ಣಲ್ಲಿ ಕಣ್ಣಿಟ್ಟು ಒದುತ್ತಾ ಇಷ್ಟವಾದದನ್ನು
ಕವಿತೆಗೆ ಅನಿಷ್ಟವಾದದನ್ನು ಬೆರಳಿಟ್ಟು ತೋರಿಸುವನು;
ಅವನ ಕವಿತೆಗಳಲ್ಲಿ ತನಗೆ ಒಗ್ಗದ ಪ್ರತಿಮೆಗಳನ್ನು ಅವಳು ಕಾಣಿಸುವಳು
ಮದವೇರಿ ಮುತ್ತಿಕ್ಕುವಳು, ಕವಿತೆ ಕೈ ಬಿಟ್ಟು ಅವರು ತೆಕ್ಕೆ ಬೀಳುವರು...

ಅರೆಗಳಿಗೆ ಬಿಟ್ಟಿರದೆ ಅವರು  ಊರು ಸುತ್ತುವರು
ಲೈಬ್ರರಿಯ ಬುಕ್ಕುಗಳ ಸೂರೆ ಹೊಡೆಯುವರು
ಅವಳಿಗೆ ಇವನು ಕತೆ ಕವಿತೆ ಓದಿ ಹೇಳುವನು
ಇವನಿಗೆ ಅವಳು ಕವಿತೆ ನಾಟಕ ಓದಿ ಹೇಳುವಳು.

ಬಿಥೋವನ್ ರಾಗಕ್ಕೆ ಆ ರಾಗರಂಜಿತ ಜೋಡಿ
ತಲೆದೂಗುವುದು, ಮೈ ನವಿರೇಳುವುದು ...........
ಅವನ ಮೈಯಂತೂ ಅವಳ ಅಚ್ಚುಮೆಚ್ಚು:
'ಅವನು ಸೊಕ್ಕಿದ ಮಿಗ! ಅವನು ಮೂಲ ಪುರುಷ ಆ್ಯಡಂ!
ಅಹಾ! ಅವನು ನನ್ನ ಮೇಲೆರಗಿ ದಾಳಿ ಮಾಡುವನು!'

ಅದು ಬರ್ಬದ ಪ್ರೇಮ ಕಾಮದ ಕಾಲ
ಕವಿಜೋಡಿಯೊಳಗೆ ಭುಗಿಲೆದ್ದ ಬೆಂಕಿಯ ಕಾಲ
ಪ್ರತಿಮೆ ಸಂಕೇತಗಳ ಅರ್ಥಗಳೆಲ್ಲ
ಹಾಸಿಗೆಯಲ್ಲಿ ತಿರುಗುಮುರುಗಾಗುವ ಕಾಲ!

ಒಮ್ಮೆ ಕವಿತೆಗೆ ಪೂರಾ ತೆತ್ತುಕೊಂಡಿದ್ದ ಕವಿ
ಇದೀಗ ಕವಯಿತ್ರಿಗೆ ಪೂರಾ ತೆತ್ತುಕೊಂಡಿದ್ದ ಪರಿಗೆ
ಕವಿಯ ಗೆಳೆಯರು ಹುಬ್ಬೇರಿಸುತ್ತಿದ್ದರು!

ಇಂಥ ಬರ್ಬರನನ್ನು,
ಇಂಥ ಅಲೆಮಾರಿಯನ್ನು,
'ನೆಚ್ಚಿ ನೀ ಕೆಡಬೇಡ'ವೆಂದು
ಅವಳ ಗೆಳತಿಯರು ಶರಾ ಬರೆಯುತ್ತಿದ್ದರು.

ಖುದ್ದು ಕಾವ್ಯದೇವಿಯೇ ನಿಂತು
ಹೇಳಿ ಮಾಡಿಸಿದಂಥ
ಆ ಕವಿ ಜೋಡಿ
ಇನ್ನು ದೂರವಿರುವುದು ಸಾಧ್ಯವಿರಲಿಲ್ಲ...

**ಆಕರ : ಕವಿ ಜೋಡಿಯ ಆತ್ಮಗೀತ – ನಟರಾಜ್ ಹುಳಿಯಾರ್**

# ಭಾಗ – ೪ ಸಂಕೀರ್ಣ

## ಆಶಯ: ನನ್ನ ಕೈಯ ಹಿಡಿದಾಕೆ

ದ. ರಾ. ಬೇಂದ್ರೆ

ನನ ಕೈಯ ಹಿಡಿದಾಕೆ ಅಳುನುಂಗಿ ನಗು ಒಮ್ಮೆ
          ನಾನು ನಕ್ಕೇನ
ಇಲ್ಲದಿರಕ ನಿನ್ನ ಅಳುವು ಹುಚ್ಚು ಹಳ್ಳದ ಕೊಳ್ಳ
          ಹುದುಲಾಗ ಸಿಕ್ಕೇನ
ಜಗದಾಗಯಾವ್ಯಾವ ನೆರಳು ಬೆಳಕಿನ್ಯಾಗ
          ಹಗಲಿರುಳು ಇದ್ದಾವ
ಎದೇನ ಬಿದ್ದೇನಕತ್ತಲು ಬಿಸಿಲೇನ
          ನಕ್ಕಾರೂಗೆದ್ದಾವ
ಹುಸಿ ನಗುತ ಬಂದೇವ ನಸು ನಗುತ ಬಾಳೋಣ
ತುಸು ನಗುತ ತೆರಳೋಣ
ಬಡ ನೂರು ವರುಷಾನ ಹರುಷದಿ ಕಳೆಯೋಣ
          ಯಾಕಾರ ಕೆರಳೋಣ
ಬಡತನ ಸಿರಿತನ ಕಡೆತನಕುಳಿದಾವೇನ
          ಎದೆ ಹಿಗ್ಗು ಕಡೆಮಟ್ಟ
ಬಾಳಿನ ಕಡಲಾಗ ಅದನಾಮುಳುಗಿಸಬೇಡ
          ಕಡಗೋಲು ಹಿಡಿಹುಟ್ಟ

## ೪.೧ ಮತ್ತೆ ಭ್ರೂಣವಾಗಬೇಕು

ಸುಕನ್ಯಾ ಮಾರುತಿ

ಈ ಲೋಕ ನಮದಲ್ಲ
ನಾವು ಈ ಊರವರಲ್ಲ
ಅಂಟಿದ ನಂಟರಾರೂ ಇಲ್ಲ
ಅಂಟಿಯೂ ಒಂಟಿ ನಾವು ಯಾರಿಗೋ
ಹಬ್ಬಿಕೊಂಡಿದ್ದೇವೆ ಯಾರನ್ನೋ
ತಬ್ಬಿಕೊಂಡಿದ್ದೇವೆ
ತಬ್ಬಿಬ್ಬುಗೊಂಡಿದ್ದೇವೆ

ಪುರುಷಾಕಾಶದಲ್ಲಿ
ಪಟವಾಗಿದ್ದೇವೆ
ಸೂತ್ರ ಹರಿದ ಗಾಳಿ ಪಟವಾಗಿದ್ದೇವೆ.
ಪುಟವಾಗಬೇಕು ನಾವು ದಿಟವಾಗಬೇಕು
ನಿಲುವು
ದಿಟ್ಟವಾಗಬೇಕು

ಪುರುಷಾವನಿಯಲ್ಲಿ ಗೊಂಬೆಯಾಗಿದ್ದೇವೆ
ಸೂತ್ರದ ಗೊಂಬೆಯಾಗಿದ್ದೇವೆ
ರಂಭೆಯಾಗಿದ್ದೇವೆ
ಹೆತ್ತು ತಾಯಾಗಿದ್ದೇವೆ
ಸಾಕಿ ತೊತ್ತಾಗಿದ್ದೇವೆ.
ತುಳಿತಕ್ಕೆ ತುತ್ತಾಗಿದ್ದೇವೆ.
ಎತ್ತಬೇಕು ದನಿಯೆತ್ತಬೇಕು
ತಲೆಯೆತ್ತಬೇಕು ಮಾನ ಸ್ವಾಭಿಮಾನವ
ಬಿತ್ತಬೇಕು ಸ್ವಾಭಿ
ಮಾನ ಬಿತ್ತಬೇಕು.

ಪುರುಷಾಬ್ಧಿಯಲ್ಲಿ ಮೀನಾಗಿದ್ದೇವೆ.
ಅವನ ತುಟಿಗೆ
ಜೇನಾಗಿದ್ದೇವೆ
ರಸವಾಗಿದ್ದೇವೆ ನವ
ರಸವಾಗಿದ್ದೇವೆ ಕೀಚಕರ ಅಮಲಿಗೆ
ಬಲಿಯಾಗಿದ್ದೇವೆ.
ಈಗ ಕಲಿಯಾಗಬೇಕು ಹೆಣ್ಣು
ಹುಲಿಯಾಗಬೇಕು
ದುಶ್ಶಾಸನರಿಗೆ ವೀರ
ಶಾಸನೆಯರಾಗಬೇಕು
ದೌರ್ಜನ್ಯಕ್ಕೆದಂಡನೆಯರಾಗಬೇಕು
ರುಂಡಮಾಲಿನಿಯರಾಗಬೇಕು

ಈ ಲೋಕ ದಾಟಿ
ಆಚೆ ದಡದಲ್ಲಿ ನಾವು ಹೊಸಲೋಕ
ಕಟ್ಟಬೇಕು
ಅಲ್ಲಿ ಬರಿ ಮನುಜರಿರಬೇಕು
ಹೆಣ್ಣುಗಂಡೆಂಬ ಉಭಯವಳಿದು
ತಾಯ್ತಂದೆಯಾಗಬೇಕು
ಮಕ್ಕಳು ಬರಿ ಮಕ್ಕಳಾಗಿರಬೇಕು
ಮಗ ಮಗಳಲ್ಲ
ಮಗ್ಗಲು ಮುಳ್ಳುಗಳೂ ಅಲ್ಲ

ಅಲ್ಲಿ ನಾನುಗಳು ಸತ್ತು
ನಾವುಗಳು ಇರಬೇಕು ನಲಿವಿನ
ನಾವೆಗಳು ತೇಲಬೇಕು ಬಾನಲ್ಲಿ
ಬಾನಾಡಿಯಾಗಬೇಕು
ಭೂತಾಯ ಗರ್ಭದಲ್ಲಿ ಮತ್ತೆ

ಭ್ರೂಣವಾಗಬೇಕು
ಹೆಣ್ಣುಭ್ರೂಣವಾಗಬೇಕು.
ಅವತಾರವೆತ್ತಬೇಕು ಹೊಸ
ಅವತಾರವೆತ್ತಬೇಕು

**ಆಕರ : ನಾನೆಂಬ ಮಾಯೆ (ಸಮಗ್ರ ಕಾವ್ಯ) – ಸುಕನ್ಯಾ ಮಾರುತಿ**

## ೪.೨ ಸಾವು

**ಬಾನು ಮುಷ್ತಾಕ್**

ಈ ಗೊಂಡಾರಣ್ಯದಲ್ಲಿ ನಾನು ಬಂದುದಾದರೂ ಹೇಗೆ? ಅಗೋ ಅಲ್ಲಿ ಲಾಸ್ಯವಾಗಿ ಬಳುಕುತ್ತಾ ನಲಿಯುತ್ತಾ ತುಂತುರು ತುಂತುರಾಗಿ ಮುತ್ತಿನ ಹನಿಗಳನ್ನು ಪ್ರೋಕ್ಷಿಸುತ್ತಿರುವ ಝರಿಯ ರಮಣೀಯತೆಯನ್ನೂ ಮೀರುವಂತಹ ಭಯಾನಕತೆ ವ್ಯಾಪಿಸಿದೆಯಲ್ಲಾ ಇದು ನಿಜವಾಗಿಯೂ ನನ್ನೆದೆಯ ಭಯಾನಕತೆಯೇ, ಇಲ್ಲ... ನಿಸರ್ಗದ ನಿಜವಾದ ಮುಖವೋ...? ನನ್ನ ಅಸ್ತಿತ್ವವೇನೋ ಕ್ಷುಲ್ಲಕವಾದುದು. ಇಡೀ ಕಾನನವೇ ಅದುರುವಂತಹ ಈ ಗರ್ಜನೆ ಸಿಂಹದ್ದು ಮಾತ್ರವಾಗಿರಲು ಸಾಧ್ಯ ಅಥವ ಹುಲಿಯದೇ?... ಹಿಂಬದಿಯಲ್ಲಿ ಆಗುತ್ತಿರುವ ಸದ್ದು... ಆಹ್... ಸೊಂಡಲೆತ್ತಿರುವ ಕಾಡಾನೆ... ಅಥವಾ ಪಳಗಿದ ಆನೆಯೇ... ಇನ್ನು ಕ್ರಿಮಿ, ಕೀಟ, ಜೀರುಂಡೆಗಳು ಲೆಕ್ಕಕ್ಕೇ ಇಲ್ಲ. 'ಈಸಬೇಕು; ಇದ್ದು ಜಯಿಸಬೇಕು' ಇದು ಕೇವಲ ನಾಣ್ಣುಡಿಯಲ್ಲ. ನಾನು ನಿಜವಾಗಿಯೂ ನನ್ನ ಮುಂದಿರುವ ಮಂಡಿಯುದ್ದ ಝರಿಯ ನೀರಿನಲ್ಲಿ ಕ್ರಮಿಸಿ ಆಚೆ ದಡ ಸೇರಲೇಬೇಕು. ನಾನು ಸೀರೆಯನ್ನು ನೆರಿಗೆಗಳನ್ನು ಮಡಚಿ, ಮಂಡಿಯ ಮೇಲಕ್ಕೆ ಹಿಡಿದು ನೀರಿನೊಳಗಡೆ ಕಾಲಿಟ್ಟೆನೋ ಇಲ್ಲವೋ... ನಾನು ನಿರೀಕ್ಷಿಸದೆ ಇದ್ದ ಸೆಳೆತ... ಓ... ನಾನು ಕೊಚ್ಚಿ ಹೋಗುತ್ತಿದ್ದೇನೆ... ಇಲ್ಲ... ನಾನು ನೀರಿನ ಆ ಸೆಳೆತದಲ್ಲೂ ಪ್ರವಾಹದಲ್ಲೂ... ಆ ನೀರಿನ ಮೇಲೆ ಹಗುರವಾಗಿ ನಡೆದು ಹೋಗುತ್ತಿದ್ದೇನೆ... ನನ್ನ ಗುರಿ ಅಲ್ಲಿದೆ... ಅದೋ ದೂರ ಬೆಟ್ಟ ಕಾಣುತ್ತಿದೆಯಲ್ಲಾ ಅದರ ತುದಿಯಲ್ಲಿ ತೇಜಃಪುಂಜನಾದ ದಂಡ ಕಮಂಡಲಧಾರಿ ಋಷಿಯ ಬಳಿ ನಾನು ಸಾರಲೇಬೇಕು. ದೂರಗಳು ನಿಮಿಷಗಳಲ್ಲಿ ಸಮೀಪವಾದವು. ಜೂಮ್ ಹಾಕಿದಂತೆ, ಮೈಲಿಗಟ್ಟಲೆ, ದೂರದ ಋಷಿಯ ಮುಖ ನನಗೆ ಸಮೀಪವಾಯಿತು. ನಾನು ನೀರಿನ ಮೇಲೆ ನಡೆಯುತ್ತಲೇ ಇದ್ದೆ... ಜೀವ ಕೈಯಲ್ಲಿ ಹಿಡಿದು ಅನ್ನುತ್ತಾರಲ್ಲಾ ಹಾಗೆ. ಋಷಿಯ ಪ್ರಶಾಂತ ಕಣ್ಣುಗಳು ಹೇಳಿದವು, "ಹೆದರಬೇಡ ಮಗಳೇ... ಬಾ..." ಮುಂದೆಲ್ಲಾ ಸುಗಮವಾದ ಹಾದಿ ಇದೆ... ನನಗೆ ಒಮ್ಮೆಲೆ ವಿದ್ಯುತ್ ಸಂಚಾರವಾದಂತಾಯಿತು. ನಾನು... ಈ ಕಣ್ಣುಗಳನ್ನು ಗುರುತಿಸುತ್ತೇನೆ. ಇವು ನನ್ನ ಆಪ್ತ ಕಣ್ಣುಗಳು. ನನ್ನ ಸ್ವಂತ ಕಣ್ಣುಗಳು, ಆ ಜಡೆಗಟ್ಟಿದ ಕೂದಲು, ಗಡ್ಡ ಮೀಸೆಗಳ ನಡುವೆಯೂ ನಾನೂ ಗುರುತಿಸಬಲ್ಲೇ... ಅವು... ನನ್ನ ಕಳೆದು ಹೋದ ಕಣ್ಣುಗಳು... ಅವು ನಿಮ್ಮ ಕಣ್ಣುಗಳು... ಅಯ್ಯೋ...! ಆಹ್!... ಅಬ್ಬಾ... ಅಬ್ಬಾಜಿ... ಅಬ್ಬಾಜಾನ್...

ಬಹುಶಃ ಜೋರಾಗಿಯೇ ಕಿರುಚಿರಬೇಕು ನಾನು.

'ಏನಾಯಿತು... ಸಬಾ... ಸಬಾ... ಕಣ್ಣು ಬಿಡಿ... ಏಳಿ... ಎದ್ದೇಳಿ...! ನನ್ನ ಇಡೀ ಅಸ್ತಿತ್ವವನ್ನು ಅಲುಗಾಡಿಸಿದ ನಿಜಾಮ್‌ನತ್ತ ನಿಧಾನವಾಗಿ ಕಣ್ತೆರೆದೆ... ಕಣ್ತೆರೆದೆ ಮತ್ತು ನನ್ನವಾಗಿದ್ದ ಆ ಕಣ್ಣುಗಳನ್ನು ಕಳೆದುಕೊಂಡೆ... ನಿಜಾಮ್ ನನ್ನನ್ನು ಮತ್ತೆ ಮಲಗಿಸಿ ಮಂಚದಿಂದ ಇಳಿದರು. ಕೈಯಲ್ಲಿ ಒಂದು ಲೋಟ ನೀರಿನೊಂದಿಗೆ ಹಾಜರಾಗಿ... ನನ್ನ ತುಟಿಗೆ ಲೋಟವನ್ನು ಹಿಡಿದರು. ತಣ್ಣನೆಯ ನೀರು... ಮುಳ್ಳುಗಳೆದಿದ್ದ ಗಂಟಲೊಳಗೆ ಇಳಿಯಲು ನಿರಾಕರಿಸುತ್ತಿತ್ತು.

ಒಂದು ಗುಟುಕು ನೀರು ಕೂಡ ಇಳಿಯಲಿಲ್ಲ. ನನ್ನನ್ನು ನಿಧಾನವಾಗಿ ಮಲಗಿಸಿ ಹಣೆಯ ಮೇಲಿದ್ದ ಬೆವರನ್ನು ಒರೆಸಿ. ಸ್ವಲ್ಪ ಬೇಸರದಿಂದಲೇ ಕೇಳಿದರು, "ಏನಾಯ್ತು...?"

...ನಾನು ಕೂಡ ಕಳೆದ ಹತ್ತು ವರ್ಷಗಳಿಂದ ಇದನ್ನೇ ಕೇಳುತ್ತಿದ್ದೇನೆ... ಏನಾಯ್ತು?... ಇದು ಏನಾಗಿ ಹೋಯಿತು...? ಎಲ್ಲಾ ಹೆಂಗಸರೂ ಬಯಸುವಂತೆ ಕೈ ತುಂಬಾ ದುಡಿಯುವ ಗಂಡ, ಗಂಡನ ಮನೆಯಲ್ಲಿ ಸಂತೃಪ್ತರಾಗಿ ಬದುಕುತ್ತಿರುವ ಹೆಣ್ಣುಮಕ್ಕಳು, ಆಳೆತ್ತರ ಇರುವ ಮಗ ನಾಹಿದ್ ಎಲ್ಲಾ ಇದ್ದು... ಶೂನ್ಯತೆ ನನ್ನನ್ನು ಆವರಿಸಿದ್ದು ಎಂದಿನಿಂದ? ಹಿಂದೊಮ್ಮೆ ನಿಜಾಮ್ ಕಹಿಯಾಗಿ, ಸರ್ಪವು ವಿಷ ಕಕ್ಕುವಂತೆ ಕಕ್ಕುತ್ತಾ ಹೇಳಿದ್ದರು. "ಸಬಾ... ನಿಮ್ಮ ತಂಗಿಯರು ನಿಮಗಿಂತಾ ವಯಸ್ಸಿನಲ್ಲಿ ಎಷ್ಟೋ ಚಿಕ್ಕವರು. ಅವರೆಲ್ಲಾ ನಿಮ್ಮ ತಂದೆಯ ಸಾವನ್ನು ಎದುರಿಸಿದಷ್ಟು ಸಹಜವಾಗಿ, ತಾಳ್ಮೆಯಿಂದ ಗಂಭೀರವಾಗಿ ನೀವು ಎದುರಿಸಲಿಲ್ಲ, ನಿಮ್ಮ ಈ ಹುಚ್ಚಿನಿಂದ ನಮ್ಮ ಬದುಕುಗಳು ಏರುಪೇರಾಗಿವೆ..."

"ಹ್ಞ... ಅಲ್ಲೇ ಇರೋದು... ನಿಜವಾದ ಅಂಶ... ನಾನು ನಿಜಾಮ್‌ಗೆ ಉತ್ತರಿಸಲಿಲ್ಲ. ಏನನ್ನು ಉತ್ತರಿಸಲಿಲ್ಲ. ಅವರ ಮಾತು ಕೂಡ ಸರಿಯಾದದ್ದೆ ಉಳಿದವರಿಗೆ ಯಾರಿಗೂ ಅಬ್ಬಾನ ಅಗಲಿಕೆ ಅಷ್ಟೊಂದು ಬಾಧಿಸಲಿಲ್ಲ ಎನ್ನುವುದರ ಆಧಾರದ ಮೇಲೆ ನನ್ನೆದೆಯ ಆಳದ ಇಡೀ ಪ್ರಪಂಚವನ್ನು ಗಾಡಾಂಧಕಾರವನ್ನು ಹೊಡೆದೋಡಿಸಲು ಸಾಧ್ಯವೇ?

ನನಗೆ ಜನ್ಮ ಕೊಟ್ಟ ತಂದೆ... ಅಕ್ಷರ ಕಲಿಸಿದ ಗುರು... ಬಾಲ್ಯಕಾಲದ ಸ್ನೇಹಿತ... ಹದಿಹರೆಯದಲ್ಲಿ ಮಾರ್ಗದರ್ಶಕ, ವೈವಾಹಿಕ ಬದುಕಿನ ಸುಖವನ್ನು ಕಂಡು ಸಂತೋಷಿಸಿದವ, ಕೋಟಲೆಗಳಿಂದ ತಲ್ಲಣಿಸಿದಾಗ ಸದಾ ನನ್ನೆದುರು ಬಂದ ಅಭಯ ಹಸ್ತ... ನನ್ನ ಸ್ವಂತ ಉಸಿರು, ಭಾವ, ಎಲ್ಲಾ ಆಗಿದ್ದ ನನ್ನ ತಂದೆ... ಈಗ ನನಗೆ ಏನೂ ಅಲ್ಲ ಎಂದು ತಿಳಿದು ನಿರುಮ್ಮಳವಾಗಿ ಇರುವುದಾದರೂ ಹೇಗೆ...

ಹೇ... ಅದೆಲ್ಲಾ ಇರಲಿ, ನನ್ನ ತಂದೆ... ನಿಜವಾಗಿಯೂ ನಮಾಜ್ ಮಾಡುತ್ತಿದ್ದ... ಈ ವ್ಯಕ್ತಿ ಗೊಂಡಾರಣ್ಯದ ನಡುವಿನ ದಂಡ ಕಮಂಡಲಧಾರಿ ಯಷಿಯಾಗಿದ್ದಾದರೂ ಹೇಗೆ? ಜೀವನವಿಡೀ ಯಾವುದೇ ಜಾತಿ-ಭೇದವಿಲ್ಲದೆ ಹಲವರ ಕಷ್ಟಗಳಿಗೆ, ಹಲವರ ಬಳಿಗೆ ಬೇಕಾಗಿದ್ದ ನನ್ನ ತಂದೆ ಸಾಯುವಾಗ ಉದ್ದರಿಸಿದ್ದು ಕುರ್‌ಆನ್‌ನ ಶ್ಲೋಕವನ್ನೇ. ಹಾಗಿದ್ದರೆ ಯಾವುದು ಸತ್ಯ ಯಾವ ನಂಬಿಕೆ ಸತ್ಯ?... ಯಾವ ನಂಬಿಕೆ ಸರಿ?... ಅವರು ಹೇಳುತ್ತಿದ್ದರು, ಎಲ್ಲಾ ಕಾಲದಲ್ಲೂ, ಎಲ್ಲ ದೇಶಗಳಲ್ಲೂ, ಎಲ್ಲಾ ಜನಾಂಗದಲ್ಲೂ ದೇವರು ಪ್ರವಾದಿಗಳನ್ನು ಕಳುಹಿಸಿದ್ದಾನೆ, ಮನುಷ್ಯರೆದುರು ಸತ್ಯದ ದೀವಟಿಕೆಯನ್ನು ಹಿಡಿಯಲು ಸತ್ಯ ಯಾರೊಬ್ಬರ ಸ್ವತ್ತು ಅಲ್ಲ. ಮಾನವ ಜನಾಂಗ ಸೃಷ್ಟಿಯಾದಾಗಿನಿಂದ ಒಂದು ಲಕ್ಷ ಎಂಭತ್ತು ಸಾವಿರ ಪ್ರವಾದಿಗಳನ್ನು ಈ ಪ್ರಪಂಚಕ್ಕೆ ಕಳಿಸಿದ್ದೇನೆ ಎಂಬ ಉಲ್ಲೇಖವಿದೆ. ಕುರ್‌ಆನ್‌ನ ಎಲ್ಲಾ ಪುಟಗಳನ್ನೂ ಅವಲೋಕಿಸಿದರೆ ಹಲವು ನೂರು ಪ್ರವಾದಿಗಳ ಹೆಸರು ನಮಗೆ ಕಂಡು ಬರುತ್ತದೆ. ಇನ್ನುಳಿದ ಸಹಸ್ರಸಹಸ್ರ ಪ್ರವಾದಿಗಳು ಯಾರು? ಎಲ್ಲಾ ಜನಾಂಗಗಳ ಪ್ರವಾದಿಗಳೂ ಎಲ್ಲರಿಗೂ ಮಾನ್ಯರೇ? ಹಾಗಾದಲ್ಲಿ... ಈ ರಕ್ತಪಾತಗಳೇಕೆ?... ಈ ದ್ವೇಷಗಳೇಕೆ... ಸತ್ಯದ ಸ್ವರೂಪವನ್ನು ಒಪ್ಪಿಕೊಳ್ಳಲು ನಮಗೆ ಅಹಂಕಾರಗಳೇಕೆ?... ಸತ್ಯವನ್ನು ನಾವು ಯಾಕೆ ನಿರಾಕರಿಸ್ತೀವಿ? ನಮ್ಮ ಸ್ವಾರ್ಥಗಳಿಗೂ, ನಮ್ಮ ಲಾಭಕ್ಕೋ ನಮ್ಮ ಅಹಂನ ತೃಪ್ತಿಗೋ...?

ನಾನು ನಿಧಾನವಾಗಿ ಮಂಚದಿಂದ ಇಳಿದೆ, ಹಜಾರಕ್ಕೆ ಬಂದೆ. ಮುಂಭಾಗದ ಕಿಟಕಿಯನ್ನು ತೆರೆದೆ. ಬೆಳಗಿನ ಜಾವ ನಾಲಕ್ಕು ಗಂಟೆ. ಸ್ವಲ್ಪವೇ ಕಚಗುಳಿ ಇಟ್ಟಂತೆ, ಸ್ವಲ್ಪ ಮೈಜುಮ್ಮೆನಿಸುವಂತೆ, ತಂಗಾಳಿ ಮೆಲುವಾಗಿ ಅಡಿ ಇಟ್ಟಿತು. ಈ ಹಾದಿ... ಈ ನನ್ನ ಮುಂದಿರುವ ನೇರವಾದ ಡಾಂಬರು ರಸ್ತೆಯ ಮೇಲಿನಿಂದ ನೂರಾರು ಜನರು ಹೆಗಲು ಕೊಡುತ್ತಾ ನನ್ನ ತಂದೆಯನ್ನು ನನ್ನಿಂದ ಅಗಲಿಸಿ, ಜನರು ಹೊತ್ತೊಯ್ದಿದ್ದು, ಮಲ್ಲಿಗೆ ಹೂವಿನ ಕರ್ಪೂರದ, ಆಬೀರ್‌ನ ಸುಗಂಧದ ನಡುವೆ.

ನಾನು ಪಕ್ಕಕ್ಕೆ ಸರಿದ ಕುರ್ಚಿಯ ಮೇಲೆ ಕುಳಿತೆ. ಬಳಲಿಕೆ ಎನಿಸಿತು. ಆ ದಿನದಿಂದ ನನಗೆ ಬಳಲಿಕೆಯೇ... ಒಂದಲ್ಲ ಒಂದು ಕಾಯಿಲೆಯೇ... ನಿಜಾಮ್‌ಗೆ ಬೇಸರ ಬರುವಷ್ಟು ಕಾಯಿಲೆಗಳು, ಡಾಕ್ಟರಂತೂ ಏನನ್ನೂ ಕಂಡುಹಿಡಿಯದೆ, ನನ್ನ ರೋಗಕ್ಕೆ ಯಾವುದೇ ಹೆಸರನ್ನಿಡದೆ, ಔಷಧೋಪಚಾರವನ್ನಂತೂ ನೀಡುತ್ತಲೇ, ಅತ್ಯಂತ ನಿರ್‌ದಾಕ್ಷಿಣ್ಯವಾಗಿ, "ಏನೂ ಕಾಯಿಲೆ ಇಲ್ಲ... ಮಂಟಲ್ ವರಿ ಇದೆ.. ನೀವೇ ಅದರಿಂದ ಹೊರಗೆ ಬರಬೇಕು" ಎಂದು ಕೈಚಲ್ಲಿದ್ದರು.

ಯಾವುದಾದರೂ ಹೊರಗೆ ಬರಬೇಕು? ಅಬ್ಬಾಜಾನ್ ಈ ಗಳಿಗೆಯಲ್ಲಿ ನೀವು ನನಗೆ ಯಾವ ಮಾರ್ಗದರ್ಶನ ನೀಡುತ್ತಿದ್ದಿರಿ...? ಅದೇ... ಆ ದಿನ ನಾವಿಬ್ಬರೂ ಕೂಡಿಯೇ ಆಸ್ಪತ್ರೆಗೆ ಹೋಗಿದ್ದೆವು. ಸಲಾಮ್ ಭಾಯಿಗೆ ಕಾಲಿನ ಮೂಳೆ ಮುರಿದಿತ್ತಲ್ಲ... ಆಗ... ಹಾಗೆಯೇ ಬರುತ್ತಿರುವಾಗ ಒಬ್ಬ ಎಳೆಯ ಹುಡುಗಿ ಅಂದರೆ ಸುಮಾರು ಹದಿನಾರು ವರ್ಷ ಇರಬಹುದು... ಅವಳನ್ನು ನೋಡಿದೆವು. ಅವಳಿಗೆ ಮೂತ್ರಪಿಂಡಗಳ ಕಾಯಿಲೆ ಇತ್ತು. ಎಲ್ಲಾ ಆಸ್ಪತ್ರೆಗಳಿಂದಲೂ ನಕಾರಾತ್ಮಕ ಉತ್ತರ ಸಿಕ್ಕಿದ ಮೇಲೆ ಕೊನೆಯದಾಗಿ, ಅವಳ ಸಾವನ್ನು ಎದುರುನೋಡಲು ಅವಳ ಕುಟುಂಬದವರು ಈ ಆಸ್ಪತ್ರೆಯಲ್ಲಿ ಅವಳೊಡನಿದ್ದರು. ಅವಳು ತುಂಬಾ ಹಿಂಸೆಯಲ್ಲಿದ್ದಳು. ಮಲಗಿಸಿದರೆ, ಏಳಿಸಿ ಎನ್ನುತ್ತಿದ್ದಳು, ಏಳಿಸಿದರೆ... ಮಲಗಿಸಿ ಎನ್ನುತ್ತಿದ್ದಳು. ಅವಳ ತಾಯಿಯ ಸ್ಥಿತಿಯಂತೂ ವರ್ಣಿಸಲು ಸಾಧ್ಯವೇ ಇಲ್ಲ. ಜೀವಂತವಾಗಿ ಅವಳ ಕರುಳಿಗೆ ಬೆಂಕಿ ಇಟ್ಟಂತಾಗಿತ್ತು. ನನಗೂ ಕಣ್ಣೀರು ತಡೆಯಲಾಗಲಿಲ್ಲ. ಅಲ್ಲೇ ಮಂಚದ ಬಳಿಯಲ್ಲೇ ಹುಡುಗನೊಬ್ಬ ನಿಂತಿದ್ದ. ಅವನೂ ತುಂಬಾ ದುಃಖಿತನಾಗಿದ್ದ. ಹುಡುಗಿ ಮಲಗಿದ್ದಲ್ಲಿಂದ ಕೈಚಾಚಿದಳು. ಅವಳ ತಾಯಿ ಕೈ ಹಿಡಿದಾಗ, ರಮೇಶ ಎಂದೇನೋ ತೊದಲಿದಳು. ಬಹುಶಃ ಆ ಹುಡುಗನ ಹೆಸರಿರಬೇಕು. ಅವನು ಹತ್ತಿರ ಬಂದ. ಅವಳು ಕೈ ಹಿಡಿದಳು. "ಕೊನೆಗೂ... ನಿಮ್ಮಿಬ್ಬರ ಮದುವೆಯಾಗಲಿಲ್ಲವಲ್ಲೋ..." ಎಂದಳು. ಅವಳ ಕಣ್ಣುಗಳು ಇನ್ನಷ್ಟು ಗಾಢವಾದವು. ನನ್ನ ಕಣ್ಣುಗಳು ತುಂಬಿ ಹರಿದು ಹೋದವು. ನನಗೆ ಅಲ್ಲಿ ನಿಲ್ಲಲಾಗಲಿಲ್ಲ. ಆಸ್ಪತ್ರೆಯ ಹೊರಗಡೆ ವಿಶಾಲವಾದ ಮರದಡಿಯಲ್ಲಿದ್ದ ಕಲ್ಲು ಬೆಂಚಿನ ಮೇಲೆ ನಾವಿಬ್ಬರೂ ಕುಳಿತೆವು. ನಾನಿನ್ನೂ ಕಣ್ಣೀರು ಒರೆಸಿಕೊಳ್ಳುತ್ತಿದ್ದೆ. ಅಪ್ರಯತ್ನವಾಗಿ ಹೇಳಿದೆ "ಹೀಗಾಗಬಾರದಿತ್ತು."

"ನಾವು" ಬಯಕೆಗಳಿಗೆ ತಕ್ಕಂತೆ ಬದುಕುವುದು ಸುಲಭ. ಆದರೆ, ಜೀವನ ನಮ್ಮ ಅಳತೆಗೆ ತಕ್ಕಂತೆ ಕತ್ತರಿಸಿ ಹೊಲಿಯುವ ಬಟ್ಟೆಯಲ್ಲ. ಸಬಾ... ನೀನು ಅರ್ಥ ಮಾಡಿಕೋ ಬೇಕು ಮಗಳೇ... ಬದುಕಿನ ಸುಖಗಳನ್ನು ನಾವು ಅನುಭವಿಸುವಂತೆ ದುಃಖಗಳನ್ನೇಕೆ ಅನುಭವಿಸುವುದಿಲ್ಲ? ಸಿಹಿಯನ್ನು ತಿಂದು ಸಂತೋಷ ಪಡುವವರು ಕಹಿ ಒಂಚೂರು ನಾಲಿಗೆಗೆ ತಾಕಿದ ಕೂಡಲೇ ಸಿಂಡರಿಸುವುದೇಕೆ? ಅದನ್ನು ನಿರಾಕರಿಸುವುದೇಕೆ? ಅದನ್ನು ಅನುಭವಿಸಲೇಬೇಕಾದ ಅನಿವಾರ್ಯತೆ ಒಂದಡೆ... ಆದರೆ ನಿರಾಕರಣೆ ಇನ್ನೊಂದಡೆ... ಇದರಿಂದ ಹೆಚ್ಚು ಒತ್ತಡ ಮತ್ತು ಹೆಚ್ಚು ದುಃಖ..."

"ಹಾಗೆಂದರೆ ಏನು ಅಬ್ಬಾ ಜಾನ್?" ಆ ಹುಡುಗಿಯ ಸಂಕಟ ನನ್ನಲ್ಲಿ ರಚ್ಚು ಮೂಡಿಸಿತ್ತು... "ಅವಳು ಅಷ್ಟೊಂದು ಸಂಕಟದಲ್ಲಿ ಸಾಯುತ್ತಿರುವುದು ಸಂತೋಷವಾಗಿ ನಗುನಗುತ್ತಾ ಸಾಯಬೇಕೆ? ಅವಳ ತಾಯಿ ಸಿಹಿ ಹಂಚಬೇಕೆ?... ನಿಮ್ಮ ಮಾತೇ ನನಗರ್ಥವಾಗುವುದಿಲ್ಲ" ಎಂದೆ. ಅವರು ಮುಗುಳು ನಕ್ಕರು. ಸಬಾ... ಬದುಕು ಅಗಾಧವಾದುದು.

ನಿರಂತರವಾದುದು, ನಮ್ಮ ಪಾತ್ರ ನಿರ್ವಹಿಸುವುದಷ್ಟಕ್ಕೆ ಮಾತ್ರ ನಾವು ಸೀಮಿತರು. ಹಾಗಿದ್ದರೆ... ಯೋಚನೆ ಮಾಡು... ಸಾವು ಬದುಕಿನ ಅಂತ್ಯವೋ ಅಥವಾ ಆರಂಭವೋ.

ನನಗೆ ತಬ್ಬಿಬ್ಬಾಯಿತು.

"ಸಾವು ಬದುಕಿನ ಅಂತ್ಯ"

"ಹಾಗಾದರೆ... ಎಲ್ಲಾ ಧರ್ಮಗಳೂ ಒಂದಲ್ಲ ಒಂದರ್ಥದಲ್ಲಿ ಪ್ರತಿ ಪಾದಿಸುವ ಮೋಕ್ಷ ಅಥವಾ ಮುಕ್ತಿಯ ಆರಂಭ ಯಾವುದು...?"

"ಸಾವು..." ಎಂದೆ ನನಗರಿವಿಲ್ಲದಂತೆ.

ಅಥವಾ... ಹೀಗೇ ಯೋಚಿಸೋಣ, ಧರ್ಮಗಳಲ್ಲಿ ನಂಬಿಕೆ ಇಲ್ಲದವರಿಗೆ ಸಾವೆಂದರೆ ಏನು?

"ಬದುಕಿನ ಕೊನೆ" ಅದು ಯಾಕೋ ಜಟಿಲವಾಯಿತು.

ಅವರು ತುಸುವೇ ನಕ್ಕರು. "ನೋಡು ಮಗಳೇ... ಸಾವು ಬದುಕಿನ ಆರಂಭವೋ... ಅಂತ್ಯವೋ... ಇದೊಂದು ಜಿಜ್ಞಾಸೆ. ಅದರ ಧಾರ್ಮಿಕತೆಯ ಬಗ್ಗೆ ನಾನು ಚರ್ಚಿಸುವುದಿಲ್ಲ, ಆದರೆ  ಸಾವು ಎನ್ನುವುದು ನಾವುಗಳೆಲ್ಲಾ ಒಪ್ಪಿಕೊಳ್ಳಲೇಬೇಕಾದ ಅನಿವಾರ್ಯ ವಾಸ್ತವತೆಯಲ್ಲವೇ?"

"ಹೌದು..."

"ಹಾಗಿದ್ದರೆ... ಸಾವನ್ನು ಎದುರಿಸಬೇಕು ಎಂಬ ಭೀತಿ ನಮಗೆ ಯಾಕೆ...?
"ಅಂದರೆ... ಸಾವನ್ನು ಬರಮಾಡಿಕೊಳ್ಳಬೇಕು ಎಂಬುದು ನಿಮ್ಮ ಅಭಿಪ್ರಾಯವೇ?

"ಇಲ್ಲ ಸಾವನ್ನು ಅಪೇಕ್ಷಿಸಬಾರದು. ಆದರೆ ಸಾವು ಶತಃಸಿದ್ಧ. ಒಂದಲ್ಲ ಒಂದು ದಿನ ನಾವು ಅದರೊಡನೆ ಮುಖಾಮುಖಿಯಾಗುತ್ತೇವೆ. ಸಾವನ್ನು ಎದುರಿಸಬೇಕು ಎಂಬುದು ನಮಗೆ ಬದುಕಿನಲ್ಲಿ ಸಿಗುವ ಪ್ರಿಪರೇಷನ್. ನಾವು ಎದುರಿಸಬೇಕು ಎಂಬರ್ಥದಲ್ಲಿ ಸಿದ್ದವಾಗುವುದು ಯುದ್ದದಲ್ಲಿ; ಶತ್ರುಗಳೊಡನೆ ಸಾವು ನಮಗೆ ಸ್ನೇಹಿತನೂ ಅಲ್ಲ, ಶತ್ರುವೂ ಅಲ್ಲ, ಅಂತ್ಯವೂ ಅಲ್ಲ, ಆರಂಭವೂ ಅಲ್ಲ. ಅದು ಕೂಡ ಬದುಕಿನಂತೆ ಒಂದು ಪ್ರಕ್ರಿಯೆ. ಅದನ್ನು ನಾವು ಎದುರಿಸಲು ಸಿದ್ಧತೆ ಮಾಡಿಕೊಳ್ಳಬೇಕಾದ್ದಿಲ್ಲ. ಬದಲಿಗೆ ಅದನ್ನು ಅನುಭವಿಸಬೇಕು."

ಸುತ್ತಲಿನ ವಾತಾವರಣದ ನೀರವತೆಯೊಂದಿಗೆ ನಾನೂ ಸ್ಥಬ್ಧಳಾದೆ. ಇದೀಗ... ಈ ಕ್ಷಣದಲ್ಲಿ ಸಾವು ಬಂದರೆ... ನಾನು ಎದುರಿಸುವುದಾದರೂ... ಅಥವಾ ಅನುಭವಿಸುವುದಾದರೂ... ಹೇಗೆ? ಬಹುಶಃ ನನ್ನ ಆಲೋಚನೆಗಳನ್ನು ಅರ್ಥಮಾಡಿಕೊಂಡವರಂತೆ, ಅಬ್ಬಾಜಾನ್ ಹೇಳಿದರು.

"ಮಗಳೇ... 'ಮಹಾತ್ಮರ ಗುಟ್ಟು ಮರಣದಲ್ಲಿ ನೋಡು,' ಎಂಬ ಮಾತನ್ನು ಕೇಳಿದೀಯಲ್ಲ. ಬದುಕಿನ ಅನುಭವಗಳಿಗೆ ತೆರೆದುಕೊಂಡಂತೆ, ಸಾವಿನ ಅನುಭವಗಳಿಗೂ ತೆರೆದುಕೊಳ್ಳುವ ಮನಸ್ಥಿತಿ ಸುಲಭವಾಗಿ ಬರುವುದಿಲ್ಲ. ಬದುಕನ್ನು ನೋಡುವ ನಿನ್ನ ಮನೋಭಾವ ಸಾವಿಗೆ ಭೂಮಿಕೆಯನ್ನು ನೀಡುತ್ತದೆ. ಬದುಕಿನಲ್ಲಿ ನೀನು ಅನೇಕ ಆವರಣಗಳೊಳಗೆ, ಮುಸುಕಿನೊಳಗೆ ನಿನ್ನನ್ನು ಮರೆಮಾಡಿಕೊಳ್ಳಬಲ್ಲೆ, ಸಾವು ನಿನ್ನ ನೈಜತೆಯನ್ನು, ನಿನ್ನ ಮನಃಸ್ಥಿತಿಗಳನ್ನು ಅನಾವರಣಗೊಳಿಸುವ ಪ್ರಕ್ರಿಯೆ..."

ಅಷ್ಟರಲ್ಲೇ ವಾರ್ಡಿನಿಂದ ಎದೆಕರುಗಿಸುವಂತಹ ಸಾಮೂಹಿಕ ರೋದನ ಕೇಳಿ ಬಂದಿತು. ವಾಪಸ್ಸು ಹೋಗಿ ಆ ಹುಡುಗಿಯನ್ನು ನೋಡುವ ಮನಸ್ಸಾಗಲಿಲ್ಲ. ಮೆಲ್ಲನೆ ನಾವಿಬ್ಬರೂ ಮನೆಯ ಕಡೆ ಹೆಜ್ಜೆ ಹಾಕಿದೆವು.

ಕುರ್ಚಿಯಲ್ಲಿ ಕುಳಿತಂತೆ ಬಹುಶಃ ನಾನು ಕಣ್ಣು ಮುಚ್ಚಿಕೊಂಡಿರಬೇಕು. ನಿಜಾಮ್ ಬಂದು ಹಾಲಿನ ಲೈಟು ಹಾಕಿದಾಗ ನಾನು ಕಣ್ತೆರೆದೆ. "ಈಗಾಗಲೇ... ಟೈಮಾಗಿದೆಯಲ್ಲಾ... ಇನ್ನೇನು ಅರ್ಧಗಂಟೇಲಿ... ಬೆಂಗಳೂರಿಗೆ ಬಸ್ಸು ಹೊರಡುತ್ತೆ... ಹೊರಡೋದಿಲ್ವ..? ಎಂದರು. ನಾನು ಹಾಗೆಯೇ ಕುಳಿತಿದ್ದನ್ನು ನೋಡಿ, "ಯಾಕ ಹುಷಾರಿಲ್ವ..?" ಎಂದು ಹತ್ತಿರ

ಬಂದರು. ನಾನು ಇತ್ತೀಚೆಗೆ ನನ್ನ ಕಾಯಿಲೆಯ ಬಗ್ಗೆ ಮಾತೇ ಆಡುವುದಿಲ್ಲ. ಬೇರೆಯವರಿಗೂ ಆ ಬಗ್ಗೆ ಮಾತನಾಡಲು ಆಸ್ಪದವೇ ಕೊಡುವುದಿಲ್ಲ. ನಿಜಾಮ್ ನನ್ನ ಸಮೀಪ ಬರುವ ಮೊದಲೇ ನಾನು ಬಚ್ಚಲುಮನೆಯಲ್ಲಿದ್ದೆ.

ನಾಹಿದ್ ಆಟೋ ತಂದು ನಿಲ್ಲಿಸಿದ. ಇಷ್ಟು ಬೆಳಿಗ್ಗೆಯೇ ಯಾವ ಆಟೋದವನು ಸಿಕ್ಕಿದನೋ ಆಟೋದಲ್ಲಿ ಕಾಲಿಡುವ ಮೊದಲು ಯಾಕೋ ಒಮ್ಮೆ ಹಿಂದಿರುಗಿ ನೋಡಿದೆ. ಕಾಂಪೌಂಡು, ಅದರೊಳಗೆ ಎಲ್ಲೆಲ್ಲೂ ಕಾಣುತ್ತಿದ್ದ ಹೂವಿನ ಗಿಡಗಳು, ಅದರ ನಂತರ ತಲೆಎತ್ತಿ ನಿಂತ ಇಟ್ಟಿಗೆ ಬಣ್ಣದ "ಬಟ್ಟಡಿಕೆ"ಯಂತಹ ಒಪ್ಪವಾದ ಮನೆ, ಯಾಕೋ ಗಂಟಲುಬ್ಬಿ ಬಂದಿತು. ಹಾಗೆಯೇ ಕಣ್ಣು ಹಾಯಿಸಿದೆ. ಮುಂಭಾಗದ ಕಾಂಪೌಂಡಿನ ಗೇಟಿನ ಬಳಿ, ರಾತ್ರೆಯುಡುಗೆಯಲ್ಲಿ ನಿಂತಿದ್ದ ನಿಜಾಮ್, ನನ್ನ ದೀರ್ಘ ದೃಷ್ಟಿಯನ್ನು ಅವರು ಗಮನಿಸಿರಬಹುದು. ಗೇಟನ್ನು ತೆರೆದು, ಆಟೋ ಬಳಿ ಬಂದು, ಬಹುಮೆಲ್ಲಗೆ "ಆರೋಗ್ಯದ ಕಡೆ ಜೋಪಾನ" ಎಂದು ಹೇಳಿ ಆಟೋ ಹತ್ತಿಸಿದರು. ಬಸ್ ಸಿದ್ಧವಾಗಿತ್ತು. ನಾಹಿದ್ ನನ್ನನ್ನು ಕಿಟಕಿಯ ಬಳಿ ಕೂರಿಸಿ, ಗಾಜನ್ನೆಳೆದು, ನಾನು ಹೊದ್ದಿದ್ದ ಶಾಲನ್ನು ಇನ್ನಷ್ಟು ಸುತ್ತಿ ಪಕ್ಕದಲ್ಲಿ ಕುಳಿತ. ಡೀಜಲ್ ವಾಸನೆಗಿರಬಹುದು... ಹೊಟ್ಟೆ ತೊಳಿಸಿದಂತಾಗಿ ಒಮ್ಮೆಲೆ ಬಾಯಲ್ಲಿ ನೀರುಕ್ಕಿತು. ಗಾಜನ್ನು ಸರಿಸಲು ಪ್ರಯತ್ನ ಪಟ್ಟೆ, ಯಾಕೋ ಗಾಜು ಒಂಚೂರು ಅಲುಗಾಡಲಿಲ್ಲ. ನನ್ನ ಪರದಾಟ ನೋಡಿ, ನಾಹಿದ್ ಕಿಟಕಿಯ ಗಾಜು ಸರಿಸಿದ. ಬಾಯಲ್ಲಿದ್ದ ನೀರೆಲ್ಲಾ ಉಗುಳಿದ ಮೇಲೆ ಸಮಾಧಾನವೆನಿಸಿತು. ತಲೆಯನ್ನು ಹಿಂದಕ್ಕೆ ಆನಿಸಿ, ಕಣ್ಮುಚ್ಚಲು ಪ್ರಯತ್ನಿಸಿದೆ. ಬಸ್ಸು ನಾಗಾಲೋಟದಿಂದ ಓಡುತಿತ್ತು.
ಬದುಕಿನ ಈ ವೇಗದಲ್ಲಿ ಯಾರಿಗೆ ಪುರುಸೊತ್ತಿದೆ... ಅನಿವಾರ್ಯ. ವಾಸ್ತವತೆಯ ಪ್ರತಿಕ್ಷಣವನ್ನೂ ಅನುಭವಿಸಲು? "ಸಾವು ನಮ್ಮ ಸಂಪೂರ್ಣ ಶರಣಾಗತಿಯನ್ನು ನಿರೀಕ್ಷಿಸುತ್ತದೆ. ನಿನ್ನಲ್ಲಿ ಕಿಂಚಿತ್ತಾದರೂ 'ರೆಸಿಸ್ಟೆನ್ಸ್' ಇದ್ದಲ್ಲಿ, ವಿರೋಧಾಭಾಸ ಉಂಟಾಗುತ್ತದೆ. ಈ ಜಗ್ಗಾಟದಲ್ಲಿ ಸಾವಿನ ದರ್ಶನ ನಮಗಾಗುವುದಿಲ್ಲ. ಇದು ಯಾವಾಗ ಸಾಧ್ಯವೆಂದರೆ ಬದುಕಿನ ಎಲ್ಲಾ ಮಜಲುಗಳನ್ನು ಪ್ರಜ್ಞಾಪೂರ್ವಕವಾಗಿ ಅನುಭವಿಸಿದ್ದರೆ ಮಾತ್ರ ಸಾಧ್ಯ..."

ನಾನು ಪಕ್ಕನೆ ನಕ್ಕುಬಿಟ್ಟಿದ್ದೆ. "ಅಬ್ಬಾ... ನಿಮ್ಮ ಮಾತು ತುಂಬಾ ವಿಚಿತ್ರ, ಚಾಕೋಲೇಟನ್ನು ನಾನು ಚಪ್ಪರಿಸುವಂತೆ, ಗಿಳಿಮೂತಿ ಮಾವಿನಕಾಯಿಯ ಹುಳಿಯನ್ನು ಸವಿಯುವಂತ, ರೇಷ್ಮೆ ಸೀರೆಯ ನುಣುಪಾದ ಅನುಭವವನ್ನು ಹೆಗಲಿಗೇರಿಸುವಂತ... ಇನ್ನು ಯಾವುದರಂತೆ... ನಾವು ಸಾವನ್ನು ಅನುಭವಿಸಬೇಕು...?

"ಸಾಬಾ... ಈ ಬದುಕಿನಲ್ಲಿ ನಾವು ಯಾವುದನ್ನೂ ಅನುಭವಿಸಿತ್ತಿದ್ದೇವೆ? ಬೆಳಿಗ್ಗೆ ಏನು ತಿಂಡಿ ತಿಂದೆವು ಎಂಬುದು ನಮಗೆ ನೆನಪಿರುವುದಿಲ್ಲ. ಟಿ.ವಿ ನೋಡುತ್ತಲೋ ರೇಡಿಯೋ ಕೇಳುತ್ತಲೋ, ಆ ದಿನದ ಕೆಲಸದ ಬಗ್ಗೆಯೋ ಯೋಚನೆ ಮಾಡುತ್ತಾ ಹೊಟ್ಟೆ ತುಂಬಿಸಿಕೊಂಡಿರುತ್ತೇವೆ. ಆ ತಿಂಡಿಯನ್ನು ಮುಟ್ಟಿದ ಸ್ಪರ್ಶದ ಅನುಭವವಾಗಲೀ ಅದರ ಕಂಪನ್ನ ಸವಿದದ್ದಾಗಲೀ ಅದರ ರುಚಿಯ ಬಗ್ಗೆಯಾಗಲೀ ನಾವು ಅತ್ಯಂತ ಅಪ್ರಜ್ಞಾ ಪೂರ್ವಕವಾದ ಪ್ರಯತ್ನವನ್ನು ಮಾಡಿರುತ್ತೇವೆ. ಆ ಹೊತ್ತಿಗೆ, ಆ ಗಳಿಗೆಯಲ್ಲಿ, ಆ ವಿಷಯದಲ್ಲಿ ನಾವು ಮಗ್ನರಾಗದೆ ಮತ್ತೆಲ್ಲೋ ಹಾರಿ ಹೋಗಿರುತ್ತೇವೆ. ದೇಹದ ಮನಸ್ಸಿನ ಭಾವದ ಸಂಪರ್ಕ ತಪ್ಪಿಹೋಗಿರುತ್ತದೆ. ಈ ಎಲ್ಲಾ ಸಂಪರ್ಕದೊಡನೆ, ನಮ್ಮೆಲ್ಲಾ ಭಾವ-ಬುದ್ದಿಯೊಡನೆ ಸಾವಿನ ಪ್ರಕ್ರಿಯೆಯೊಡನೆ ಮಿಳಿತವಾಗುವುದಷ್ಟೇ ನಮ್ಮ ಕೆಲಸ".

ನಾನು ಮತ್ತೊಮ್ಮೆ ನಗುತ್ತಾ ತಲೆಯಾಡಿಸಿದೆ. "ನನಗೆ ಇನ್ನೂ ಗೊತ್ತಾಗಲಿಲ್ಲ...ಬಿಡಿ..."

ಮತ್ತೊಮ್ಮೆ ಬಾಯಲ್ಲಿ ನೀರು ಉಕ್ಕಿ ಬಂದಿತು. ಹೊಟ್ಟೆಯ ಆಳದಲ್ಲಿ ಬಗಿಯಲಾರಂಭಿಸಿತು. ಇಷ್ಟೊಂದು ನೀರು ನನ್ನ ಹೊಟ್ಟೆಯೊಳಗಿಂದ ಉಕ್ಕಲು ಹೇಗೆ ಸಾಧ್ಯ?... ನಾನು ಹೊಳೆಯೇ... ನದಿಯೇ... ಚಿಲುಮೆಯೇ... ಮುಖಕ್ಕೆ ರಾಚುತ್ತಿದ್ದ ಗಾಳಿಯನ್ನು ನೋಡಿ, ನಾಹಿದ್ ಕಿಟಕಿಯನ್ನು ಮುಚ್ಚಿದ ಎಂದೆನಿಸುತ್ತದೆ. ಮೈಯೆಲ್ಲಾ ಬೆವರಿದಂತಾಗಿ, ಕಿವಿಯ ಹಿಂಬದಿಯಿಂದ ಬೆವರು ಹರಿಯಲಾರಂಭಿಸಿತು. ಶಾಲು ತಂತಾನೇ ಕಳಗೆ ಬಿದ್ದಿತ್ತು. ನಾನು ನಾಹಿದ್‌ನ ಹೆಗಲಿನತ್ತ ವಾಲಿದೆ. ಅವನು ತನ್ನ ಕರವಸ್ತ್ರದಿಂದ ನನ್ನ ಹಣೆಯ ಬೆವರನ್ನು ಒರೆಸುತ್ತಿದ್ದ.

ಈ ಮಾತು ನಿನಗೇ ಹೆಚ್ಚು ಅರ್ಥವಾಗಬೇಕು ಮಗಳೇ... ನೋಡು ನಿನಗೆ ಹೆರಿಗೆ ನೋವು ಬರುತ್ತದೆ. ನೋವಿನ ಆ ವಿಸ್ತೃತವಾದ ಅಲೆಗಳಿಂದ ನೀನು ತಪ್ಪಿಸಿ ಕೊಳ್ಳುವುದಿಲ್ಲ. ನೋವು ಬಾರದೆ ಇರಲಿ ಎಂದು ಬಯಸುವುದಿಲ್ಲ. ಹೌದೋ... ಅಲ್ಲವೋ... ನೋವು ಬರಲಿ... ಆಳವಾದ ನೋವು ಬರಲಿ ಎಂದು ಬಯಸುತ್ತೀಯ. ಏಕೆಂದರೆ... ಪ್ರತಿಯೊಂದು ನೋವಿನ ಆಳ ವಿಸ್ತಾರಗಳಲ್ಲೂ ನಿನ್ನ ಮಗುವಿನ ಜನನದ ನಿರೀಕ್ಷೆ ನಿನಗಿರುತ್ತದೆ. ಈ ನೋವಿನ ಪ್ರಕ್ರಿಯೆಯನ್ನು ನೀನು ವಿರೋಧಿಸುವುದಿಲ್ಲ. ಬದಲಿಗೆ... ಆ ಪ್ರಕ್ರಿಯೆಯಲ್ಲಿ ನಿನ್ನ ದೇಹ, ಬುದ್ಧಿ, ಭಾವದೊಂದಿಗೆ ಒಂದಾಗುತ್ತೀಯಾ. ನೋವಿನ ಪ್ರತಿಯೊಂದು ಕ್ಷಣವನ್ನು ನೀನು ಅನುಭವಿಸುತ್ತೀಯ. ಮಗುವಿನ ಜನ್ಮವಾದ ಕೂಡಲೇ ನಿನ್ನ ನೋವುಗಳು ಮಾಯವಾಗುತ್ತದೆ...

ಆದರೆ ಈ ನೋವುಗಳು ದೇಹದ ಅಂಗುಲ ಅಂಗುಲಕ್ಕೂ ವ್ಯಾಪಿಸಿರುವ ರಕ್ತದ ಪ್ರತಿಹನಿಯಲ್ಲಿ ತುಂಬಿ ಪ್ರತಿಯೊಂದು ಮಿಡಿತದೊಂದಿಗೂ ಇಡೀ ದೇಹವನ್ನೇ ವ್ಯಾಪಿಸುತ್ತಿರುವ ನೋವುಗಳು ಮಣ ಮಣ ಭಾರವಾಗುವ ಅವಯವಗಳು ಈ ನೋವುಗಳಿಂದ ನನಗೆ ಬಿಡುಗಡೆಯ ಇಲ್ಲವೇ?

ತಲೆ ಬುರುಡೆಯೊಳಗೆ "ಜುಂ" ಎಂದು ಚಳಿ ಆರಂಭವಾಯಿತು. ಹಣೆಯ ಎರಡೂ ಬದಿಯಲ್ಲಿ ಸಿಡಿಯಲಾರಂಭಿಸಿತು. ಇದನ್ನು ಹೇಗೆ ನಿಗ್ರಹಿಸಲಿ? ಹೇಗೆ ಅನುಭವಿಸಲಿ ಬೆವರಿನಲ್ಲಿ ಸ್ನಾನ ಮಾಡಿದಂತಾಗಿ ಕೂದಲು ತೊಪ್ಪೆಯಾಗಿ ಅಂಟಿಕೊಂಡಿತು. ನೆತ್ತಿಯ ಬುಡದಿಂದ ತಣ್ಣನೆಯ ಬೆವರು ಬೆನ್ನಿನಗುಂಟ ಹರಿಯತೊಡಗಿತ್ತು. ಆ ಹೊತ್ತಿನಲ್ಲಿ ಅರಿವಾಯಿತು. ನಾಲಿಗೆಯ ದ್ರವ ಆರಿಹೋಗಿ ನಾಲಿಗೆ ದಪ್ಪನಾಯಿತು. ಇದೇನಾಗಿತ್ತು ನನಗೆ? ಬಹುಶಃ ಆಬ್ಬ ಹೇಳಿದಂತೆ ನನ್ನ ಸಾವು ಬಂದಿದೆ. ನನ್ನೆದುರಿಗೆ ನಿಂತಿದೆ. ತನ್ನ ಬಾಹುಗಳಲ್ಲಿ ನನ್ನನ್ನು ಎದೆಗವಚಿಕೊಳ್ಳಲಿದೆ. ನಾನು ಇದನ್ನು ಅರಿಯುವ ಸ್ಥಿತಿಯಲ್ಲಿದ್ದೇನೆಯೇ? ಅದರೊಡನೆ ಲೀನವಾಗುವಂತಹ ತಾಧ್ಯಾತ್ಮತೆ ನನ್ನಲ್ಲಿ ಮೂಡಿದೆಯೇ?

ನಾಹಿದ್ ಮಡಿಲಲ್ಲಿದ್ದ ತನ್ನ ಪುಟ್ಟ ಕೈಗಳನ್ನು ಮಡಿಚಿ ಹಿಡಿದಿದ್ದ. ಏನಿದೆ ಆ ಪುಟ್ಟ ಅಂಗೈಗಳನ್ನು ನನ್ನಂತಹ ತಾಯಂದಿರ ಇಡೀ ಪ್ರಪಂಚವೇ ಮಕ್ಕಳ ಪುಟ್ಟ ಕೈಗಳಲ್ಲಿ ಅಡಗಿರುತ್ತದೆ. ನಾಹಿದ್ ಹುಟ್ಟುವಾಗಲೂ ನಾನು ಹೋರಾಡಿ ಬಸವಳಿದಿದ್ದೆ. ಇಡೀ ರಾತ್ರಿ ಆಬ್ಬ ಲೇಬರ್ ವಾರ್ಡ್ ಹೊರಗಡೆ ನಿಂತೇ ಕಳೆದಿದ್ದರು. ಏಕೆಂದರೆ ನನ್ನ ಪ್ರತಿಯೊಂದು ಕೂಗಿಗೂ ಕಿರಿಚಾಟಕ್ಕೂ ಆರ್ತತೆಗೂ ಅವರು ಉತ್ತರ ನೀಡುತ್ತಿದ್ದರು. ಹೊರಗಿನಿಂದಲೇ ಧೈರ್ಯ ತುಂಬುತ್ತಿದ್ದರು. ನಾಹಿದ್ ಹುಟ್ಟಿದ ಆ ಕ್ಷಣದಲ್ಲಿ ನಾನು ಪ್ರಜ್ಞಾಹೀನಳಾಗಿದ್ದೆ. ಮತ್ತೆ ಅವನನ್ನು ಕಂಡಿದ್ದು ಭರವಸೆಯನ್ನು ಮೂಡಿಸುತ್ತಿದ್ದ ಆಬ್ಬಾನ ಸದೃಡ ಮತ್ತು ಮಮತೆಯ ಬಾಹುಗಳಲ್ಲಿ. ಆಬ್ಬಾ... ನಿಮ್ಮಿಂದಲೇ ನಾನು ಕಲಿತದ್ದು "ಮಮತೆ ಹಣ್ಣಿನ ಗುತ್ತಿಗೆಯಲ್ಲ ಎಂಬುದು"

ನನ್ನ ಎಲ್ಲಾ ಆತಂಕದ ಗಳಿಗೆಯಲ್ಲಿ ನಾನು ಧೈರ್ಯದಿಂದ ಮುಂದಡಿ ಇಡುತ್ತಿದ್ದುದೇ ನಿಮ್ಮ ಅಭಯ ಹಸ್ತದ ದೆಸೆಯಿಂದ. ಒಬ್ಬ ತಂದೆ ಇಷ್ಟೊಂದು ಪ್ರೀತಿ ಕೊಡಬಲ್ಲ ನೆನಪಾಗಿ ಕಾಡಿಸಬಲ್ಲ. ಹೀಗೊಂದು ಹೃದಯವನ್ನು ಆವರಿಸಬಲ್ಲ ದೂರವಾಗಿ ಮನಸ್ಸನ್ನು ಕ್ಷೋಭೆಗೊಳಪಡಿಸಲು ಸಾಧ್ಯ ಎಂಬುದು ಇವತ್ತು ನನ್ನ ಅರಿವಿಗೆ ಬಂದಿದ್ದು. ನಾನೂ ಕೂಡ ಎಷ್ಟೋ ತಯಾರಿ ಮಾಡಿಕೊಳ್ಳುತ್ತಿದ್ದೇನೆ. ಮುಂದೊಂದು ದಿನ ಎಲ್ಲೋ ಭೇಟಿಯಾದಾಗ ಗೆಲುವಿನ ಮುಗುಳು ನಗೆಯೊಡನೆ ನಿಮ್ಮನ್ನು ಕಣ್ತುಂಬಾ ಕಾಣ ಬೇಕೆಂದು... ಆದರೆ ಇವತ್ತಿನ ನನ್ನ ಆಸೆ ನಿಮ್ಮ ಹೆಗಲೇರಬೇಕೆಂಬುದೇ ಬಿಸಿಲಿನಿಂದ ಬಂದಾಗ ನಿಮ್ಮೆದೆಯಲ್ಲಿ ಅವಿತುಕೊಂಡು ಬೆವರಿನ ವಾಸನೆಯ ಆ ಹಳೆಯ ಲೋಕವನ್ನು ಕಾಣಬೇಕೆಂದು. ನನ್ನ ಎಲ್ಲಾ ನೆನಪುಗಳ ಮಾಸಿಹುದು. ನಿಮ್ಮ ವಿನಃ ನನಗೇನು ಕಾಣುತ್ತಿಲ್ಲ. ನಾನು ಎಲ್ಲೋ ಲೀನವಾಗುತ್ತಿದ್ದೇನೆ... ಬಹುಶಃ ನಿಮ್ಮೊಂದಿಗೆ ನಿಮ್ಮನ್ನು ಕಾಣಲು ಹೋಗುತ್ತಿರಬಹುದು.

ನನ್ನ ಕೈ ಕಾಲುಗಳು ಜಡವಾಗಿ ಬಿಟ್ಟಿವೆ. ನಾನು ಪ್ರಯಾಣ ಮಾಡುತ್ತಿರುವುದಂತೂ ನಿಜ. ಆದರೆ ಖಂಡಿತವಾಗಿಯೂ ಬಸ್ಸಿನಲ್ಲಲ್ಲ. ಬಿಳಿಯ ಧೂಮಗಳ ನಡುವಿನ ಅಲೆ ಅಲೆಯ ಮೋಡಗಳ ನಡುವೆ ನಿಮ್ಮ ಕೈ ಹಿಡಿದು ಪುಟ್ಟ ಪುಟ್ಟ ಹೆಜ್ಜೆಗಳನ್ನಿಡುತ್ತಾ ನಡೆಯುತ್ತಿದ್ದೇನೆ. ನಾನು ಎಂದಿನಿಂದಲೂ ಹೀಗೆಯೇ ಇದ್ದೇನೆ. ನೀವೂ ನನ್ನನ್ನು ನಡೆಯಿಸುತ್ತಲೇ ಇದ್ದೀರಿ. ಇದೊಂದು ಸತ್ಯ. ಉಳಿದುದು ಯಾವುದೂ ನನ್ನ ನೆನಪಿನಲಿಲ್ಲ... ಏಕಾಏಕಿ ಉಂಟಾದ ಎದೆಯ ನೋವಿನಿಂದ ನನ್ನ ಇಡೀ ಅಸ್ತಿತ್ವವೇ ಅದುರತೊಡಗಿತು. ಗಾಳಿ ಅಲಭ್ಯವಾಗಿದೆಯೇ? ನನ್ನದೆ ಸಿಡಿಯಲು ಬಾಂಬ್ ಇಟ್ಟವರಾರು? ನೋವನ್ನು ವ್ಯಕ್ತಗೊಳಿಸಲು ಸಾವಿರ ನಾಲಿಗೆಯಿಂದ ಚೀರಬೇಕಾದಿತೇನೋ. ಆದರೆ ಇರುವ ಒಂದು ನಾಲಿಗೆಯೂ ಪಸೆಯನ್ನು ಕಳೆದುಕೊಂಡು ಜಡವಾಗಿ ಬಿಟ್ಟಿದೆ. ಎದೆಯ ನೋವಿನ ಅಲೆಯನ್ನು ಹಿಡಿಯುವ ವ್ಯರ್ಥ ಪ್ರಯತ್ನ ಮಾಡಲು ಯಾವೊಂದು ಕೈಕೂಡ ಮೇಲೇಳುತ್ತಿಲ್ಲ... ಅಬ್ಬಾ, ಇದು ಸಾವೇ, ಇದು ಅತ್ಯವೇ, ಆರಂಭವೇ, ನಾನಿದನ್ನು ಹೇಗೆ ಅನುಭವಿಸಲಿ ತಡೆಯುವ ಯಾವುದೇ ಪ್ರಯತ್ನ ನನ್ನಿಂದ ಸಾಧ್ಯವಿಲ್ಲ.

ನಿಧಾನವಾಗಿ ಎಲ್ಲ ನೋವುಗಳು ಮಾಯವಾದವು ಕಣ್ಣೆದುರು ಬೆಳಕು ಮಾಯವಾಗಿ ಕಪ್ಪು ತೆರೆಯೊಂದು ಕಣ್ಣುಗಳನ್ನು ಆವರಿಸಿ ನೆಲ–ಆಕಾಶ ಅಕ್ಕಪಕ್ಕ ಎಲ್ಲವೂ ಸರಿದು ಹೋಗಿ ಕ್ರಮೇಣ ಜಾರುತ್ತಾ ಹೋದೆ. ಅಂತಹ ಗಳಿಗೆಯಲ್ಲೂ ಒಂದೇ ಸಂತೃಪ್ತಿ. ನನ್ನದೆನ್ನಬಹುದಾದ ಬೆರಳುಗಳಲ್ಲಿ ಹೆಣೆದುಕೊಂಡಿರುವ ಬೆರಳುಗಳು ನಾನು ಬಯಸುತ್ತಿದ್ದ, ಅಪೇಕ್ಷಿಸುತ್ತಿದ್ದ ಚಿರಪರಿಚಿತವಾದ ನಿಮ್ಮ ಹಸ್ತ ನನ್ನ ತಲೆ ಸವರುತ್ತಿತ್ತು.

ಅಪ್ರಯತ್ನವಾಗಿ ಅಸ್ಪಷ್ಟವಾಗಿ ನನಗೇ ಕೇಳಿಸದಂತೆ ತೊದಲಿದೆ. "ಆಬ್ಬಾ, ಬಂದೆ ನಿಮ್ಮೊಡನೆ ನಾನೂ ಕೂಡ" ಕರೆದಿರಿ "ಬಾ ಮಗಳೆ ನನ್ನ ಜೊತೆ... ಕಣ್ಣು ಬಿಡು; ನನ್ನ ಬೆರಳು ಹಿಡಿದುಕೋ... ಹೆಜ್ಜೆ ಇಡು ನನ್ನ ಜೊತೆಗೆ... ಸಂತೋಷಾತಿರೇಕದಲ್ಲಿ ನಾನು ಮಿಂದು ಹೋದೆ, ನಿಮ್ಮೊಡನೆ ಇರುವುದಕ್ಕಿಂತ ಹೆಚ್ಚಿನ ಭಾಗ್ಯ ನನಗೆ ಇನ್ನಾವುದಿದೆ... ಇನ್ನೆಲ್ಲೂ ಸಿಗದಿದ್ದ ನಿಮ್ಮ ಕಣ್ಣುಗಳ ಆತ್ಮೀಯತೆಗೆ; ಅಸಂಖ್ಯ ನಕ್ಷತ್ರಗಳ ಬೆಳಕಿನ ನಿಮ್ಮ ನೋಟದ ತಂಪಿಗೆ ನಾನು ಕಣ್ತೆರೆದಿದ್ದೇನೆ. ನಿಮ್ಮ ಮೋರೆಯ ಪ್ರಜ್ವಲಿತ ಕಾಂತಿಗೆ ನಾನು ಕಣ್ತೆರೆದು..."

ನಿಧಾನವಾಗಿ ತೆರೆದ ಕಣ್ಣುಗಳಿಗೆ ಮೊದಲೇನೂ ಕಾಣಲಿಲ್ಲ. ಕ್ರಮೇಣ ಅನುಭವಕ್ಕೆ ಬಂದದ್ದು ನನ್ನ ತಣ್ಣನೆಯ ಕೈಗಳನ್ನು ಬಿರುಸಾಗಿ ಉಜ್ಜುತ್ತಿದ್ದ ನನ್ನ ತಲೆಯನ್ನು ತನ್ನೆದೆಗೆ ಒತ್ತಿಕೊಳ್ಳುತ್ತಿದ್ದ ಬಿಕ್ಕುತ್ತಾ ನಡುನಡುವೆಯೆ "ಅಮ್ಮೀ... ಅಮ್ಮೀ... ಅಮ್ಮೀ..." ಎಂದು ಆಕ್ರಂದನಗೈಯುತ್ತಿದ್ದ ನಾಹಿದ್ ನನ್ನ ಸೀರೆ, ಶಾಲು, ಎಲ್ಲವೂ ವಾಂತಿಯಿಂದ ಮಲಿನವಾಗಿದ್ದವು. ನಾಹಿದ್ ಇದ್ಯಾವುದನ್ನೂ ಲೆಕ್ಕಿಸದೆ ನಾನು ಕಣ್ಣು ಬಿಟ್ಟು ನೋಡಿದೊಡನೆಯೇ ನನ್ನ ಮಡಿಲಿಗೆ ಬಿದ್ದು ಬಿಕ್ಕಲಾರಂಭಿಸಿದ. ಅಂತಹ ಸ್ಥಿತಿಯಲ್ಲೂ ನನ್ನೆದೆಯ ಮಮತೆ ಪುಟಿಯಿತು. ನನ್ನ ಅಶಕ್ತ ಕೈಗಳನ್ನು ನಾಹಿದ್ ತಲೆಯ ಮೇಲಿಟ್ಟೆ.

ಸುತ್ತಲೂ ಸೇರಿದ್ದ, ಬಸ್ಸಿನ ಸೀಟುಗಳ ಮೇಲೇರಿದ್ದವರ ಸಹಾನುಭೂತಿ, ಕರುಣೆ, ಕಾತರ, ನಿರೀಕ್ಷೆ ಪ್ರಶ್ನೆಗಳಿಂದ ಕೂಡಿದ ನೋಟಗಳ ಸಹ ಪ್ರಯಾಣಿಕರು ಮೆಲ್ಲನೆ ಚದುರಿ ತಮ್ಮ ತಮ್ಮ ಸೀಟುಗಳಿಗೆ ಹಿಂದಿರುಗುತ್ತಿದ್ದರು. ಕಂಡಕ್ಟರ್ ಶಿಳ್ಳೆಯೂದುವುದನ್ನೂ ಚಾಲಕ ಕಾಯಲಿಲ್ಲ. ಬಸ್ಸು ನಿಧಾನಚವಾಗಿ ಚಲಿಸಲಾರಂಭಿಸಿತು. ನಾಹಿದ್ ನನ್ನ ಮಡಿಲಲ್ಲಿ ಬಿಕ್ಕುತ್ತಲೇ ಇದ್ದ.

ಆಬ್ಬಾ, ನಾಹಿದ್‌ನನ್ನು ಸಧ್ಯಕ್ಕೆ ಅನಾಥನನ್ನಾಗಿ ಮಾಡಲಾರೆ. ನನ್ನಂತ ಪ್ರತಿಗಳಿಗೆಯಲ್ಲೂ ಅವನನ್ನು ಸಾಯಗೊಳಿಸಲಾರೆ. ನನಗೆ ನಿಮ್ಮ ಅವಶ್ಯಕತೆಗಿಂತ ಅವನಿಗೆ ನನ್ನ ಅಗತ್ಯ ಹೆಚ್ಚಿದೆ... ಖುದಾ ಹಾಫೀಜ್.

**ಆಕರ : ಬೆಂಕಿ ಮಳೆ – ಬಾನು ಮುಷ್ತಾಕ್**

## ೪.೩ ಜಾಗತೀಕರಣದ ಜಾರುಬಂಡೆ

**ಬರಗೂರು ರಾಮಚಂದ್ರಪ್ಪ**

ಇಪ್ಪತ್ತನೆಯ ಶತಮಾನದ ಕೊನೆಯ ದಶಕವು ನಮ್ಮ ದೇಶಕ್ಕೆ ದುರಂತರದ ದಿಡ್ಡಿ ಬಾಗಿಲು ತೆರೆದ ಕಾಲಘಟ್ಟ, ಇದರರ್ಥ ಈ ಕೊನೆಯ ದಶಕದವರೆಗೆ ನಮ್ಮ ದೇಶವು ಸಕಲ ಸಮೃದ್ಧಿ-ಅಭಿವೃದ್ಧಿಗಳ ಅನುಭವ ಪಡೆಯಿತೆಂದು ಅರ್ಥವಲ್ಲ, ಏನಿಲ್ಲವೆಂದರೂ ಇಪ್ಪತ್ತನೆಯ ಶತಮಾನದ ಮೊದಲ ಒಂಬತ್ತು ದಶಕಗಳಲ್ಲಿ ಹೊಸ ಚರ್ಚೆ, ಚಿಂತನೆ ಮತ್ತು ಚಲನಶೀಲತೆಗಳು ತಮ್ಮದೇ ಆದಕೊಡುಗೆ ನೀಡಿವೆ. ಹೊಸ ವಾಗ್ವಾದಗಳನ್ನು ಹುಟ್ಟುಹಾಕಿವೆ; ನೆಲಮುಟ್ಟುವ ಮನೋಧರ್ಮವನ್ನು ಬೆಳೆಸಿವೆ. ಸ್ವಾತಂತ್ರ್ಯದ ಸಂಭ್ರಮ ಮತ್ತು ಸಂಕಟಗಳೆರಡನ್ನೂ ಏಕಕಾಲಕ್ಕೆ ಅನುಭವಿಸುವ ಅಸಾಧಾರಣ ಅವಕಾಶವು ಈ ಕಾಲಘಟ್ಟದಲ್ಲಿ ಲಭ್ಯವಾಗಿದೆ. ಪ್ರಜಾಪ್ರಭುತ್ವದ ಏರಿಳಿತಗಳಲ್ಲಿ ನಮ್ಮ ನೆಲ ಹದಗೊಳ್ಳುತ್ತ ಬಂದಿದೆ. ನೀರು-ನೆಲಗಳನ್ನು ಎಲ್ಲರ ನೆಲೆಯಾಗಿಸುವ ಪ್ರಯತ್ನಗಳು ನಡೆದಿವೆ. ಹೀಗೆ ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಕೊರತೆಗಳ ನಡುವೆಯೂ ಮುನ್ನಡೆಯ ಮನೋಭೂಮಿಕೆ ಸಿದ್ಧವಾಗಿದ್ದು ಇಪ್ಪತ್ತನೆಯ ಶತಮಾನದ ಒಂದು ಮುಖ್ಯ ಕೊಡುಗೆಯೆಂದೇ ಹೇಳಬೇಕು. ಶೈಕ್ಷಣಿಕವಾಗಿ ಅಕ್ಷರ ನ್ಯಾಯ, ಸಾಮಾಜಿಕವಾಗಿ ಸಾಮಾಜಿಕ ನ್ಯಾಯ, ಆರ್ಥಿಕವಾಗಿ ಭೂಸುಧಾರಣೆ ಮತ್ತು ಬ್ಯಾಂಕ್ ರಾಷ್ಟ್ರೀಕರಣದಂತಹ ದಿಟ್ಟಕ್ರಮಗಳು ಸಾಧ್ಯವಾದುದ್ದು ಇಪ್ಪತ್ತನೆಯ ಶತಮಾನದಲ್ಲಿ ಎಂಬುದನ್ನು ಗಮನಿಸಬೇಕು. ಸಾಂಸ್ಕೃತಿಕವಾಗಿಯೂ ಇದು ಸಾರ್ಥಕ ಕಾಲಘಟ್ಟ. ಹೊಸ ಚಿಂತನೆ ಹಾಗೂ ಸ್ಥಿತ್ಯಂತರಗಳಿಂದ ಕೂಡಿದ ಸಾಂಸ್ಕೃತಿಕ ಲೋಕ ಅನನ್ಯತೆ ಹಾಗೂ ವಿಸ್ಮಯಗಳನ್ನು ಮೂಡಿಸಿದ ಮಹತ್ವದ ಬೆಳವಣಿಗೆಗಳು ಅಸಾಧಾರಣವಾಗಿವೆ. ದೇಶಭಾಷೆಗಳಲ್ಲಿ ಮೂಡಿದ ಆತ್ಮವಿಶ್ವಾಸ ಮತ್ತು ಅಭಿವ್ಯಕ್ತಿ ವಿನ್ಯಾಸಗಳೂ ಒಟ್ಟಾರೆ ಅಪೂರ್ವವಾಗಿದೆ; ಹೊಸ ಸಂವೇದನೆಯ ನೆಲೆಗಳು ಅನಾವರಣಗೊಂಡು ಅಜ್ಞಾತಲೋಕಗಳು ಆಕಾರ ಪಡೆಯುತ್ತ ಬಂದಿವೆ.

ಆದರೆ, ಇದೇ ಇಪ್ಪತ್ತನೆಯ ಶತಮಾನದ ಕೊನೆಯ ದಶಕದಲ್ಲಿ ಎರಡು ನೆಲೆಗಳು ತಂತಮ್ಮ ಅತಿರೇಕಗಳ ಮೂಲಕ ದೇಶಕ್ಕೆ ದುರಂತದ ದಿಡ್ಡಿಬಾಗಿಲು ತೆರೆದವು. ಆ ಎರಡು ನೆಲೆಗಳು ೧) ಕೋಮುವಾದದ ಕರಾಳತೆ ೨) ಜಾಗತೀಕರಣದ ಆಕ್ರಮಣಶೀಲತೆ.

ನಮ್ಮ ದೇಶಕ್ಕೆ ಕೋಮುವಾದ ಹೊಸದೇನಲ್ಲ. ಧಾರ್ಮಿಕ ಮೂಲಭೂತವಾದದ ಕರಾಳ ರೂಪವಾಗಿ ಹೊರ ಹೊಮ್ಮಿದ ಕೋಮುವಾದವು ಮಂದಿರ-ಮಸೀದಿಗಳ ಘರ್ಷಣೆಯಲ್ಲಿ ಲಕ್ಷ್ಮಣರೇಖೆಯನ್ನು ದಾಟಿ ರಾಮನಾಮ ಸ್ಮರಣೆಯ ಮೂಲಕ ಶ್ರೀರಾಮನನ್ನೇ ಆತಂಕಕಾರಿಯಾಗಿಸಿತು. ಮಸೀದಿಯ ಧ್ವಂಸವು ನಮ್ಮ ದೇಶದ ಕರಾಳ ಅಧ್ಯಾಯವಾಯಿತು. ಶಾಂತಿ, ಸೌಹಾರ್ದಗಳೇ ನಮ್ಮ ದೇಶದ ಮುಖ್ಯ ಮೌಲ್ಯಗಳೆಂದ ಪ್ರತಿಪಾದನೆಯೇ ಪ್ರಶ್ನಾರ್ಹವಾಯಿತು. ಹಿಂದೂ ಕೋಮುವಾದದ ಫಲವಾಗಿ ನಮ್ಮ ದೇಶದ ಆದ್ಯತೆಗಳೇ ಬದಲಾಗತೊಡಗಿದವು; ಸಾಮಾಜಿಕ ನ್ಯಾಯ, ಆರ್ಥಿಕ ಅಭಿವೃದ್ಧಿ, ಸಮಾನತೆ ಮುಂತಾದ ಪರಿಭಾಷೆಯು ಪರಕೀಯವಾಗುತ್ತ ಹಿಂದೂ ಪುನರುತ್ಥಾನವೇ ರಾಷ್ಟ್ರೀಯತೆಯೆಂದೂ ಮಂದಿರ ನಿರ್ಮಾಣವೂ ಇಡೀ ರಾಷ್ಟ್ರದ ಸ್ವಾಭಿಮನ ಹಾಗೂ ಪ್ರತಿಷ್ಠೆಯ ಪ್ರಶ್ನೆಯೆಂದೂ ಪರಿಗಣಿಸಲಾಯಿತು. ಬಹುಭಾಷೆ, ಬಹುಧರ್ಮ, ಬಹುಸಂಸ್ಕೃತಿಗಳ ದೇಶವಾದ ಇಂಡಿಯಾವನ್ನು ಏಕಧರ್ಮದ ರಾಷ್ಟ್ರವನ್ನಾಗಿಸುವ ಹುನ್ನಾರ ಪ್ರಬಲವಾಗಿ ಜಾತ್ಯತೀತ ಕಲ್ಪನೆಯು ವ್ಯಂಗ್ಯದ ವಸುವಾಯಿತು. ಹಿಂದೂ ಮೂಲಭೂತವಾದವಷ್ಟೇ ಅಲ್ಲ, ಮುಸ್ಲಿಮರಲ್ಲಿರುವ ಮೂಲಭೂತವಾದಿಗಳೂ 'ಜಾಗೃತ'ರಾಗಿ ತಮ್ಮ ಕೊಡುಗೆಯನ್ನು ನೀಡತೊಡಗಿದರು. ಅಲ್ಪಸಂಖ್ಯಾತರ ಆತಂಕಗಳನ್ನು ಬೇರೊಂದು ನೆಲೆಯಿಂದಲೇ ಅರ್ಥಮಾಡಿಕೊಳ್ಳಬೇಕೆಂಬ ಬದ್ಧತೆಯನ್ನಿಟ್ಟುಕೊಂಡು, ಎಲ್ಲ ಧರ್ಮೀಯರ ಮೂಲಭೂತವಾದವನ್ನು ವಿರೋಧಿಸಬೇಕಾದ್ದು ಅನಿವಾರ್ಯ. ಹೀಗಾಗಿ ಎಲ್ಲ ಹಿಂದೂಗಳೂ ಎಲ್ಲ ಮುಸ್ಲಿಮರೂ ಸಾರಾಸಗಟಾಗಿ ಮೂಲಭೂತವಾದಿಗಳಲ್ಲ ಎಂಬ ಚರ್ಚೆಗಳಿಗೆ ಒತ್ತಾಸೆ ಒದಗಿತು. ಯಾವುದೇ ಧರ್ಮದ ಮೂಲ ಧಾರ್ಮಿಕ ಆಶಯಗಳಿಗೂ ಆನಂತರ ಆಯಾ ಧರ್ಮ ಹಾಗೂ ಧಾರ್ಮಿಕತೆಗಳನ್ನು 'ಅಪಹರಣ' ಮಾಡಿದ ವಕ್ತಾರರ ಅಪೇಕ್ಷೆಗಳಿಗೂ ಸಾಕಷ್ಟು ಅಂತರವಿದೆ. ಈ ದೃಷ್ಟಿಯಿಂದ ಆರ್‌ಸ್ಸೆಸ್-ಭಜರಂಗ ದಳಗಳು ಮತ್ತು ಅಸಂಖ್ಯಾತ ಅಮಾಯಕ ಹಿಂದೂ ನಾಮಾಂಕಿತ ಸಾಮಾನ್ಯರು ಬೇರೆಯೇ ಆಗಿರುತ್ತಾರೆ. ಅಂತೆಯೇ ಕುರಾನ್ ಮತ್ತು ಲಾಡೆನ್ ಬೇರೆಯಾಗಿರುತ್ತಾರೆ. ಅದೇನೇ ಇರಲಿ ಇಪ್ಪತ್ತನೆಯ ಶತಮಾನದ ಕೊನೆಯ ದಶಕದಲ್ಲಿ ತನ್ನ ಕಬಂಧ ಬಾಹುಗಳನ್ನು ಚಾಚುತ್ತ ಬೀದಿಗೆ ಬಂದ ಕೋಮುವಾದ ಇಂದು ವಿವಿಧ ಬಣ್ಣಗಳಲ್ಲಿ ಬೆಚ್ಚಿ ಬೀಳಿಸುತ್ತಿದೆ. ಕೆಲವರಲ್ಲಿ 'ಭಯೋತ್ಪಾದಕ ಬಾಯಿ'ಯಾಗಿ, ಕೆಲವರಲ್ಲಿ 'ಭಯೋತ್ಪಾದಕ ಬಂದೂಕ'ವಾಗಿ ಕಾಣಿಸಿಕೊಳ್ಳುತ್ತಿದೆ.

ಧಾರ್ಮಿಕ ಭಯೋತ್ಪಾದನೆ ಒಂದು ಕಡೆಯಾದರೆ, ಜಾಗತೀಕರಣದ ಜಾರುಬಂಡೆಯಲ್ಲಿ ಬಂದ ಆರ್ಥಿಕ ಭಯೋತ್ಪಾದನೆ ಇನ್ನೊಂದು ಕಡೆ. ನಮ್ಮ ದೇಶವು ಒಪ್ಪಿಕೊಂಡಿದ್ದ ಮಿಶ್ರ ಆರ್ಥಿಕ ಪದ್ಧತಿಯನ್ನು ಬುಡಮೇಲು ಮಾಡಿ, ಖಾಸಗೀಕರಣವೊಂದೇ ಮೋಕ್ಷಾರ್ಥ ಸಾಧನವೆಂದು ಪ್ರಚುರಪಡಿಸುವ ಜಾಗತೀಕರಣ ಪ್ರಕ್ರಿಯೆಯೆಯು ಪ್ರಾರಂಭವಾದದ್ದು ಕಳೆದ ಶತಮಾನದ ಕೊನೆಯ ದಶಕದ ಆರಂಭದಲ್ಲಿ ಎಂಬುದನ್ನು ಇಲ್ಲಿ ಗಮನಿಸಬೇಕು. ಯಾಕೆಂದರೆ ಕೋಮುವಾದದ ಕರಾಳತೆ ಮತ್ತು ಜಾಗತೀಕರಣದ ಆಕ್ರಮಣಶೀಲತೆಗಳು ಸರಿಸುಮಾರು ಒಂದೇ ಕಾಲಘಟ್ಟದಲ್ಲಿ ಪ್ರಬಲವಾಗಿವೆ. ಮಿಶ್ರ ಆರ್ಥಿಕ ಪದ್ಧತಿಯಲ್ಲಿ ಯಾವುದೇ ಖಾಸಗಿ ಮೂಲದ ಸ್ವದೇಶಿ ಅಥವಾ ವಿದೇಶಿ ಬಂಡವಾಳವು ಸ್ವಾಮ್ಯ ಸ್ಥಾಪಿಸುವ ಪ್ರಮಾಣದಲ್ಲಿ ಇರುವುದಿಲ್ಲ. ಕಾರ್ಖಾನೆಯೊಂದಕ್ಕೆ ಬಂಡವಾಳ ತೊಡಗಿಸಿದರೆ ನಮ್ಮ ಸರ್ಕಾರದ ಬಂಡವಾಳವು ಶೇ.೫೦ ಕ್ಕಿಂತ ಹೆಚ್ಚು ಇರುವುದು ಮತ್ತು ಆ ಮೂಲಕ ನಿಯಂತ್ರಣವನ್ನು ಸಾಧಿಸುವುದು ನೀತಿಯಾಗಿತ್ತು. ಜಾಗತೀಕರಣವು ಈ ನೀತಿಯನ್ನು ನುಚ್ಚು ನೂರು ಮಾಡಿತು. ಇದು ದೇಶದ ದೊಡ್ಡ ದುರಂತ.

ಜಾಗತೀಕರಣ ಎನ್ನುವುದು ಇಡೀ ಜಗತ್ತಿನ ಗುಣಲಕ್ಷಣಗಳನ್ನು ಪಡೆದಿದೆಯೇ ಎಂದು ನೋಡಿದರೆ ನಕರಾತ್ಮಕ ಉತ್ತರ ದೊರಕುತ್ತದೆ. ಇದು ಅಮೇರಿಕ ಪ್ರಾಯೋಜಿತ ಆರ್ಥಿಕ ಪದ್ಧತಿ. ಸೋವಿಯತ್ ಯೂನಿಯನ್ ಪತನಗೊಂಡ ಅಥವಾ ಪತನಗೊಳಿಸಿದ ನಂತರ, ಇಡೀ ಜಗತ್ತಿನಲ್ಲಿ ಅಮೆರಿಕವು ಏಕೈಕ ಪ್ರಬಲ ದೇಶವಾಗಿ ತನ್ನ ನೆಲೆಯನ್ನು ಭದ್ರಪಡಿಸಿಕೊಂಡಿತ್ತು. ಅಭಿವೃದ್ಧಿಶೀಲ ರಾಷ್ಟ್ರಗಳ ಕಣ್ಣಿಗೆ ಅಮೇರಿಕವೇ ಜಗತ್ತಾಗಿ ಕಾಣಿಸತೊಡಗಿತು. ಆದ್ದರಿಂದ ಅಮೇರಿಕಾ ಪ್ರಾಯೋಜಿತ ಆರ್ಥಿಕ ಅಂಶಗಳು 'ಜಾಗತೀಕರಣ' ವೆಂಬ ಉದ್ಘೋಷದೊಂದಿಗೆ ಊಳಿಡುತ್ತ ಇಂಡಿಯಾದೊಳಗೆ ದಾಳಿಯಿತೊಡಗಿದಾಗ, ನಮ್ಮ ದೇಶದ ಧುರೀಣರು, ಅದನ್ನು ದಾಳಿಯೆಂದು ಭಾವಿಸದೆ ದಾನಶೂರರ ಆಗಮನವೆಂದು ನಂಬುತ್ತ ಹಾಗೂ ನಂಬಿಸುತ್ತ ವಂದಿಮಾಗದರ ವೇಷ ಧರಿಸಿದರು. ಅಭಿವೃದ್ಧಿಶೀಲ ದೇಶಗಳು ಇದಕ್ಕಿಂತ ಭಿನ್ನವಾಗಲಿಲ್ಲವಾದ್ದರಿಂದ 'ಅಮೇರಿಕೀಕರಣ'ವೇ 'ಜಾಗತೀಕರಣ' ವೆಂದು ಪ್ರಸಿದ್ಧವಾಯಿತು. ಆರ್ಥಿಕ ಶಕ್ತಿಯ ಪ್ರಬಲ ವಕ್ತಾರರು ಹೇಳಿದ್ದು ವೇದವಾಕ್ಯವಾಗಿ 'ಆರ್ಥಿಕ ಸುಧಾರಣೆ' ಯೆಂಬ ಜಡ ಪರಿಭಾಷೆಯೇ ಹೊಸಪರಿಭಾಷೆಯಾಗುವ ವಿಪರ್ಯಾಸ ತಲೆದೋರಿತ್ತು. ಈ ಆರ್ಥಿಕ ಸುಧಾರಣೆ'ಯ ಪರಿಕಲ್ಪನೆಯು ಇಲ್ಲಿವರೆಗೆ ನಮ್ಮ ದೇಶವು ನಂಬಿದ್ದ ಆದ್ಯತೆಗಳಿಗೆ ಧಕ್ಕೆ ತಂದದ್ದಷ್ಟೇ ಅಲ್ಲ, ಸರ್ಕಾರದ ನೀತಿ ನಿರೂಪಣೆಯನ್ನು ನಿಯಂತ್ರಿಸತೊಡಗಿತ್ತು. ನಮ್ಮ ದೇಶವು ಆರ್ಥಿಕ ಸಂಕಷ್ಟದಲ್ಲಿರುವುದರಿಂದ 'ಜಾಗತೀಕರಣ')ಕ್ಕೆ ಒಗ್ಗಿಕೊಳ್ಳುವುದು ಅನಿವಾರ್ಯವೆಂಬ ಅಭಿಪ್ರಾಯವನ್ನು ಅಂದಿನ ಕಾಂಗ್ರೆಸ್ ಆಡಳಿತಗಾರರಿಂದ ಆರಂಭಿಸಿ ಇಂದಿನ ಬಿಜೆಪಿ ಆಡಳಿತಗಾರರಿಗೆ ಬಾಯಿಪಾಠ ಒಪ್ಪಿಸತೊಡಗಿದರು. ಹೀಗಾಗಿ ಅಮೆರಿಕೀಕರಣವೇ ಜಾಗತೀಕರಣವೆಂದು ನಂಬಿಸಲ್ಪಟ್ಟಿತು.

ಕೈಗಾರಿಕೀಕರಣ ಹಾಗೂ ಜಾಗತೀಕರಣಗಳು ಪ್ರತ್ಯೇಕ ಪರಿಕಲ್ಪನೆಗಳು. ಕೆಲವರು ಎರಡೂ ಒಂದೇ ಎಂಬುದಾಗಿ ಅಥವಾ ಕೈಗಾರಿಕೀಕರಣದ ವಿಸ್ತೃತ ಭಾಗವೇ ಜಾಗತೀಕರಣ ಎಂಬುದಾಗಿ ಪ್ರತಿಪಾದಿಸುವುದುಂಟು. ಕೆಲವು ಚರ್ಚೆಗಳಲ್ಲಿ ಇಂಥ ಪ್ರತಿಪಾದನೆಯ ಅಂಶಗಳು ಇಣುಕುತ್ತಿರುವುದನ್ನು ನಾನು ಕಂಡಿದ್ದೇನೆ. ನಿಜ; ಕೈಗಾರಿಕೀರಣ ಮತ್ತು ಜಾಗತೀಕರಣ– ಎರಡೂ ನೆಲೆಗಳಿಗೆ ಬಂಡವಾಳ ತೊಡಗಿಸುವಿಕೆಯು ಒಂದು ಮುಖ್ಯ ಕ್ರಿಯೆ. ಆದರೆ ಪರಿಣಾಮದಲ್ಲಿ ಸಾಕಷ್ಟು ಅಂತರವಿರುವುದನ್ನು ಕಾಣಬಹುದು.

ಕೈಗಾರಿಕೀಕರಣವು ನಮ್ಮ ದೇಶದಲ್ಲಿ ಕೆಲವು ಸಕಾರಾತ್ಮಕವಾದ ಬೆಳವಣಿಗೆಗಳಿಗೆ ಕಾರಣವಾಯಿತು. ಅವುಗಳನ್ನು ಹೀಗೆ ವಿವರಿಸಬಹುದು:

೧) ನಮ್ಮ ದೇಶದ ಉತ್ಪಾದನಾ ವಿಧಾನವು ಮೂಲತಃ ಕುಲಕಸುಬುಗಳಿಂದ ಕೂಡಿದ್ದನ್ನು ಇಲ್ಲಿ ಗಮನಿಸಬಹುದು. ನಾನು ಗುಡಿಕೈಗಾರಿಕೆಯ ಒಂದು ಭಾಗವಾಗಬಹುದು. ಆದರೆ ಗುಡಿಕೈಗಾರಿಕೆಗಳು ಕುಲಮೂಲ ಕಸುಬಿನ ಸ್ವರೂಪವನ್ನು ಉಳಿಸಿಕೊಳ್ಳಬೇಕಾಗಿಲ್ಲ. ಅಂದರೆ ಆಯಾ ಕುಲಕ್ಕೆ ಆಯಾ ಕಸುಬು ನಿಶ್ಚಿತ ಎಂಬ ಅಂಶ ಗುಡಿಕೈಗಾರಿಕೆಗಳಲ್ಲಿ ಇಲ್ಲ. ಗ್ರಾಮೀಣ ಮೂಲ ಸಂಪನ್ಮೂಲವನ್ನು ಆಧರಿಸಿ, ಕಸುಬಿಗೆ ಮೂಲವಾದ ಕುಲದ ಕಟ್ಟನ್ನು ಮೀರಿ ಗುಡಿ ಕೈಗಾರಿಕೆಯು ಬೆಳೆಯಬಹುದು. ಕೈಗಾರಿಕೀಕರಣದಿಂದ ಗುಡಿಕೈಗಾರಿಕೆಯ ಕಲ್ಪನೆಗೆ ಸ್ವಲ್ಪ ಹಿನ್ನಡೆಯಾಗಿರಬಹುದಾದರೂ ಕೈಗಾರಿಕೀಕರಣವು ಕುಲಮೂಲ ಕಸುಬಿನ ಕಲ್ಪನೆಯನ್ನು ದೊಡ್ಡ ಪ್ರಮಾಣದಲ್ಲಿ ಉಲ್ಲಂಘಿಸಿದ್ದು ನಮ್ಮ ದೇಶದ ಮಟ್ಟಿಗೆ ಮುಖ್ಯ ಬೆಳವಣಿಗೆ. ಕಸುಬಿನ ಮೂಲಕ ಕುಲದ ಕಟ್ಟನ್ನು ಗಟ್ಟಿಗೊಳಿಸುವ ಕ್ರಿಯೆಗೆ ಕೈಗಾರಿಕೀಕರಣದಿಂದ ಪೆಟ್ಟುಬಿದ್ದಿತ್ತು. ಎಲ್ಲ ಕುಲದವರೂ ಒಂದು ನಿರ್ದಿಷ್ಟ ಉತ್ಪಾದನಾ ವಿಧಾನದಲ್ಲಿ ಭಾಗವಹಿಸುವ ಅವಕಾಶ ಲಭ್ಯವಾಯಿತು.

ಕೈಗಾರಿಕೀಕರಣದ ಫಲವಾಗಿ 'ಸಾಮೂಹಿಕ ಉತ್ಪಾದನಾ ವಿಧಾನ' ಜಾರಿಗೆ ಬಂತು. ಸಾವಿರಾರು ಜನರು ಒಂದೇ ಸೂರಿನಡಿ ಕೆಲಸ ಮಾಡಲು ಅವಕಾಶ ಒದಗಿದ್ದರ ಪರಿಣಾಮವಾಗಿ ಉದ್ಯೋಗದ ಅವಕಾಶಗಳು ಹೆಚ್ಚಾದವು. ಗ್ರಾಮೀಣ ವಿದ್ಯಾವಂತರಿಗೂ ಕೈಗಾರಿಕೆಗಳಲ್ಲಿ ಉದ್ಯೋಗ ಲಭ್ಯವಾಯಿತು. ನಗರ ಮತ್ತು ಗ್ರಾಮೀಣ ಜನರು ಒಟ್ಟಿಗೇ ಕೆಲಸ ಮಾಡುವುದರ ಮೂಲಕ 'ಮಧ್ಯಮ ವರ್ಗ'ವು ನಿರ್ದಿಷ್ಟ ರೂಪದಲ್ಲಿ ಬೆಳೆಯತೊಡಗಿತು.

೩) ಕೈಗಾರಿಕೀಕರಣದಿಂದ ನಮ್ಮ ದೇಶದ ಜಾತಿ ವ್ಯವಸ್ಥೆ ಸಾಕಷ್ಟು ಸಡಿಲಗೊಳ್ಳುವಂತಾಗಿದೆ. ಸಾಮೂಹಿಕ ಉತ್ಪಾದನೆಯ ತಾಣಗಳಾದ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಸಂದರ್ಭದಲ್ಲಾದರೂ ಅಸ್ಪೃಶ್ಯತೆಯನ್ನು ಆಚರಿಸಲು ಸಾಧ್ಯವಾಗದಂತಹ ಸನ್ನಿವೇಶ ನಿರ್ಮಾಣವಾಗಿದೆ. ಕೆಲಸ ಮಾಡುವ ಸಂದರ್ಭದಲ್ಲಿ ಪರಸ್ಪರ ಮುಟ್ಟುವುದೇ ಇಲ್ಲವೆಂದು ಹಟಮಾಡಲಾಗದು. ರೈಲು, ಬಸ್ಸುಗಳಲ್ಲಿ ಪ್ರಯಾಣಿಸುವಾಗ ಜಾತಿಯನ್ನು ಕೇಳಿ ಪಕ್ಕದಲ್ಲಿ ಕೂತುಕೊಳ್ಳುವ ಬಗ್ಗೆ ನಿರ್ಧರಿಸಲಾಗದು. ಹೀಗೆ ಸಹಜ 'ಸ್ಪರ್ಶನ್ಯಾಯ'ವೊಂದು ಲಭ್ಯವಾಗುವಂತಾಗಿದೆ.

೪) ಕೈಗಾರಿಕೀಕರಣವು ಸಾಂಸ್ಕೃತಿಕ ಸ್ಥಿತ್ಯಂತರಗಳಿಗೂ ಕಾರಣವಾಗಿದೆ. ಶ್ರಮಜೀವಿಗಳ ಮಹತ್ವವನ್ನು ಸಾಂಸ್ಕೃತಿಕ ಲೋಕವು ಕಡೆಗಣಿಸಬಾರದೆಂಬ ಚಿಂತನೆಗೆ ಕಾರಣವಾದದ್ದು ಕೈಗಾರಿಕೀಕರಣ. ದುಡಿಯುವ ಜನರ ದನಿಯಾಗಿ ಸಾಹಿತ್ಯ ರೂಪಗೊಳ್ಳಲು ಒತ್ತಾಸೆಯಾದ ಅನೇಕ ಅಂಶಗಳು ಕೈಗಾರಿಕೀಕರಣದಲ್ಲಿ ಅಂತರ್ಗತವಾಗಿದ್ದವು. ಕೈಗಾರಿಕೀಕರಣದ ಸಂದರ್ಭದಲ್ಲಿ ಅನ್ಯಸಂಸ್ಕೃತಿಗಳ ಪ್ರಭಾವ ಗಾಢವಾಯಿತಾದರೂ ಅದಕ್ಕೆ ಕೈಗಾರಿಕೀಕರಣವೊಂದೇ ಕಾರಣವಲ್ಲ. ಅಲ್ಲದೆ, ಆಗ ದೇಶೀಯತೆಯನ್ನು ಬಿಟ್ಟುಕೊಡದ ಆಧುನಿಕ ವಿನ್ಯಾಸಗಳು ರೂಪುಗೊಳ್ಳತೊಡಗಿದವೇ ಹೊರತು ಅನ್ಯ ದೇಶೀಯತೆಗೆ ಶರಣಾಗಲಿಲ್ಲ. ಅದೊಂದು ಸಂಸ್ಕೃತಿ ಸಂಕರದ ಕಾಲ ಎಂದರೆ ಸರಿಯಾದೀತು.

೫) ಕೈಗಾರಿಕೀಕರಣವು ಮೊದಲೇ ಪ್ರಸ್ತಾಪಿಸಿದ ಮಿಶ್ರ ಆರ್ಥಿಕ ಪದ್ಧತಿಗೆ ವಿರುದ್ಧವಾಗಿರಲಿಲ್ಲ. ಈ ನೆಲದ ಕಾನೂನಿಗೆ ಬದ್ಧವಾಗಿಯೇ ಸಂವಿಧಾನಾತ್ಮಕ ಸಾರ್ವಭೌಮತ್ವದ ಚೌಕಟ್ಟಿನಲ್ಲೇ ಕೈಗಾರಿಕರಣ ಪ್ರಕ್ರಿಯೆ ನಡೆಯುತ್ತ ಬಂದಿತು.

ಆದರೆ ಜಾಗತೀಕರಣವು ನಮ್ಮ ದೇಶದ ಸಂವಿಧಾನಾತ್ಮಕ ಸಾರ್ವಭೌಮತ್ವಕ್ಕೆ ಧಕ್ಕೆ ತರುತ್ತಿದೆ. ಯಾಕೆಂದರೆ ನಮ್ಮ ದೇಶವು ಬಹುಕಾಲದಿಂದ ಒಪ್ಪಿದ್ದ ಮಿಶ್ರ ಆರ್ಥಿಕ ಪದ್ಧತಿಯನ್ನು ಉಲ್ಲಂಘಿಸಿರುವುದಷ್ಟೇ ಅಲ್ಲ, ಆರ್ಥಿಕ ನೀತಿ ನಿರೂಪಣೆಯನ್ನು ತಾನೇ ಮಾಡುತ್ತಿದೆ. ಯಾರಿಗೆ ಸಬ್ಸಿಡಿ ಕೊಡಬೇಕು ಅಥವಾ ಕೊಡಬಾರದು ಎಂಬ ಸಣ್ಣ ಅಂಶದಿಂದ ಹಿಡಿದು ಸಾಲದ ಷರತ್ತುಗಳನ್ನು ವಿಶ್ವಬ್ಯಾಂಕ್ ಹಾಕುತ್ತಿದೆ. ಡಾ. ಅಂಬೇಡ್ಕರ್ ನೇತೃತ್ವದಲ್ಲಿ ರಚಿತವಾದ ನಮ್ಮ-ಸಂವಿಧಾನಕ್ಕೆ ಶ್ರೀಮತಿ ಇಂದಿರಾಗಾಂಧಿಯವರ ಆಡಳಿತಾವಧಿಯಲ್ಲಿ ಸೇರಿದ ಸಮಾಜವಾದಿ ಪರಿಕಲ್ಪನೆಗೆ ಜಾಗತೀಕರಣದಿಂದ ಬೆಲೆಇಲ್ಲದಂತಾಗಿದೆ; ನಮ್ಮ ದೇಶದಲ್ಲಿ ತಳ ಊರುವ ವಿದೇಶಿ ಕಂಪನಿಗಳಿಗೆ ಸಂವಿಧಾನವು ಒಪ್ಪಿರುವ ಮೀಸಲಾತಿ ನೀತಿ ಅನ್ವಯವಾಗುವುದಿಲ್ಲ. ಜಾಗತೀಕರಣವೆನ್ನುವುದು ಖಾಸಗೀಕರಣವಾಗಿದ್ದು ಸರ್ಕಾರಗಳು ಖಾಸಗೀಕರಣ ಗೊಳ್ಳುತ್ತಿವೆ. ಸರ್ಕಾರಗಳು ನಮ್ಮ ಸಂವಿಧಾನದತ್ತ ಹಕ್ಕು ಬಾಧ್ಯತೆಗಳ ಬಗ್ಗೆ ಮಾತನಾಡುವ ಬದಲು ವಿದೇಶಿ ಬಂಡವಾಳಗಾರರ ಭಾಷೆಯಲ್ಲಿ ಮಾತನಾಡತೊಡಗಿವೆ. ಅನಿವಾರ್ಯವೆಂಬಂತೆ ಜಾಗತೀಕರಣವನ್ನು ಒಪ್ಪುತ್ತ, ನಾಡಿನ ಕೆಲವು ಮೂಲತತ್ವಗಳನ್ನು ಉಳಿಸಿಕೊಳ್ಳಲು ಹೆಣಗಾಡುತ್ತಾ ವಿಚಿತ್ರ ಸಂಕಟವನ್ನು ಅನುಭವಿಸುವ ಸರ್ಕಾರಗಳೂ ಕಾಣಿಸುತ್ತಿವೆ. ಕೀಳರಿಮೆಯಿಂದ ಕುಗ್ಗುತ್ತ ವಿದೇಶಿ ಬಂಡವಾಳಕ್ಕೆ ಬಗ್ಗುತ್ತ ಆಡಳಿತ ನಡೆಸಬೇಕಾದ ಸನ್ನಿವೇಶ ನಿರ್ಮಾಣವಾಗಿರುವುದು ಪ್ರಜಾಸತ್ತಾತ್ಮಕ ಸಮಾಜದ ವಿಷಾದಪರ್ವ ಎನ್ನಬಹುದು. ಸ್ವಂತ ಸಂವಿಧಾನ, ಸ್ವಂತ ಸರ್ಕಾರ, ಸ್ವಂತ ನೀತಿಗಳುಳ್ಳ ಒಂದು ದೇಶವು ತನ್ನ ಸಂವಿಧಾನಾತ್ಮಕವಾಗಿ ನೀತಿ ಹಾಗೂ ನಿರ್ದೇಶಕ ತತ್ವಗಳನ್ನು ಮೂಲೆಗೆ ತಳ್ಳುವ ಸ್ಥಿತಿ ಅಷ್ಟೇ ಅಲ್ಲ ಶೋಚನೀಯವಷ್ಟೇ ಅಲ್ಲ, ಪ್ರಜಾಪ್ರಭುತ್ವ ವಿರೋಧಿಯಾದುದು.

ಜಾಗತೀಕರಣವು ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ವಲಯದಲ್ಲಿ ಉಂಟುಮಾಡುತ್ತಿರುವ ಪರಿಣಾಮ ಮತ್ತು ಒಡ್ಡುತ್ತಿರುವ ಸವಾಲುಗಳು ನಕಾರಾತ್ಮಕ ನೆಲೆಯನ್ನು ಪಡೆದಿವೆ. ನೆಲಮೂಲ ಚಿಂತನೆಗಳಿಗೆ ಧಕ್ಕೆ ತರುವಷ್ಟು ಪ್ರಬಲವಾಗಿವೆ. ವಿಜ್ಞಾನ-ತಂತ್ರಜ್ಞಾನಗಳನ್ನೂ ಒಳಗೊಂಡಂತೆ ಜ್ಞಾನದ ದಿಕ್ಕನ್ನು ನಿಯಂತ್ರಿಸುವಷ್ಟು ಬಲಾಢ್ಯವಾಗಿರುವ ಜಾಗತೀಕರಣಕ್ಕೆ ತಕ್ಕ ಉತ್ತರ ಕೊಡುವ ಪ್ರಾಣಶಕ್ತಿ ನಮ್ಮ ಸಮಾಜದ ಸಂವೇದನಾಶೀಲ ವಲಯಗಳಿಗಿದೆ. ಅದು ಕ್ರೋಢೀಕೃತಗೊಳ್ಳುವ ಪ್ರಕ್ರಿಯೆಗಳೂ ಪ್ರಾರಂಭವಾಗಿವೆ. ಸರ್ವರೋಗ ಸಂಜೀವಿನಿಯೆಂಬಂತೆ ಬಿಂಬಿತವಾಗುತ್ತಿರುವ ಜಾಗತೀಕರಣದ ಹುನ್ನಾರಗಳನ್ನು ತಾತ್ವಿಕವಾಗಿ ಮತ್ತು ತಾರ್ಕಿಕವಾಗಿ ಎದುರಿಸುವ ನಿರಂತರ ಕ್ರಿಯೆಯಲ್ಲಿ ತೊಡಗಿಸಿಕೊಳ್ಳುತ್ತ ಹೋಗುವುದು ಇಂದಿನ ಅಗತ್ಯವಾಗಿದೆ. ನಮ್ಮ ಸಂವಿಧಾನಾತ್ಮಕ, ಸ್ವತಂತ್ರ ಸಮಾಜಕ್ಕೆ ಧಕ್ಕೆಯಾಗದ

ಯಾವುದೇ ಜನಪರ ವಿಚಾರಗಳನ್ನು ಒಳಗೊಳ್ಳುತ್ತ ಉತ್ತರ ಕೊಡಬೇಕಾಗಿದೆ. ಜಾಗತೀಕರಣದ ಇತಿಮಿತಿಗಳನ್ನು ಸಾದರಪಡಿಸುವ ಮೂಲಕ ಪರ್ಯಾಯ ಚಿಂತನೆಗೆ ಹಚ್ಚಬೇಕಾಗಿದೆ. ಇದು ಸೈದ್ಧಾಂತಿಕ ಶಿಸ್ತು ಸಾಂಸ್ಕೃತಿಕ ಸಂವೇದನೆ ಮತ್ತು ಸಾಮಾಜಿಕ ಕಾಳಜಿಯಿಂದ ಆಗಬೇಕಾದ ಕ್ರಿಯೆ.

**ಆಕರ: ಶ್ರಮ, ಸಂಸ್ಕೃತಿ ಮತ್ತು ಸಮಾಜ – ಬರಗೂರು ರಾಮಚಂದ್ರಪ್ಪ**

# ೪.೪ ಜಾನಪದ ಜ್ಞಾನ-ವಿಜ್ಞಾನ (ಓದು ಪಠ್ಯ)

**ಎಚ್. ಟಿ. ಪೋತೆ**

ಮಾನವ ಸಂಸ್ಕೃತಿಯನ್ನು ಅರಿಯುವ ಸಾಧನಗಳಲ್ಲಿ ಜಾನಪದವು ಅತ್ಯಂತ ಪ್ರಮುಖವಾಗಿದೆ. ಅದು ಸಂಸ್ಕೃತಿಯ ಒಳಪದರಗಳನ್ನು ಮಾನವನ ಬದುಕಿನ ಬಾಳಿನ ಹಿನ್ನೆಲೆಯನ್ನು, ಮತ್ತು ರೀತಿ ನೀತಿಗಳನ್ನು ಅವನ ಅಭಿವ್ಯಕ್ತಿಯನ್ನು ತೀರ ಹತ್ತಿರದಿಂದ ನೋಡುವ ಧೋರಣೆ ಹೊಂದಿದೆ. ಸಾಂಸ್ಕೃತಿಕ ವಿಕಾಸ ಆದಂತೆಲ್ಲ ಜಾನಪದವು ನಾಶವಾಗುತ್ತದೆ ಎಂಬ ಆತಂಕವನ್ನು ತೊರೆದು, ಬದಲಾವಣೆಯೇ ಅದರ ಮುಖ್ಯ ಲಕ್ಷಣ ಅನ್ನುವುದನ್ನು ಒಪ್ಪಿಕೊಂಡು ಅಧ್ಯಯನ ಮಾಡಿದಾಗ ಜಾನಪದ ಬದುಕಿಗೆ ಒಂದು ಹೊಸ ಅರ್ಥ ಬರುತ್ತದೆ ಎಂಬ ಗ್ರಹಿಕೆಯೂ ಇಂದು ಬೇರೂರುತ್ತಿದೆ.

ಸಮಾಜ, ಸಾಹಿತ್ಯ ಮತ್ತು ಸಂಸ್ಕೃತಿ ಇವು ಒಂದಕ್ಕೊಂದು, ಸಂಬಂಧ ಹೊಂದಿದ್ದು, ಒಂದನ್ನು ಬಿಟ್ಟು ಇನ್ನೊಂದು ಬದುಕಲಾರವು, ಬೆಳೆಯಲಾರವು. ಇವು ಒಂದು ಮತ್ತೊಂದಕ್ಕೆ ತುಷ್ಟಿ, ಪುಷ್ಟಿ ತುಂಬುತ್ತ ಒಂದನ್ನೊಂದು ಬೆಳೆಸುತ್ತವೆ, ಬೆಳೆಯುತ್ತವೆ, ಇವುಗಳ ಜೀವಂತಿಕೆಗೆ, ಬೆಳವಣಿಗೆಗೆ ಜಾನಪದವು ಮಣ್ಣು, ಗೊಬ್ಬರ, ನೀರು, ಗಾಳಿ, ಬೆಳಕು ನೀಡಿ ಚೈತನ್ಯ ತುಂಬುತ್ತಿರುತ್ತದೆ. ಈ ಚೈತನ್ಯವೇ ಸಂಸ್ಕೃತಿ ಎನ್ನುವ ಮರದ ಬೊಡ್ಡೆಗೆ ಶಕ್ತಿಯನ್ನು ಕೊಡುತ್ತದೆ. ಅದರಿಂದ ಕೊರಡು-ಕೊನರಿ ಫಲ ನೀಡಲು ಸಿದ್ಧವಾಗುವುದು. ಇದರಂತೆ ಸಮಾಜ ಎಂಬುದೇ ತಳಬೇರು. ಸಾಹಿತ್ಯ ಅದರ ಬೊಡ್ಡೆ ಸಂಸ್ಕೃತಿಯೇ ಹೂವು, ಹಣ್ಣು, ಫಲ ಎಂದು ಹೇಳಬಹುದು. ಮಾನವನ ಸಾಮಾಜಿಕ ಬದುಕಿನ ಗತಿಬಿಂಬವೇ ಸಾಹಿತ್ಯವೆನ್ನುವುದನ್ನು ಒಪ್ಪುವುದಾದರೆ, ಸಮಾಜವಿದ್ದಂತೆ ಸಾಹಿತ್ಯವಿರುತ್ತದೆ. ಸಾಹಿತ್ಯವಿದ್ದಂತೆ ಸಂಸ್ಕೃತಿಯಿರುತ್ತದೆ. ಆದ್ದರಿಂದ ಸಮಾಜ, ಸಾಹಿತ್ಯ ಮತ್ತು ಸಂಸ್ಕೃತಿ ಇವು ಒಂದಕ್ಕೊಂದು ಪೂರಕ ಹಾಗೂ ಪ್ರೇರಕಗಳಾಗಿ ಬೆಳೆಯುತ್ತವೆ. ಒಂದನ್ನು ತಿಳಿಯದೆ ಮತ್ತೊಂದರ ಅರಿವು ಸಾಧ್ಯವಿಲ್ಲ. ಇವುಗಳನ್ನು ಅರಿಯುವುದಕ್ಕೆ ತಳಬೇರಾದ ಜನಪದ ಅಧ್ಯಯನ ಅತ್ಯಂತ ಅವಶ್ಯಕವಾಗಿದೆ. ಜಾನಪದ ಅಧ್ಯಯನ ಇಂದು ಕೇವಲ ಜನಪದ ಸಾಹಿತ್ಯಾಧ್ಯಯನ ಮಾತ್ರಕ್ಕೆ ಸೀಮಿತವಾಗಿ ಉಳಿದಿಲ್ಲ. ಜಾನಪದವೆಂಬುದು ಅಂತರಶಿಸ್ತೀಯ ಜ್ಞಾನಕ್ಷೇತ್ರವಾಗಿದೆ. ಮಾನವ ಸಂಸ್ಕೃತಿಯನ್ನು ಅಭ್ಯಸಿಸುವ, ವ್ಯಾಖ್ಯಾಸಿಸುವ ಮುಖ್ಯ ಸಾಧನಗಳಲ್ಲಿ ಜಾನಪದವೂ ಒಂದಾಗಿ ತಂತ್ರಜ್ಞಾನವಾಗಿ ಪರಿಗಣಿಸಲಾಗಿದೆ. ಹೀಗಾಗಿ ಸಂಸ್ಕೃತಿಯ ಅಧ್ಯಯನದಲ್ಲಿ ಇತರ ಜ್ಞಾನಶಾಖೆಗಳಂತೆ ಇದರ ಪಾತ್ರ ಮಹತ್ವವಾದುದು. ಸಾಂಸ್ಕೃತಿಕ ನಡವಳಿಕೆಗಳ ಅಭಿವ್ಯಕ್ತಿಯಾದ ಜಾನಪದವನ್ನು ಇತ್ತೀಚಿಗೆ ವೈಜ್ಞಾನಿಕ ದೃಷ್ಟಿಕೋನದಿಂದ ಅಧ್ಯಯನ ಮಾಡುವ ಪ್ರವೃತ್ತಿ ಬೆಳೆಯುತ್ತಿದೆ. ಹೀಗಾಗಿ ಜಾನಪದವು ಬರೀ ಜ್ಞಾನವು ಆಗಿರದೆ ವಿಜ್ಞಾನಗಳ ಜ್ಞಾನ ಕ್ಷೇತ್ರವೆಂಬುದನ್ನು ಸಾಬೀತುಗೊಳ್ಳುವುದು.

ಜಾನಪದವನ್ನು ವಿಜ್ಞಾನವಾಗಿ ನೋಡಬೇಕು ಎಂಬ ಮಾತು ಕೇಳಿಬಂದಾಗ ಆರಂಭದಲ್ಲಿ ಹಲವರು ಹುಬ್ಬೇರಿಸಿದ್ದುಂಟು. ಜಾನಪದಕ್ಕೂ ವಿಜ್ಞಾನಕ್ಕೂ ಎತ್ತಣದಿಂದ ಎತ್ತ ಸಂಬಂಧವೆಂಬಂತ ಟೀಕೆಯ ಮಾತುಗಳೂ ಕೇಳಿ ಬಂದವು. ಈ ನಿಲುವಿನ ಹಿಂದಿನ ಗ್ರಹಿಕೆಯೆಂದರೆ, ಜಾನಪದವು ಹಳೆಯದು, ಹಳ್ಳಿಗಾಡಿನದು, ನಾಗರಿಕ ಸಮಾಜದಿಂದ ದೂರದ್ದು, ಅದು ನಾಶಹೊಂದಿ ಹೋಗುವಂಥದ್ದು ಎಂಬ ತಿಳುವಳಿಕೆಯಾಗಿತ್ತು. ಆದರೆ ಈಗ ಆ ಪರಿಸ್ಥಿತಿ ಉಳಿದಿಲ್ಲ, ಕಾಲ ಬದಲಾಗಿದೆ. ಕಾಲ ಬದಲಾದಂತೆ ಮನೋಗ್ರಹಿಕೆಗಳಲ್ಲಿಯೂ ಬದಲಾವಣೆಗಳಾಗಿವೆ. ಜಾನಪದವೆಂದರೆ ಮೂಗು ಮುರಿಯುತ್ತಿದ್ದ ಜನಗಳೇ ಇಂದು ಮೂಗಿನ ಮೇಲೆ ಬೆರಳಿಟ್ಟು ಈ ಕ್ಷೇತ್ರದತ್ತ ನೋಡುವಂತಾಗಿದೆ. ಜಾನಪದ ಅಷ್ಟೊಂದು ವ್ಯಾಪಕ ಜ್ಞಾನಕ್ಷೇತ್ರವಾಗಿದೆ. ಜಾನಪದವು ವಿಜ್ಞಾನವೂ ಜ್ಞಾನ ಶಿಸ್ತು ಆಗಿದ್ದು ಜಾನಪದದ ಬಗ್ಗೆ ವಿದ್ವಾಂಸರು ಈ ಕುರಿತಂತೆ ತಮ್ಮದೇ ವ್ಯಾಖೆಗಳನ್ನು ನೀಡಿದ್ದಾರೆ. ಜಾನಪದರ ಒಟ್ಟಾರೆ ಜೀವನ ವಿಧಾನ, ಸಂಸ್ಕೃತಿಯನ್ನು ಜಾನಪದವೆಂದು ಕರೆದಿರುವುದನ್ನು ಈ ವ್ಯಾಖ್ಯೆಗಳು ತಿಳಿಸುತ್ತವೆ. ಈ ಅಂಶವನ್ನೇ ಒಪ್ಪಿ, ಸ್ವೀಕರಿಸಿ ಈವೂತ್ತಿಗೂ ಮುಂದುವರೆಸಿಕೊಂಡು ಬಂದಿದ್ದೇವೆ.

ಜ್ಞಾನದ ಮೂಲ ನೆಲೆ, ಜನವಿಲ್ಲದೆ ಸಮಾಜವನ್ನಾಗಲಿ, ನಾಗರಿಕತೆ, ಕಲೆ ಸಾಹಿತ್ಯ ಸಂಸ್ಕೃತಿಯೂ ಇರಲು ಸಾಧ್ಯವಿಲ್ಲ. ಆದ್ದರಿಂದ ಜನ-ಜಾನಪದ-ಜ್ಞಾನ-ವಿಜ್ಞಾನ ಇವು ಒಂದಕ್ಕೊಂದು ಸಂಬಂಧಗಳನ್ನು ಹೊಂದಿವೆ. ಜನ ಬದಲಾದಂತೆ ಸಮಾಜದ ರೀತಿ ರೀವಾಜುಗಳು ಬದಲಾವಣೆ ಹೊಂದುತ್ತವೆ. ಜನರ ಸಂಸ್ಕೃತಿಯಾದ ಜಾನಪದವೂ ತನ್ನ ಸ್ವರೂಪದಲ್ಲಿ ಹಲವಾರು ಬದಲಾವಣೆಗಳನ್ನು ಮಾಡಿಕೊಳ್ಳುವ ಅನಿವಾರ್ಯತೆಯನ್ನು ಹೊಂದಿರುತ್ತದೆ ವಿನಃ ಅದು ಸಂಪೂರ್ಣವಾಗಿ ನಾಶವಾಗುವುದಿಲ್ಲ. ಜ್ಞಾನವು ಜಾನಪದ ಸಂಸ್ಕೃತಿಯ ಒಳಪದರುಗಳನ್ನು ಬಿಡಿಸಲು, ಮಾನವ ಬದುಕು ಬಾಳಿನ ಹಿನ್ನೆಲಯನ್ನು ಅರಿಯಲು ಅವನ ಬದುಕಿನ ವಿಧಾನಗಳನ್ನು, ತಿಳಿಯಲು ತೊಡಗಿಸಿಕೊಳ್ಳುತ್ತದೆ. ಸಂಸ್ಕೃತಿಯ

ವಿಕಾಸ ಆದಂತೆಲ್ಲ, ಜಾನಪದವು ಕಣ್ಮರೆಯಾಗುತ್ತದೆ ಎಂದು ಕೆಲವು ವಿದ್ವಾಂಸರು ಒಪ್ಪಿಕೊಂಡು ಮುಂದಿನ ಸವಾಲುಗಳ ಕುರಿತ ಚಿಂತೆಯಲ್ಲಿ ತೊಡಗಿದ್ದಾಗ, ಆಲೋಚನೆಯ ಎಡವಟ್ಟಿನಲ್ಲಿದ್ದಾಗ ಜ್ಞಾನ–ವಿಜ್ಞಾನ ಈ ಆತಂಕವನ್ನು ತಂದುಕೊಡುತ್ತದೆ. ಈ ಹಿನ್ನೆಲೆಯಲ್ಲಿ ಕಳೆದ ಶತಮಾನದ ಕೆಲವು ದಶಕಗಳಿಂದ ಜಾನಪದಕ್ಕಿದ್ದ ಸೀಮಿತತೆ ಮರೆಯಾಗಿ ಅಪಾರಜ್ಞಾನ ರಾಶಿಯಾಗಿ ಅಧ್ಯಯದ ವಿಷಯವಾಗಿ ಬೆಳೆಯುತ್ತಿದೆ. ಆಳವಾಗಿ ವಿಷಯವನ್ನು ಪ್ರವೇಶಿಸುವ ಕ್ರಮಬದ್ಧ ರೀತಿಯಲ್ಲಿ ವಿಶ್ಲೇಷಣೆಯನ್ನು ಒದಗಿಸುವ ಹಾಗೂ ಕ್ಷೇತ್ರದಿಂದ ದೊರಕಿಸಿಕೊಂಡ ಸಾಮಾಗ್ರಿಯಿಂದಲೇ ಸಂಶೋಧನೆಗೆ ನಿರ್ದಿಷ್ಟತೆಯನ್ನು ತಂದಕೊಡುವ ಪ್ರಯತ್ನಗಳಿಗೆ ಈಗ ಬೆಲೆ ಸಿಗುತ್ತಿರುವುದು ಜಾನಪದ ಕ್ಷೇತ್ರ ಅಪಾರ ಜ್ಞಾನಕ್ಕೆ ಹಿಡಿದ ಕನ್ನಡಿಯಾಗಿದೆ.

ಜಾನಪದ ಅಧ್ಯಯನ ಬಹು ಮುಖ್ಯವಾಗಿ ಕ್ಷೇತ್ರಕಾರ್ಯ, ಸಂಗ್ರಹ, ವರ್ಗೀಕರಣ ಹಾಗೂ ವಿಶ್ಲೇಷಣೆ ಮುಂತಾದ ಮುಖಗಳಲ್ಲಿ ನಡೆಯುತ್ತಿದೆ. ಇದರಲ್ಲಿ ಕ್ಷೇತ್ರಕಾರ್ಯ, ವಿಶ್ಲೇಷಣೆ, ವಿಮರ್ಶೆಗಳು ಪ್ರಮುಖ ಪಾತ್ರ ನಿರ್ವಹಿಸುತ್ತವೆ. ನಮ್ಮಲ್ಲಿ ವಿಪುಲವಾಗಿ ಕ್ಷೇತ್ರಕಾರ್ಯ ನಡೆದಿದೆ, ನಡೆಯುತ್ತಿದೆ. ಅಂತೆಯೇ ಅಪಾರವಾದ ವಿಶ್ಲೇಷಣಾತ್ಮಕ ಕಾರ್ಯವೂ ನಡೆಯುತ್ತಿದೆ. ಜಾನಪದ ಸಾಮಗ್ರಿಯ ವಿಶ್ಲೇಷಣೆಯನ್ನು ಪಿಎಚ್.ಡಿ., ಎಂ.ಫಿಲ್. ಪ್ರಬಂಧರಚನೆ, ವಿಶ್ಲೇಷಣ ಸಂದರ್ಭಗಳಿಗನುಸಾರವಾಗಿ ಬರೆದ ಸಂಶೋಧನಾತ್ಮಕ ಲೇಖನ, ವಿಚಾರ ಸಂಕಿರಣ, ಪತ್ರಿಕೆಗಳಿಗೆ ಬರೆದ ಲೇಖನಗಳ ರೂಪದಲ್ಲಿ ಜಾನಪದ ಅಧ್ಯಯನ ಸಾಕಷ್ಟು ನಡೆಯುತ್ತಿದೆ. ಜ್ಞಾನದ ಮೂಲ ಧಾತುಜ್ಞಾನ. ಧ್ಯಾನವೆಂದರೆ ಪೂಜೆ, ಚಿಂತನೆ, ಆಲೋಚನೆ, ಒಂದು ರೀತಿಯಲ್ಲಿ ಅದು ಅಧ್ಯಯನ, ಜಾನಪದರು ತಮ್ಮ ಅನುಭವದ ನೆಲೆಯಲ್ಲಿ ಧ್ಯಾನಿಸಿದ, ಚಿಂತಿಸಿದ ವಿಚಾರಗಳೇ ಜ್ಞಾನ ಮಾರ್ಗಗಳಾಗಿ ಅವುಗಳೇ ಸಂಶೋಧನೆಯ ಹೊಳಹುಗಳೆಂದು ಕರೆಯಬಹುದೇನೋ. ಜ್ಞನದ ನೆಲಗಳೂ ಭಿನ್ನವಾಗಿರುತ್ತವೆ. ಒಬ್ಬೊಬ್ಬರಲ್ಲಿ ಒಂದೊಂದು ರೀತಿಯಲ್ಲಿ ಮೂಡಿ ಬೆಳೆಯುತ್ತಿವೆ. ಅವು ಒಬ್ಬ ವ್ಯಕ್ತಿಯಲ್ಲಿ ಶ್ರದ್ಧೆಯಿಂದ, ಏಕಾಗ್ರತೆಯಿಂದ, ಅನನ್ಯತೆಯಿಂದ ಸಿದ್ಧ ಮನಸ್ಸಿನಿಂದ ಪುಟಿದು ಏಳಬಹುದು. ಇಲ್ಲವೇ ತನ್ನ ಆಚರಣೆ ರೀತಿ, ಸಂಪ್ರದಾಯ, ಪದ್ಧತಿ, ಪರಂಪರಾಗತವಾಗಿ ಮೂಡಬಹುದು.

ಅವರಿಗಿರುವ ಜ್ಞಾನದ ಮೇಲೆ ಸಂಪ್ರದಾಯವೆಂಬ ಪೊರೆಯಿಂದ ಮರೆಯಾಗಿ ಅದು ವಿಜ್ಞನವೆಂದು ಹೇಳುವುದು ಸಾಧ್ಯವಾಗಿಲ್ಲ. ಉದಾಹರಣೆಯಾಗಿ ನೋಡುವುದಾದರೆ, ನಮ್ಮ ಹಳ್ಳಿಗರು ರಾತ್ರಿ ಊಟ ಮಾಡಿದ ತಟ್ಟೆಯ ಮುಸರಿ ನೀರು ಮತ್ತು ಮನೆಗುಡಿಸಿದ ಕಸವನ್ನು ಹೊರಹಾಕುವುದಿಲ್ಲ. ಯಾಕೆ? ಎಂದು ಕೇಳಿದರೆ ನಮ್ಮ ಸಂಪತ್ತು ಹೊರ ಹೋಗುತ್ತದೆ, ಹಾಳಾಗುತ್ತದೆ ಅದಕ್ಕಾಗಿ ನಾವು ಅದನ್ನು ಹೊರಹಾಕುವುದಿಲ್ಲವೆಂದು ಹೇಳುವುದು ಅವರಿಗಿರುವ ಸಾಂಪ್ರದಾಯಿಕ ಜ್ಞಾನದ ತಿಳುವಳಿಕೆಯಾಗಿದೆ. ವಾಸ್ತವದಲ್ಲಿ ರಾತ್ರಿ ಹೊತ್ತು ಕೆಲಸ ಮಾಡುವ ಭರದಲ್ಲಿ ಮಹಿಳೆಯರ ಅಂಗಾಂಗಳ ಮೇಲೆ ಇರುವ ಸಣ್ಣ ಪುಟ್ಟ ಒಡವೆಗಳ ಅಂದರೆ, ಮೂಗಿನ ನತ್ತು, ಬುಗುಡಿ, ಹೂವು ಇವುಗಳು ಮುರಿದು ಪಗಡೆ ಪಾತ್ರಗಳಲ್ಲಿ ಬೀಳಬಹುದು. ಅದನ್ನು ಹೊರಗೆ ಚೆಲ್ಲಿದರೆ ನಷ್ಟ ಅವರಿಗೇನೆ. ದಿನ ಬಳಕೆಗೆ ಬೇಕಾದ ಸೂಜಿ, ಢಬ್ಬಣದಂತಹ ಸಣ್ಣ ವಸ್ತುಗಳು ಕಸದಲ್ಲಿ ಹೊರಹೋಗಿ ಬಿದ್ದರೆ, ಪ್ರಾಣಿಗಳು ಹುಲ್ಲು ಮೇಯುವಾಗ ತಿಂದದ್ದೇ ಆದರೆ ಅವುಗಳು ನಂಜಾಗಿ ಸಾಯಬಹುದು. ಇದರಿಂದಾಗಿ ಅವರ ಸಂಪತ್ತು ಹಾಳಾಗಿ ಕೃಷಿ ಜೀವನಕ್ಕೆ ಸಾಂಸರಿಕ ಬದುಕಿಗೆ ಆತಂಕ ಉಂಟಾಗಿ ತೊಂದರೆಯಾಗಬಹುದು. ಹೀಗಾಗಿ ಅವರು ಹೇಳುವುದು ನಮ್ಮ ಹಿರ್‍ಯಾರು ಅಜ್ಜ, ಮುತ್ತಜ್ಜರು ನಂಬಿಕೊಂಡ ಮೂಡಿಕೊಂಡ ಬಂದಾರ ಹಂಗ ನಾವು ಮಾಡ್ತಿವಿ ಅನ್ನುತ್ತಾರೆ. ವಾಸ್ತವದಲ್ಲಿ ಅದು ವಿಜ್ಞಾನ ಮೇಲಾಗಿ ಅವರಿಗಿರುವ ಜ್ಞಾನ, ಇಂದು ನಾವು ಅದನ್ನು ವೈಜ್ಞಾನಿಕವಾಗಿ ಆಲೋಚಿಸಿ ಅವರಿಗಿರುವ ಜ್ಞಾನವಿಜ್ಞಾನದ ಶಕ್ತಿಯನ್ನು ಪರಿಗಣನೆಗೆ ಹಚ್ಚುವುದು ವೈಜ್ಞಾನಿಕ ಅಧ್ಯಯನದಲ್ಲಿ ಸಾಗಿದೆ.

ಇವೊತ್ತಿನ ಆಲೋಪಥಿಕ– ನಮ್ಮ ಆಯರ್ವೇದಿಕ ಪದ್ಧತಿಯ ಮೇಲೆ ನಿಂತಿದೆ. ಅರ್ಥಶಾಸ್ತ್ರ, ಗಣಿತಶಾಸ್ತ್ರ, ಸಮಾಜಶಾಸ್ತ್ರಗಳು, ಭೂಗೋಳ, ಇತಿಹಾಸ, ರಾಜನೀತಿ ಇವೆಲ್ಲವೂ ಜಾನಪದರ ಜ್ಞಾನದ ತಳಹದಿ ಮೇಲೆ ಬೆಳೆದು ಹೆಮ್ಮರವಾಗಿವೆ. ಮಧುರ ಕವಿಯಂತಹವರು ಗೊರವರ ದುಂಡುಚಿ ಬೀದಿವರೆಯ ಬೀರನ ಕಥೆ ಎಂದು ಮೂಗು ಮುರಿದಿದ್ದು ಈಗ ಚರಿತ್ರೆ. ಆಧುನಿಕ ಜಾಗತೀರಕಣ ಸಂದರ್ಭದಲ್ಲಿ ಜಾನಪದವು ಅನೇಕ ಕಾರಣಗಳಿಗಾಗಿ ಜಗತ್ತಿನ ಗಮನ ಸೆಳೆದಿದೆ. ಪ್ರಾಚೀನತೆಯ ದೃಷ್ಟಿಯಿಂದ ಹೇಳುವುದಾದರೆ ಏಳನೆಯ ಶತಮಾನದಲ್ಲಿ ದೊರೆತ ಬಾದಾಮಿ ಶಾಸನದಲ್ಲಿಯೇ ಜನಪದ ಸಾಹಿತ್ಯದ ತಾಯಿಬೇರೆನಿಸಿದ ತ್ರಿಪದಿ ಪ್ರಕಟವಾಗಿದೆ. ಕನ್ನಡದ ಮೊದಲ ಕೃತಿ ಕವಿರಾಜ ಮಾರ್ಗದಲ್ಲಿ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣಿತ ಮತಿಗಳಾದವರು ನಮ್ಮ ಜನಪದರು ಎಂಬುದು ತಿಳಿಯುತ್ತದೆ. ಜನಪದರ ಹಿರಿಮೆ ಎಂತಹದೆಂಬುದನ್ನು ಕಾಣಬಹುದಾಗಿದೆ.

ಪಾಶ್ಚಾತ್ಯರ ಪ್ರೇರಣೆಯಿಂದ ಜನಪದ ಅಧ್ಯಯನ ಪ್ರಾರಂಭ ಆದರೂ ಕೂಡ ಜಗತ್ತಿನೊಟ್ಟಿಗೆ ನಡೆದ ಅನ್ವಶಿಸ್ತುಗಳ ಅಧ್ಯಯನ ದೇಶದ ಬೇರೆ ಬೇರೆ ಭಾಷೆಗಳಲ್ಲಿ, ಜನಪದ ಸಾಹಿತ್ಯ ಮತ್ತು ಸಾಹಿತ್ಯ ರೂಪಗಳನ್ನು ಹೊರತುಪಡಿಸಿ ಸಾಗಿರುವುದು ಕಾಣುತ್ತೇವೆ. ಪರಿಸರವನ್ನು ದೈವದತ್ತ ಕೊಡುಗೆ, ನಿಸರ್ಗ ಪ್ರಣೀತವೆಂದೆಲ್ಲ ನಂಬಿದರೂ ಇಂದು ಪರಿಸರ ವಿಜ್ಞಾನದಲ್ಲಿ ಅನೇಕ ಹೊಸ ಹೊಸ ಸಂಶೋಧನೆಗಳು ನಡೆದಿವೆ. ಸಸ್ಯ, ಪಕ್ಷಿ, ಪ್ರಾಣಿ, ಮನುಷ್ಯ ಈ ಎಲ್ಲ ಜೀವ ಸಂಕುಲಗಳಲ್ಲಿ ಜೀವವಿದೆ ಎಂದು ನಂಬಿದವರು. ಎಳ್ಳು, ಜೀರಿಗೆ ಅಲ್ಲದೆ ಹುಲ್ಲು ಕಡ್ಡಿಗಳ ಅಗತ್ಯತೆಯ್ನು ಅರಿತವರು ಜನಪದರು. ಚಂದ್ರ ಸೂರ್ಯರನ್ನು ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದವರು ಎಂದು ನಂಬಿ ಬದುಕಿದ್ದಾರೆ.

ಸಾಹಿತ್ಯ, ಕಲೆ, ನಾಟಕ ಹಾಗೂ ನೃತ್ಯ ಇವುಗಳ ಸಂಗಮವೇ ಸಂಸ್ಕೃತಿ. ಒಂದು ಕಾಲದಲ್ಲಿ ಜಾನಪದವೆನ್ನುವುದು ಅನಕ್ಷರಸ್ಥರದು ಎನ್ನುವ ಮಾತಿತ್ತು. ಆದರೆ ಆಧುನಿಕ ಸಂದರ್ಭದಲ್ಲಿ ಶಿಕ್ಷಣ, ಮತದಾನ, ವಿಜ್ಞಾನ, ಕೃಷಿ ಪದ್ಧತಿ ಈ ಮುಂತಾದ ವಿಷಯಗಳ ಬಗ್ಗೆ ವೈಜ್ಞಾನಿಕ ಚಿಂತನೆಗಳನ್ನು ಸಾರ್ವಜನಿಕರಿಗೆ ಪರಿಚಯಿಸುವ ಪ್ರಯತ್ನ ನಡೆದಿದೆ. ಇದಲ್ಲದೆ ಜೈವಿಕ ಜಾನಪದದ ವ್ಯಾಪ್ತಿಯ ಜೀವ ಸಂಕುಲದ ಮೂಲಭೂತ ಹಾಗು ಜೈವಿಕ ಅಂಶಗಳಾದ ಹಸಿವು ನೀರಡಿಕೆ, ಕಾಮ ನಿದ್ದೆ ಇವೆಲ್ಲ ಅಗತ್ಯ ಸಂಗತಿಗಳು. ಇವುಗಳನ್ನು ಸಹ ಅವರು ವೈಜ್ಞಾನಿಕ ಆಲೋಚನೆಗಳ ಹಿನ್ನೆಲೆಯಲ್ಲಿಯೇ ರೂಪಿಸಿಕೊಂಡಿದ್ದಾರೆ. ಹೀಗಾಗಿ ಜನಪದ ವೈದ್ಯಕ್ಕೆ ಅದರದೇ ಆದ ಮಹತ್ವವಿದೆ. ಮನುಷ್ಯ ಸಂಬಂಧ ಮತ್ತು ಪ್ರಾಣಿ ಸಂಬಂಧ ಜ್ಞಾನವನ್ನೇ ಆಧರಿಸಿ ಆಧುನಿಕ ವೈದ್ಯ ಪದ್ಧತಿ ಯಶಸ್ಸನ್ನು ಪಡೆದಿದೆ. ಮಗು ತಾಯಿಯ ಗರ್ಭದಲ್ಲಿ ಇರುವುದರಿಂದ ಹಿಡಿದು ಅದು ಹುಟ್ಟಿ ದೊಡ್ಡದಾಗುವವರೆಗೂ ಅನೇಕ ವೈದ್ಯಕೀಯ ಜ್ಞಾನ ಶಿಸ್ತುಗಳಿವೆ. ಕಿವಿ ಚುಚ್ಚುವುದರಿಂದ ಹಿಡಿದು ಸತ್ತ ನಂತರ ಮಾಡುವ ವಿಧಿ-ಕ್ರಿಯೆಗಳೆಲ್ಲ ವೈಜ್ಞಾನಿಕ ನೆಲೆಯಿಂದಲೇ ಕೂಡಿವೆ. ಕಿವಿಯ ಕುರಿತು ಅಂಕುಡೊಂಕಾದ ಬಾವಿ, ಶಂಕ ಚಕ್ರದ ಬಾವಿ, ನೀರಿಲ್ಲದ ಭಾವಿ ಅಲ್ಲದೆ ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲವೆನ್ನುವುದು ಮೇಲಿನ ವಿವರಣೆಗೆ ಪುಷ್ಟಿಯನ್ನೊದಗಿಸುತ್ತದೆ. ಕೃಷಿ ಜಾನಪದ, ಜನಾಂಗಿಕ ಜಾನಪದ, ಆನ್ವಯಿಕ ಜಾನಪದ ಈ ಮುಂತಾದ ವಿಭಾಗಗಳಲ್ಲಿ ಜಾನಪದ ಜ್ಞಾನ ಹೇರಳವಾಗಿದೆ.

ಸಮಾಜವೆನ್ನುವುದು ಒಂದು ಗೂಡಿ ಬಾಳುವ ಒಂದು ಘಟಕ. ಆ ಘಟಕದಲ್ಲಿ. ಈ ಧ್ಯಾನವು ವ್ಯಕ್ತಿಗತ ನೆಲೆಯಿಂದ ಸಮಷ್ಟಿ ನೆಲೆಗೆ ಬದಲಾಗುತ್ತದೆ. ಹೀಗೆ ಬದಲಾದ ಧ್ಯಾನವೇ ಜ್ಞಾನವಾಗಿ ಮುಂದೆ ವಿಜ್ಞಾನವಾಗಿ ಬೆಳೆಯುವುದು. ಇಲ್ಲಿ ಅಪ್ಯಾಯ ಮಾನವಾದುದೆಂದರೆ ಜನಪದದಲ್ಲಿ ಇಂಥವರೇ ಜ್ಞಾನವಂತರು. ಆದರೆ ಧ್ಯಾನದಲ್ಲಿ ತೊಡಗಿಸಿಕೊಳ್ಳಬೇಕು ಎಂಬ ಭ್ರಮೆ ಇರುವುದಿಲ್ಲ. ಅಲ್ಲಿನ ಎಲ್ಲರ ಮನಸ್ಸಿನ ಮೂಲದಲ್ಲಿ ಧ್ಯಾನ ಇರುತ್ತದೆ. ಈ ಎಲ್ಲರ ಜ್ಞಾನ ಸಮ್ಮಿಲನಗೊಂಡೇ ಅದು ಸಮಷ್ಟಿಯ ರೂಪದಲ್ಲಿ ಪ್ರಕಟವಾಗುವುದು. ಹೀಗೆ ಸಮ್ಮಿಲನಗೊಂಡು ಮಾಡುವ ಚಿಂತನೆಯೇ ಭವಿಷ್ಯದಲ್ಲೂ ಜಾನಪದವನ್ನು ಜೀವಂತವಾಗಿಡುವುದು. ಒಟ್ಟಾರೆ ಜಗತ್ತಿನಲ್ಲಿ ಮಾನವರು ಇರುವತನಕ ಜಾನಪದ ಜನರಲ್ಲಿ ಅನುರಾಗಿಯಾಗಿ, ಅನ್ಯೋನ್ಯ ಅವಿನಾಭಾವದ ಅರಿವನ್ನು ಆವರಣಗೊಳಿಸುತ್ತದೆ ಎಂದು ಹೇಳಲೇ ಬೇಕಾಗುತ್ತದೆ

**ಆಕರ: ಪುನರಾವಲೋಕನ– ಸಂ. ನಾಡೋಜ ಹಂಪ ನಾಗರಾಜಯ್ಯ**

**ಬೆಂಗಳೂರು ನಗರ ವಿಶ್ವವಿದ್ಯಾಲಯ**
**ಮಾದರಿ ಪ್ರಶ್ನೆ ಪತ್ರಿಕೆ**
**ಗಣಕ ಸೌರಭ**

| ಅವಧಿ: 2.30 ಗಂಟೆಗಳು | ಪ್ರಥಮ ಬಿ.ಸಿ.ಎ – ಎರಡನೇ ಸೆಮಿಸ್ಟರ್ | ಅಂಕಗಳು:60 |
|---|---|---|

## I. ಯಾವುದಾದರು 5 ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. 5×2=10

1. ಸುಕನ್ಯಾ ಮಾರುತಿಯವರು ದೌರ್ಜನ್ಯಕ್ಕೆ ದಂಡನೆಯಾಗಬೇಕು ಎನ್ನಲು ಕಾರಣವೇನು?
2. ರಾಗಿಯ ಬೆಳೆ ಲಕ್ಷ್ಮಣಯ್ಯನವರನ್ನು ಹೇಗೆ ಮೋಡಿ ಮಾಡಿದೆ?
3. ಜವಾನ ಸಂಬಳವನ್ನು ಹೆಚ್ಚು ಕೇಳಲು ಕಾರಣವೇನು?
4. ಸೂರ್ಯೋದಯವನ್ನು ಕವಿ ಹೇಗೆ ವರ್ಣಿಸಿದ್ದಾರೆ?
5. ಲೇಖಕರು ನಾನು ನಾನಾಗಿಲ್ಲದ ಬರಿ ದೇಹವನ್ನು ಹಿಡಿದು ಜಗ್ಗಬಾರದು ಎನ್ನಲು ಕಾರಣವೇನು?
6. ಮಂತ್ರಮಾಂಗಲ್ಯದ ಮೂಲ ಉದ್ದೇಶವೇನು?
7. ಗಡ್ಡ ಮೀಸೆಗಳ ನಡುವೆ ಲೇಖಕಿ ಯಾರ ಕಣ್ಣನ್ನು ಗುರುತಿಸಿದ್ದಾರೆ?
8. ದೇಶದ ದುರಂತಕ್ಕೆ ದಿಡ್ಡಿ ಬಾಗಿಲು ತೆರೆದ ನೆಲೆಗಳಾವುವು?

## II. ನಾಲ್ಕು ಪ್ರಶ್ನೆಗಳಿಗೆ ಹತ್ತು ವಾಕ್ಯಗಳಲ್ಲಿ ಉತ್ತರಿಸಿ. 4×5=20

1. ಬೆಂಗಳೂರಿನ ಅದ್ಭುತ ಬೆಳವಣಿಗೆ ಮತ್ತು ಪ್ರಗತಿಗೆ ಕಾರಣಗಳೇನು?
2. ಕ್ರಿಯಾಶೀಲವಾದ ಸುಧಾಳ ಬದುಕು ಏರುಪೇರಾದದ್ದು ಹೇಗೆ?
3. ತಂತ್ರಜ್ಞಾನದ ಚೋದ್ಯತೆಯನ್ನು 'ಗಿರಣಿ ವಿಸ್ತಾರ ನೋಡಮ್ಮ' ಗೀತೆಯಲ್ಲಿ ಹೇಗೆ ವಿವರಿಸಿದೆ.
4. 'ಕಲ್ಲು ಸಕ್ಕರೆ ಕೊಳ್ಳಿರೊ ನೀವೆಲ್ಲ' ಎಂದು ಕವಿ ಹೇಳಲು ಕಾರಣವೇನು? ವಿವರಿಸಿ.
5. ಕಟಕ ರಾಶಿಯನ್ನು ಒಳಗೊಂಡಂತೆ ಆರ್ಥಿಕ ವ್ಯವಹಾರದ ಬಗೆಗೆ ಬೇಲೂರು ರಘುನಂದನ ಅವರ ನಿಲುವುಗಳೇನು?
6. ಬಾನುಮುಷ್ತಾಕ್ ತನ್ನ ತಂದೆಯ ಕುರಿತು ಆಡಿರುವ ಮಾತುಗಳಾವುವು?

## III. ಎರಡು ಪ್ರಶ್ನೆಗಳಿಗೆ ಇಪ್ಪತ್ತು ವಾಕ್ಯಗಳಲ್ಲಿ ಉತ್ತರಿಸಿ. 2×10=20

1. ಹೊಸ ಉದ್ಯಮದ ಅಲೆ ಬೆಂಗಳೂರಿನಲ್ಲಿ ಹೇಗೆ ಬೀಸುತ್ತಿದೆ ವಿವರಿಸಿ
2. ಅಡಿಕೆ ವ್ಯಾಪಾರವು ಕುಪ್ಪಣ್ಣ ಭಟ್ಟರ ಸಾವಿಗೆ ಕಾರಣವಾದ ಪ್ರಸಂಗವನ್ನು ಬರೆಯಿರಿ
3. ಲಕ್ಷ್ಮಣಯ್ಯನವರ ರಾಗಿಯ ಬಗೆಗಿನ ಅವರ ಸಂಶೋಧನೆಯನ್ನು ಬರೆಯಿರಿ
4. ರಿಪುದಮನ್ ಸಿಂಗ್ ಸುಧಾಳ ನೆನಪನ್ನು ಮರುಕಳಿಸಲು ಮಾಡಿದ ಪ್ರಯತ್ನ ವಿವರಿಸಿ

## IV ಎರಡು ಪ್ರಶ್ನೆಗಳಿಗೆ ಹತ್ತು ವಾಕ್ಯಗಳಲ್ಲಿ ಉತ್ತಿರಿಸಿ 2×5=10

1. ದೇವಮಾನವರು ಎಲ್ಲಿ, ಹೇಗೆ ಮಾರಾಟವಾಗುವರು? ಕವಿಯ ಅಭಿಪ್ರಾಯದೊಂದಿಗೆ ವಿವರಿಸಿ
2. ಥ್ರೀಡಿ ಪ್ರಿಂಟಿಂಗ್ ಪರಿಕಲ್ಪನೆಯನ್ನು ಕುರಿತು ಲೇಖಕರ ಅಭಿಪ್ರಾಯವೇನು?
3. ಕವಿ ಜೋಡಿಯ ರಮ್ಯ ಮರುಭೇಟಿಯನ್ನು ಕುರಿತು ಬರೆಯಿರಿ
4. ಜನಪದ ಅಧ್ಯಯನದಲ್ಲಿ ಬಹುಮುಖ್ಯವಾದ ಅಂಶಗಳಾವುವು?